
ಪ್ರತಿಭಾವಂತ ಸಂಸದೀಯ ಪಟುಗಳ ಬದುಕು - ಬರಹ ಮಾಲಿಕೆ

# ಡಾ|| ಬಿ. ಆರ್. ಅಂಬೇಡ್ಕರ್



923.295 4
KLS - EL
C-5779
KLS - EL

ಲೋಕಸಭಾ ಸಚಿವಾಲಯ, ನವದೆಹಲಿ
ಕನ್ನಡ ಅನುವಾದ - ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯ
ವಿಧಾನಸೌಧ, ಬೆಂಗಳೂರು - 560 001

C 5779
6/2/99

# ಸುಪ್ರಸಿದ್ಧ ಸಂಸದೀಯ ಪಟುಗಳ

# ವ್ಯಕ್ತಿ ಚಿತ್ರಮಾಲೆ

## ಡಾ|| ಬಿ. ಆರ್. ಅಂಬೇಡ್ಕರ್

923.295 4
KLS - EL
C-5779
KLS - EL

ಲೋಕಸಭಾ ಸಚಿವಾಲಯ
ನವದೆಹಲಿ

9627-1

# ಮುನ್ನುಡಿ

ಕಳೆದ ವರ್ಷದ ಆರಂಭದಲ್ಲಿ ಭಾರತೀಯ ಸಂಸದೀಯ ಸಮುದಾಯವು ಸಂಸದರಾಗಿ ತಮ್ಮ ಗುರುತನ್ನು ಬಿಟ್ಟು ಹೋಗಿರುವ ಮತ್ತು ಭಾರತದ ಸಂಸದೀಯ ಪದ್ಧತಿಯಲ್ಲಿ ಮತ್ತು ಅದರ ನೀತಿಯಲ್ಲಿ ವಿಶಿಷ್ಟ ಮುದ್ರೆಯನ್ನು ಒತ್ತಿರುವ ಪ್ರಸಿದ್ಧ ನಾಯಕರ ಜನ್ಮ ಶತಾಬ್ಧಿಗಳನ್ನು ಮತ್ತು ವಾರ್ಷಿಕೋತ್ಸವಗಳನ್ನು ನಡೆಸಲು ತೀರ್ಮಾನಿಸಿತು. ಈ ತೀರ್ಮಾನದ ಅನುಸಾರವಾಗಿ "ಸುಪ್ರಸಿದ್ಧ ಸಂಸದರ ವ್ಯಕ್ತಿಚಿತ್ರಗಳ ಸರಣಿ" ಎಂಬ ಹೊಸ ಕೃತಿ ಸರಣಿಯನ್ನು 1990ರ ಮಾರ್ಚ್ ತಿಂಗಳಲ್ಲಿ ಆರಂಭಿಸಲಾಯಿತು, ಇದರಲ್ಲಿ ಹನ್ನೊಂದು ವ್ಯಕ್ತಿಚಿತ್ರಗಳನ್ನು ಅವರ ಜನ್ಮ ದಿನೋತ್ಸವ ಆಚರಣೆಯೆಂದು ಪ್ರಕಟಿಸಲಾಯಿತು. ಅವು ಯಾವುವೆಂದರೆ - ಡಾ// ರಾಮ ಮನೋಹರ ಲೋಹಿಯಾ, ಡಾ. ಲಂಕಾ ಸುಂದರಂ, ಡಾ// ಶ್ಯಾಂಸುಂದರ ಮುಖರ್ಜಿ, ಪಂ. ನೀಲಕಂಠ ದಾಸ್, ಶ್ರೀ ಪಿ. ಗೋವಿಂದ ಮೆನನ್, ಶ್ರೀ ಭೂಪೇಶ್ ಗುಪ್ತ, ಡಾ// ರಾಜೇಂದ್ರ ಪ್ರಸಾದ್, ಶ್ರೀ ಶೇಖ್ ಮಹಮದ್ ಅಬ್ದುಲ್ಲಾ, ಶ್ರೀ ಸಿ.ಡಿ. ದೇಶಮುಖ್, ಶ್ರೀ ಜೈಸುಖ್‌ಲಾಲ್ ಹಾಥಿ ಮತ್ತು ಶ್ರೀ ಎಂ. ಅನಂತಶಯನ ಅಯ್ಯಂಗಾರ್ ಅವರು.

ಈ ಪುಸ್ತಕ ವ್ಯಕ್ತಿಚಿತ್ರ ಸರಣಿಯಲ್ಲಿ ಹನ್ನೆರಡನೆಯದು. ಡಾ// ಬಿ. ಆರ್. ಅಂಬೇಡ್ಕರರು ಮಾಡಿದ ಪ್ರಾಮಾಣಿಕ ಸೇವೆಗಳನ್ನು ಮತ್ತು ನೀಡಿದ ಗಣನೀಯ ಕಾಣಿಕೆಗಳನ್ನು ನೆನಸಿಕೊಳ್ಳುವ ಹಾಗೂ ದಾಖಲಿಸುವ ನಮ್ಮ ಪ್ರಯತ್ನ. ಡಾ// ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಪ್ರಖ್ಯಾತ ಸಂಸದೀಯ ಪಟು, ಘನತೆಯ ನ್ಯಾಯವೇತ್ತ ಮತ್ತು ದಲಿತ ವರ್ಗದ ಉದ್ಧಾರಕ. ಅವರು ಸ್ವಾತಂತ್ರ್ಯ ಸಂಗ್ರಾಮದ ಇತರ ಕಟ್ಟಾಳುಗಳೊಡನೆ ಆಧುನಿಕ ಭಾರತಕ್ಕೆ ಬುನಾದಿ ಹಾಕಿ ಮತ್ತು ಭಾರತೀಯ ಸಂವಿಧಾನ ರಚಿಸುವ ಮಸಿಹವನ್ನು ಪೂರೈಸಿ ಭಾರತೀಯರಾದ ನಮ್ಮನ್ನು ಶ್ರೀಮಂತ ಮತ್ತು ಹೆಮ್ಮೆಯ ಆಸ್ತಿಗೆ ಉತ್ತರಾಧಿಕಾರಿಗಳಾಗುವಂತೆ ಮಾಡಿದ್ದಾರೆ.

ಈ ಕೃತಿಯಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಬಾಬಾ ಸಾಹೇಬ್ ಎಂದು ಜನಪ್ರಿಯವಾದ ಅಂಬೇಡ್ಕರರ ಸಾರ್ಥಕವಾದ ಜೀವನ - ಸಾಧನೆಗಳ ಕುರಿತ ವ್ಯಕ್ತಿಚಿತ್ರವಿದೆ. ಎರಡನೆಯ ಭಾಗದಲ್ಲಿ ಅವರನ್ನು ಸಮೀಪದಿಂದ ನೋಡಿ, ಸಂವಿಧಾನ ರಚನಾ ಸಭೆಯಲ್ಲಿ ಅವರ ಪ್ರಭಾವಿತರಾದವರೂ ಕೂಡ ಅವರ ಸಮಕಾಲೀನರು, ನಿಕಟವರ್ತಿಗಳು,

ಅವರನ್ನು ಮೆಚ್ಚಿಕೊಂಡವರು ಮತ್ತು ಸಂಸತ್ತಿನ ಸದಸ್ಯರು ಆತ್ಮೀಯವಾಗಿ ಬರೆದ ಎಂಟು ಲೇಖನಗಳು ಇವೆ. ಮೂರನೆಯ ಭಾಗವು ಭಾರತ ಸಂವಿಧಾನಕ್ಕೆ ರೂಪುಗೊಡುತ್ತಿರುವಾಗ ಅವರು ಸಂವಿಧಾನ ರಚನಾ ಸಭೆಗಳಲ್ಲಿ ಮಾಡಿದ ವಿದ್ವತ್‌ಪೂರ್ಣ ಭಾಷಣಗಳಿಂದ ಆಯ್ದ ಉದ್ಧರಣಗಳನ್ನು ಒಳಗೊಂಡಿದೆ.

ಲಕ್ಷಾಂತರ ದೇಶೀಯರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದ ಭಾರತದ ಹೆಮ್ಮೆಯ ಪುತ್ರ ಭಾರತ ರತ್ನ ಡಾ// ಬಾಬಾ ಸಾಹೇಬ್ ಅಂಬೇಡ್ಕರ್‌ರ ಜನ್ಮ ದಿನಾಚರಣೆಯ ಸಂದರ್ಭದ ಸವಿನೆನಪಿಗಾಗಿ ನಾವು ಗೌರವ ಪೂರ್ವಕ ನಮನಗಳೊಡನೆ ಈ ನೆನಪಿನ ಕಾಣಿಕೆಯನ್ನು ಸಲ್ಲಿಸುತ್ತಿದ್ದೇವೆ. ಈ ವ್ಯಕ್ತಿಚಿತ್ರವು ಓದುಗರ ಆಸಕ್ತಿಯನ್ನು ಸೆಳೆಯುತ್ತದೆ ಎಂದು ನಾವು ನಂಬಿದ್ದೇವೆ.

ನವದೆಹಲಿ
ಏಪ್ರಿಲ್, 1991.

**ರಬಿರಾಯ್**
ಸಭಾಧ್ಯಕ್ಷ,
ಲೋಕಸಭೆ ಮತ್ತು ಅಧ್ಯಕ್ಷ,
ಭಾರತೀಯ ಸಂಸದೀಯ ಸಮುದಾಯ

BANGALORE
6.5779
6/2/99

# ಪೀಠಿಕೆ

ನಮ್ಮ ದೇಶ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ದೇಶಕ್ಕಾಗಿ ದುಡಿದು ಮಡಿದ ಹಾಗೂ ನವ ಭಾರತ ನಿರ್ಮಾಣಕ್ಕಾಗಿ ಶ್ರಮಿಸಿದ ಪ್ರತಿಭಾನ್ವಿತ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಂಸದೀಯ ಪಟುಗಳನ್ನು ನೆನೆಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಗಣ್ಯರ ಬಗ್ಗೆ ಅನೇಕ ಕಿರುಹೊತ್ತಿಗೆಗಳನ್ನು ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿ ಹೊರ ತಂದಿರುತ್ತಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದ ಜನಪ್ರತಿನಿಧಿಗಳಿಗೆ ಹಾಗೂ ಜನತೆಗೆ ಈ ಪ್ರತಿಭಾವಂತರುಗಳ ಬದುಕು-ಬರಹ ಮತ್ತು ಸಾಧನೆಗಳನ್ನು ಪರಿಚಯಿಸುವ ದೃಷ್ಟಿಯಿಂದ ಈ ಕಿರು ಹೊತ್ತಿಗೆಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರಾದ ಶ್ರೀ ಡಿ.ಬಿ. ಕಲ್ಮಣ್‌ಕರ್ ಹಾಗೂ ವಿಧಾನ ಸಭೆಯ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರುಗಳು ಅಪೇಕ್ಷಿಸಿದಂತೆ ಈ ಕಾರ್ಯವನ್ನು ವಿಧಾನಸಭೆಯ ಸದಸ್ಯರಾದ ಶ್ರೀ ಬಿ.ಬಿ. ಶಿವಪ್ಪನವರ ಅಧ್ಯಕ್ಷತೆಯಲ್ಲಿ ರಚಿತವಾದ ವಿಧಾನಮಂಡಲದ ಗ್ರಂಥಾಲಯ ಉಪ ಸಮಿತಿಗೆ ವಹಿಸಲಾಗಿತ್ತು. ಈ ಉಪಸಮಿತಿಯು ಕಾರ್ಯ ಪ್ರವೃತ್ತವಾಗಿ ಭಾಷಾಂತರ ಕಾರ್ಯವನ್ನು ಕರ್ನಾಟಕ ರಾಜ್ಯದ ಭಾಷಾಂತರ ನಿರ್ದೇಶನಾಲಯದ ಸಹಯೋಗದೊಂದಿಗೆ ಹಾಗೂ ನುರಿತ ಭಾಷಾಂತರಕಾರರುಗಳ ಮೂಲಕ ತಯಾರಿಸಿರುವ ಡಾ|| ಬಿ.ಆರ್. ಅಂಬೇಡ್ಕರ್ ಅವರ ಕೃತಿಯನ್ನು ತಮ್ಮ ಮುಂದಿಡುತ್ತಿದ್ದೇನೆ.

ಇದು ಲೋಕಸಭಾ ಸಚಿವಾಲಯದವರು "Eminent Parliamentarians - Monograph Series" ಎಂಬ ಆಂಗ್ಲ ಭಾಷೆಯ ಕನ್ನಡಾನುವಾದವಾಗಿದ್ದು, ಸದರಿ ಗ್ರಂಥದ ಪ್ರಕಾಶಕರಾದ ಲೋಕಸಭಾ ಸಚಿವಾಲಯಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಅನುವಾದವನ್ನು ನಿರ್ವಹಿಸಿಕೊಟ್ಟ ಭಾಷಾಂತರ ನಿರ್ದೇಶನಾಲಯದವರಿಗೂ, ನುರಿತ ಭಾಷಾಂತರಕಾರರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಉಪ ಸಮಿತಿಯ ಸದಸ್ಯರುಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಕಿರುಹೊತ್ತಿಗೆಗಳು ಮಾನ್ಯ ಸದಸ್ಯರುಗಳಿಗೆ ಸಂಸದೀಯ ವಿಷಯಗಳಲ್ಲಿ ಅನುಕೂಲ ಹಾಗೂ ಅನುಭವ ನೀಡುತ್ತದೆಂದು ಭಾವಿಸುತ್ತೇನೆ.

ಯಾಕೂಬ್ ಷರೀಫ್,<br>
ಕಾರ್ಯದರ್ಶಿ,<br>
ಕರ್ನಾಟಕ ವಿಧಾನ ಮಂಡಲ.

ಬೆಂಗಳೂರು<br>
ಫೆಬ್ರುವರಿ, 1998

# ಪರಿವಿಡಿ

## ಭಾಗ-I-ಜೀವನ


1. ಡಾ|| ಬಿ.ಆರ್. ಅಂಬೇಡ್ಕರ್-ವ್ಯಕ್ತಿ ಚಿತ್ರ ... 2


## ಭಾಗ-II-ಲೇಖನಗಳು


2. ನಾ ಕಂಡಂತೆ ಡಾ|| ಬಿ.ಆರ್. ಅಂಬೇಡ್ಕರ್
   - ಪ್ರೊ.ಎನ್.ಜಿ. ರಂಗ ... 25

3. ಡಾ|| ಅಂಬೇಡ್ಕರ್ ಮತ್ತು ಪರಿಶಿಷ್ಟ ಜಾತಿಗಳ ರಾಜಕೀಯ ಹಕ್ಕುಗಳು - ಶ್ರೀ ಮುರಳೀಧರ ಸಿ. ಬಂಡಾರ್ ... 31

4. ಡಾ|| ಬಿ.ಆರ್. ಅಂಬೇಡ್ಕರ್ - ಶ್ರೀ ಎಸ್. ನಿಜಲಿಂಗಪ್ಪ ... 44

5. ಡಾ|| ಅಂಬೇಡ್ಕರ್, ರಾಷ್ಟ್ರ ನಾಯಕ, ಖ್ಯಾತ ಸಂಸದೀಯ ಪಟು ಅನನ್ಯ ಸಂವಿಧಾನ ಕರ್ತ
   - ಪ್ರೊ. ಪಿ.ಜಿ. ಮಾವಳಂಕರ್ ... 48

6. ಸಾಮಾಜಿಕ ನ್ಯಾಯದ ಅನ್ವೇಷಣೆ
   - ಪ್ರೊ. ಸಿದ್ಧೇಶ್ವರ ಪ್ರಸಾದ್ ... 58

7. ಡಾ|| ಬಿ.ಆರ್. ಅಂಬೇಡ್ಕರ್ - ಸಾಮಾಜಿಕ ಕ್ರಾಂತಿಕಾರಿ
   - ಶ್ರೀಮತಿ ರೇಣುಕಾರಾಯ ... 67

8. ಡಾ|| ಅಂಬೇಡ್ಕರ್- ಸಂವಿಧಾನ ಸಭೆಗೆ ಮತ್ತು ಸಂಸತ್ತಿಗೆ ಅವರು ನೀಡಿದ ಕಾಣಿಕೆ - ಎಸ್.ಎಲ್. ಶಕ್‌ಧರ್ ... 73

9. ಬಾಬಾ ಸಾಹೇಬ್ ಡಾ|| ಭೀಮರಾವ್ ಅಂಬೇಡ್ಕರ್ : ಕೆಲವು ನೆನಪುಗಳು- ಶ್ರೀ ಅಕ್ಷಯ ಕುಮಾರ್ ಜೈನ್ ... 80

## ಭಾಗ-III-ಚಿಂತನಗಳು

(ಸಂವಿಧಾನ ಸಭೆಯಲ್ಲಿ ಡಾ॥ ಅಂಬೇಡ್ಕರರು ನೀಡಿದ ಉಪನ್ಯಾಸಗಳಿಂದ ಆರಿಸಿದ ಭಾಗಗಳು)


10. ಬಲಿಷ್ಠ ಒಕ್ಕೂಟ ಸರ್ಕಾರ ... 87

11. ಕರಡು ಸಂವಿಧಾನ ಕುರಿತು ... 98

12. ನಿರ್ದೇಶಕ ತತ್ವಗಳಿಗೆ ಸಂಬಂಧಪಟ್ಟಂತೆ ಆರ್ಥಿಕ ಪ್ರಜಾಪ್ರಭುತ್ವದ ಆದರ್ಶ ಕುರಿತು ... 129

13. ಏಕರೂಪ ಸಿವಿಲ್ ಸಂಹಿತೆ ಕುರಿತು ... 132

14. ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಕುರಿತು ... 136

15. ಸಾರ್ವಜನಿಕ ಉದ್ಯೋಗಗಳಲ್ಲಿ ಸಮಾನ ಅವಕಾಶಗಳ ಕುರಿತು ... 137

16. ಸಂವೈಧಾನಿಕ ಪರಿಹಾರಗಳ ಕುರಿತು ... 143

17. ಕಾರ್ಯಾಂಗವನ್ನು ಶಾಸಕಾಂಗ ಮತ್ತು ನ್ಯಾಯಾಂಗದಿಂದ ಬೇರ್ಪಡಿಸುವ ಕುರಿತು ... 148

18. ಒಕ್ಕೂಟದ ಕಾರ್ಯಾಂಗ ಅಧಿಕಾರ ಕುರಿತು ... 150

19. ಮಂತ್ರಿ ಪದವಿಯ ಷರತ್ತುಗಳ ಕುರಿತು ... 157

20. ನಾಗರೀಕತ್ವದ ಉಪಬಂಧಗಳ ಕುರಿತು ... 165

21. ಸಂವಿಧಾನದ ತಿದ್ದುಪಡಿಯ ಪ್ರಕ್ರಿಯೆ ಕುರಿತು ... 171

22. ಸಂವಿಧಾನ ಸಭೆಯಲ್ಲಿ ಸಮಾರೋಪ ಭಾಷಣ ... 180

# ಭಾಗ-ಒಂದು

# ಅವರ ಜೀವನ

# ಡಾ|| ಬಿ. ಆರ್. ಅಂಬೇಡ್ಕರ್ - ವ್ಯಕ್ತಿ ಚಿತ್ರ

ಹತ್ತೊಂಬತ್ತನೆಯ ಶತಮಾನದಲ್ಲಿ ಜನಿಸಿ, ಸ್ವತಂತ್ರ ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಮತ್ತು ರಾಷ್ಟ್ರದ ಜೀವನದ ಮೇಲೆ ಮತ್ತು ರಾಜ್ಯ ವ್ಯವಸ್ಥೆಯ ಮೇಲೆ ಅಳಿಸಲಾಗದ ಮುದ್ರೆಯನ್ನು ಅಂಕಿತಗೊಳಿಸಿದ ಮಹಾನುಭಾವರ ತಾರಾ ಮಂಡಲದಲ್ಲಿ ಡಾ|| ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರ ಹೆಸರು ಒಂದು ಉಜ್ವಲ ನಕ್ಷತ್ರ. ಅವರು ನಮ್ಮ ಸಂವಿಧಾನದ ರೂವಾರಿ. ಸದಾ ದಲಿತರ ಆಂದೋಲನದ ಸೇನಾನಿ. ಸಕಲ ವಿಧದ ಸಾಮಾಜಿಕ ಮತ್ತು ಆರ್ಥಿಕ ವಿಷಮತೆಗಳ ಮತ್ತು ಅನಿಷ್ಟಗಳ ವಿರುದ್ಧ ಹೋರಾಡಿದ ಬಂಡುಗಾರ. ಮಹಾತ್ಮಾಗಾಂಧಿಯವರಿಂದ "ಅಪ್ಪಟ ದೇಶಾಭಿಮಾನಿ" ಎಂದು ಪ್ರಶಂಸೆಗೆ ಪಾತ್ರರಾದವರು. ಡಾ|| ಅಂಬೇಡ್ಕರ್ ತಮ್ಮ ಪ್ರಸಿದ್ಧಿಯ ಉತ್ತುಂಗ ಶಿಖರಕ್ಕೇರಿದ್ದು, ಭಾಗ್ಯ ಬಲದಿಂದಾಗಲಿ ಆಕಸ್ಮಾತ್ ಒದಗಿದ ಸನ್ನಿವೇಶಗಳಿಂದಾಗಲಿ ಅಲ್ಲ, ತಮ್ಮ ವ್ಯಕ್ತಿವಿಶೇಷ, ನಿರಂತರ ಹೋರಾಟದ, ಅನುಪಮ ತ್ಯಾಗದ, ಅಪಾರ ನಿಸ್ವಾರ್ಥದ, ಆಳವಾದ ಪಾಂಡಿತ್ಯದ, ಅನನ್ಯ ನಿಷ್ಠೆಯ, ಅಸೀಮ ಏಕನಿಷ್ಠೆಯ ಮತ್ತು ಅಪೂರ್ವ ಬದ್ಧತೆಯ ಬಲದಿಂದಲೇ ಅವರು ಪ್ರಖ್ಯಾತರಾದದ್ದು, ಲೋಕವಿಖ್ಯಾತರಾದದ್ದು. ಅವರ ಅಭಿಮಾನಿಗಳೂ ಅನುಯಾಯಿಗಳೂ ಡಾ|| ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರನ್ನು ಪ್ರೀತಿಯಿಂದ 'ಬಾಬಾ ಸಾಹೇಬ್' ಎಂದು ಕರೆಯುತ್ತಾರೆ. ಹುಟ್ಟಿದ್ದು ಮಧ್ಯಪ್ರದೇಶದ ಮಾಹೌ ಊರಿನಲ್ಲಿ, 1891ನೇ ಇಸವಿ ಏಪ್ರಿಲ್ ತಿಂಗಳ 14ನೇ ತಾರೀಖಿನಂದು. ತಂದೆ ರಾಮ್‌ಜಿ ಮಾಲೋಜಿ ಸಂಕಪಾಲ್. ತಾಯಿ ಭೀಮಬಾಯಿ. ಅವರು ಹಿಂದೂ ಅಸ್ಪೃಶ್ಯ ಜಾತಿಗಳ ಪೈಕಿ ಮಹಾರ್ ಜಾತಿಗೆ ಸೇರಿದವರು. ಹದಿನಾಲ್ಕು ಜನ ಮಕ್ಕಳಲ್ಲಿ ಭೀಮರಾವ್ ಅತ್ಯಂತ ಕಿರಿಯವರು. ಹೀಗಾಗಿ ಕುಟುಂಬದವರಿಗೆಲ್ಲ- ಅಚ್ಚುಮೆಚ್ಚಿನವರಾಗಿದ್ದರು. ಅವರ ತಂದೆ ರಾಮ್‌ಜಿ ಉದ್ಯಮಶೀಲರು, ಧರ್ಮಭೀರುಗಳು, ಉದಾರಿಗಳು. ತಾಯಿ ಭೀಮಾಬಾಯಿ ಸ್ವಾವಲಂಬಿನಿ. ಗುರು ಹಿರಿಯರಲ್ಲಿ ಅಪಾರ ಶ್ರದ್ಧೆಯುಳ್ಳವಳು ರಾಮ್‌ಜಿ ಆರ್ಥಿಕವಾಗಿ ಬಡವರಾಗಿದ್ದರೂ, ತಮ್ಮ ನೆರೆಹೊರೆಯವರ ಅಭಿಮಾನಕ್ಕೂ, ಗೌರವಾದರಗಳಿಗೂ ಪಾತ್ರರಾಗಿದ್ದರು. ಮಿಲಿಟರಿ ಸೇವೆಯಲ್ಲಿ ಸುಬೇದಾರ್ ಮೇಜರ್ ಆಗಿದ್ದ ರಾಮ್‌ಜಿ 'ಕಬೀರ್ ಪಂಥೀ' ಭಕ್ತರು. ಅವರು, ವರ್ಗಾವಣೆಯಾದಂತೆ, ಒಂದು ಮಿಲಿಟರಿ ಕ್ಯಾಂಪ್‌ನಿಂದ ಇನ್ನೊಂದು ಕ್ಯಾಂಪಿಗೆ ಹೋಗಬೇಕಾಗುತ್ತಿತ್ತು. ತಮ್ಮ ಪತ್ನಿಯ ಮರಣದ ಅನಂತರ, ರಾಮ್‌ಜಿ ತಮ್ಮ ಮಕ್ಕಳನ್ನು ಅಕ್ಕರೆಯಿಂದ ಸಾಕಿ ಸಲಹಿದರು. ಅವರಿಗೆ

ಭಕ್ತಿಗೀತೆಗಳನ್ನು ಹಾಡಿ ತೋರಿಸುತ್ತಿದ್ದರು. ಮತ್ತು ರಾಮಾಯಣ, ಮಹಾಭಾರತದ ಕಥೆಗಳನ್ನು ಹೇಳುತ್ತಿದ್ದರು. ಮನೆಯಲ್ಲಿನ ಪರಿಶುದ್ಧ ಮತ್ತು ಧಾರ್ಮಿಕ ವಾತಾವರಣವು ಭೀಮರಾವ್ ಅವರ ಎಳೆ ಮನಸ್ಸಿನ ಮೇಲೆ ಸುದೀರ್ಘವಾದ ಹಾಗೂ ಆಳವಾದ ಪ್ರಭಾವವನ್ನು ಬೀರುತ್ತಿರುವಂತೆ ತೋರುತ್ತದೆ. ಆ ಮೂಲಕವೇ ಕಾಲಾಂತರದಲ್ಲಿ, ನಿಸ್ವಾರ್ಥ ಸೇವೆಯ, ಸೋದರ ಭಾವನೆಯ, ಎಡೆಬಿಡದ ಪರಿಶ್ರಮದ ಮತ್ತು ನಿರಂತರ ಪ್ರಯತ್ನದ ಗುಣಗಳು ಭೀಮರಾವ್ ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿರಬೇಕು.

## ಬಾಲ್ಯ ಮತ್ತು ಶಿಕ್ಷಣ

ರಾಮ್‌ಜಿ ಅವರು, ತಮ್ಮ ನಿವೃತ್ತಿಯ ತರುವಾಯ ಕೆಲ ಸಮಯ ಸಾತಾರಾ ಜಿಲ್ಲೆಯ ದಾಪೋಲಿಯಲ್ಲಿ ತಂಗಿದ್ದರು. ಆಮೇಲೆ ಅವರು ಅಖೈರಾಗಿ ಮುಂಬಯಿಯಲ್ಲಿ ಹೋಗಿ, ಅಲ್ಲಿಯೇ ನೆಲೆಸಿದರು. ಭೀಮರಾವ್ ಅವರನ್ನು ಐದನೆಯ ವರ್ಷಕ್ಕೆ ಪ್ರಾಥಮಿಕ ಶಾಲೆಗೆ ಸೇರಿಸಲಾಗಿತ್ತು. ಅವರು ಸಾತಾರಾದಲ್ಲಿಯೇ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಉಚ್ಚಶಿಕ್ಷಣವನ್ನು ಮುಂದುವರಿಸಿದರು. ಅವರು ಅಸ್ಪೃಶ್ಯ ಜಾತಿಗೆ ಸೇರಿದವರಾಗಿದ್ದರಿಂದ, ನಾನಾ ಸಂಕಷ್ಟಗಳನ್ನೂ, ತೊಂದರೆಗಳನ್ನೂ ಅನುಭವಿಸಬೇಕಾಯಿತು. ಹಲವಾರು ಬಗೆಯ ಅಪಮಾನಗಳಿಗೆ ಗುರಿಯಾಗಬೇಕಾಯಿತು. ಎಲ್ಲ ಬಾಲಕರೂ ನೀರು ಕುಡಿಯುವಂಥ ಸ್ಥಳಕ್ಕೆ ಹೋಗಿ ಇವರು ನೀರು ಕುಡಿಯುವಂತಿರಲಿಲ್ಲ. ಅವರಿಗೆ ಸಂಸ್ಕೃತ ಕಲಿಸಲು, ಸಂಸ್ಕೃತ ಶಿಕ್ಷಕರು ನಿರಾಕರಿಸಿದ್ದರಿಂದ, ಅವರು ಪಾರ್ಸಿ ಭಾಷೆಯನ್ನು ಅಧ್ಯಯನ ಮಾಡಬೇಕಾಯಿತು. ಆಮೇಲೆ, ಎಷ್ಟೋ ಸಮಯದ ತರುವಾಯ, ಅವರು ಸಂಸ್ಕೃತವನ್ನು ಕಲಿತುಕೊಂಡರು. "ಮೈಲಿಗೆ"ಯ ಭಯದಿಂದ ಶಿಕ್ಷಕರು ಅವರ ನೋಟ್ ಬುಕ್‌ಗಳನ್ನು ನೋಡಿ ಸರಿಪಡಿಸುತ್ತಿರಲಿಲ್ಲ. ಅವರಿಗೆ ಪ್ರಶ್ನೆಗಳನ್ನು ಸಹ ಕೇಳುತ್ತಿರಲಿಲ್ಲ, ಇವೆಲ್ಲವುಗಳನ್ನೂ ನಿರ್ಭೀತಿಯಿಂದ ಎದುರಿಸಿ, ಅವರು ಮುಂಬಯಿಗೆ ಬಂದು, ಎಲ್‌ಫಿನ್‌ಸ್ಟನ್ ಹೈಸ್ಕೂಲ್ ಸೇರಿದರು. ದುರಾದೃಷ್ಟವಶಾತ್, ಆ ಶಾಲೆಯಲ್ಲಿಯೂ ಅವರು "ನೀ ನನ್ನ ಮುಟ್ಟಬೇಡ" ಎಂಬ ರೀತಿ ನೀತಿಗೆ, ರೂಢಿ ರಿವಾಜಿಗೆ ಗುರಿಯಾಗಬೇಕಾಯಿತು.

ಅಂದಿನ ಹಿಂದೂ ಸಮಾಜದಲ್ಲಿ ಪ್ರಚಲಿತವಾಗಿದ್ದ ಪದ್ಧತಿಗನುಸಾರವಾಗಿ ಭೀಮರಾವ್ ಅವರಿಗೆ 14ನೆಯ ವಯಸ್ಸಿನಲ್ಲಿ ಮದುವೆಯಾಯಿತು. ಅವರ ಪತ್ನಿಯಾದವಳಿಗೆ ಆಗ 9ನೇ ವಯಸ್ಸು. ಹೆಸರು ರಮಾಬಾಯಿ. ಅವಳೂ ಮಹಾರ್ ಜಾತಿಯವಳೇ. ಅವಳು ಒಬ್ಬ ಗಂಡು ಮಗುವಿಗೆ ಜನ್ಮವಿತ್ತಳು.

ಆದರೆ ಆಕೆ 1935ರಲ್ಲಿ ವಿಧಿವಶರಾದರು. ಭೀಮರಾವ್ 1948ರಲ್ಲಿ ಮರು ಮದುವೆ ಆದರು. ಪತ್ನಿ ಮುಂಬಯಿಯ ಸಾರಸ್ವತ ಬ್ರಾಹ್ಮಣ ಜಾತಿಯ ಡಾ|| ಶಾರದಾ ಕಬೀರ್. ಆ ತರುವಾಯ ಅವರಿಗೆ ಸವಿತಾ ಎಂದು ಹೆಸರಿಡಲಾಯಿತು.

ಭೀಮರಾವ್, 1917ರಲ್ಲಿ ತಮ್ಮ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸಾದರು. "ಮಹಾರ್ ಬಾಲಕ"ನೊಬ್ಬನು ಇಂಥ ಅದ್ಭುತ ಸಾಧನೆ ಮಾಡಿದ್ದು, ಅವರ ಸಮಾಜದವರಿಗೆ ಎಣೆಯಿಲ್ಲದ ಸಂತಸ. ಸಮಾಜದವರು ಒಂದು ಸಮಾರಂಭವನ್ನು ಏರ್ಪಡಿಸಿ ಅವರನ್ನು ಗೌರವಿಸಿದರು. ಸಮಾಜದ ಸದಸ್ಯರೊಬ್ಬರು ಅವರಿಗೆ "ದಿ ಲೈಫ್ ಆಫ್ ಗೌತಮ ಬುದ್ಧ" ಎಂಬ ಪುಸ್ತಕವನ್ನು ಕಾಣಿಕೆಯಾಗಿ ಕೊಟ್ಟರು. ಈ ಪುಸ್ತಕವು ಭೀಮರಾವ್ ಅವರ ಮನಸ್ಸಿನ ಮೇಲೆ ಅಗಾಧ ಪ್ರಭಾವವನ್ನು ಬೀರಿತು. ಅವರ ಜೀವನದ, ಆ ತರುವಾಯದ ಘಟನೆಗಳಿಂದ ಈ ಪ್ರಭಾವವು ಎಂಥದ್ದು ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಭೀಮರಾವ್ ಅವರಲ್ಲಿರುವ ವಿದ್ಯಾಕಾಂಕ್ಷೆಯನ್ನು, ಅವರ ಶ್ರದ್ಧೆಯನ್ನೂ ನಿರಂತರ ಪ್ರಯತ್ನದತ್ತ ಅವರನ್ನು ಕೊಂಡೊಯ್ಯುವ ಅತ್ಯುತ್ಸಾಹವನ್ನೂ ಬರೋಡಾ ಮಹಾರಾಜರಾದ ಸಯ್ಯಾಜಿರಾವ್ ಗಾಯಕವಾಡ್ ಅವರು ಗುರುತಿಸಿದರು. ಅವರು ಭೀಮರಾವ್ ಅವರಿಗೆ ಅವರ ಪದವಿ ಅಧ್ಯಯನದ ಅವಧಿಗಾಗಿ 25-00 ರೂ.ಗಳ ಮಾಸಿಕ ಸ್ಕಾಲರ್‌ಷಿಪ್ ಅನ್ನು ಮಂಜೂರಾಮ್ಡಿದರು. ಅಷ್ಟೇ ಅಲ್ಲದೆ ಪದವಿ ಶಿಕ್ಷಣವನ್ನು ಪೂರೈಸಿದ ಬಳಿಕ ತಮ್ಮ ಸಂಸ್ಥಾನದ ಸೇವೆಗೆ ಸೇರುವಂತೆಯೂ ಆಹ್ವಾನಿಸಿದರು. ಹಾಗೆ ಅವರು ಸಂಸ್ಥಾನದ ಸೇವೆಗೆ ಸೇರಿದರು. ಆದರೆ ಅಲ್ಲಿ ಅವರಿಗೆ ತೃಪ್ತಿ ದೊರೆಯಲಿಲ್ಲ, ಅವರ ದುರಾದೃಷ್ಟಶಾತ್ ಇದಿರಿಸಬೇಕಾದ ಸಾಮಾಜಿಕ ಸವಾಲುಗಳು ಹಾಗೆಯೇ ಮುಂದುವರಿದಿದ್ದವು. ಅವುಗಳಲ್ಲಿ ಕಿಂಚಿತ್ತೂ ಬದಲಾವಣೆಯಾಗಿರಲಿಲ್ಲ, ಆಮೇಲೆ ಅವರನ್ನು ಕೊಲಂಬಿಯಾ ಯೂನಿವರ್ಸಿಟಿಗೆ ಗಾಯಕವಾಡ್ ಸ್ಕಾಲರ್ ಆಗಿ ಕಳಿಸಿಕೊಡಲು, ಬರೋಡಾ ಮಹಾರಾಜರು ಒಪ್ಪಿದರು. ಆದರೆ ಭೀಮರಾವ್ ಅವರು ಸ್ವದೇಶಕ್ಕೆ ಮರಳಿದ ಬಳಿಕ ಸಂಸ್ಥಾನದ ಸೇವೆಗೆ ಸೇರಬೇಕು ಎಂಬ ಷರತ್ತು ಹಾಕಿದರು.

ಕೊಲಂಬಿಯಾದಲ್ಲಿ ಅಧ್ಯಯನ ನಡೆಸುತ್ತಿದ್ದಾಗ ಭೀಮರಾವ್ ಅವರಿಗೆ ಜಾತಿ ಕಳಂಕದಿಂದ ಮುಕ್ತವಾದ ನಿರ್ಮಲ ವಾತಾವರಣವಿತ್ತು. ಅವರು ಸಮಾನತೆಯ ಸ್ಥಾನಮಾನದಿಂದ ಎಲ್ಲೆಲ್ಲೂ ಓಡಾಡಬಹುದಿತ್ತು. ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ, ಪ್ರೊ. ಸೆಲಿಗ್‌ಮನ್ ಯೂನಿವರ್ಸಿಟಿಯಲ್ಲಿ ಅವರ ವಿದ್ಯಾಗುರು. ಎಲ್ಲೆಲ್ಲೂ ವಿದ್ಯಾ ವಾತಾವರಣ, ಮುಕ್ತ ಪರಿಸರ, ಮೇಲಾಗಿ ಪುಸ್ತಕಗಳ ಬಗ್ಗೆ

ಅವರಲ್ಲಿರುವ ಅದಮ್ಯ ಆಕಾಂಕ್ಷೆಯನ್ನು ತಗ್ಗಿಸುವ ಗ್ರಂಥ ಭಂಡಾರ. ಭೀಮರಾವ್ ಅವರ ಮಾನಸಿಕ ಕ್ಷಿತಿಜವು ದಿನೇ ದಿನೇ ವಿಕಾಸಗೊಳ್ಳತೊಡಗಿತು. ಈ ಅವಧಿಯಲ್ಲಿ ಅವರು ಉಜ್ವಲ ರಾಷ್ಟ್ರಾಭಿಮಾನಿಯಾದ ಲಾಲಾ ಲಜಪತ್‌ರಾಯ್ ಅವರ ಜತೆ ಸಂಪರ್ಕ ಹೊಂದುವ ಸುಯೋಗ ಒದಗಿತು. ಲಾಲಾ ಲಜಪತ್‌ರಾಯ್ ಅವರು ಆಗ ಅಮೇರಿಕಾದಲ್ಲಿ ಅಜ್ಞಾತವಾಸದಲ್ಲಿದ್ದರು. ಅವರಿಬ್ಬರೂ ಭಾರತದಲ್ಲಿನ ಸ್ವಾತಂತ್ರ್ಯ ಸಂಗ್ರಾಮವನ್ನು ಕುರಿತು ಚರ್ಚಿಸುತ್ತಿದ್ದರು. ಈ ರೀತಿ ವಿದ್ಯಾರ್ಥಿ ದೆಸೆಯಿಂದಲೇ, ಭೀಮರಾವ್ ಅವರು ರಾಷ್ಟ್ರಭಕ್ತಿಯ ಧ್ಯೇಯಗಳನ್ನೂ ಮತ್ತು ಆದರ್ಶಗಳನ್ನೂ ಹಾಗೂ ಪಾಶ್ಚಾತ್ಯ ಪ್ರಜಾತಂತ್ರದ ಉದಾರವಾದ ವಿಚಾರಗಳನ್ನು ತಮ್ಮ ಅಂತರಂಗದಲ್ಲಿ ಅಂಕುರಿಸಿಕೊಂಡರು. ಫಲಿತಾಂಶವಾಗಿ ಅವರು ದೃಢಸಂಕಲ್ಪದ ರಾಷ್ಟ್ರಾಭಿಮಾನಿಗಳಾಗಿ, ಮಾನವ ಹಕ್ಕುಗಳ ಮತ್ತು ಘನತೆಯ ಅತ್ಯುತ್ಸಾಹೀ ಪ್ರತಿ ರಕ್ಷಕರಾಗಿ ವಿಕಾಸಗೊಂಡರು.

ಅವರು 1915 ರಲ್ಲಿ "ಪ್ರಾಚೀನ ಭಾರತದಲ್ಲಿ ವಾಣಿಜ್ಯ" ಎಂಬ ಸಂಪ್ರಬಂಧಕ್ಕಾಗಿ ಎಂ.ಎ. (ಅರ್ಥಶಾಸ್ತ್ರ) ಪದವಿಯನ್ನು ಪಡೆದರು. ಅನಂತರದ ವರ್ಷ, ಮಾನವಶಾಸ್ತ್ರದ ವಿಚಾರಗೋಷ್ಠಿಯಲ್ಲಿ "ಭಾರತದಲ್ಲಿ ಜಾತಿಗಳು ಮತ್ತು ಅವುಗಳ ತಂತ್ರ ವ್ಯವಸ್ಥೆ ಅದರ ಮೂಲ ಮತ್ತು ವಿಕಾಸ" ಎಂಬ ಪ್ರಬಂಧ ಓದಿದರು. ಅದರಲ್ಲಿ ಅವರು ಅಂತಃಸಂಗಮ ಜಾತಿಗಳ ಅಂತಸ್ಸತ್ವ ಎಂದು ತೋರಿಸಿದ್ದಾರೆ. "ಜಾತಿ ಎಂದರೆ ಒಂದು ಆವೃತವಾದ ವರ್ಗ" ಎಂಬ ಭಾವನೆ ಮನುವಿಗಿಂತ ಮೊದಲಿನಿಂದಲೂ ಪ್ರಚಲಿತವಾಗಿತ್ತು" ಎಂದು ಅವರು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. 1916ನೆಯ ಇಸವಿಯಲ್ಲಿ, ಅವರಿಗೆ "ಭಾರತಕ್ಕೆ ರಾಷ್ಟ್ರೀಯ ಲಾಭಾಂಶ: ಒಂದು ಚಾರಿತ್ರಿಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ಸಂಪ್ರಬಂಧಕ್ಕಾಗಿ ಪಿ.ಹೆಚ್.ಡಿ. ಪದವಿ ಪ್ರಧಾನ ಮಾಡಲಾಯಿತು.

ಅದೇ ವರ್ಷ ಡಾ|| ಅಂಬೇಡ್ಕರ್ ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್" ವಿದ್ಯಾಸಂಸ್ಥೆಯನ್ನು ಸೇರಿದರು. ಅವರು ಕಾನೂನು ಅಧ್ಯಯನಕ್ಕಾಗಿ ಸುಪ್ರಸಿದ್ಧ ಗ್ರೇಸ್ ಇನ್ ಫಾರ್ ಲಾ ವಿದ್ಯಾಸಂಸ್ಥೆಯನ್ನು ಸಹ ಸೇರಿದರು. ಆದರೆ ಅವರಿಗೆ ತಮ್ಮ ಅಧ್ಯಯನವನ್ನು ಮುಂದುವರಿಸುವುದು ಸಾಧ್ಯವಾಗಲಿಲ್ಲ. ಮಹಾರಾಜ ಅವರನ್ನು ವಾಪಸ್ಸು ಕರೆಸಿಕೊಂಡು ತಮ್ಮ ಕಾರ್ಯದರ್ಶಿಯಾಗಿ ನೇಮಿಸಿಕೊಂಡರು. ಕಾಲಕ್ರಮೇಣ ಅವರನ್ನು ಸಂಸ್ಥಾನದ ಅರ್ಥಮಂತ್ರಿಯಾಗಿ ನೇಮಿಸಿಕೊಳ್ಳಲು ಪ್ರಾರಂಭಿಕ ತರಬೇತಿ ಒದಗಿಸುವುದು ಮಹಾರಾಜರ ಉದ್ದೇಶವಾಗಿತ್ತು. ಆದರೆ ದೈವೇಚ್ಛೆ ಬೇರೆಯೇ ಆಗಿತ್ತು. ಡಾ|| ಅಂಬೇಡ್ಕರ್ ಅವರಿಗೆ ದಿಗ್‌ಭ್ರಮೆಯಾಗುವಂತೆ, ಅವರಲ್ಲಿ

ಹತಾಶೆ ಮೊಳೆಯುವಂತೆ, ಭಾರತದಲ್ಲಿನ ಸಾಮಾಜಿಕ ಪರಿಸ್ಥಿತಿಗಳಲ್ಲಿ ಎಳ್ಳಷ್ಟೂ ಬದಲಾವಣೆಯಾಗಿದ್ದಿರಲಿಲ್ಲ. ಅವರ ವಿದ್ಯಾಕ್ಷೇತ್ರದಲ್ಲಿ ಸಾಧಿಸಿದ ಉನ್ನತಿ, ಅವರ ಅಗಾಧ ಪಾಂಡಿತ್ಯ ಮತ್ತು ಅವರು ಸಂಸ್ಥಾನದಲ್ಲಿ ಹೊಂದಿದ್ದ ಉನ್ನತ ಸ್ಥಾನಮಾನ, ಇವಾವುಗಳಿಗೂ ಮನ್ನಣೆ ದೊರೆಯಲಿಲ್ಲ. ಅವರ ಅಧೀನ ಸಿಬ್ಬಂದಿಯವರೇ ಅವರನ್ನು ಗೌರವದಿಂದ ಕಾಣಲಿಲ್ಲ. ಈ ಪರಿಸ್ಥಿತಿಯನ್ನು ಡಾ. ಅಂಬೇಡ್ಕರ್ ಅವರು ಮಹಾರಾಜರ ಗಮನಕ್ಕೆ ತಂದರೂ ಏನೂ ಪ್ರಯೋಜನವಾಗಲಿಲ್ಲ. ಆದರೆ ಮಹಾರಾಜರು ಕರುಣೆದೋರಿ ಕೆಲವೇ ತಿಂಗಳ ಸೇವೆಯ ತರುವಾಯ ಡಾ|| ಅಂಬೇಡ್ಕರ್ ಅವರನ್ನು ಸಂಸ್ಥಾನದ ಸೇವೆಯಿಂದ ಬಿಡುಗಡೆ ಮಾಡಲು ಒಪ್ಪಿಕೊಂಡರು. (ಡಾ|| ಅಂಬೇಡ್ಕರ್ ಅವರಿಗೆ ವಿದೇಶದಲ್ಲಿ ಅಧ್ಯಯನ ಮಾಡಲು ನೆರವು ನೀಡುವ ಕರಾರಿನಲ್ಲಿ, ಅವರು ಹಿಂತಿರುಗಿದ ಅನಂತರ ಸಂಸ್ಥಾನದ ಸೇವೆಗೆ ಸೇರಬೇಕೆಂಬ ಷರತ್ತು ಸೇರಿಸಲಾಗಿತ್ತಷ್ಟೆ).

ಒಂದು ವರ್ಷದ ಹೋರಾಟದ ತರುವಾಯ ಅಂಬೇಡ್ಕರ್ ಅವರು ಮುಂಬಯಿಯ ಒಂದು ಕಾಲೇಜಿನಲ್ಲಿ ರಾಜ್ಯಶಾಸ್ತ್ರದ ಪ್ರೊಫೆಸರ್ ಆಗಿ ಸೇರಿದರು. ಐದು ತಿಂಗಳು ಮಾತ್ರ. ಪುನಃ ತಮ್ಮ ಶಿಕ್ಷಣವನ್ನು ಮುಂದುವರಿಸಲು ಡಾ|| ಅಂಬೇಡ್ಕರ್ ಲಂಡನ್‌ಗೆ ಹೊರಟರು. ಅವರ ಈ ಸಾಹಸಕ್ಕೆ ನೆರವಾಗಿ ನಿಂತವರು ವಿದ್ಯಾಪಕ್ಷಪಾತಿಗಳಾದ ಕೊಲ್ಹಾಪುರ ಮಹಾರಾಜರು. ಅಂಬೇಡ್ಕರ್ ಅವರು ಲಂಡನ್‌ನಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್‌ಸ್ ಅನ್ನು ಮತ್ತು ಗ್ರೇಸ್ ಇನ್ ಅನ್ನೂ ಪುನಃ ಸೇರಿದರು. ಅವರು ಸಲ್ಲಿಸಿದ ಮಹಾಪ್ರಬಂಧ "ಪ್ರಾವಿನ್‌ಸಿಯಲ್ ಡಿಸೆಂಟ್ರಲೈಸೇಷನ್ ಆಫ್ ಇಂಟೀರಿಯರ್ ಫೈನಾನ್ಸ್ ಇನ್ ಬ್ರಿಟಿಷ್ ಇಂಡಿಯಾ" ಅನ್ನು ಲಂಡನ್ ಯೂನಿವರ್ಸಿಟಿ, ಎಂ.ಎಸ್.ಸಿ. (ಇಕಾನಾಮಿಕ್ಸ್) ಪದವಿಗಾಗಿ ಸ್ವೀಕರಿಸಿತು ಮತ್ತು ೧೯೨೧ರಲ್ಲಿ ಜರ್ಮನಿಯ ಬ್ಗೆನ್ ಯುನಿವರ್ಸಿಟಿಯು ಅವರು ಸಲ್ಲಿಸಿದ "ದಿ ಪ್ರಾಬ್ಲಮ್ ಆಫ್ ದಿ ರೂಪಿ.ಇಟ್ಸ್ ಒರಿಜಿನ್ ಅಂಡ್ ಸೊಲ್ಯೂಷನ್" ಎಂಬ ಥೀಸಿಸ್‌ಗಾಗಿ ಅವರಿಗೆ ಡಿ.ಎಸ್.ಸಿ. (ಎಕನಾಮಿಕ್ಸ್) ಪದವಿಯನ್ನು ನೀಡಿತು. ತಮ್ಮ ವಿವಿಧ ವ್ಯಾಸಂಗಗಳಲ್ಲಿ ತೊಡಗಿದ್ದರೂ, ಅವರಿಗೆ ತಮ್ಮ ಜನ ಸಮುದಾಯದ ಅಂದರೆ ಭಾರತದಲ್ಲಿನ ದಲಿತ ಜನ ವರ್ಗದ ಬಗ್ಗೆ ಹಗಲಿರುಳೂ ಚಿಂತೆ. ಎಡೆಬಿಡದ ಯೋಚನೆ. ಆ ಕುರಿತು ವಿಚಾರಮಂಥನ. ಅವರು ಆ ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಇ.ಎಸ್. ಮಾಂಟೆಗ್ಯೂ ಅವರನ್ನು ಮತ್ತು ವಿಠಲಭಾಯಿ ಅವರನ್ನು ಭೇಟಿಯಾದರು.

ಅಸ್ಪೃಶ್ಯರ ಸಂಕಷ್ಟಗಳನ್ನು ಆ ಸಂಬಂಧವಾದ ಪರಿಹಾರ ಕ್ರಮಗಳನ್ನೂ ಕುರಿತು ಚರ್ಚಿಸಿದರು.

## ವಕೀಲರಾಗಿ

ಪ್ರತಿಷ್ಠಿತ ವಿದೇಶೀ ವಿಶ್ವವಿದ್ಯಾನಿಲಯಗಳಿಂದ ಹಲವಾರು ಪದವಿಗಳನ್ನೂ ಪ್ರಶಸ್ತಿಗಳನ್ನೂ ಪಡೆದುಕೊಂಡ ತರುವಾಯ ಜೂನ್ 1923ರಲ್ಲಿ ಡಾ|| ಅಂಬೇಡ್ಕರ್ ಭಾರತಕ್ಕೆ ಹಿಂತಿರುಗಿದರು. ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಈ ಬಗೆಯ ಸ್ವತಂತ್ರ ವೃತ್ತಿಯಲ್ಲಿ ತೊಡಗಿದ್ದರೆ ತಮ್ಮ ಜೀವನದ ಧ್ಯೇಯವಾಗಿದ್ದ ಅಸ್ಪೃಶ್ಯರ ಸಾಮಾಜಿಕ ಹಾಗೂ ಆರ್ಥಿಕ ಏಳ್ಗೆಗಾಗಿ ದುಡಿಯಲು ಅನುಕೂಲವಾಗುವುದೆಂದೇ ಅವರ ಆಲೋಚನೆ. ಇದಲ್ಲದೆ ತಮ್ಮ ಜೀವನವನ್ನೂ ಸ್ವತಂತ್ರವಾಗುತ್ತದೆ ಎಂದು ಅವರ ಎಣಿಕೆ. ಆದರೆ ನ್ಯಾಯದೇವತೆಯ ಸನ್ನಿಧಿ ಎಂದು ಪರಿಗಣಿಸಲ್ಪಡುವ ನ್ಯಾಯಾಲಯದಲ್ಲಿಯೂ ಜಾತಿ ಕಳಂಕದ ಛಾಯೆ ಅವರ ಬೆನ್ನು ಬಿಡಲಿಲ್ಲ. ಇಲ್ಲಿಯೂ ಜಾತಿಯ ಕಾರಣ, ವಕೀಲರು, ನ್ಯಾಯಾಧೀಶರು, ಅಸ್ಪೃಶ್ಯರಾದ ಇವರನ್ನು, ಕಕ್ಷಿದಾರರುಗಳು ಅವರೊಡನೆ ಮುಕ್ತವಾದ ವ್ಯವಹಾರವನ್ನು ನಡೆಸಲು ಸಮ್ಮತಿಸಲಿಲ್ಲ. ಹೈಕೋರ್ಟ್ ನ್ಯಾಯಾಧೀಶರುಗಳು ವಕೀಲರೂ ಕೂಡ ಅವರಿಗೆ ಸಹಾಯ ಸಹ ಮಾಡುತ್ತಿರಲಿಲ್ಲ. ಅವರು ಕಾನೂನು ವಿಚಾರಗಳಲ್ಲಿ ಉತ್ತುಂಗ ಶಿಖರವನ್ನೇರಿದ್ದರೂ, ಅಸ್ಪೃಶ್ಯರಾಗಿದ್ದುದರ ಕಾರಣವಾಗಿ ಕಾನೂನು ವೃತ್ತಿಯಲ್ಲಿ ಶ್ರೇಯಸ್ಸು ಸಾಧನೆ ದುಸ್ತರವಾಯಿತು. ಅವರನ್ನು "ಬಡವರ ಬ್ಯಾರಿಸ್ಟರ್" ಎಂದು ಕರೆಯಲಾಗುತ್ತಿತ್ತು.

## ಸಾಮಾಜಿಕ ವಿಷಮತೆಗಳ ವಿರುದ್ಧ ಸಿಡಿದೆದ್ದ ಬಂಡುಗಾರ:

ಡಾ|| ಅಂಬೇಡ್ಕರ್ ಅಗಣಿತ ಅಪಮಾನಗಳನ್ನು ಅವಹೇಳನಗಳನ್ನೂ ಸಹಿಸಬೇಕಾಯಿತು. ನೂರೆಂಟು ಬಗೆಯ ಬವಣೆಗಳಿಗೆ ತುತ್ತಾಗಬೇಕಾಯಿತು. ಇದರಿಂದ ಆ ಮೂಲಕವೇ ತಮ್ಮ ಸಮಾಜಬಾಂಧವರನ್ನು ಸಾಮಾಜಿಕ ದಾಸ್ಯದ ನೊಗವನ್ನು ಕಿತ್ತೊಗೆಯಬೇಕೆಂಬ ಆಕಾಂಕ್ಷೆ ಬಲವಾಯಿತು, ಛಲವಾಯಿತು, ದೃಢ ಸಂಕಲ್ಪವಾಯಿತು. ಅಂಬೇಡ್ಕರ್ ಅವರು ಈ ಕ್ಷೇತ್ರದಲ್ಲಿ ಪಾದಾರ್ಪಣ ಮಾಡುತ್ತಿದ್ದಂತೆ ಸಾಮಾಜಿಕ ಅನ್ಯಾಯಗಳ ಮತ್ತು ವಿಷಮತೆಗಳ ವಿರುದ್ಧದ ಸಮರದ ಸ್ವರೂಪ ಬಾನೆತ್ತರಕ್ಕೆ ಏರಿತು. ಮೇಲು ಕೀಳೆಂಬ ಭಾವನೆಗಳ ಬಂಧನದಿಂದ ಮುಕ್ತರಾಗುವಂತೆ ತಮ್ಮ ಜಾತಿಬಾಂಧವರಿಗೆ ಬಿನ್ನವಿಸಿಕೊಂಡರು. ದಲಿತ ವರ್ಗಗಳಲ್ಲಿ ಜಾಗೃತಿ ಮೂಡಿಸುವಲ್ಲಿ ಡಾ|| ಅಂಬೇಡ್ಕರ್ ಅವರು

ಪ್ರಮುಖ ಪಾತ್ರ ವಹಿಸಿದರು. ಸಂಸ್ಥೆಗಳನ್ನೂ ಬಳಗಗಳನ್ನು ಸಂಘಟಿಸಿ, ರಾಜಕೀಯ ಪಕ್ಷಗಳನ್ನು ಸ್ಥಾಪಿಸಿ ಅಸ್ಪೃಶ್ಯರನ್ನು ಒಗ್ಗೂಡಿಸಲು ಪ್ರಯತ್ನಿಸಿದರು. ದಲಿತರ ಆಶೋತ್ತರಗಳ ವಾಣಿಯಾಗುವಂತೆ ಕ್ರಾಂತಿಯ ಕಹಳೆಯಾಗುವಂತೆ ವೃತ್ತಪತ್ರಿಕೆಗಳನ್ನು ವಾರಪತ್ರಿಕೆಗಳನ್ನು ಪ್ರಕಟಿಸಿದರು. "ಮೂಕ ನಾಯಕ" ಎಂಬ ಮರಾಠಿ ಪಾಕ್ಷಿಕ ಪತ್ರಿಕೆಯನ್ನು 1920ರಲ್ಲಿ ಪ್ರಾರಂಭಿಸಿದರು. ಅದಕ್ಕೂ ಮುನ್ನ, 1918ರಲ್ಲಿ ಮತಾಧಿಕಾರಕ್ಕೆ ಸಂಬಂಧಿಸಿ ನಿರ್ವಹಿಸಲಾದ ಸೌತ್‌ಬರೋ (ಮತಾಧಿಕಾರ) ಸಮಿತಿಯನ್ನು ನೇಮಿಸಿದಾಗ ಸರ್ಕಾರವು, ಸಾಕ್ಷ್ಯ ನೀಡುವಂತೆ ಡಾ|| ಅಂಬೇಡ್ಕರ್ ಅವರನ್ನು ಆಹ್ವಾನಿಸಿತು. ಆಗ ಅವರು ದಲಿತ ವರ್ಗಗಳವರಿಗಾಗಿ ಪ್ರತ್ಯೇಕ ಚುನಾಯಕ ಮಂಡಲ ರಚನೆಯಾಗಬೇಕು ಎಂದು ಪ್ರಬಲವಾಗಿ ವಾದಿಸಿದ್ದುಂಟು. ಆದರೆ, ಅವರ ಅಭಿಪ್ರಾಯಕ್ಕೆ ಅಂಗೀಕಾರ ದೊರೆಯಲಿಲ್ಲ.

1924ರಲ್ಲಿ ಡಾ|| ಅಂಬೇಡ್ಕರ್ ಅಸ್ಪೃಶ್ಯರನ್ನು ಅಸ್ಪೃಶ್ಯತೆಯ ವಿರುದ್ಧದ ಹೋರಾಟಕ್ಕಾಗಿ ಅಣಿಗೊಳಿಸಲು ಮುಂಬಯಿಯಲ್ಲಿ ಬಹಿಷ್ಕೃತ ಹಿತಕಾರಿಣಿ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅಸ್ಪೃಶ್ಯರ ನೈತಿಕ ಹಾಗೂ ಆರ್ಥಿಕ ವಿಕಾಸವೇ ಹಿತಕಾರಿಣಿ ಸಭೆಯ ಗುರಿಯಾಗಿತ್ತು.

ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಲು ಬರಿಯ ಉಪದೇಶಗಳಿಂದ ಮತ್ತು ಬರಹಗಳಿಂದ ಮಾತ್ರವೇ ಸಾಧ್ಯವಾಗಲಿಲ್ಲ, ಡಾ|| ಅಂಬೇಡ್ಕರ್ ಅವರು ಆ ದಿಶೆಯಲ್ಲಿ ಚಳುವಳಿಯ ಹಾದಿಯನ್ನು ಸಹ ಹಿಡಿದರು. 1927ರ ಡಿಸೆಂಬರ್‌ನಲ್ಲಿ ಕೊಲಾಬಾ ಜಿಲ್ಲೆಯ ಮಹಾಡ್ ಎಂಬ ಊರಿನಲ್ಲಿರುವ "ಚಾವದಾರ್ ತಳೆ" ಎಂಬ ಸಾರ್ವಜನಿಕ ಕೆರೆಯಿಂದ ನೀರು ಸೇದಲು ಅಸ್ಪೃಶ್ಯರಿಗೆ ಸಲ್ಲತಕ್ಕ ನಾಗರಿಕ ಹಕ್ಕುಗಳನ್ನು ಸ್ಥಾಪಿಸುವ ಸಲುವಾಗಿ ಸತ್ಯಾಗ್ರಹ ಚಳುವಳಿ ನಡೆಯಿತು. ಆ ಆಂದೋಲನಕ್ಕೆ ಡಾ|| ಭೀಮರಾವ್ ಅವರೇ ಧುರೀಣರು. ಆ ತರುವಾಯ ಡಾ|| ಅಂಬೇಡ್ಕರ್ ಆ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ, "ಅಸ್ಪೃಶ್ಯರು ತಮ್ಮ ಆತ್ಮಾವಲಂಬನವನ್ನು ಅರಿತುಕೊಳ್ಳಬೇಕು, ಸ್ವಾಭಿಮಾನವನ್ನು ಮತ್ತೆ ಪಡೆದುಕೊಳ್ಳಬೇಕು, ಆತ್ಮಜ್ಞಾನವನ್ನು ಗಳಿಸಬೇಕು ಅಂದರೆ ಮಾತ್ರವೇ ಅಸ್ಪೃಶ್ಯರ ಉದ್ಧಾರವು ಸಾಧ್ಯ" ಎಂದು ಅವರನ್ನು ಎಚ್ಚರಗೊಳಿಸಿದರು. ಮಾತ್ರವಲ್ಲ ಸೇನೆ, ನೌಕಾಪಡೆ ಮತ್ತು ಪೋಲೀಸ್ ಪಡೆಗಳಲ್ಲಿ ಅಸ್ಪೃಶ್ಯರನ್ನು ಸೇರಿಸಿಕೊಳ್ಳದಂತೆ ವಿಧಿಸಲಾಗಿರುವ ನಿಷೇಧವನ್ನು ವಿರೋಧಿಸುವಂತೆ ಕೇಳಿಕೊಂಡರು. ಅಷ್ಟು ಹೊತ್ತಿಗೆ, ಆ ಹೊತ್ತಿನಿಂದಲೇ ದಲಿತ ವರ್ಗವೇ ಚಳುವಳಿ ಹೋರಾಟದ ಹಾದಿಯನ್ನು ತುಳಿಯಿತು. ಹೀಗೆ

ಡಾ|| ಅಂಬೇಡ್ಕರ್ ಅವರು ದಲಿತ ಸಮಾಜದ ಹೊಸ ಉದ್ಧಾರಕರಾದರು. ವಿದ್ರೋಹದ ಮುಂಚೂಣಿಯಲ್ಲಿ ಮಿಂಚುವ ಬಂಡಾಯಗಾರರಾದರು.

ಅವರು 1927 ರಲ್ಲಿ "ಬಹಿಷ್ಕೃತ ಭಾರತ" ಎಂಬ ಇನ್ನೊಂದು ಮರಾಠಿ ಪಾಕ್ಷಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಅದು ದಲಿತ ವರ್ಗಗಳ ದುಃಖ ದುಮ್ಮಾನಗಳ ಧ್ವನಿಯಾಗಿತ್ತು. ಆ ಪಾಕ್ಷಿಕ್ಷ ಅದೇ ವರ್ಷ ಅವರು "ಸಮಾಜ ಸಮತಾ ಸಂಘ" ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಅಸ್ಪೃಶ್ಯರು ಮತ್ತು ಸವರ್ಣೀಯರ ನಡುವೆ ಸಾಮಾಜಿಕ ಸಮಾನತೆಯನ್ನು ಪ್ರಚಾರ ಮಾಡುವುದೇ ಆ ಸಂಘಟನೆಯ ಧ್ಯೇಯ ಮತ್ತು ಆದರ್ಶ. ಅದರ ಕಾರ್ಯಕ್ರಮಗಳಲ್ಲಿ ಅಂತರ್ ಜಾತೀಯ ವಿವಾಹಗಳು ಮತ್ತು ಅಂತರ ಜಾತೀಯ ಭೋಜನ ಕೂಟಗಳು ಇವುಗಳಲ್ಲದೆ ಇತರ ಅನೇಕ ವಿಷಯಗಳು ಒಳಗೊಂಡಿದ್ದುವು.

1929 ರಲ್ಲಿ ಸೈಮನ್ ಕಮೀಷನ್ ಭಾರತಕ್ಕೆ ಭೇಟಿ ನೀಡಿತು. ಕಾಂಗ್ರೆಸ್ ಕಮೀಷನ್‌ಗೆ ಬಹಿಷ್ಕಾರ ಘೋಷಿಸಿತು. ಆದರೆ, ಆಗ ಮುಂಬಯಿ ಪ್ರೆಸಿಡೆನ್ಸಿಯ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಡಾ|| ಅಂಬೇಡ್ಕರ್ ಕಮೀಷನ್ ಮುಂದೆ ಸಾಕ್ಷ್ಯನೀಡಿದರು. ದಲಿತ ವರ್ಗಗಳವರಿಗಾಗಿ ಪ್ರತ್ಯೇಕ ಚುನಾಯಕ ಮಂಡಲದ ಅಗತ್ಯವನ್ನು ಕುರಿತು ತಮ್ಮ ಸಾಕ್ಷ್ಯದಲ್ಲಿ, ಅಂಬೇಡ್ಕರ್ ಒತ್ತಿ ಹೇಳಿದರು. ದುಂಡುಮೇಜು ಪರಿಷತ್ತನ್ನು ಕರೆಸುವಂತೆಯೂ, ವಿವಿಧ ಪರಿಷತ್ತನ್ನು ಕರೆಸುವಂತೆಯೂ, ವಿವಿಧ ರಾಜಕೀಯ ಪಕ್ಷಗಳ ಧುರೀಣರು ಸಭೆ ಸೇರಿ ವಿಭಿನ್ನ ವಿಷಯಗಳ ಚರ್ಚಿಸಲು ಅನುಕೂಲವಾಗುವುದೆಂದೂ ಸೈಮನ್ ಕಮೀಷನ್ ಸರ್ಕಾರಕ್ಕೆ ಶಿಫಾರಸು ಸಲ್ಲಿಸಿತು. ಹಾಗೆ, ಏರ್ಪಟ್ಟ ಮೊದಲನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಡಾ|| ಅಂಬೇಡ್ಕರ್ ಅವರನ್ನು ದಲಿತ ವರ್ಗಗಳ ಪ್ರತಿನಿಧಿಯಾಗಿ ಆಹ್ವಾನಿಸಲಾಗಿತ್ತು. ಆದರೆ ಸಮ್ಮೇಳನಕ್ಕೆ ಉದ್ದೇಶಿತ ಯಶಸ್ಸು ದೊರೆಯಲಿಲ್ಲ. ಕಾರಣವೆಂದರೆ, ಭಾಗವಹಿಸಿದ ಪ್ರತಿನಿಧಿಗಳು ಒಮ್ಮತ್ರಕ್ಕೆ ಬರುವುದು ಸಾಧ್ಯವಾಗಲಿಲ್ಲ. ಆದಾಗ್ಯೂ, ದಲಿತ ವರ್ಗಗಳವರಿಗಾಗಿ ಪ್ರತ್ಯೇಕ ಚುನಾಯಕ ಮಂಡಲ ಬಗ್ಗೆ ಡಾ|| ಅಂಬೇಡ್ಕರ್ ಕಂಡ ಕನಸು ಭಾಗಶಃವಾದರೂ ನನಸಾದಂತಾಯಿತು. ಬ್ರಿಟಿಷ್ ಪ್ರಧಾನಿಗಳು ಜಾತಿಯ ಐತೀರ್ಪನ್ನು (ಕಮ್ಯುನಲ್ ಅವಾರ್ಡ್ ಅನ್ನು) ಘೋಷಿಸಿದರು.

ಬ್ರಿಟಿಷ್ ಸರ್ಕಾರದ ಐತೀರ್ಪು ಮಹಾತ್ಮಾಗಾಂಧಿಯವರನ್ನು ದಿಗ್ಭ್ರಮೆಗೊಳಿಸಿತು. ಅವರು ಪುಣೆಯಲ್ಲಿರುವ ಆಗಾಖಾನ್ ಅರಮನೆಯಲ್ಲಿ ಆಮರಣ ಉಪವಾಸವನ್ನು ಘೋಷಿಸಿದರು. ಡಾ. ಅಂಬೇಡ್ಕರ್ ಅವರು ಮಹಾತ್ಮರ

ಪ್ರಾಣವನ್ನು ಉಳಿಸಲು ತಮ್ಮ ದೃಢ ನಿಲುವನ್ನು ಬದಲಾಯಿಸಬೇಕಾಯಿತು. ಪ್ರತ್ಯೇಕ ಚುನಾಯಕ ಮಂಡಲಕ್ಕೆ ಬದಲಾಗಿ ಮೀಸಲು ಚುನಾವಣೆ ಕ್ಷೇತ್ರದ ವ್ಯವಸ್ಥೆಗೆ ಒಪ್ಪಿಕೊಳ್ಳಬೇಕಾಯಿತು. ಅಸ್ಪೃಶ್ಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಏಳ್ಗೆಯ ಅಗತ್ಯ ಮಾರ್ಗಕ್ಕೆ ಸಂಬಂಧಪಟ್ಟಂತೆ ಗಾಂಧಿಯವರ ವಿಚಾರಗಳೇ ಬೇರೆ ಡಾ|| ಅಂಬೇಡ್ಕರ್ ಅವರ ವಿಚಾರಗಳೇ ಬೇರೆ. ಹಾಗೆಯೇ, ಆ ಸಂಬಂಧದಲ್ಲಿ ಅವರಿಬ್ಬರ ಪರಿಕಲ್ಪನೆಗಳೂ ವಿಭಿನ್ನವಾಗಿದ್ದುವು. ಆದಾಗ್ಯೂ, ಅವರಿಬ್ಬರೂ ಪರಸ್ಪರರನ್ನು ಗೌರವ ಭಾವನೆಯಿಂದ ಕಾಣುತ್ತಿದ್ದರು. ಮಹಾತ್ಮಾಗಾಂಧಿಯವರು ಅಂಬೇಡ್ಕರ್ ಅವರ ಪಾಂಡಿತ್ಯ, ಧ್ಯೇಯ ನಿಷ್ಠೆ ಹಾಗೂ ತ್ಯಾಗ ಮನೋಭಾವನೆಯನ್ನು ಬಹುವಾಗಿ ಮೆಚ್ಚಿಕೊಂಡವರು. ಹಾಗೆಂತಲೇ, ಅವರನ್ನು "ದೇಶಾಭಿಮಾನಿಗಳಲ್ಲಿ ಅಪ್ಪಟ ಚಿನ್ನದಂತೆ ಮಿಂಚುತ್ತಾರೆ" ಎಂದು ಅಂಬೇಡ್ಕರ್ ಅವರನ್ನು ಬಣ್ಣಿಸುತ್ತಿದ್ದರು. ಡಾ|| ಅಂಬೇಡ್ಕರ್ ಗಾಂಧೀಜಿಯವರ ಧ್ಯೇಯ ನಿಷ್ಠೆಯನ್ನು ಮತ್ತು ದೇಶಭಕ್ತಿಯನ್ನು ಮೆಚ್ಚಿಕೊಂಡಿದ್ದರು.

1942 ರಲ್ಲಿ ಡಾ|| ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳಿಗಾಗಿ ಹೋರಾಟ ನಡೆಸುವ ವೇದಿಕೆಯಾಗಿ ಅಖಿಲ ಭಾರತ ಪರಿಶಿಷ್ಟ ಜಾತಿಯ ಒಕ್ಕೂಟ ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಆದರೆ, 1946 ರಲ್ಲಿ ಜರುಗಿದ ಮಹಾ ಚುನಾವಣೆಯಲ್ಲಿ, ಆ ಪಕ್ಷಕ್ಕೆ ಹೇಳುವಷ್ಟು ಯಶಸ್ಸು ಸಿಗಲಿಲ್ಲ.

## ಸಂಸದರಾಗಿ

ಡಾ|| ಅಂಬೇಡ್ಕರ್ ಅವರು ಸಲ್ಲಿಸುತ್ತಿದ್ದ ಸಮಾಜ ಸೇವಾ ಕಾರ್ಯವನ್ನು ಗುರುತಿಸಿದ ಮುಂಬಯಿಯ ಗವರ್ನರ್ ಅವರು 1926ರಲ್ಲಿ ಅವರನ್ನು ಮುಂಬಯಿ ವಿಧಾನ ಪರಿಷತ್ತಿಗೆ ಸದಸ್ಯನಾಗಿ ನಾಮಕರಣ ಮಾಡಿದರು. 1934 ರ ವರೆಗೂ ಆ ಸಭೆಯ ಸದಸ್ಯರಾಗಿದ್ದರು. ಭೂಕಂದಾಯ, ಸರ್ಕಾರದ ಪಾನ ನಿರೋಧ ನೀತಿ, ಬಜೆಟ್, ಶಿಕ್ಷಣ, ಮುಂತಾದ ವಿಷಯಗಳನ್ನು ಕುರಿತು ಸುದೀರ್ಘ ಭಾಷಣಗಳನ್ನು ಮಾಡುತ್ತಿದ್ದರು. ಇದೇ ಅವಧಿಯಲ್ಲಿ ರೈತರ ಯೋಗಕ್ಷೇಮ, ಕಾರ್ಮಿಕ ಕಲ್ಯಾಣ, ಅಸ್ಪೃಶ್ಯರ ಉನ್ನತಿ ಮುಂತಾದ ವಿಷಯಗಳ ಬಗ್ಗೆ ಮಸೂದೆಗಳನ್ನು ಮಂಡಿಸಿದರು. ಆದರೆ ರೂಢಿವಾದಿಗಳ ಕಟ್ಟಾ ವಿರೋಧದ ಕಾರಣ ಆ ಮಸೂದೆಗಳನ್ನು ತೀರ್ಮಾನಗೊಳಿಸುವುದು ಸಾಧ್ಯವಾಗಲಿಲ್ಲ. ಅದೇನೇ ಇರಲಿ, ವಿಧಾನಸಭೆಯಲ್ಲಿ ತಾವು ಭಾಗವಹಿಸಿದ ತಮ್ಮ ಮೊದಲ ಇನ್ನಿಂಗ್ಸ್‌ನಲ್ಲೇ ತಾವೊಬ್ಬ ವಾಗ್ವೈಭವವುಳ್ಳ ಸಂಸದೀಯ ಪಟು ಎಂದು ಸಿದ್ಧಗೊಳಿಸಿದರು.

1936ರಲ್ಲಿ ಡಾ. ಅಂಬೇಡ್ಕರ್ "ಭಾರತದ ಸ್ವತಂತ್ರ ಕಾರ್ಮಿಕ ಪಕ್ಷ" (ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಆಫ್ ಇಂಡಿಯಾ) ಎಂಬ ಪಕ್ಷವನ್ನು ಸ್ಥಾಪಿಸಿದರು. ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್, 1935ರ ಉಪಬಂಧಗಳಿಗನುಸಾರವಾಗಿ, 1937ರಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ಜನಪ್ರಿಯ ವಿಧಾನಸಭೆಗಳನ್ನು ಚುನಾಯಿಸುವಲ್ಲಿ ಚುನಾವಣೆಗಳು ನಡೆದುವು. ಮುಂಬಯಿಯ ವಿಧಾನಸಭೆಗೆ ಸ್ಪರ್ಧಿಸಿದ್ದ 17 ಸ್ಥಾನಗಳ ಪೈಕಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯು 15 ಸ್ಥಾನಗಳನ್ನು ಗೆದ್ದಿತು. ಡಾ|| ಅಂಬೇಡ್ಕರ್ ಅವರು ಮುಂಬಯಿ ವಿಧಾನಸಭೆಯಲ್ಲಿ ಅತ್ಯಂತ ಪರಿಣಾಮಕಾರಿಯಾದ ಮತ್ತು ಅರ್ಥಪೂರ್ಣವಾದ ಪಾತ್ರವನ್ನು ವಹಿಸಿದರು. ತಾವು ಒಬ್ಬ ಜಾಣಾಕ್ಷಮತಿಯಾದ ಅನುಭವಿಕ ಸಾಂಸದ ಎಂದು ತೋರಿಸಿ ಕೊಟ್ಟರು ಮಂತ್ರಿಗಳ ವೇತನ ಮಸೂದೆಯನ್ನು ಕುರಿತು ಚರ್ಚೆಯಲ್ಲಿ ಭಾಗವಹಿಸುತ್ತ ಮಂತ್ರಿಗಳ ಸಲುವಾಗಿ ತಾನು ಯಾವುದೇ ಸ್ಟಾಂಡರ್ಡ್ ವೇತನ ಶ್ರೇಣಿಯನ್ನು ಅಂಗೀಕರಿಸುವುದಿಲ್ಲ ಎಂದು ತಮ್ಮ ಅಭಿಪ್ರಾಯೋಕ್ತಿಯನ್ನು ವ್ಯಕ್ತಗೊಳಿಸಿದರು. ಅವರ ಚರ್ಚೆಯುದ್ದಕ್ಕೂ ವಾಗ್‌ಧಾರೆಯಾಗಿ ತರ್ಕಸಂಗತವಾಗಿ ತಮ್ಮ ಮಾತುಗಳನ್ನು ಮಂಡಿಸುತ್ತಿದ್ದರು. ಮಂತ್ರಿಗಳ ವೇತನ ಶ್ರೇಣಿಗಳನ್ನು ನಿಗದಿಪಡಿಸುವಾಗ ನಾಲ್ಕು ಷರತ್ತುಗಳನ್ನು ಪಾಲಿಸಬೇಕಾದುದು ಆಗತ್ಯ ಎಂಬುದಾಗಿ ಅವರು ವಿವರಿಸಿ ಹೇಳಿದರು. (1) ಸಮಾಜದ ಧುರೀಣರಾಗಿರತಕ್ಕ ಮಂತ್ರಿಗಳ ಸಾಮಾಜಿಕ ಸ್ಥಾನಮಾನದ ಪರಿಗಣನೆ (2) ಸಾಮರ್ಥ್ಯದ ಪರಿಗಣನೆ (3) ಪ್ರಜಾ ತಂತ್ರದ ಪರಿಗಣನೆ ಮತ್ತು (4) ಆಡಳಿತದ ಪ್ರಾಮಾಣಿಕತೆಯ ಮತ್ತು ಪಾವಿತ್ರ್ಯದ ಪರಿಗಣನೆ. ಮುಂದುವರಿದ ಅವರು ತಮ್ಮ ಅಭಿಪ್ರಾಯವನ್ನು ಇನ್ನಷ್ಟು ಸ್ಪಷ್ಟಗೊಳಿಸಿದರು. "ವೈಯಕ್ತಿಕವಾಗಿ ಹೇಳುವುದಾದರೆ, ದೇಶದ ಮಂತ್ರಿಗಳು, ದೇಶದ ಪ್ರಥಮ ಪೌರರಾಗಿರುವ ನಿಮಿತ್ತ ಅವರು, ಸುಸಂಸ್ಕೃತ ಜೀವನ ನಡೆಸಬೇಕು, ಸಾಹಿತ್ಯ ಮತ್ತು ಲಲಿತ ಕಲೆಗಳು, ವಿದ್ಯೆ ಮತ್ತು ವಿಜ್ಞಾನಗಳು ಮುಂತಾದ ವಿಚಾರಗಳಲ್ಲಿ ಅಭಿರುಚಿಯುಳ್ಳವರಾಗಿದ್ದು, ಇತರರಿಗೆಲ್ಲ ಮಾದರಿಯಾಗಿರಬೇಕೆಂದು ಭಾವಿಸುತ್ತೇನೆ". ಇದಲ್ಲದೆ, ಮಂತ್ರಿಗಳ ಹೊಂದಿರತಕ್ಕ ಅನುಭವವನ್ನು ಕುರಿತು ಕೂಡ ಅವರು ಒತ್ತಿ ಹೇಳಿದರು. "ನಮ್ಮನ್ನು ಇದಿರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದರೆ, ನಮ್ಮ ಸಂವಿಧಾನದ ಮೂಲಕ ಅತ್ಯುತ್ತಮ ಫಲವನ್ನು ನಾವು ಪಡೆದುಕೊಳ್ಳಬೇಕಾದರೆ, ಕಾರ್ಯಾಂಗವು, ಮೇಧಾಶಕ್ತಿಯ ವಿಶ್ವಸ್ಥ ನಿಧಿಯಾಗಿರಬೇಕಾದದ್ದು ಯಥೋಚಿತವೇ. ತಮ್ಮ ವಾಕ್ ಶಕ್ತಿಯ ಮತ್ತು ಪಾಂಡಿತ್ಯದ ಪ್ರತಿಭೆಯ ಸಹಾಯದಿಂದ, ಡಾ|| ಅಂಬೇಡ್ಕರ್ ಅವರು, ಚರ್ಚೆಗಳಲ್ಲಿ,

ಅನೇಕ ಸಲ ಬಲವಾದ ವಿರೋಧವನ್ನು ಮಂಡಿಸುತ್ತಿದ್ದರು. ಆದ್ದರಿಂದ, ಅವರು ವಿಧಾನಸಭೆಯಲ್ಲಿ ಮಾತನಾಡಲು ಎದ್ದು ನಿಂತರೆ, ಸದಸ್ಯರು ಅವರ ಮಾತುಗಳನ್ನು ತದೇಕಚಿತ್ತರಾಗಿ ಕೇಳುತ್ತಿದ್ದರೆನ್ನುವುದು ಅಚ್ಚರಿಯ ಸಂಗತಿಯಲ್ಲ.

ಡಾ. ಅಂಬೇಡ್ಕರ್ ಅವರನ್ನು 1946ರ ಜುಲೈನಲ್ಲಿ ಸಂವಿಧಾನದ ಸಭೆಗೆ ಮೊದಲಲ್ಲಿ ಬಂಗಾಲ ವಿಧಾನಸಭೆಯಿಂದ ಚುನಾಯಿಸಲಾಯಿತು. ಆದರೆ, ದೇಶದ ವಿಭಜನೆಯ ತರುವಾಯ, ಡಾ|| ಅಂಬೇಡ್ಕರ್ ಅವರೂ ಸೇರಿದಂತೆ, ಅನೇಕರು ತಮ್ಮ ಸದಸ್ಯತ್ವವನ್ನು ಕಳೆದುಕೊಂಡರು. ಆ ತರುವಾಯ ಡಾ|| ಎಂ.ಆರ್. ಜಯಕರ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನವನ್ನು ತುಂಬಲು ಮುಂಬಯಿ ವಿಧಾನಸಭೆಯಲ್ಲಿನ ಕಾಂಗ್ರೆಸ್ ಪಕ್ಷವು ಡಾ|| ಅಂಬೇಡ್ಕರ್ ಅವರನ್ನು ಆಯ್ಕೆ ಮಾಡಿತು. ಹೊಸ ಸಂವಿಧಾನದ ಅಡಿಯಲ್ಲಿ ದೇಶದಲ್ಲಿ ಮೊದಲ ಬಾರಿಗೆ ಸಾರ್ವತ್ರಿಕ ಚುನಾವಣೆಗಳು ಜರುಗಿದುವು. ಡಾ|| ಅಂಬೇಡ್ಕರ್ ಅವರು ಮುಂಬಯಿ ಚುನಾವಣಾ ಕ್ಷೇತ್ರದಿಂದ ಸ್ಪರ್ಧಿಸಿದರು. ಆದರೆ ಅವರಿಗೆ ಯಶಸ್ಸು ದೊರೆಯಲಿಲ್ಲ, 1952ರ ಮಾರ್ಚಿನಲ್ಲಿ ಮುಂಬಯಿ ವಿಧಾನ ಮಂಡಲದಿಂದ ರಾಜ್ಯ ಸಭೆಗೆ ಚುನಾಯಿತರಾದರು. ಡಾ. ಅಂಬೇಡ್ಕರ್ ಅವರು ರಾಜ್ಯಸಭೆಯ ಸದಸ್ಯರಾಗಿ ಮುಂದುವರಿದರು. ಆದಾಗ್ಯೂ, ಅವರು ತಮ್ಮ ಜೀವಿತದ ಕೊನೆಯ ಕೆಲವು ವರ್ಷಗಳ ಬಹುಭಾಗವನ್ನು ಬೌದ್ಧ ಧರ್ಮದ ಪ್ರಚಾರಕ್ಕಾಗಿ ಮೀಸಲಿಟ್ಟರು.

## ಮಂತ್ರಿಗಳಾಗಿ

1946ರಲ್ಲಿ ನಡುಗಾಲ ಸರ್ಕಾರವು ರೂಪುಗೊಂಡಾಗ ಪಂಡಿತ ಜವಾಹರಲಾಲ್ ನೆಹರು ಅವರು ಡಾ|| ಅಂಬೇಡ್ಕರ್ ಅವರನ್ನು ತಮ್ಮ ಮಂತ್ರಿಮಂಡಲದಲ್ಲಿ ಕಾನೂನು ಮಂತ್ರಿಯಾಗಿ ಆಯ್ಕೆ ಮಾಡಿಕೊಂಡರು. ಇದು ಅಂಬೇಡ್ಕರ್ ಅವರಿಗೆ ಒದಗಿ ಬಂದ ಅಪೂರ್ವ ಅವಕಾಶ. ಹಿಂದೂ ಸಮಾಜದಲ್ಲಿ ಪ್ರಚಲಿತವಾಗಿದ್ದ ಹಲವಾರು ಅಸಂಗತಿಗಳನ್ನು ವಿಷಮತೆಗಳನ್ನು ಅಧ್ಯಯನಮಾಡಿ ಅರಿತವರಾಗಿದ್ದ ಡಾ|| ಅಂಬೇಡ್ಕರ್ ಹಿಂದೂ ಮಹಿಳೆಯರ ಮತ್ತು ಅಸ್ಪೃಶ್ಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ಸಲುವಾಗಿ ಹಲವಾರು ಸುಧಾರಣೆಗಳನ್ನು ತರಬಯಸಿದ್ದರು. ಇದೀಗ ಒಂದು ಅವಕಾಶ ಸಿಕ್ಕಿತು ಎಂದು ಅವರಿಗೆ ಅನಿಸಿತು. ಈ ಉದ್ದೇಶದಿಂದಲೇ, ಅವರು ಅಪಾರ ಪರಿಶ್ರಮ ವಹಿಸಿ, ಹಿಂದೂ ಕೋಡ್ ಬಿಲ್‌ನ ಮಸೂದೆಯನ್ನು ರೂಪಿಸಿದರು. ಅದನ್ನು 1951ರ ಫೆಬ್ರವರಿ 4ನೆಯ ತಾರೀಖು ಸಂಸತ್ತಿನಲ್ಲಿ ಮಂಡಿಸಿದರು. ಹಿಂದೂ ಕಾನೂನಿನ ಕೆಲವು ಶಾಖೆಗಳಲ್ಲಿ ಕೆಲವು ಸುಧಾರಣೆಗಳನ್ನು ಕ್ರೋಢೀಕರಿಸಲಾಗುವುದು ಎಂದು ಮಸೂದೆಯ

ಉದ್ದೇಶವನ್ನು ವಿವರಿಸಿದರು. ಹಿಂದೂ ಕೋಡ್‌ನ ಮಹತ್ತ್ವವನ್ನು ಒತ್ತಿ ಹೇಳುತ್ತಾ, ಅವರು ಇಂತು ನುಡಿದರು. "ದೇಶದ ಐಕ್ಯತೆಯ ಹಿತದೃಷ್ಟಿಯಿಂದ ಪ್ರಯೋಜನಕಾರಿಯೆಂದೂ ಹಿಂದೂಗಳ ಸಾಮಾಜಿಕ ಮತ್ತು ಮತೀಯ ಜೀವಿತವು ಒಂದೇ ಕಾನೂನು ಸಂಹಿತೆಗೆ ಒಳಪಡತಕ್ಕುದೆಂದೂ" ತಮ್ಮ ನಿಲುವನ್ನು ಸ್ಪಷ್ಟಗೊಳಿಸಿದರು. ಹೀಗೆ ಸ್ವತಂತ್ರ ಭಾರತದ ಕಾನೂನು ಮಂತ್ರಿಗಳಾಗಿ ಸಂಪ್ರದಾಯ ಶರಣವಾದ ಮತ್ತು ಸುಧಾರಣಾ ವಿರೋಧಿಯಾದ ಮತ್ತು ಅನ್ಯಾಯ ಪೂರ್ಣವಾದ ಹಿಂದೂ ಶಾಸನವನ್ನೂ ಪುರೋಗಾಮಿ ಶಾಸನ ಆಗಿ ಮಾರ್ಪಡಿಸುವಲ್ಲಿ ಅವರು ಪ್ರಪ್ರಥಮ ಪ್ರಯತ್ನ ಮಾಡಿದರು. ಈ ಅರ್ಥದಲ್ಲಿಯೇ ಡಾ|| ಅಂಬೇಡ್ಕರ್ ಅವರನ್ನು "ಆಧುನಿಕ ಮನು" ಎಂದು ಕರೆಯುತ್ತಿದ್ದರು. ಡಾ|| ಅಂಬೇಡ್ಕರ್ ಅವರ ಪ್ರಯತ್ನವು ವಿಚಾರಪೂರ್ಣವಾಗಿದ್ದರೂ, ಪ್ರಶಂಸಾರ್ಹವಾಗಿದ್ದರೂ, ಅದಕ್ಕೆ ಯಶಸ್ಸು ದೊರೆಯಲಿಲ್ಲ. ಮಂತ್ರಿಮಂಡಲ ಸಹೋದ್ಯೋಗಿಗಳು ಸಹ ಅವರ ಪ್ರಸ್ತಾವಗಳನ್ನು ವಿರೋಧಿಸಿದರು. ಆಖೈರಾಗಿ ಆ ಮಸೂದೆಯು ಕಾಯಿದೆಯ ರೂಪು ತಳೆಯಲಿಲ್ಲ.

ಡಾ|| ಅಂಬೇಡ್ಕರ್ ಅವರು, 1951ರ ಮೇ, 9ನೇ ತಾರೀಖಿನಂದು ತಾತ್ಕಾಲಿಕ ಸಂಸತ್ತಿನಲ್ಲಿ ಪ್ರಜಾಪ್ರಾತಿನಿಧ್ಯ ಮಸೂದೆ 1950 ಇದನ್ನು ಮಂಡಿಸಿದ್ದು, ಶಾಸನ ರಚನಾ ಕ್ಷೇತ್ರದಲ್ಲಿ, ಕಾನೂನು ಮಂತ್ರಿಗಳಾಗಿ ಅವರು ಸಾಧಿಸಿದ ಇನ್ನೊಂದು ಚಾರಿತ್ರಿಕ ದಾಖಲೆ. ಆ ರಾಜ್ಯಗಳ ವಿಧಾನಸಭೆಗಳಿಗೆ ಮಸೂದೆಯಲ್ಲಿ ಸಂಸತ್ತಿಗೆ ಮುಕ್ತ ಚುನಾವಣೆಗಳನ್ನು ನಡೆಸಲು ಅವಕಾಶ ಕಲ್ಪಿಸಿತು. ಅಷ್ಟೇ ಅಲ್ಲದೆ, ಅಭ್ಯರ್ಥಿಗಳ ಅರ್ಹತೆಗಳನ್ನು ಮತ್ತು ಅನರ್ಹತೆಗಳನ್ನು ನಿಗದಿಪಡಿಸುತ್ತ, ಚುನಾವಣೆಗಳ ಸಮಯದಲ್ಲಿ ಸಂಭವಿಸುವ ಭ್ರಷ್ಟ ಮತ್ತು ಕಾನೂನು ಬಾಹಿರ ರೂಢಿಗಳನ್ನು ಪ್ರತಿಬಂಧಿಸುವುದಕ್ಕೂ ವ್ಯವಸ್ಥೆ ಮಾಡಲಾಗಿತ್ತು.

1951ರ ಸೆಪ್ಟೆಂಬರ್ 25ನೇ ತಾರೀಖು, ಡಾ|| ಅಂಬೇಡ್ಕರ್ ಅವರು ಸರ್ಕಾರಕ್ಕೆ ತಮ್ಮ ರಾಜೀನಾಮೆ ಸಲ್ಲಿಸಿದರು. ಪ್ರಧಾನಿ ಜವಾಹರಲಾಲ್ ಮತ್ತು ಕೆಲವರು ಸಹೋದ್ಯೋಗಿಗಳ ಜತೆ ಭಿನ್ನಾಭಿಪ್ರಾಯಗಳಿದ್ದುದರಿಂದ ಅವರು ಆ ನಿರ್ಧಾರ ಕೈಕೊಳ್ಳಬೇಕಾಯಿತು. ಆದರೆ, ಎಷ್ಟೇ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಕಾನೂನು ಮಂತ್ರಿಗಳಾಗಿ ಡಾ|| ಅಂಬೇಡ್ಕರ್ ತಮ್ಮ ಸಹೋದ್ಯೋಗಿಗಳಿಗೆ ಸ್ಫೂರ್ತಿಯ ಕೇಂದ್ರವಾಗಿದ್ದರು. ಶಕ್ತಿಯ ದ್ಯೋತಕವಾಗಿದ್ದರು. ಮಂತ್ರಿಗಳಾಗಿ ತತ್ವಗಳಿಗಾಗಿ ಮತ್ತು ಆದರ್ಶಕ್ಕಾಗಿ ಸಂಘರ್ಷ ನಡೆಸಿದರು. ಬಹುಮಟ್ಟಿಗೆ,

ಸಾಮಾಜಿಕ ಅನ್ಯಾಯಗಳನ್ನು ತೊಡೆದು ಹಾಕುವ ಮತ್ತು ಅವಕಾಶ ವಂಚಿತರ ವ್ಯವಸ್ಥೆಗೆ ತಳಹದಿಯನ್ನು ನಿರ್ಮಿಸಿದರು.

## ಸಂವಿಧಾನದ ಪ್ರಧಾನ ಶಿಲ್ಪಿಯಾಗಿ

ರಾಷ್ಟ್ರೀಯ ಧುರೀಣರಾಗಿ, ನ್ಯಾಯಶಾಸ್ತ್ರ ವಿಶಾರದರಾಗಿ, ಸಂವಿಧಾನ ತಜ್ಞರಾಗಿ ಮತ್ತು ಸಾಂಸದರಾಗಿ ಬೆಳಗುತ್ತಿದ್ದ ಡಾ. ಅಂಬೇಡ್ಕರ್ ಅವರನ್ನು ಮೊದಲು ಬಂಗಾಲ ವಿಧಾನ ಸಭೆಯಿಂದ, ಆ ತರುವಾಯ ಮುಂಬಯಿ ವಿಧಾನಸಭೆಯಿಂದ ಸಂವಿಧಾನ ರಚನಾ ಸಭೆಗೆ ಚುನಾಯಿಸಿದಾಗ ಅವರನ್ನು 1947ರ ಆಗಸ್ಟ್ 27 ರಂದು ಕರಡು ರಚನಾ ಸಮಿತಿಗೆ ನೇಮಿಸಲಾಯಿತು. ಆಮೇಲೆ ಅಧ್ಯಕ್ಷರಾಗಿ ನೇಮಿಸಲಾಯಿತು. ಸದಸ್ಯತ್ವ ಮತ್ತು ಅಧ್ಯಕ್ಷ ಪದವಿ ಇವೆರಡೂ ಡಾ|| ಅಂಬೇಡ್ಕರ್ ಅವರಿಗೆ ಅಚ್ಚರಿಯ, ಹಾಗೆಯೇ ಆನಂದದ ಸಂಗತಿಗಳಾಗಿದ್ದವು. ಈ ಕುರಿತು ತಮ್ಮ ಭಾವನೆಯನ್ನು ಸಭೆಯಲ್ಲಿ ಅವರು ನೀಡಿದ ಭಾಷಣದಲ್ಲಿ ಇಂತು ವ್ಯಕ್ತಗೊಳಿಸಿದ್ದುಂಟು.

"ಸಂವಿಧಾನ ಸಭೆಗೆ ಬರುವಾಗ, ಪರಿಶಿಷ್ಟ ಜಾತಿಗಳವರ ಹಿತರಕ್ಷಣೆಯ ಹೊರತಾಗಿ, ಯಾವುದೇ ಆಸೆ ಆಕಾಂಕ್ಷೆಗಳನ್ನು ಅರಸಿ ಬಂದವನಲ್ಲ ನಾನು. ಇದಕ್ಕಿಂತ ಅಧಿಕ ಜವಾಬ್ದಾರಿಯುತ ಕಾರ್ಯಗಳನ್ನು ನಾನು ನಿರ್ವಹಿಸುವ, ಹೊಣೆ ಹೊರುವ ಪ್ರಸಂಗ ಬರಬಹುದೆಂದು ನಾನು ಎಣಿಸಿರಲಿಲ್ಲ, ಆದ ಕಾರಣವೇ, ನನ್ನನ್ನು ಕರಡು ರಚನಾ ಸಮಿತಿಗೆ ಆಹ್ವಾನಿಸಿದಾಗ ನನಗೆ ಅತ್ಯಂತ ಆಶ್ಚರ್ಯವಾದದ್ದು. ಕರಡು ರಚನಾ ಸಮಿತಿಯು ನನ್ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿದಾಗಲಂತೂ ಇನ್ನಷ್ಟು ಆಶ್ಚರ್ಯವಾಯಿತು. ಕರಡು ರಚನಾ ಸಮಿತಿಯಲ್ಲಿ ನನಗಿಂತಲೂ ಎಷ್ಟೋ ಪಟ್ಟು ಸಮರ್ಥರಾದವರೂ ..... ಇದ್ದರು."

ಡಾ|| ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಕರಡು ರಚನಾ ಸಮಿತಿಯು 1947ರ ಆಗಸ್ಟ್ 30ನೇ ತಾರೀಖಿಗೆ ತನ್ನ ಮೊದಲ ಅಧಿವೇಶನವನ್ನು ಜರುಗಿಸಿತು. ಡಾ|| ಅಂಬೇಡ್ಕರ್ ಮತ್ತು ಅವರ ತಜ್ಞರ ತಂಡವು ಒಟ್ಟು 141 ದಿವಸ ಅಧಿವೇಶನ ನಡೆಸಿತು. ಸಂವಿಧಾನದ ಕರಡನ್ನು ರೂಪಿಸಿತು. ಈ ಅಧಿವೇಶನಗಳ ಪೈಕಿ ಅಧಿಕಾಂಶ ಅಧಿವೇಶನಗಳಲ್ಲಿ ಡಾ|| ಅಂಬೇಡ್ಕರ್ ಅವರು ಜಂಟಿಯಾಗಿಯೇ ಕೆಲಸ ಮಾಡಬೇಕಾಗುತ್ತಿತ್ತು. ಡಾ|| ಅಂಬೇಡ್ಕರ್ ಅರ್ಥಶಾಸ್ತ್ರ ಪ್ರವೀಣರು, ಕಾನೂನು ಪಂಡಿತರು, ಹಾಗೆಯೇ ಸಮಾಜಶಾಸ್ತ್ರಜ್ಞರೂ ಕೂಡ ಹೀಗಾಗಿ, ಸಂವಿಧಾನ ಎಂದರೆ ಕಾನೂನು ದಸ್ತಾವೇಜು ಮಾತ್ರವಲ್ಲದೆ,

ಕೋಟ್ಯಾಂತರ ಜನರ ಆಶೋತ್ತರಗಳನ್ನು, ಕಷ್ಟಕಾರ್ಪಣ್ಯಗಳನ್ನು ಗಮನಿಸಿ ಅವರ ಒತ್ತಾಸೆಗಳನ್ನು ಅಗತ್ಯಗಳನ್ನು ಪ್ರತಿಬಿಂಬಿಸತಕ್ಕ ಸಾಮಾಜಿಕ ಹಾಗೂ ಆರ್ಥಿಕ ದಾಖಲೆ ವಿಶೇಷ ಎಂದು ಅವರು ಚೆನ್ನಾಗಿ ಅರಿತವರಾಗಿದ್ದರು. ಅವರು ಪ್ರಜಾತಂತ್ರದ ಉತ್ಕಟ ಅಭಿಮಾನಿಗಳಾಗಿದ್ದರಿಂದ, ಭಾರತ ಗಣರಾಜ್ಯಕ್ಕೆ ಒಂದು ಸಂಸದೀಯ ಸ್ವರೂಪದ ಸಂವಿಧಾನವನ್ನು ರೂಪಿಸುವಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಅವರೊಬ್ಬರನ್ನೇ ಸಂವಿಧಾನದ ಮುಖ್ಯಶಿಲ್ಪಿ ಎಂದು ಕರೆಯಬೇಕು ಎಂಬ ಬಗ್ಗೆ ಶ್ರೀ ಟಿ.ಟಿ. ಕೃಷಮಾಚಾರಿ ಕೆಳಕಂಡಂತೆ ವಿವರಣೆ ನೀಡಿದ್ದುಂಟು.

"ಸದನಕ್ಕೆ ಗೊತ್ತಿರುವಂತೆ, ತಾವು ನಾಮಕರಣ ಮಾಡಿದ್ದ 7 ಸದಸ್ಯರ ಪೈಕಿ ಒಬ್ಬರು ರಾಜೀನಾಮೆ ಸಲ್ಲಿಸಿದರು. ಅವರ ಸ್ಥಾನದಲ್ಲಿ ಇನ್ನೊಬ್ಬರನ್ನು ನೇಮಿಸಲಾಯಿತು. ಒಬ್ಬರು ತೀರಿಕೊಂಡರು. ಆದರೆ ಅವರ ಸ್ಥಳದಲ್ಲಿ ಯಾರನ್ನೂ ನೇಮಿಸಿಲ್ಲ. ಒಬ್ಬರು ದೂರದ ಅಮೇರಿಕಾದಲ್ಲಿದ್ದರು. ಅವರು ತೆರವುಗೊಳಿಸಿದ ಸ್ಥಾನವನ್ನು ಸಹ ತುಂಬಲಿಲ್ಲ. ಇನ್ನೊಬ್ಬರು ರಾಜ್ಯದ ವ್ಯವಹಾರಗಳಲ್ಲಿ ತೊಡಗಿದ್ದರು. ಹಾಗೆ, ಆ ಸ್ಥಾನವೂ ತೆರವಾಗಿತ್ತು. ಒಬ್ಬಬ್ಬರು ದಿಲ್ಲಿಯಿಂದ ದೂರದ ಸ್ಥಳಗಳಲ್ಲಿ ವಾಸ ಮಾಡುತ್ತಿದ್ದರು. ಅನಾರೋಗ್ಯದ ಕಾರಣಕ್ಕಾಗಿಯೋ ಏನೋ ಅವರಿಗೂ ಸಭೆಗಳಿಗೆ ಹಾಜರಾಗಿರುವುದು ಸಾಧ್ಯವಾಗಲಿಲ್ಲ. ಆಖೈರಿನಲ್ಲಿ, ಸಂವಿಧಾನದ ಕರಡು ತಯಾರಿಸುವ ಗುರುತರ ಹೊಣೆಯನ್ನು ಡಾ|| ಅಂಬೇಡ್ಕರ್ ಒಬ್ಬರೇ ಅನಿವಾರ್ಯವಾಗಿ ವಹಿಸಬೇಕಾಯಿತು. ಮತ್ತು ಈ ಮಹತ್ಕಾರ್ಯವನ್ನು ನಿಸ್ಸಂದೇಹವಾಗಿಯೂ ಪ್ರಶಂಸಾರ್ಹ ರೀತಿಯಲ್ಲಿ ಪೂರೈಸಿದ್ದಕ್ಕಾಗಿ ನಾವೆಲ್ಲರೂ, ಡಾ|| ಅಂಬೇಡ್ಕರ್ ಅವರಿಗೆ ಕೃತಜ್ಞರಾಗಿರಬೇಕೆಂಬ ಬಗ್ಗೆ ಸಂದೇಹಕ್ಕೆ ಎಡೆಯಿಲ್ಲ ಎಂಬುದು ನನ್ನ ಅನಿಸಿಕೆ"

ಸಂವಿಧಾನ ಕರಡು ರಚನಾ ಸಮಿತಿಯು ರೂಪಿಸಿದ ಸಂವಿಧಾನದ ಕರಡನ್ನು, ಡಾ|| ಅಂಬೇಡ್ಕರ್ ಅವರು, 1948ರ ನವೆಂಬರ್, 4ನೇ ತಾರೀಖು ಸಂವಿಧಾನದ ಸಭೆಯಲ್ಲಿ ಮಂಡಿಸಿದರು. ಆ ತರುವಾಯ, ಕರಡು ಸಂವಿಧಾನದ ಮುಖ್ಯ ಅಂಶಗಳ ಮೇಲೆ ಬೆಳಕು ಚೆಲ್ಲುತ್ತ, ಸ್ಪಷ್ಟವಾದ, ಸವಿಸ್ತಾರವಾದ ಭಾಷಣ ಮಾಡಿದರು.

"ಈ ಕರಡು ರಚನಾ ಸಮಿತಿಯು ಆಖೈರುಗೊಳಿಸಿದ ಈ ಸಂವಿಧಾನವು ಅನುಷ್ಠಾನ ಸಾಧ್ಯವಾದ ಸಂವಿಧಾನ. ಪರಿಸ್ಥಿತಿಗಳು ಬದಲಾದಂತೆ, ಬದಲಾಯಿಸಬಹುದಾದಂಥ ಸಂವಿಧಾನ. ಶಾಂತಿಯ ಕಾಲದಲ್ಲೂ, ಸಮರದ ಸಮಯದಲ್ಲೂ ರಾಷ್ಟ್ರವನ್ನು ಪರಿರಕ್ಷಿಸಬಲ್ಲ ಶಕ್ತಿಯುತ ಸಂವಿಧಾನ. ಹಾಗೆ,

ಹೊಸ ಸಂವಿಧಾನದ ಅಡಿಯಲ್ಲಿ, ಏನಾದರೂ ಕೇಡು ಒದಗಿದರೆ, ಅದಕ್ಕೆ ಈ ಸಂವಿಧಾನವು ಕಾರಣ ಎಂದು ಹೇಳುವಂತಿಲ್ಲ. ನಮ್ಮಲ್ಲೇ ಇರುವ ಯಾವುದೇ ಒಂದು ದೋಷದ ಕಾರಣ ಎಂದು ಹೇಳಬಹುದು. ಇದು ನನ್ನ ಅನಿಸಿಕೆ".

ಸದಸ್ಯರೆಲ್ಲರೂ, ಒಬ್ಬರ ಅನಂತರ ಒಬ್ಬರಾಗಿ ಅಧ್ಯಕ್ಷ ಡಾ॥ ಅಂಬೇಡ್ಕರ್ ಅವರನ್ನು ಕರಡು ರಚನಾ ಸಮಿತಿಯ ಸದಸ್ಯರನ್ನೂ ಅವರೆಲ್ಲರೂ ಪೂರೈಸಿದ ಮಹತ್ಕಾರ್ಯದ ನಿಮಿತ್ತ ಪ್ರಶಂಸಿದರು. ತಮ್ಮ ಮೆಚ್ಚುಗೆಯನ್ನು ದಾಖಲಿಸಿದರು. ಮುಖ್ಯವಾಗಿ ಡಾ॥ ಅಂಬೇಡ್ಕರ್ ಅವರು, ಸಂವಿಧಾನವನ್ನು ಪರಿಚಯಿಸುತ್ತ ನೀಡಿದ ಪ್ರಾಸ್ತಾವಿಕ ಭಾಷಣದ ವಾಗ್ವೈಖರಿಗೆ ಮನಸೋತ ಸಕಲರೂ ತಮ್ಮ ಅಮಿತಾನಂದವನ್ನು ವ್ಯಕ್ತಗೊಳಿಸಿದರು. ಸಂವಿಧಾನ ಸಮಿತಿಯ ಸಭೆಗಳು ವರ್ಷದುದ್ದಕ್ಕೂ ನಡೆದುವು. ಡಾ॥ ಅಂಬೇಡ್ಕರ್ ಚರ್ಚೆಗಳ ಪ್ರತಿ ಹಂತದಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಚರ್ಚಾ ಅವಧಿಯಲ್ಲಿ ತಿದ್ದುಪಡಿಗಳನ್ನು ಸೂಚಿಸಲಾಗುತ್ತಿತ್ತು. ವಿಚಾರ ವಿಮರ್ಶೆ ನಡೆಯುತ್ತಿತ್ತು. ಡಾ॥ ಅಂಬೇಡ್ಕರ್ ಅವರು ಕರಡು ಸಂವಿಧಾನವನ್ನು ಸಮರ್ಥಿಸುತ್ತ, ಮನದಟ್ಟಾಗುವಂಥ ತರ್ಕ ಸಂಗತವಾದ ವಾದಗಳನ್ನು ಸಾದರಪಡಿಸುತ್ತಿದ್ದರು. ಕರಡು ರಚನಾ ಸಮಿತಿಯು ರೂಪಿಸಿದ ಕರಡು ಸಂವಿಧಾನವು ಯಾವುದೇ ಮುಖ್ಯ ತಿದ್ದುಪಡಿಗಳಿಲ್ಲದೆಯೇ ಸಂವಿಧಾನ ಸಭೆಯ ಅಂಗೀಕಾರ ಪಡೆಯಿತು. ಆ ಸಂಬಂಧವಾದ ಸಂಪೂರ್ಣ ಕೀರ್ತಿಯು ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಬಾಬಾ ಸಾಹೇಬ ಅವರಿಗೆ ಸಲ್ಲಬೇಕು ಎಂಬ ಅಭಿಪ್ರಾಯದಲ್ಲಿ ಎರಡು ಮಾತಿಲ್ಲ.

ಸಂವಿಧಾನ ಸಭೆಯು ಸಂವಿಧಾನವನ್ನು ಅಂಗೀಕರಿಸಿದ ದಿವಸಕ್ಕೆ ಮುಂಚಿನ ದಿವಸ, ಡಾ॥ ಅಂಬೇಡ್ಕರ್ ಅವರು ಸಂವಿಧಾನವನ್ನು ರೂಪಿಸುವಲ್ಲಿ ಅವರು ನೀಡಿದ ಕೊಡುಗೆಯ ಬಗ್ಗೆ, ಸದಸ್ಯರು ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತ, ಅವರನ್ನು ಕುರಿತು ಮಿಂಚುನುಡಿಗಳಲ್ಲಿ ತಮ್ಮ ಪ್ರಶಂಸೆಯನ್ನು ದಾಖಲಿಸಿದರು.

ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದ ಡಾ॥ ಬಾಬು ರಾಜೇಂದ್ರ ಪ್ರಸಾದ್ ಅವರು, ಸಂವಿಧಾನದ ಪಿತನನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಕೆಳಕಂಡಂತೆ ವ್ಯಕ್ತಗೊಳಿಸಿದ್ದರು.

"ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡು ಅನುದಿನದ ವ್ಯವಹರಣೆಗಳನ್ನು ವೀಕ್ಷಿಸುತ್ತ, ನನ್ನ ಮನಸ್ಸಿನಲ್ಲಿ ಒಂದು ವಿಚಾರವು ದಟ್ಟವಾಗಿ ಬೇರೂರಿತು. ಕರಡು ರಚನಾ ಸಮಿತಿಯ ಸದಸ್ಯರೂ, ಮುಖ್ಯವಾಗಿ ಅಧ್ಯಕ್ಷರಾದ ಡಾ॥ ಅಂಬೇಡ್ಕರ್ ತಮ್ಮ ಆರೋಗ್ಯವು ಅಷ್ಟೊಂದು ತೃಪ್ತಿಕರವಾಗಿಲ್ಲದಿದ್ದರೂ, ಯಾವ

ಉತ್ಸಾಹದಿಂದ, ಯಾವ ನಿಷ್ಠೆಯಿಂದ ಕೆಲಸ ಮಾಡಿದರೋ, ಆ ರೀತಿ ಇನ್ನಾರೂ ಮಾಡುವುದು ಸಾಧ್ಯವಿರಲಿಲ್ಲ. ಡಾ|| ಅಂಬೇಡ್ಕರ್ ಅವರನ್ನು ಕರೆದು ರಚನಾ ಸಮಿತಿಯ ಸದಸ್ಯರನ್ನಾಗಿ ಮತ್ತು ಆ ತರುವಾಯ ಅಧ್ಯಕ್ಷರನ್ನಾಗಿ ನಾವು ನೇಮಿಸುವಲ್ಲಿ ಕೈಗೊಂಡ ನಿರ್ಣಯವು ಯಥೋಚಿತವೂ, ಫಲಪ್ರದವೂ ಆಯಿತೆಂದು ನನಗನಿಸುತ್ತದೆ. ಡಾ|| ಅಂಬೇಡ್ಕರ್ ಅವರು ನಮ್ಮ ಆಯ್ಕೆಗೆ ಶೋಭೆ ತರುವಂತೆ, ಗೌರವ ಬರುವಂತೆ, ತಮಗೆ ಒಪ್ಪಿಸಿದ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಮಾತ್ರವಲ್ಲದೆ, ತಮ್ಮ ಸಾಧನೆಯು ಬೆಳಗುವಂತೆಯೂ ಮಾಡಿದ್ದಾರೆ".

ಸಂವಿಧಾನದ ಕರಡನ್ನು ರೂಪಿಸುವ ಮತ್ತು ಅಖೈರಾಗಿ ತೀರ್ಮಾನಗೊಳ್ಳುವ ತನಕ ಅದನ್ನು ಮುನ್ನಡೆಸಿಕೊಂಡು ಹೋಗುವ ಪ್ರಚಂಡ ಕಾರ್ಯದಲ್ಲಿ ಡಾ|| ಅಂಬೇಡ್ಕರ್ ವಹಿಸಿರುವ ಪಾತ್ರವನ್ನು ಪ್ರಶಂಸಿಸುತ್ತ, ಕರಡು ರಚನಾ ಸಮಿತಿಯ ಇನ್ನೋರ್ವ ಸದಸ್ಯರಾಗಿದ್ದ' ಡಾ|| ಪಟ್ಟಾಭಿ ಸೀತಾರಾಮಯ್ಯ ಅವರು ಇಂತು ನುಡಿದಿದ್ದಾರೆ.

ಈ ಒಂದು ಮಹಾನ್ ಕಾರ್ಯಕ್ಕೆ ಅವರು ತಮ್ಮ ಪ್ರಚಂಡ ಬುದ್ಧಿ ಸಾಮರ್ಥ್ಯದ ಬೆಂಬಲವನ್ನು ಕೊಟ್ಟರು. ಅದೆಂಥ ಬುದ್ಧಿಮತ್ತೆ. ಪ್ರತಿರೋಧಿಸಲಾಗದ, ದುರ್ದಮ್ಯವಾದ, ಅಜೇಯವಾದ ಮತ್ತು ತನ್ನ ವಿರುದ್ಧವಾಗಿ ಬರತಕ್ಕ ಎಲ್ಲವನ್ನು ನೆಲಸಮಗೊಳಿಸುವ ಸಾಮರ್ಥ್ಯವುಳ್ಳ ಬುದ್ಧಿ ಮತ್ತೆ......... ಪರಿಣಾಮಗಳ ಪರಿಮೆಯಿಲ್ಲದೆ ತಾನು ಸರಿಯೆನಿಸಿದ್ದನ್ನು ದೃಢ ಸಂಕಲ್ಪದಿಂದ ಸಮರ್ಥಿಸಬಲ್ಲ ಧೀಮಂತಿಕೆ.

## ಕಾರ್ಮಿಕ ಕಾನೂನುಗಳ ಜನಕರಾಗಿ : ಕಾರ್ಮಿಕ ಮಂತ್ರಿಯಾಗಿ

ಡಾ|| ಅಂಬೇಡ್ಕರ್ ಕಾನೂನು ತಜ್ಞತೆಯನ್ನೂ, ಅವರ ಶೈಕ್ಷಣಿಕ ಔನ್ನತ್ಯವನ್ನೂ, ಸಂಧಾನ ಕೌಶಲ್ಯವನ್ನೂ ಗುರುತಿಸಿ, ಆಗಿನ ವೈಸ್‌ರಾಯ್ ಅವರು ಡಾ: ಅಂಬೇಡ್ಕರ್ ಅವರನ್ನು ಡಿಫೆನ್ಸ್ ಕೌನ್ಸಿಲ್‌ನ ಒಬ್ಬ ಮೆಂಬರ್ ಆಗಿ 1942ರಲ್ಲಿ ನೇಮಕ ಮಾಡಿದರು. ಆ ತರುವಾಯ ಕಾರ್ಮಿಕ ಖಾತೆಯನ್ನು ಅವರಿಗೆ ವಹಿಸಿಕೊಡಲಾಯಿತು. ಅವರು 1946ರ ಜೂನ್ ತಿಂಗಳ ವರೆಗೆ ಕಾರ್ಮಿಕ ಮಂತ್ರಿಯಾಗಿದ್ದರು. ಅವರ ಕಾರ್ಯಾವಧಿಯು ಕೇವಲ ನಾಲ್ಕು ವರ್ಷ. ಆದರೆ ಈ ಅವಧಿಯನ್ನು ನಮ್ಮ ದೇಶದಲ್ಲಿ ಕಾರ್ಮಿಕ ಶಾಸನ-

ರಚನೆಯು ಕಾರ್ಮಿಕ ಕಲ್ಯಾಣ ಕಾರ್ಯ ಯೋಜನೆಗಳ ಚಾರಿತ್ರಿಕ ಅವಧಿ ಎಂದು ಹೇಳಬಹುದಾಗಿದೆ.

ಕಾರ್ಮಿಕ ಮಂತ್ರಿಯಾಗಿದ್ದ ಡಾ: ಅಂಬೇಡ್ಕರ್ ಅವರು, ಕೇಂದ್ರ ಸರ್ಕಾರದಲ್ಲಿ ಕೆಳದ ವರ್ಗದ ಹೆಚ್ಚು ಹುದ್ದೆಗಳನ್ನು ಅಸ್ಪೃಶ್ಯರಿಗಾಗಿ ಮೀಸಲಿರಿಸುವಲ್ಲಿ ಯಶಸ್ವಿಯಾದರು. ಇದಲ್ಲದೆ, ವಿದೇಶಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆಯಬಯಸುವ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ನೆರವು ಒದಗಿಸಿದರು. ಕಾರ್ಮಿಕ ಮಂತ್ರಿಗಳಾಗಿದ್ದಾಗಲೇ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಯಿತು. ವಿವಿಧ ಕಾರ್ಯಯೋಜನೆಗಳ ಅಡಿಯಲ್ಲಿ ತಾಂತ್ರಿಕ ತರಬೇತಿ ಪಡೆದವರಿಗೆ (ಕುಶಲ ಮತ್ತು ಅರೆಕುಶಲ ಕೆಲಸಗಾರರಿಗೆ ಮತ್ತು ತಂತ್ರಜ್ಞರಿಗೆ) ನಿರುದ್ಯೋಗದ ಬವಣೆಯಿಂದ ತಪ್ಪಿಸಿ, ನೇಮಕಾತಿಯ ಅವಕಾಶಗಳನ್ನು ಒದಗಿಸುವುದು ಈ ಕೇಂದ್ರಗಳ ಉದ್ದೇಶವಾಗಿತ್ತು.

ಕಾರ್ಮಿಕ ಮಂತ್ರಿಯಾಗಿದ್ದ ಡಾ: ಅಂಬೇಡ್ಕರ್ ಕೈಗಾರಿಕಾ ಕ್ಷೇತ್ರಗಳಲ್ಲಿ ಪ್ರಜಾತಂತ್ರ ವ್ಯವಸ್ಥೆಗೆ ಮತ್ತು ಸೌಹಾರ್ದ ಭಾವನೆಗೆ ಪ್ರೋತ್ಸಾಹ ನೀಡಲು ಹಲವಾರು ಕ್ರಮಗಳನ್ನು ಪ್ರಾರಂಭಿಸಿದರು. ಇದಲ್ಲದೆ, ಕೆಲವು ಸಾಮಾಜಿಕ ಭದ್ರತೆಯ ಕ್ರಮಗಳನ್ನು ಸಹ ಪ್ರಾರಂಭಿಸಿದರು. ಮೊಟ್ಟಮೊದಲಿಗೆ, ಮಾಲೀಕರು ಮತ್ತು ನೌಕರರ ನಡುವೆ ಉದ್ಭವಿಸುವ ಹಲವಾರು ವಿಷಯಗಳನ್ನು ಇತ್ಯರ್ಥಗೊಳಿಸಲು ತ್ರಿಪಕ್ಷೀಯ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ಕೇಂದ್ರೀಯ ವಲಯಕ್ಕೆ ಒಳಪಡುವ ಕೈಗಾರಿಕೆಗಳಲ್ಲಿ ಔದ್ಯಮಿಕ ವಿವಾದಗಳನ್ನು ನಿವಾರಿಸಲು ಮತ್ತು ಅವುಗಳನ್ನು ಇತ್ಯರ್ಥಗೊಳಿಸಲು, ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ಮತ್ತು ಕಾರ್ಮಿಕ ಕಲ್ಯಾಣವನ್ನು ಪ್ರೋತ್ಸಾಹಿಸಲು ಕಾರ್ಮಿಕ ಪ್ರಶಾಸನವನ್ನು ಸ್ಥಾಪಿಸಿದರು. ಅವರ ಕಾರ್ಯಾವಧಿಯ ಕೊನೆಯ ಹಂತದಲ್ಲಿ ವಿಧಾನ ಸಭೆಯಲ್ಲಿ ಮಂಡಿಸಲಾದ ಮಹತ್ವಪೂರ್ಣ ಕಾರ್ಮಿಕ ಕಾನೂನು/ಕನಿಷ್ಠ ಮಜೂರಿ ಮಸೂದೆ.

ಡಾ: ಅಂಬೇಡ್ಕರ್ ಪ್ರಾರಂಭಿಸಿದ ಕಲ್ಯಾಣ ಕ್ರಮಗಳ ಮತ್ತು ಮಂಡಿಸಿದ ವಿನೂತನ ಮಸೂದೆಗಳ ನಿಮಿತ್ತ ಅವರಿಗೆ ಎಲ್ಲೆಡೆಗಳಿಂದಲೂ ಪ್ರಶಂಸೆ ಬಂತು. ಅವರ ಟೀಕಾಕಾರರೂ ಸೇರಿದಂತೆ, ಎಲ್ಲರೂ ಸಮರ್ಥ ಹಾಗೂ ಉದಾರ ಮನಸ್ಸಿನ ಆಡಳಿತಗಾರ ಎಂದು ಅವರನ್ನು ಹೊಗಳುವವರೇ ಆದರು.

## ಶಿಕ್ಷಣ ತಜ್ಞರಾಗಿ :

ಭಾರತದಲ್ಲಿರುವ "ಅಸ್ಪೃಶ್ಯರಿಗೆ" ಮೂಲ ಶಿಕ್ಷಣದ ಪ್ರಯೋಜನವನ್ನು ನಿರಾಕರಿಸಲಾಗಿತ್ತು ಎಂಬುದು ವಾಸ್ತವ ಸಂಗತಿ. ಜೀವನದಲ್ಲಿ ಶಿಕ್ಷಣದ ಮಹತ್ವವನ್ನು ಮನಗಂಡ ಡಾ : ಅಂಬೇಡ್ಕರ್, ತಮ್ಮ ಮಕ್ಕಳಿಗೆ ಶಿಕ್ಷಣದ ಅನುಕೂಲಗಳನ್ನು ಒದಗಿಸಿಕೊಡುವಂತೆ ತಮ್ಮ ಅನುಯಾಯಿಗಳನ್ನು ಕಳಕಳಿಯಿಂದ ಕೋರಿದರು. ಅವರ ಶಿಕ್ಷಣಕ್ಕೆ ಮಹತ್ವ ನೀಡುತ್ತಿದ್ದರು. ಹೀಗೆ, ಅವರು ತಮ್ಮ 'ತ್ರಿವಿಧ' ಕ್ರಿಯಾ ಘೋಷಣೆಯಲ್ಲಿ ಶಿಕ್ಷಣಕ್ಕೆ ಅಗ್ರಪೂಜೆ. "ಅಧ್ಯಯನ, ಸಂಘಟನೆ, ಹೋರಾಟ"- ಇದೇ ಅವರ ಆಂದೋಲನದ ತಾರಕ ಮಂತ್ರ.

ಅಸ್ಪೃಶ್ಯ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು, ಡಾ: ಅಂಬೇಡ್ಕರ್ ಅವರು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿನಿಲಯಗಳ ನಿವಾಸಿಗಳಿಗೆ ಉಚಿತ ಪುಸ್ತಕಗಳ ಮತ್ತು ಬಟ್ಟೆಬರೆಗಳ ವ್ಯವಸ್ಥೆ ಮಾಡಿದರು. ಇಂಥ ನಿಲಯಗಳು ಈ ಜಾತಿಗಳ ವಿದ್ಯಾರ್ಥಿಗಳಲ್ಲಿ ಪ್ರಾಥಮಿಕ ಮತ್ತು ಹೈಸ್ಕೂಲ್ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಲ್ಲಿ ವಿಶೇಷವಾಗಿ ನೆರವಾದವು.

1945-46 ರಲ್ಲಿ ಡಾ: ಅಂಬೇಡ್ಕರ್ ಅವರು ತಮ್ಮದೇ ಆದ ಒಂದು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ಹೆಸರು ಜನತಾ ವಿದ್ಯಾಸಂಸ್ಥೆ (ಪೀಪಲ್ಸ್ ಎಜುಕೇಷನ್ ಸೊಸೈಟಿ). ಆಗ ಅವರು ವೈಸರಾಯ್ ಅವರ ಕಾರ್ಯಕಾರಿ ಕೌನ್ಸಿಲ್ ಮೆಂಬರ್ ಆಗಿದ್ದರಿಂದ ಮೂರು ಲಕ್ಷ ರೂಪಾಯಿಗಳ ಉದಾರ ಅನುದಾನವನ್ನು ಮತ್ತು ಅಷ್ಟೇ ಮೊತ್ತದ ಬಡ್ಡಿ ರಹಿತ ಸಾಲವನ್ನು ಸರ್ಕಾರದಿಂದ ಪಡೆದುಕೊಳ್ಳುವುದು ಸಾಧ್ಯವಾಯಿತು. ಈ ಸೊಸೈಟಿಯ ಅಡಿಯಲ್ಲಿ ಪ್ರಥಮ ಕಾಲೇಜನ್ನು ಮುಂಬಯಿಯಲ್ಲಿ ಸ್ಥಾಪಿಸಿಲಾಯಿತು. ಹೆಸರು "ಸಿದ್ಧಾರ್ಥ ಕಾಲೇಜ್ ಆಫ್ ಆರ್ಟ್ಸ್ ಅಂಡ್ ಸೈನ್ಸ್"

ಡಾ: ಅಂಬೇಡ್ಕರ್ ಅವರಿಗೆ ಬೋಧನೆಯಲ್ಲಿ ತೀವ್ರ ಆಸಕ್ತಿಯಿತ್ತು. ಅವರ ಮುಂಬಯಿಯ ಸಿಡ್‌ನಹ್ಯಾಮ್ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಮತ್ತು ಮುಂಬಯಿ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಕೆಲವು ವರ್ಷಗಳ ಮೇಲೆ ಮುಂಬಯಿ ಸರ್ಕಾರಿ ಕಾನೂನು ಕಾಲೇಜಿನ ಪ್ರಿನ್ಸಿಪಾಲರೂ ಆದರು. ವಿದ್ಯಾರ್ಥಿಗಳು ಅವರ ಪಾಠಗಳನ್ನು ಏಕಾಗ್ರತೆಯಿಂದ, ತನ್ಮಯರಾಗಿ ಕೇಳುತ್ತಿದ್ದರು. ಅವರ ಕ್ಲಾಸುಗಳು ತುಂಬಿರುತ್ತಿದ್ದವು. ಕಾರಣ ಯಾರೂ ಅವರ ಪಾಂಡಿತ್ಯಪೂರ್ಣ ಪಾಠಗಳಿಗೆ ಗೈರುಹಾಜರಾಗುತ್ತಿರಲಿಲ್ಲ, ಇಷ್ಟೇ

ಅಲ್ಲದೆ, ಅಸುಪಾಸಿನ ಕಾಲೇಜಿನ ವಿದ್ಯಾರ್ಥಿಗಳೂ ಬಂದು ಅವರ ಪಾಠಗಳನ್ನು ಆಲಿಸಿ ಜ್ಞಾನಾರ್ಜನೆ ಮಾಡುತ್ತಿದ್ದರು.

**ಲೇಖಕರಾಗಿ :**

ಡಾ: ಅಂಬೇಡ್ಕರ್ ಅವಿರತ ವಾಚಕರು. ಸದಾ ಸರ್ವದಾ ಪುಸ್ತಕಗಳ ಪ್ರಪಂಚದಲ್ಲಿ ತನ್ಮಯರಾಗಿರುವರು. ಅವರು ವಿಪುಲವಾದ ಸಾಹಿತ್ಯವನ್ನು ಸಹ ರಚಿಸಿದ್ದಾರೆ. ಅವರಿಗೆ ಆಸಕ್ತಿಯುಳ್ಳ ವಿಷಯಗಳಿಗೆ ಕೊನೆ ಮೊದಲಿಲ್ಲ, ಆಡಳಿತ, ಮಾನವ ಶಾಸ್ತ್ರ, ಅರ್ಥಶಾಸ್ತ್ರ, ಹಣಕಾಸು, ರಾಜ್ಯಶಾಸ್ತ್ರ, ಧರ್ಮ ಮುಂತಾಗಿ ನಾಲ್ಕು ದಶಕಗಳ ಅವಧಿಯಲ್ಲಿ ಅವರು ಇಂಗ್ಲೀಷ್‌ನಲ್ಲಿ 20 ಗ್ರಂಥಗಳನ್ನು ರಚಿಸಿದರು. ಕಿರುಹೊತ್ತಿಗೆಗಳನ್ನೂ, ಲೇಖನಗಳನ್ನೂ ಬರೆದರು. ಡಾ: ಅಂಬೇಡ್ಕರ್ ಅವರು, ಭಾರತದಲ್ಲಿನ ದಲಿತವರ್ಗದವರ ಸಂಘಟನೆಯನ್ನು ಸಮರ್ಥಿಸಲು "ಮೂಕನಾಯಕ" ಎಂಬ ಮರಾಠಿ ಸಾಪ್ತಾಹಿಕವನ್ನು ಪ್ರಾರಂಭಿಸಿದರು. ಆದರೆ ಅದು ಬಹುಬೇಗನೆ ನಿಂತುಹೋಯಿತು. ಕೊಲಂಬಿಯಾ ವಾರ್ಸಿಟಿಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಡಾ: ಅಂಬೇಡ್ಕರ್ ಅವರು ಮಾನವಶಾಸ್ತ್ರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ "ದಿ ಕಾಸ್ಟ್ಸ್ ಇನ್ ಇಂಡಿಯಾ ದೇರ್ ಮೆಕ್ಯಾನಿಕ್ಸ್, ಜೆನಿಸಿಸ್ ಅಂಡ್ ಡೆವೆಲಪ್‌ಮೆಂಟ್" ಅವರ ಮೊದಲ ಪ್ರಕಟಿತ ಗ್ರಂಥ. 1924ರಲ್ಲಿ "ದಿ ಇವೊಲ್ಯೂಷನ್ ಆಫ್ ಫೆನಾನ್ಷಿಯಲ್ ಇವೊಲ್ಯೂಷನ್ ಇನ್ ಇಂಡಿಯಾ" ಎಂಬ ಶೀರ್ಷಿಕೆಯಲ್ಲಿ ಪ್ರಕಾಶಿತವಾದ ಅವರ ಪಿ.ಎಚ್.ಡಿ. ಮಹಾಪ್ರಬಂಧವನ್ನು ಅವರು ಬರೋಡಾದ ಮಹಾರಾಜರಿಗೆ ಕೃತಜ್ಞತೆ ಸಂಕೇತವಾಗಿ 'ಅರ್ಪಣೆ' ಮಾಡಿದ್ದಾರೆ. ಲೋಕಸಭಾ ಸದಸ್ಯರಿಗೆ, ಹಾಗೆಯೇ ರಾಜ್ಯ ಶಾಸನ ಸಭಾ ಸದಸ್ಯರುಗಳಿಗೆ ಬಜೆಟ್ ಮೇಲೆ ಮಾತನಾಡುವಾಗ ಈ ಗ್ರಂಥವು ಉಪಯುಕ್ತವಾದ ಆಕರ ಗ್ರಂಥವಾಗಿರುತ್ತದೆ. ಅವರು ಬರೆದ ಇತರ ಪುಸ್ತಕಗಳಲ್ಲಿ ಮುಖ್ಯವಾದವುಗಳೆಂದರೆ. "ವಾಟ್ ಕಾಂಗ್ರೆಸ್ ಅಂಡ್ ಗಾಂಧಿ ಹ್ಯಾವ್ ಡನ್ ಫಾರ್‌ದ ಅನ್‌ಟಚೆಬಲ್ಸ್? "ಹೂ ವರ್ ದಿ ಶೂದ್ರಾಸ್, ಹೌ ದೇ ಕೇಮ್ ಟುಬಿ ದ ಫೋರ್ತ್ ವರ್ಣ್ ಇನ್ ದಿ ಇಂಡೋಆರ್ಯನ್ ಸೊಸೈಟಿ?", "ಥಾಟ್ಸ್ ಆನ್ ಲಿಂಗ್ವಿಸ್ಟಿಕ್ ಸ್ಟೇಟ್ಸ್," "ರಾನಡೆ, ಗಾಂಧಿ ಅಂಡ್ ಜಿನ್ನಾ." ಮತ್ತು "ಎನ್ನಿಹಿಲೇಷನ್ ಕಾಸ್ಟ್ ಇನ್ ಇಂಡಿಯಾ"

ಬುದ್ಧ ಮತ್ತು ಅವನ ಬೋಧನೆಯ ನಿಷ್ಠಾವಂತ ಅನುಯಾಯಿ ಆಗಿದ್ದ ಡಾ: ಅಂಬೇಡ್ಕರ್ "ಬುದ್ದ ಉಪಾಸನಾ ಪಥ" ಎಂಬ ಒಂದು ಬುದ್ಧ ಪ್ರಾರ್ಥನಾ ಪುಸ್ತಕದ ಸಂಕಲನ ಮಾಡಿದರು. 1957ರಲ್ಲಿ ಪ್ರಕಾಶಿತವಾದ ಅವರ

ಇನ್ನೊಂದು ಪುಸ್ತಕ "ಬುದ್ಧ ಅಂಡ್ ಹಿಸ್ ಧರ್ಮ" ಬುದ್ಧ ಧರ್ಮಾಭಿಮಾನಿಗಳ ಬೈಬಲ್ ಎಂದು ಪ್ರಖ್ಯಾತವಾಗಿದೆ. ಇದರಲ್ಲಿ ಬುದ್ಧನ ಜೀವನ ಮತ್ತು ವ್ಯಕ್ತಿತ್ವ ಇವುಗಳನ್ನು ವಿವರಿಸಲಾಗಿದೆ. ಮಾತ್ರವಲ್ಲದೆ, ಬೌದ್ಧ ಧರ್ಮದ ವಿಶ್ಲೇಷಣಾತ್ಮಕ ವಿವರಣೆಯನ್ನು ಒದಗಿಸಲಾಗಿದೆ.

ಡಾ: ಅಂಬೇಡ್ಕರ್ ಅವರಿಗೆ ಪುಸ್ತಕದ ಗೀಳು. ಅವರೊಬ್ಬ ಗ್ರಂಥವ್ಯಸನಿ. ಅವರು ಸಾವಿರಾರು ಗ್ರಂಥಗಳನ್ನು ಕಲೆ ಹಾಕಿದ್ದರು. ಅವರ ಖಾಸಗಿ ಗ್ರಂಥ ಭಂಡಾರವು ಬಹಳ ದೊಡ್ಡದಾಗಿತ್ತು.

## ಬುದ್ಧನ ಅನುಯಾಯಿಯಾಗಿ :

ಸಾಮಾಜಿಕ ವಿಷಯತೆಗಳ ವಿರುದ್ಧ ಬಂಡಾಯಗಾರನಾಗಿ ಮತ್ತು ಅಸ್ಪೃಶ್ಯ ಬಾಲಕನಾಗಿ, ವಕೀಲನಾಗಿ ಮತ್ತು ಪ್ರೊಫೆಸರನಾಗಿ ತಾನು ಉಂಡ ಕಹಿ ಅನುಭವಗಳು - ಇವೆಲ್ಲವೂ ಸೇರಿ ಡಾ: ಅಂಬೇಡ್ಕರ್ ಅವರನ್ನು ಹಿಂದೂ ಸಮಾಜದ ಮತ್ತು ಪುರಾಣ ಸಂಪ್ರದಾಯಗಳ ಕಟ್ಟಾ ಮತ್ತು ನಿರ್ಮಮ ವಿರೋಧಿಯಾಗಿ ಮಾಡಿದವು. ಬೌದ್ಧಧರ್ಮವನ್ನು ಅಂಗೀಕರಿಸುವುದಕ್ಕೆ ಮುನ್ನ, ಡಾ: ಅಂಬೇಡ್ಕರ್ ಅವರು 1935ರ ಅಕ್ಟೋಬರ್ ತಿಂಗಳಲ್ಲಿ ಇಂತು ಘೋಷಿಸಿದ್ದುಂಟು: "ಅಸ್ಪೃಶ್ಯರನ್ನು ಹಿಂದೂ ಧರ್ಮವನ್ನು ತೊರೆಯುತ್ತಾರೆ ಮತ್ತು ಇನ್ನಾವುದೇ ಧರ್ಮವನ್ನು ಸ್ವೀಕರಿಸುತ್ತಾರೆ". ತದನುಸಾರವಾಗಿ, ಅವರು ಮೊದಲು 1939-40ರಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸಿದರು.

ಬುದ್ಧನ ಧರ್ಮದ ಉದ್ದೇಶ ನೈತಿಕತೆ. ಅವನ ಜೀವನದ ಸಂದೇಶ ಸಮಾನತೆ. ಇತರ ಧರ್ಮಸಂಸ್ಥಾಪಕರ ಹಾಗೆ ತಾನು 'ಮೋಕ್ಷದಾತ' ನೆಂದು ಬುದ್ಧನು ಹೇಳಿಕೊಳ್ಳಲಿಲ್ಲ, 'ಮಾರ್ಗದಾತ'ನಾಗಿ ಮಾತ್ರವೇ ಬುದ್ಧನಿಗೆ ತೃಪ್ತಿ- ಹೀಗೆ ಬುದ್ಧನನ್ನು ಮತ್ತು ಬೌದ್ಧತತ್ವಗಳನ್ನು ಕುರಿತ ಚಿಂತನವು ನಡೆಯುತ್ತಿದ್ದಂತೆ, ಬುದ್ಧನಲ್ಲಿ ಡಾ: ಅಂಬೇಡ್ಕರ್ ಅವರ ನಂಬಿಕೆಯು ದಿನೇ ದಿನೇ ವರ್ಧಮಾನಗೊಂಡಿತು.

ಡಾ: ಅಂಬೇಡ್ಕರ್ ಅವರು ಬೌದ್ಧ ಧರ್ಮದಲ್ಲಿ ಇಟ್ಟ ನಂಬಿಕೆಗೆ ಅವರು ದೇಶ ವಿದೇಶಗಳಲ್ಲಿ ಜರುಗಿದ ವಿಭಿನ್ನ ವಿಚಾರಗೋಷ್ಠಿಗಳಲ್ಲಿ, ಸಮ್ಮೇಳನ ಸಮಾರಂಭಗಳಲ್ಲಿ ಭಾಗವಹಿಸಿದ್ದೇ ಸಾಕ್ಷಿ. ನೇಪಾಳದ ಖಟ್‌ಮಾಂಡುನಲ್ಲಿ 1949 ರಲ್ಲಿ ಸಮಾವೇಶಗೊಂಡ ವಿಶ್ವ ಬೌದ್ಧ ಸಮ್ಮೇಳನದಲ್ಲಿ ಪಾಲ್ಗೊಂಡು ಭಾಷಣಮಾಡಿದರು. ಶ್ರೀಲಂಕಾದಲ್ಲಿ 1950 ರಲ್ಲಿ ಜರುಗಿದ ವಿಶ್ವ ಬೌದ್ಧ

ಕಾಂಗ್ರೆಸ್‌ನಲ್ಲಿ ಭಾಗವಹಿಸಿದ್ದರು. ಅದೇ ರೀತಿ 1954ರಲ್ಲಿ ಬರ್ಮಾದಲ್ಲಿ, 1956ರಲ್ಲಿ ಶ್ರೀಲಂಕಾದಲ್ಲಿ ನಡೆದ ಬೌದ್ಧ ಕಾಂಗ್ರೆಸ್‌ಗಳಲ್ಲಿ ಸಹ ಭಾಗವಹಿಸಿದರು. ಭಾರತದಲ್ಲಿ ಬೌದ್ಧಧರ್ಮವನ್ನು ಪ್ರಚಾರ ಮಾಡುವ ಸಲುವಾಗಿ 1955 ರಲ್ಲಿ ಭಾರತೀಯ ಬುದ್ಧ ಮಹಾಸಭಾವನ್ನು ಸ್ಥಾಪಿಸಿದರು. ಅಂತಿಮವಾಗಿ, 1956ನೇ ಅಕ್ಟೋಬರ್ 14ನೇ ತಾರೀಖು ನಾಗಪುರದಲ್ಲಿ ನೆರೆದ ಅಸಂಖ್ಯಾ ಜನಸ್ತೋಮದ ಸಮ್ಮುಖದಲ್ಲಿ ಅವರು ಬೌದ್ಧಧರ್ಮವನ್ನು ಅಂಗೀಕರಿಸಿದರು. ತಮ್ಮ ಅನುಯಾಯಿಗಳಿಗೆ ಹೊಸ ಧರ್ಮಕ್ಕೆ ಮತಾಂತರಗೊಳ್ಳುವಂತೆ ಕರೆ ನೀಡಿದರು. ಅವರೇ ಸ್ವತಃ ಲಕ್ಷಾಂತರ ಅನುಯಾಯಿಗಳಿಗೆ ಬೌದ್ಧಧರ್ಮದ 'ದೀಕ್ಷೆ' ನೀಡಿದರು.

ಭಾರತದ ಈ ಸುಪುತ್ರನು ಬುದ್ಧನ ಧರ್ಮವನ್ನು ಸ್ವೀಕರಿಸಿದ ಅನಂತರ, ಎರಡು ತಿಂಗಳಿಗೆ ಮೊದಲೇ 1956ರ ಡಿಸೆಂಬರ್ 6ನೇ ತಾರೀಖು ಮಹಾನಿರ್ವಾಣವನ್ನು ಪಡೆದರು. ಅವರು ರಾಷ್ಟ್ರಕ್ಕೆ ಸಲ್ಲಿಸಿದ ಅನನ್ಯ ಸಾಧಾರಣವಾದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು, ದೇಶದ ಅತ್ಯುನ್ನತ ಗೌರವ ಪ್ರಶಸ್ತಿಯಾದ ಭಾರತರತ್ನವನ್ನು ಮರಣೋತ್ತರವಾಗಿ ಪ್ರಧಾನಮಾಡಿ ಗೌರವಿಸಿತು. ಇದಲ್ಲದೆ ಅವರ ಜನ್ಮಶತಾಬ್ದಿ ವರ್ಷವನ್ನು ಸಾಮಾಜಿಕ ನ್ಯಾಯದ ವರ್ಷವೆಂದು ಆಚರಿಸಲಾಯಿತು.

## ಶ್ರದ್ಧಾಂಜಲಿ ಮತ್ತು ಪ್ರಶಂಸೆ :

ಆಧುನಿಕ ಭಾರತದ ಭವ್ಯ ಬುನಾದಿಯನ್ನು ಸ್ಥಾಪಿಸಲು ನೆರವಾದ ಈ ಅಪೂರ್ವ ಹಾಗೂ ಮಹಾನ್ ಚೇತನ ದುಃಖಕಾರಕವಾದ ಮತ್ತು ಹಠಾತ್ ನಿಧನ ವಾರ್ತೆಯನ್ನು ಕೇಳಿ ಇಡೀ ದೇಶವೇ ದುಃಖಸಂತಪ್ತವಾಯಿತು. ಸಂಸತ್ತಿನಲ್ಲಿ ರಾಜ್ಯ ವಿಧಾನ ಸಭೆಗಳಲ್ಲಿ, ಪತ್ರಿಕೆಗಳಲ್ಲಿ - ಎಲ್ಲೆಲ್ಲೂ, ದೇಶ ವಿದೇಶಗಳಲ್ಲೂ ಮಿಲಿಯಾಂತರ ಅನುಯಾಯಿಗಳೂ ಅಭಿಮಾನಿಗಳೂ ಅಗಲಿದ ಮಹಾನ್ ಚೇತನವನ್ನು ಸ್ಮರಿಸಿ ಸಂತಾಪ ಸೂಚಿಸಿದರು.

ಆಗಿನ ಲೋಕಸಭಾ ಅಧ್ಯಕ್ಷರಾಗಿದ್ದ ಶ್ರೀ ಎಂ. ಅನಂತಶಯನಂ ಅಯ್ಯಂಗಾರ್, ಡಾ: ಅಂಬೇಡ್ಕರ್ ಅವರ ಗುಣಗಾನ ಮಾಡುತ್ತ ಇಂತು ನುಡಿದರು.

"ಡಾ: ಅಂಬೇಡ್ಕರ್ ಒಂದು ಮಹಾನ್ ಚೇತನ. ಅನಂತ ಸ್ಫೂರ್ತಿಯ ಅದಮ್ಯ ವ್ಯಕ್ತಿ. ತೀರಾ ಸಾಮಾನ್ಯ ಮನೆತನದಲ್ಲಿ ಜನಿಸಿದ ಅವರು, ಪರಿಶಿಷ್ಟ ಜಾತಿಗಳವರ ಅಧಿನಾಯಕರಾದರು. ಅವರೊಬ್ಬ ದೊಡ್ಡ ವಿದ್ವಾಂಸರು, ಸಾಹಿತಿಗಳು

ಇದಕ್ಕೂ ಮಿಗಿಲಾಗಿ ಪ್ರಚಂಡ ವಾಗ್ಮಿಗಳು. ಅವರು ಸಂವಿಧಾನವನ್ನು ಮುನ್ನಡೆಸಿದವರು. ಸಾಮಾಜಿಕ ಸುಧಾರಣೆಯ ಕ್ಷೇತ್ರದಲ್ಲಿ ಅವರು ಅನೇಕ ಪ್ರಯೋಜನಕಾರಿಯಾದ ಉಪಕ್ರಮಗಳನ್ನು ಪ್ರಾರಂಭಿಸಿದರು. ಅವರ ನಿಧನದಿಂದ ಭಾರತಮಾತೆಯು ತನ್ನ ಪುತ್ರರತ್ನರಲ್ಲಿ ಒಬ್ಬರನ್ನು ಕಳೆದುಕೊಂಡಂತಾಗಿದೆ."

ಭಾರತ ಸಂವಿಧಾನವನ್ನು ರೂಪಿಸುವಲ್ಲಿ ಅವರು ನಿರ್ವಹಿಸಿದ ಮಹತ್ವಪೂರ್ಣ ಪಾತ್ರವನ್ನು ಕುರಿತು ಶ್ಲಾಘಿಸುತ್ತಾ, ಪ್ರಧಾನಿ ಜವಾಹರಲಾಲ್ ನೆಹರು ಇಂತು ನುಡಿದರು.

"ಸಂಸತ್ತಿನಲ್ಲಿ ನಾವು ಅವರನ್ನು ಅನೇಕ ವಿಚಾರಗಳಿಗಾಗಿ ಸ್ಮರಿಸುವುದುಂಟು. ಮುಖ್ಯವಾಗಿ ಸಂವಿಧಾನದ ರಚನೆಯಲ್ಲಿ ಅವರು ವಹಿಸಿದ ಪ್ರಧಾನ ಪಾತ್ರಕ್ಕಾಗಿ. ಆ ಸಂಗತಿಯೇ, ಅವರ ಕೈಗೊಂಡ ಇತರ ಅನೇಕ ಕಾರ್ಯ ಚಟುವಟಿಕೆಗಳಿಗೂ ಮಿಗಿಲಾಗಿ, ಬಹುಕಾಲದವರೆಗೂ, ನಮ್ಮ ಸ್ಮರಣೆಯಲ್ಲಿ ಜೀವಂತವಾಗಿ ಉಳಿಯುತ್ತದೆ."

# ಭಾಗ-ಎರಡು

# ಲೇಖನಗಳು

# ಡಾ|| ಬಿ. ಆರ್. ಅಂಬೇಡ್ಕರ್ – ನಾನು ಕಂಡಂತೆ

● ಪ್ರೊ|| ಎನ್.ಜಿ. ರಂಗ

ಪ್ರಜಾಪ್ರಭುತ್ವ ಸಮಾಜಗಳಲ್ಲಿ ನಾವು ಕಾಣುವ ಅಪರೂಪದ ವ್ಯಕ್ತಿ ಡಾ|| ಬಿ.ಆರ್. ಅಂಬೇಡ್ಕರ್ ಅವರು ಪಂಡಿತ, ಕ್ರಾಂತಿಕಾರಿ ಮತ್ತು ಮುತ್ಸದ್ದಿ ಈ ಅಪರೂಪ ಗುಣಗಳ ಸಂಗಮ. ಭಾರತವು ಮಾನವೀಯ ಪ್ರಗತಿಪರ ಸಾಮಾಜಿಕ ತತ್ವಗಳನ್ನು ಅಳವಡಿಸಿಕೊಂಡು ಸ್ವರಾಜ್ಯ ಸ್ಥಾಪನೆಯ ತನ್ನ ಹಕ್ಕನ್ನು ಸಮರ್ಥಿಸುವ ಚಾರಿತ್ರಿಕ ಅಗತ್ಯವಿದ್ದ ಸಂದರ್ಭದಲ್ಲಿ ಅವರು ಮಹಾತ್ಮ ಗಾಂಧೀಜಿಯವರ ಸಂಪರ್ಕ ಹೊಂದಿದ್ದು ಅವರ ರಾಜಕೀಯ ಜೀವನದ ಪ್ರಥಮ ವಿಜಯ. ಅವರು ಕಾನೂನು ಸಚಿವ ಹುದ್ದೆಯನ್ನು ಅಲಂಕರಿಸಿದ ಅನುದ್ದಿಷ್ಟ ಸಂದರ್ಭ ಅವರ ಕಾನೂನು ಪಾಂಡಿತ್ಯದ ಅಭಿವ್ಯಕ್ತಿಗೆ ಹಾಗೂ ದಲಿತ ವರ್ಗಗಳ ಏಳಿಗೆಯ ಹೋರಾಟಕ್ಕೆ ಅನುವು ಮಾಡಿಕೊಟ್ಟಿತು. ಪರಿಣಾಮವಾಗಿ ಸ್ವತಂತ್ರ ಭಾರತದ ಸಂವಿಧಾನ ಮಸೂದೆ ರಚನೆಯ ಪ್ರಮುಖ ಶಿಲ್ಪಿಯಾಗಿ ಅವರನ್ನು ಆಯ್ಕೆ ಮಾಡಲಾಯಿತು. ಹೀಗೆ, ಅವರು ಭಾರತೀಯ ಸಂವಿಧಾನದ ಮೇಲೆ ತಮ್ಮ ವ್ಯಕ್ತಿತ್ವದ ಗಾಢವಾದ ಮುದ್ರೆಯನ್ನೊತ್ತಿದ್ದರು.

ಸಮಾಜದ ಮೇಲ್ವರ್ಗದವರು ಮನುಸ್ಮೃತಿ ಸಮ್ಮತ ಅವಕಾಶಗಳನ್ನು ತಮ್ಮ ಹಕ್ಕೆಂದು ಭಾವಿಸಿ, ಅನುಭವಿಸುತ್ತ ಕೆಳವರ್ಗದವರ ಹಕ್ಕುಗಳನ್ನು ಅಮಾನವೀಯವಾಗಿ ನಿರಾಕರಿಸುತ್ತಿದ್ದುದರ ವಿರುದ್ಧ ಅಂಬೇಡ್ಕರ್ ಅವರು ಆಧುನಿಕ ಮನುವಾಗಿ ಆವಿರ್ಭವಿಸಿದರು. ನಮ್ಮಲ್ಲಿ ಅನೇಕರಂತೆ ಅಂಬೇಡ್ಕರ್ ಅವರೂ ಸಹ 'ವಯಸ್ಕ ಮತದಾನದ ಬಗ್ಗೆ ಬಲವಾದ ನಂಬಿಕೆಯನ್ನು ಹೊಂದಿದ್ದು, ಈ ಅಂಶವನ್ನು ಸಂವಿಧಾನದಲ್ಲಿ ಸೇರಿಸಿದರು. ಮತದಾನ ಮಾಡಲು ಪಡೆದ ಈ ಹಕ್ಕಿನ ಚಲಾವಣೆಯ ಪ್ರಥಮ ಚುನಾವಣೆಯಲ್ಲಿ ಅವರಿಗೆ ಸೋಲಾದುದು ಒಂದು ವಿಚಿತ್ರ.

ಅವರು ಬರೆದ "ರೂಪಾಯಿಯ ಸಮಸ್ಯೆ" ಪುಸ್ತಕ ಹಾಗೂ "ಸಂಯುಕ್ತ ರಾಷ್ಟ್ರ ಮತ್ತು ರಾಜ್ಯ ಹಕ್ಕುಗಳನ್ನು ಕುರಿತ ಪ್ರಬಂಧ"ಗಳನ್ನು ಓದಿದಾಗ ನನಗೆ ಅಂಬೇಡ್ಕರ್ ಅವರ ಪ್ರಬುದ್ಧ ಪಾಂಡಿತ್ಯ ಮತ್ತು ಸ್ವತಂತ್ರ ಆಲೋಚನಾ ಶಕ್ತಿಯ ಅರಿವಾಯಿತು. ಪ್ರಥಮ ದುಂಡು ಮೇಜು ಪರಿಷತ್ತಿನಲ್ಲಿ ಅವರು ಮಾಡಿದ ಭಾಷಣಗಳು ಅವರನ್ನು ರಾಷ್ಟ್ರ ರಾಜಕಾರಣ ಕ್ಷೇತ್ರದ ಪ್ರಮುಖ

ವ್ಯಕ್ತಿಯನ್ನಾಗಿಸಿತು. ಅವರು ಎಂತಹ ಅದ್ವಿತೀಯ ಮುತ್ಸದ್ದಿ ಎಂಬುದು ಈಗ ನಮಗೆ ಮನದಟ್ಟಾಯಿತು. ಡಾ॥ ಅಂಬೇಡ್ಕರ್ ಅವರು ಉಳಿದ ಬ್ರಾಹ್ಮಣೇತರ ಮುಖಂಡರಂತೆಯೇ ಸ್ವರಾಜ್ಯ ಕುರಿತ ರಾಷ್ಟ್ರೀಯ ಬೇಡಿಕೆಯನ್ನು ವಿರೋಧಿಸುವರೆಂಬ ಭಾವನೆಯಿಂದ ಬ್ರಿಟಿಷ್ ಸರ್ಕಾರವು ಅವರನ್ನು ದುಂಡು ಮೇಜು ಪರಿಷತ್ತಿಗೆ ಪ್ರತಿನಿಧಿಯಾಗಿ ಆಯ್ಕೆ ಮಾಡಿತು. ಆದರೆ, ಬ್ರಾಹ್ಮಣೇತರ ಹಾಗೂ ಹರಿಜನ ಮುಖಂಡರಂತೆ ರಾಷ್ಟ್ರೀಯ ಸ್ವಾತಂತ್ರ್ಯ ಬೇಡಿಕೆಯನ್ನು ಅವರು ವಿರೋಧಿಸಲಿಲ್ಲ. ಶತ ಶತಮಾನಗಳಷ್ಟು ಹಳೆಯದಾದ ಸಮಾಜದ ಶ್ರೀಮಂತ ಮತ್ತು ಮೇಲ್ವರ್ಗದ ಜಾತಿಗಳ ಸಾರ್ವಭೌಮತ್ವವು ಶಾಶ್ವತವಾಗಿ ಉಳಿಯಬಾರದೆಂಬುದು ಅವರ ನಿಲುವಾಗಿತ್ತು. ಅವರು 1857ರ ವಿಕ್ಟೋರಿಯಾ ರಾಣಿಯ ಘೋಷಣೆಯನ್ನು ವಿರೋಧಿಸಿದರು. ಸಮಾಜದ ಕೆಳವರ್ಗದ ಜನತೆಯ ನಿರಂತರ ದಮನಕ್ಕೆ ಮತ್ತು ಪರಿಣಾಮವಾಗಿ ಆ ವರ್ಗದ ಮನಸ್ಸು ಮತ್ತು ಸ್ಥಿತಿಯ ಹತಾಶೆಗೆ ಕಾರಣವಾದ ಮತ್ತು ನಮ್ಮ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಕೈಹಾಕದ ಬ್ರಿಟಿಷ್ ಸರ್ಕಾರದ ನೀತಿಯು ಆ ಘೋಷಣೆಯ ಫಲಶ್ರುತಿಯಾಯಿತು.

ದುಂಡು ಮೇಜು ಪರಿಷತ್ತಿನಲ್ಲಿ ಡಾ॥ ಅಂಬೇಡ್ಕರ್ ಅವರು ಮಾಡಿದ ಚಾರಿತ್ರಿಕ ಭಾಷಣ ನಮ್ಮನ್ನು ಪರಸ್ಪರ ಹತ್ತಿರಕ್ಕೆ ತಂದಿತು. 1930ರಲ್ಲಿ ನಾವು ಲಂಡನ್ನಿನಲ್ಲಿ ಆಗಿಂದಾಗ್ಗೆ ಭೇಟಿ ಮಾಡುತ್ತಿದ್ದ ಸಂದರ್ಭದಲ್ಲಿ, ನಮ್ಮ ರಾಜಕೀಯ ಚಿಂತನೆ, ಚಾರಿತ್ರಿಕ ಅಧ್ಯಯನ ಮತ್ತು ರಾಜಕೀಯ ತಿಳುವಳಿಕೆಗಳು ಎಷ್ಟು ಸಮಾನವಾಗಿವೆ ಎಂಬುದನ್ನು ಅರಿತುಕೊಂಡೆವು. ಭಾರತದಲ್ಲಿ ಯಾವುದೇ ಪಕ್ಷಪಾತವಿಲ್ಲದ ಮೂಲಭೂತ ಹಕ್ಕುಗಳು, ಸಾಮಾಜಿಕ ಸಮಾನತೆ ಮತ್ತು ರಾಜಕೀಯ ವಿಶೇಷಾಧಿಕಾರಗಳ ಭರವಸೆ ನೀಡಲು ಸಮಾಜವಾದಿ ಸಿದ್ಧಾಂತವು ಅತ್ಯುತ್ತಮ ಮಾರ್ಗವೆಂಬುದು ಮನದಟ್ಟಾಯಿತು. ಮಹಾತ್ಮ ಗಾಂಧೀಜಿಯವರು ಸನಾತನ ಧರ್ಮದ ಬಗೆಗೆ ಇಟ್ಟಿದ್ದ ನಂಬಿಕೆಯಿಂದ ಅವರು ದುರ್ಬಲ ವರ್ಗದ ಜನತೆ ಮತ್ತು ಅವರ ಸಮಗ್ರ ಬಿಡುಗಡೆ ಹಾಗೂ ಸಾಮಾಜಿಕ ಪ್ರಗತಿಗೆ ಅಡ್ಡಿ ಎಂಬ ಭಾವನೆ ಅಂಬೇಡ್ಕರ್ ಅವರಿಗಿತ್ತು. ಗಾಂಧೀಜಿಯವರ ಅನೇಕ ಹೇಳಿಕೆಗಳು ಕೇವಲ ನಮ್ಮ ಸಾಂಪ್ರದಾಯಿಕ ಮತ್ತು ಸಾಮಾಜಿಕ ನಂಬಿಕೆಗಳ ಪ್ರತಿಧ್ವನಿ ಎನಿಸಿದರೂ, ಅವರು ಮೂಲತಃ ಸಾಮಾಜಿಕ ಕ್ರಾಂತಿಕಾರಿಯಾಗಿದ್ದು, ಜನಸಮುದಾಯದ ಸಾಮಾಜಿಕ ಬಿಡುಗಡೆಗೆ ಹಲವಾರು ಪೌರಾಣಿಕ ಶಾಸನಗಳು ಮತ್ತು ನಂಬಿಕೆಗಳನ್ನು ವಿರೋಧಿಸಲೂ ಹಿಂಜರಿಯುತ್ತಿರಲಿಲ್ಲ ಎಂದು ನಾನು ವಾದಿಸುತ್ತಿದ್ದೆನು. ಅಂಬೇಡ್ಕರ್ ಅವರು ನನ್ನ ಈ ನಿಲುವನ್ನು ಒಪ್ಪುತ್ತಿರಲಿಲ್ಲ.

ಆದರೂ, ನಮ್ಮ ಭೇಟಿಯನ್ನು ಮುಂದುವರಿಸಿಕೊಂಡೇ ಬಂದು ಪರಸ್ಪರ ವಿಶ್ವಾಸವನ್ನು ಗಳಿಸಿಕೊಂಡೆವು.

ಗಾಂಧೀಜಿಯವರ ಅಸ್ಪೃಶ್ಯತೆ ಮತ್ತು ಹರಿಜನೋದ್ಧಾರ ಚಳುವಳಿಯ ಬಗ್ಗೆಗಿನ ಅಂಬೇಡ್ಕರ್ ಅವರ ಟೀಕೆಯು ದುಡುಕು ಮತ್ತು ಆಕ್ಷೇಪಾರ್ಹವಾದುದಾಗಿತ್ತು. ಹರಿಜನರನ್ನು (ಆಗ ಪಂಚಮ ಅಥವಾ ಆದಿ ದ್ರಾವಿಡರೆಂದು ಕರೆಯಲಾಗಿದ್ದ) ಹಿಂದೂಗಳ ತೆಕ್ಕೆಯಲ್ಲಿ ಅಂದರೆ, ಚುನಾಯಕ ಸಮುದಾಯದಲ್ಲಿ ತರಬೇಕೆಂಬ ಗಾಂಧೀಜಿಯವರ ಒತ್ತಾಯವನ್ನು ಅಂಬೇಡ್ಕರ್ ಅವರು ವಿರೋಧಿಸಿದ ರೀತಿಯು ಅತಿರೇಕದ, ತರವಲ್ಲದ ಮತ್ತು ನಿರ್ದಯವಾದುದಾಗಿತ್ತು. ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕ ಮತದಾರ ವರ್ಗದ ಒತ್ತಾಸೆಯ ರಾಮ್‌ಸೆ ಮೆಕ್‌ಡೊನಾಲ್ಡ್ ತೀರ್ಪಿನ ವಿರುದ್ಧ ಗಾಂಧೀಜಿಯವರ ಪೂನಾ ಉಪವಾಸ ಕಾಲದಲ್ಲಿ ಸಂಯುಕ್ತ ಚುನಾಯಕ ವರ್ಗದೊಳಗೆ ಸ್ಥಾನಗಳ ಮೀಸಲಾತಿಯ ಮೂಲಕ ಪರಿಶಿಷ್ಟ ಜಾತಿಗಳಿಗೆ ರಕ್ಷಣೆ ನೀಡಬೇಕೆಂಬ ಡಾ|| ಅಂಬೇಡ್ಕರ್ ಅವರ ಬಿಗಿಪಟ್ಟಿನ ಬೇಡಿಕೆಗೆ ಸಂಪ್ರದಾಯಬದ್ಧ ಹಿಂದೂ ಮುಖಂಡರು ಮಣಿದರೂ ಅದು ಎಲ್ಲ ರಾಷ್ಟ್ರ ನಾಯಕರ ಭಾವನೆಗಳಿಗೆ ನೋವನ್ನುಂಟು ಮಾಡಿತು. ವೆಲ್ಲೂರಿನ ಕಾರಾಗೃಹದಲ್ಲಿ ಅವರ ಈ ಮೂಲ ನಿಲುವನ್ನು ನನ್ನ ಸಹವರ್ತಿಗಳೊಡನೆ ಸಮರ್ಥಿಸುವುದು ನನಗೆ ತುಂಬಾ ವ್ಯಥೆಯನ್ನುಂಟು ಮಾಡಿತು. ನಂತರ, ಅವರು ಗಾಂಧೀಜಿಯವರ ಉದಾರಸಮ್ಮತಿ ಹಾಗೂ ರಾಜಾಜಿಯವರ ರಾಜಕೀಯ ಮೆಚ್ಚುಗೆಯನ್ನು ಗಳಿಸಿ ಪೂನಾ ಒಪ್ಪಂದದ ಸಹಿ ಮಾಡಿದ ಲೇಖನಿಯನ್ನು ಅವರಿಗೆ ಒಪ್ಪಿಸಿದರು.

ಅಂಬೇಡ್ಕರ್ ಅವರು ಮಹಾಯುದ್ಧ ಸಂದರ್ಭದಲ್ಲಿ, ತಮ್ಮನ್ನು ಪರಿಶಿಷ್ಟ ಜಾತಿಗಳ ಪರವಾಗಿ ಅಷ್ಟೇ ಅಲ್ಲ, ತಾವು ರಾಜಕೀಯ ಕ್ಷೇತ್ರದಲ್ಲಿ ಗಳಿಸಿರುವ ಉತ್ಕೃಷ್ಟ ಸ್ಥಾನದ ದೃಷ್ಟಿಯಿಂದಲೂ ವೈಸ್‌ರಾಯ್ ಸಮಿತಿಗೆ ಆಹ್ವಾನಿಸಬೇಕೆಂದು ಬಹಿರಂಗವಾಗಿ ಮತ್ತು ದಿಟ್ಟತನದಿಂದ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದಾಗ ಡಾ|| ಅಂಬೇಡ್ಕರ್ ಅವರನ್ನು ಮಂತ್ರಿಮಂಡಲಕ್ಕೆ ಸೇರಲು ಆಹ್ವಾನಿಸಬೇಕೆಂದು ನಮ್ಮ ರಾಷ್ಟ್ರೀಯ ನಾಯಕರೊಡನೆ ಯಶಸ್ವಿಯಾಗಿ ವಾದಿಸುವ ಸದವಕಾಶ ನನ್ನ ಪಾಲಿನದಾಗಿತ್ತು. ಮುಂದೆ, ರಾಷ್ಟ್ರ ನಾಯಕರು ಅಂಬೇಡ್ಕರ್ ಅವರನ್ನು ಸಂವಿಧಾನ ಸಭೆಯ ಕಲಾಪಗಳ ಜವಾಬ್ದಾರಿ ಹಾಗೂ ಸಂವಿಧಾನ ರಚನೆಯಂತಹ ಮಹತ್ವದ ಹೊಣೆಗಾರಿಕೆಯನ್ನು

ವಹಿಸಿಕೊಳ್ಳಲು ಆಹ್ವಾನಿಸುವ ನಿರ್ಣಯವನ್ನು ಕೈಗೊಂಡ ಸಂದರ್ಭದಲ್ಲಿ ಅವರಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿದೆನು.

ಆಂಧ್ರದ ಅವರ ಸಹವರ್ತಿ ಬ್ಯಾರಿಸ್ಟರ್ ರಾಮಸ್ವಾಮಿಯವರಂತೆ ಡಾ|| ಅಂಬೇಡ್ಕರ್ ಅವರೂ ಸಹ ಭಾರತೀಯ ಪುರಾಣ ಮತ್ತು ಮಹಾಕಾವ್ಯಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಿದರು. ಆರ್ಯರು ತಮ್ಮ ಪ್ರಭಾವ ಸಾಮರ್ಥ್ಯದಿಂದ ಮತೀಯ ಪ್ರಚಾರದ ಮೂಲಕ ಹೇಗೆ ದ್ರಾವಿಡ ಸಮುದಾಯದ ಮೇಲೆ ಪ್ರಭಾವ ಬೀರಿದರೋ, ಅದೇ ರೀತಿಯಲ್ಲಿ ಬೌದ್ಧ ಸಮುದಾಯದ ಮೇಲೆ ವೈದಿಕ ಹಿಂದೂ ಧರ್ಮವನ್ನು ಹೇರಲಾಯಿತು. ಸ್ವಾಭಿಮಾನಿ ಮತ್ತು ಬಲಿಷ್ಠ ದ್ರಾವಿಡರು ಮತ್ತು ಅತಿ ಪ್ರಾಚೀನ ಬುಡಕಟ್ಟು ಜನರನ್ನು ವಿಜಯೀ ಆರ್ಯರು ಮತ್ತು ಅವರ ಜಾತಿಗಳು ರಾಜಕೀಯವಾಗಿ ದಮನ ಮಾಡಿ, ತರುವಾಯ ಅವರನ್ನು ಗುಲಾಮಗಿರಿ ಸ್ಥಿತಿಗೆ ತಂದ ರೀತಿಯು ಅವರಿಗೆ ಒಪ್ಪಿಗೆಯಾಗಿರಲಿಲ್ಲ. ತುಳಿತಕ್ಕೊಳಗಾದ, ಅವಕಾಶ ವಂಚಿತರಾದ ಜನಸಮುದಾಯವು ಕರ್ಮಸಿದ್ಧಾಂತದ ಆಧಾರದ ಮೇಲೆ ಕೀಳು ಸಾಮಾಜಿಕ ಸ್ಥಾನ, ವಂಚಿತ ರಾಜಕೀಯ ಅವಕಾಶ ಮತ್ತು ಅನಿಶ್ಚಿತ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಅಂಗೀಕರಿಸುವಂತೆ ಮಾಡಿರುವ ಇತಿಹಾಸದ ಈ ಅನಿಷ್ಟ ತಿರುವಿನ ಬಗ್ಗೆ ಅಂಬೇಡ್ಕರ್ ಅವರು ಸಿಡಿದೇಳುತ್ತಿದ್ದರು. ಆಂಧ್ರದ ಬ್ಯಾರಿಸ್ಟರ್ ರಾಮಸ್ವಾಮಿ, ತಮಿಳುನಾಡಿನ ಇ.ವಿ.ಆರ್ ಮತ್ತು ಅಣ್ಣಾ ಅವರಂತೆ ಅವರು ಪ್ರಸ್ತುತ ರಾಜಕೀಯ ಪರಿಸ್ಥಿತಿಯ ವಿರುದ್ಧ ಈ ಜನಸಮುದಾಯವು ಪ್ರತಿಭಟಿಸುವಂತೆ ಪ್ರೇರೇಪಿಸುವ ಪಣ ತೊಟ್ಟರು. ಈ ಸಾಮಾಜಿಕ ಕ್ರಾಂತಿಕಾರಿಗಳು ಗಾಂಧೀಜಿಯವರ ರಚನಾತ್ಮಕ ಮತ್ತು ಕ್ರಾಂತಿಕಾರಿ ಕಾರ್ಯಗಳ ಬಗ್ಗೆಯೂ ಅತೃಪ್ತರಾಗಿದ್ದುದಲ್ಲದೆ ಸನಾತನಿಗಳೆಂದು ಹೇಳಿಕೊಳ್ಳುವವರು ಅಸ್ಪೃಶ್ಯತೆ, ಗುಲಾಮಗಿರಿ, ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯ ಮೇಲು-ಕೀಳುಗಳಿಲ್ಲದ ಮಾನವೀಯ ಮೂಲದ ರಾಜಕೀಯ ಪಂಥವನ್ನು ಸ್ವೀಕರಿಸಿ ತಮ್ಮ ಸಾಮಾಜಿಕ ನಂಬಿಕೆಗಳು ಮತ್ತು ಮತೀಯ ಶಾಸನಗಳನ್ನು ಪರಿಷ್ಕರಿಸಿಕೊಳ್ಳಬೇಕೆಂದರು.

ಅಂಬೇಡ್ಕರ್ ಅವರು ವೈಸ್‌ರಾಯ್ ಕಾರ್ಯಕಾರಿ ಸಮಿತಿಯ ಸದಸ್ಯತ್ವ ಅಥವಾ ಕೇಂದ್ರ ಸಚಿವ ಪದವಿಯ ಹೊಣೆ ಹೊತ್ತಿದ್ದರೂ ಈ ಹುದ್ದೆಗಳು ಅವರನ್ನು ಜನಸಮುದಾಯದ, ವಿಶೇಷವಾಗಿ ಹರಿಜನರು ಮತ್ತು ತುಳಿತಕ್ಕೊಳಗಾದ ಜನರ ಸಾಮಾಜಿಕ ಜಾಗೃತಿ, ಮತೀಯ ಪ್ರತಿಭಟನೆ ಹಾಗೂ ಸಮಷ್ಟಿ ಪ್ರಜ್ಞೆಯ ಪುನರುತ್ಥಾನ ಕುರಿತ ಚಿಂತನೆ ಮತ್ತು ಬರವಣಿಗೆಯ ಕಾಯಕದಿಂದ ವಿಮುಖರಾಗಲು ಪ್ರಚೋದಿಸಲಿಲ್ಲ. ಅವರ ಪಾಂಡಿತ್ಯಪೂರ್ಣ ಪ್ರಬಂಧ

"ಶೂದ್ರರು" ಸಾಂಪ್ರದಾಯಿಕ ಇತಿಹಾಸಕಾರರು ಹಾಗೂ ಪುರಾಣವಿಶಾರದ ಶಾಸ್ತ್ರಿಗಳಿಗೆ ಒಂದು ಸವಾಲಾಯಿತು. ಈ ಗ್ರಂಥವನ್ನು ಅವರು ಸರ್ಕಾರದ ಅತ್ಯುನ್ನತ ಹುದ್ದೆಯಲ್ಲಿದ್ದಾಗ ಸಿದ್ಧಪಡಿಸಿ ಜನತೆಯ ಮುಂದಿಟ್ಟದ್ದು ಒಂದು ವಿಶೇಷ.

ಸಮಾಜದ ಅವಜ್ಞೆಗೊಳಗಾದ ವರ್ಗಗಳಲ್ಲಿ ಶತಶತಮಾನಗಳಿಂದ ಬೇರೂರಿರುವ ಕೀಳರಿಮೆಯು ಅವರ ಮನಸ್ಸನ್ನು, ಸ್ಥಾನ-ಮಾನವನ್ನು ಕುಬ್ಜಗೊಳಿಸಿದ್ದು ಅದನ್ನು ಕೇವಲ ಸಾಂಸ್ಕೃತಿಕ ಮತ್ತು ಬೌದ್ಧಿಕ ಜ್ಞಾನೋದಯದಿಂದ ಹಾಗೂ ತಲೆತಿಕ್ಕುವುದರಿಂದ ಹೋಗಲಾಡಿಸುವುದು ಸಾಧ್ಯವಿಲ್ಲ, ಆದ್ದರಿಂದ, ಅವರಿಗೆ ಆರ್ಥಿಕ ಮತ್ತು ರಾಜಕೀಯ ಹಕ್ಕುಗಳ ಅವಕಾಶವನ್ನು ಕಲ್ಪಿಸಬೇಕೆಂಬ ತೀರ್ಮಾನಕ್ಕೆ ಬಂದರು. ಈ ಕಾರಣದಿಂದಲೇ ಅವರು ಕಾಂಗ್ರೆಸ್ಸಿನ ಮೂಲಭೂತ ಹಕ್ಕುಗಳು ಮತ್ತು ನಿರ್ದೇಶಕ ತತ್ವಗಳ ಪ್ರಸ್ತಾವಕ್ಕೆ ಸ್ಫೂರ್ತಿದಾಯಕ ಬೆಂಬಲ ನೀಡಿದರು. ವೈದಿಕ ಧರ್ಮದ ಪೌರಾಣಿಕ ವಾತಾವರಣದಲ್ಲಿ ಭಾವನಾತ್ಮಕವಾಗಿ ಸಂಪೂರ್ಣವಾಗಿ ಮುಳುಗಿಬಿಟ್ಟಿರುವ ಭಾರತೀಯ ಜನಸಮುದಾಯವನ್ನು ವೈದಿಕ ತೆಕ್ಕೆಯಿಂದ ಬಿಡಿಸಿ, ಅತ್ಯುತ್ತಮ ಪರ್ಯಾಯ ಧರ್ಮವೆನಿಸಿದ ಬೌದ್ಧ ಧರ್ಮವನ್ನು ಸ್ವೀಕರಿಸಲು ಅಂಬೇಡ್ಕರ್ ನೆರವಾದರು. ತಾವೇ ಸ್ವತಃ ಬೌದ್ಧರಾಗಿ ಅಧಿಕ ಸಂಖ್ಯೆಯ ಹರಿಜನರನ್ನು, ಅದರಲ್ಲೂ ಮುಖ್ಯವಾಗಿ ಮಹಾರಾಷ್ಟ್ರದವರನ್ನು ಬೌದ್ಧ ಧರ್ಮದ ಅನುಯಾಯಿಗಳಾಗಲು ಪ್ರೇರೇಪಿಸಿದರು.

ಅಂಬೇಡ್ಕರ್ ಅವರ ಈ ಕ್ರಾಂತಿಕಾರಿ ಕಾರ್ಯತಂತ್ರವು ಕಮ್ಯುನಿಸ್ಟರಿಗೆ ಒಪ್ಪಿಗೆಯಾದರೂ ಅಂಬೇಡ್ಕರ್ ಅವರು ಕಮ್ಯುನಿಸ್ಟರ ಅನ್ಯದೇಶಭಕ್ತಿಯನ್ನಾಗಲೀ, ಬಂದೂಕು ಪ್ರಧಾನ ಕಾರ್ಯತಂತ್ರವನ್ನಾಗಲೀ ಒಪ್ಪಿರಲಿಲ್ಲ. ಈ ಕಾರಣದಿಂದಲೇ ಅವರ ಕಾರ್ಮಿಕ ಸಂಘವು ಕಮ್ಯುನಿಸ್ಟರ ಅಂಕೆಯಲ್ಲಿದ್ದ ಅಖಿಲ ಭಾರತ ಕಾರ್ಮಿಕ ಸಂಘದ ಮಾರ್ಗವನ್ನನುಸರಿಸಲು ನಿರಾಕರಿಸಿತು.

ಮುಂಬರುವ ಸುದೀರ್ಘ ಕಾಲದವರೆಗೂ ಬಹುತೇಕ ಹರಿಜನರು ಮತ್ತು ತುಳಿತಕ್ಕೊಳಗಾದ ವರ್ಗಗಳು ಕೂಲಿಕಾರರಾಗಿ, ಕೆಳವರ್ಗದ ಜನರಾಗಿ ಬದುಕಬೇಕಾಗುವುದೆಂಬುದನ್ನು ಡಾ|| ಅಂಬೇಡ್ಕರ್ ಅವರು ಅರಿತಿದ್ದರು. ಈ ವರ್ಗದ, ಜನರ ಸ್ಥಿತಿ ಸುಧಾರಣೆಯಾಗಬೇಕಾದರೆ ಕಾರ್ಮಿಕ ವರ್ಗಗಳ ಸಾರ್ವತ್ರಿಕ ಸ್ಥಿತಿ ಸುಧಾರಣೆಯಾಗಬೇಕು. ಈ ಕಾರಣಕ್ಕಾಗಿಯೇ ಅವರು ಕಾರ್ಮಿಕ ಸಂಘಗಳ ಮತ್ತು ಕಾರ್ಮಿಕ ಕಾನೂನುಗಳ ತೀವ್ರ ಸಮರ್ಥಕರಾಗಿದ್ದರು.

ನಾನು ಕೃಷಿಕ ಲೋಕ ಪಕ್ಷದ ಪರವಾಗಿ ಒಂದು ತಂಡವನ್ನು ಕಟ್ಟಿದಾಗ, ಒಬ್ಬ ಮಾಜಿ ಮಂತ್ರಿಯೂ ಸೇರಿದಂತೆ ಅವರ ಮೂರು ಜನ ಅನುಯಾಯಿಗಳನ್ನು ಕೃಷಿಕ ಲೋಕ ಪಕ್ಷವನ್ನು ಸೇರುವಂತೆ ಅವರು ಒಡಂಬಡಿಸಿದರು. ನಾವು ಒಂದು ಸ್ವತಂತ್ರ ಸಾಂಸದಿಕ ವೇದಿಕೆಯನ್ನು ನಿರ್ಮಿಸಿದ್ದರಿಂದ ತಮಗೆ ಅದೆಷ್ಟು ಸಂತೋಷವಾಗಿದೆ ಎಂಬುದನ್ನು ನನಗೆ ಅವರು ಆಮೇಲೆ ತಿಳಿಸಿದರು. ಅಂಬೇಡ್ಕರ್ ಅವರು ಶಾಸನ ಸಭೆಯಲ್ಲಿ ಒಬ್ಬ ಸ್ವತಂತ್ರ ಅಭ್ಯರ್ಥಿಯಾಗಿದ್ದರೂ ಸಹ ನನಗೆ ಅಗತ್ಯವಿದ್ದಾಗಲೆಲ್ಲಾ ಕೃಷಿಕರು ಮತ್ತು ಕಾರ್ಮಿಕರ ಕ್ಷೇಮಕ್ಕಾಗಿ ತಮ್ಮ ಭಾಷಣಗಳ ಮೂಲಕ ಬೆಂಬಲ ನೀಡಿದರು ಮತ್ತು ನನ್ನನ್ನು ಅವರು ತಮ್ಮ ಸಂಗಾತಿಯಾಗಿ ಪರಿಗಣಿಸಿದರು.

ಭಾರತ ಸಂವಿಧಾನ ರಚನೆಯು ಜನಸಮುದಾಯದ ಕ್ಷಿಪ್ರ ಅಭಿವೃದ್ಧಿಯನ್ನು ಪ್ರಾಮಾಣಿಕವಾಗಿ ಹಾರೈಸಿದ ಅನೇಕ ಜನ ಪರಿಣತ ಪ್ರಜಾಪ್ರಭುತ್ವವಾದಿಗಳ ಸೃಷ್ಟಿ ನಿಜ. ಆದರ ಕಾನೂನು ಚೌಕಟ್ಟು ಮತ್ತು ವಾಕ್ಚರಣೆಯು ಅಲ್ಲಾದಿ ಮತ್ತು ಮುನ್ಷಿಗಳಂತ ಪ್ರಖ್ಯಾತ ನ್ಯಾಯಮೂರ್ತಿಗಳ ಕೊಡುಗೆ. ಆದರೆ, ಸಂವಿಧಾನ ಸಭೆಯಲ್ಲಿ ಡಾ|| ಅಂಬೇಡ್ಕರ್ ಅವರ ಪಾಂಡಿತ್ಯಪೂರ್ಣ ಭಾಷಣಗಳು ಎಂತಹ ವಿದ್ವತ್ತು, ಸ್ವತಂತ್ರ ನಿಲುವು ಮತ್ತು ದೂರದೃಷ್ಟಿಯಿಂದ ಕೂಡಿದ್ದುವು ಹಾಗೂ ನಮ್ಮ ಸಂವಿಧಾನಕ್ಕೆ ಒಂದು ರೂಪ ಕೊಡುವಲ್ಲಿ ಅವುಗಳ ಕೊಡುಗೆ ಏನೆಂಬುದು ನಮಗೆ ಮನವರಿಕೆಯಾಗುತ್ತದೆ.

ಡಾ|| ಬಿ.ಆರ್. ಅಂಬೇಡ್ಕರ್ ಅವರು ಒಬ್ಬ ನಿಜವಾದ ಪ್ರಜಾಪ್ರಭುತ್ವವಾದಿ. ಅವರು ಭವಿಷ್ಯ ಭಾರತದ ಸ್ವತಂತ್ರ ಪ್ರಜಾಪ್ರಭುತ್ವ ಸಮಾಜದ ಮಾನವೀಯ ದಿಕ್ಸೂಚಿಯಾಗಿ ಬದುಕಿದರು.

# ಡಾ|| ಬಿ.ಆರ್. ಅಂಬೇಡ್ಕರ್ ಮತ್ತು ಪರಿಶಿಷ್ಟ ಜಾತಿಗಳ ರಾಜಕೀಯ ಹಕ್ಕುಗಳು

* ಮುರಳೀಧರ್ ಸಿ. ಭಂಡಾರೆ

ಡಾ|| ಅಂಬೇಡ್ಕರ್ ಅವರು ಒಂದು ದೊಡ್ಡ ಯಶೋಗಾಥೆಯ ಪ್ರತೀಕ. ಭಾರತದಲ್ಲಿ ಅತ್ಯಂತ ದೀನ ವ್ಯಕ್ತಿಯೂ ಸಹ ಅತ್ಯುನ್ನತ ಸ್ಥಾನಕ್ಕೆ ಏರಬಲ್ಲನೆಂಬುದಕ್ಕೆ ಅವರ ಬದುಕು ಒಂದು ನಿದರ್ಶನ. ಒಂದು ಬಡ ಮಹಾರ್ ಕುಟುಂಬದಲ್ಲಿ ಅಸ್ಪೃಶ್ಯ ಹಿಂದೂ ಆಗಿ ಜನಿಸಿದ ಅವರು ಪ್ರಾರಂಭದ ದಿನಗಳಲ್ಲಷ್ಟೇ ಅಲ್ಲ, ಮುಂದೆಯೂ ಸಹ ಅಸ್ಪೃಶ್ಯರಿಗೆ ಶಾಪವೆನಿಸಿದ್ದ ಕಳಂಕ ಮತ್ತು ಅಗೌರವವನ್ನು ಅನುಭವಿಸಿದರು. ಮನುಸ್ಮೃತಿಯು ಹೇರಿರುವ ಕಟ್ಟುನಿಟ್ಟಿನ ಜಾತಿ ಪದ್ಧತಿಯನ್ನು ಅದರ ಆರೋಹಣ ಮಟ್ಟದಲ್ಲಿ ಅವರು ಗೌರವಿಸಿದ್ದರೆ, ಅದರ ಅವರೋಹಣ ಮಟ್ಟದಲ್ಲಿ ಅದರ ಬಗ್ಗೆ ತಾತ್ಸಾರ ಭಾವನೆಯನ್ನು ಹೊಂದಿದ್ದರು. ಅಸ್ಪೃಶ್ಯತೆಯು ಹರಿಜನರನ್ನು ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಹಕ್ಕುಗಳಿಂದ ವಂಚಿತರನ್ನಾಗಿ ಮಾಡಿದೆ. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಅವರು ಅಂತಹ ಗುಲಾಮಗಿರಿಯಿಂದ ಬಿಡುಗಡೆ ಹೊಂದುವ ಅವಕಾಶವೇ ಇರಲಿಲ್ಲ. ಭಾರತದಲ್ಲಿ ಅಸ್ಪೃಶ್ಯತೆ ಎನ್ನುವುದು ಒಂದು ಅತ್ಯಂತ ನಿಕೃಷ್ಟವಾದ ಹೀನಾಯ ಪರಿಸ್ಥಿತಿ. ಪಕ್ಷಪಾತವು ಇಲ್ಲಿ ಜಾತಿಯ ಆಧಾರದ ಮೇಲೇ ಹೊರತು ವರ್ಣದ ಆಧಾರದ ಮೇಲಲ್ಲ. ಮಾನವೀಯ ಹಕ್ಕುಗಳು ಮತ್ತು ಮೂಲ ಸ್ವಾತಂತ್ರ್ಯವನ್ನು ಬಡತನವು ಅಲ್ಲಗಳೆಯುತ್ತದೆ. ಆದರೆ, ಅಸ್ಪೃಶ್ಯತೆಯು ಅದನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ.

"ಭಗವಂತನು ಅಸ್ಪೃಶ್ಯತೆಯನ್ನು ಪುರಸ್ಕರಿಸುವುದಾದರೆ ಅವನನ್ನು ನಾನು ದೇವರೆಂದು ಕರೆಯಲಾರೆನು. ಅಸ್ಪೃಶ್ಯತೆ ಎನ್ನುವುದು ಒಂದು ವ್ಯಾಧಿ ಇದ್ದಂತೆ, ಅದನ್ನು ಅಳಿಸಲೇಬೇಕು. ಹಿಂದೂ ಸಮಾಜ ಎನ್ನುವುದು ಮೆಟ್ಟಿಲು ಅಥವಾ ಬಾಗಿಲುಗಳಿಲ್ಲದ ಹಲವಾರು ಶೋಷಣೆಗಳ ಒಂದು ಕಟ್ಟಡ. ಈ ಕಟ್ಟಡದ ಒಂದು ಕೋಣೆಯಲ್ಲಿ ಹುಟ್ಟಿದ ವ್ಯಕ್ತಿ ಅಲ್ಲೇ ಸಾಯಬೇಕು" ಎಂದರು ತಿಲಕ್. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎಂಬ ಘೋಷಣೆಯನ್ನು ನೀಡಿದ ತಿಲಕ್, "ದಲಿತ ವರ್ಗಗಳಿಗೆ ಮೂಲಭೂತ ಹಕ್ಕುಗಳ ಬಗ್ಗೆ ರಕ್ಷಣೆ ನೀಡದ ಸ್ವರಾಜ್ಯ ಎನ್ನುವುದು ಅವರಿಗೆ ಸ್ವರಾಜ್ಯವೆನಿಸದು. ಅದು ಇನ್ನೊಂದು ಹೊಸ ಬಗೆಯ ಗುಲಾಮಗಿರಿ" ಎಂದರು.

* ಶ್ರೀ ಮುರಳೀಧರ ಸಿ. ಭಂಡಾರೆ ಸಂಸತ್ (ರಾಜ್ಯಸಭೆ) ಸದಸ್ಯರಾಗಿದ್ದರು.

ಅಂಬೇಡ್ಕರ್ ಅವರು ಬಡತನ ಮತ್ತು ಅಸ್ಪೃಶ್ಯತೆಯ ಆವರಣದಲ್ಲಿ ಹುಟ್ಟಿ ಬಂದವರು. ಹಸಿವು, ದಾಸ್ಯ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿ ತೊಳಲುತ್ತಿರುವ ಜನಸಮುದಾಯದ ಪ್ರತಿನಿಧಿ ಎನಿಸಿದ ಡಾ|| ಅಂಬೇಡ್ಕರ್ ಅವರು ಭಾರತದ ರಾಜಕೀಯ ಕ್ಷಿತಿಜದ ಬೃಹತ್ ವ್ಯಕ್ತಿ. ಭಾರತ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಯವರೆಂದು ಹೆಸರಿಸಲಾಗಿರುವ ದಲಿತರನ್ನು ಅಸ್ಪೃಶ್ಯತೆಯ ಶೃಂಖಲೆಯಿಂದ ಬಿಡುಗಡೆ ಮಾಡಿ, ಅವರನ್ನು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಿಂಜರಿಕೆಯಿಂದ ಮೇಲಕ್ಕೆತ್ತುವುದು ಅವರ ಗುರಿಯಾಗಿತ್ತು. ಈ ಗುರಿ ಸಾಧನೆಗಾಗಿ ಅವರದು ದಣಿವರಿಯದ ಅವಿರತ ಹೋರಾಟ. ಅವರು ಮೊದಲಿನಿಂದ ಹಿಡಿದು ದೇಶಾದ್ಯಂತ ಹಾಗೂ ಹೊರ ದೇಶದಲ್ಲಿ ತಿರುಗಿ ತಮ್ಮ ಮುಂದಾಳತ್ವದಲ್ಲಿ ದಲಿತರನ್ನು ಸಂಘಟಿಸುವ, ಒಗ್ಗೂಡಿಸುವ ಕಾರ್ಯವನ್ನು ಕೈಗೊಂಡರು. ಈ ದಿಶೆಯಲ್ಲಿ ಅವರ ಬಿಡುವಿಲ್ಲದ ಮತ್ತು ನಿರಂತರವಾದ ಭಾಷಣ ಮತ್ತು ಬರಹದ ಕೆಲಸ ನಡೆಯಿತು. 1936ರಲ್ಲಿ, ಬೊಂಬಾಯಿಯಲ್ಲಿ ನಡೆದ ಮಹಾರ್ ಸಮ್ಮೇಳನದಲ್ಲಿ ಅವರು ಐವತ್ತು ಪುಟಗಳ ಸುದೀರ್ಘ ಉಪನ್ಯಾಸವನ್ನು ಮಾಡಿದರು. ದಲಿತರ ಹಕ್ಕುಗಳಿಗೆ ಒತ್ತಾಸೆಯಾಗಿ ಸವಿಸ್ತಾರವಾಗಿ ಪ್ರಬಂಧ, ಭಿನ್ನಹ, ಕರಡು, ಘೋಷಣೆ ಮತ್ತು ಯೋಜನೆಗಳನ್ನು ಸುಸಂಬದ್ಧವಾಗಿ ಮಂಡಿಸಿದರು. ಸೈಮನ್ ಕಮೀಷನ್ ಮತ್ತು ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನ ಎರಡು ಅಧಿವೇಶನಗಳಲ್ಲಿ ಅವರು ಮಂಡಿಸಿದ ಕರಡು ಮಸೂದೆಗಳು ಮತ್ತು ಮಾಡಿದ ಉಪನ್ಯಾಸಗಳು ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣಗಳು ಅವರ ದೂರದರ್ಶಿತ್ವ, ಸಾಗರೋಪಮ ಸಂವಿಧಾನಾತ್ಮಕ ಜ್ಞಾನ ಮತ್ತು ಭಗೀರಥ ಪ್ರಯತ್ನಗಳ ದ್ಯೋತಕವೆನಿಸಿವೆ. ಇವು ಭಾರತ ಸಂವಿಧಾನ ಚರಿತ್ರೆಯ ಒಂದು ಭಾಗವಾಗಿವೆ. ಅವರು ತಾಯಿ ನಾಡಿನಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಅರುಣೋದಯಕ್ಕಾಗಿ ಜೀವನಪರ್ಯಂತ ಹೋರಾಟ ಮತ್ತು ತ್ಯಾಗ ಮಾಡಿದರು.

ಅಂಬೇಡ್ಕರ್ ಅವರು ಸ್ಪಷ್ಟವಾದ ಉದ್ದೇಶಗಳನ್ನು ಹೊಂದಿದ್ದರು. ಪರಿಶಿಷ್ಟ ಜಾತಿಗಳ ಕೈಗೆ ರಾಜಕೀಯ ಶಕ್ತಿಯನ್ನು ನೀಡುವುದು ಅವರಲ್ಲಿ ಸಮಾನತೆಯ ಗುರಿ ಸಾಧಿಸಲು ಮೊದಲ ಮೆಟ್ಟಿಲು. ಸರ್ಕಾರದಲ್ಲಿ ಅವರ ದನಿಗೆ ಅವಕಾಶವಿದ್ದಾಗ ಮಾತ್ರ ರಾಜಕೀಯವಾಗಿ ಶಕ್ತಿ ಬರಲು ಸಾಧ್ಯ. ದೇವಸ್ಥಾನಗಳಿಗೆ ಪ್ರವೇಶ ನೀಡುವುದು ಯೋಗ್ಯವಾದುದು, ನಿಜ. ಆದರೆ, ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ರಾಜಕೀಯ ಹಕ್ಕುಗಳನ್ನು ಕುರಿತ ಸಮಸ್ಯೆಯು ದೇವಸ್ಥಾನಗಳಿಗೆ ಪ್ರವೇಶ ನೀಡುವುದಕ್ಕಿಂತ ಪ್ರಮುಖವಾದ ವಿಷಯ. ಈ ವರ್ಗಗಳ ಸಾಮಾಜಿಕ ಉನ್ನತಿ,

[illegible] ಪ್ರಗತಿ, ಶೈಕ್ಷಣಿಕ ಮುನ್ನಡೆ - ಈ ಎಲ್ಲವೂ ರಾಜಕೀಯ ಶಕ್ತಿ ಮತ್ತು ಅವಕಾಶಗಳಿಂದ ಸಾಧ್ಯ ಎಂಬುದು ಅವರ ನಿಲುವಾಗಿತ್ತು.

ಭಾರತಕ್ಕೆ ಸಂಬಂಧಿಸಿದಂತೆ ಬ್ರಿಟಿಷರು ಮೊದಲಿನಿಂದಲೂ [illegible] ಸರ್ಕಾರಿ [illegible] ಕ್ಷೇತ್ರಗಳಲ್ಲಿ [illegible] ಸಾರ್ವತ್ರಿಕ [illegible] ಪ್ರತ್ಯೇಕಿಸಿಟ್ಟಿದ್ದೇವೆಂದು [illegible] ಅವರು ಈ ನೀತಿಯನ್ನು ಮುಂದುವರಿಸಿದರು. 1906ರ ಅಕ್ಟೋಬರ್‌ನಲ್ಲಿ ಆಗಿನ ವೈಸ್‌ರಾಯ್ ಲಾರ್ಡ್ ಮಿಂಟೋ, ಮುಸ್ಲಿಮರಿಗೆ ಪ್ರತ್ಯೇಕ ಚುನಾವಣಾ ಸಮೂಹಗಳನ್ನು ಮಂಜೂರು ಮಾಡಲು ರಾಜ್ಯದ ಕಾರ್ಯದರ್ಶಿಗೆ ಶಿಫಾರಸ್ಸು ಮಾಡಿದ್ದನು. "ಮುಸ್ಲಿಮರು ಒಂದು ಮತೀಯ ಸಂಘಟಿತ [illegible] ವರ್ಗ. ಅವರು [illegible], [illegible], ಸಂಪ್ರದಾಯ ಮುಂತಾದ ಅನೇಕ ವಿಚಾರಗಳಲ್ಲಿ ಹಿಂದೂಗಳಿಗಿಂತ ಭಿನ್ನವಾದ ಒಂದು ವರ್ಗ" ಎಂದು [illegible] ಬರೆದರು.

[illegible] [illegible] ಬೇರ್ಪಡಿಸುವ [illegible] ಹುಟ್ಟುಹಾಕಿ, ಅಂತಿಮವಾಗಿ ಭಾರತವನ್ನು ಎರಡು ರಾಷ್ಟ್ರಗಳನ್ನಾಗಿ ಒಡೆದ 1947ರ ಭಾರತ [illegible] [illegible] [illegible] ಈ [illegible] ದುಷ್ಪರಿಣಾಮಗಳನ್ನು ಪ್ರಾರಂಭದಿಂದಲೂ ಭಾರತದ ನಾಯಕರು ಗುರುತಿಸಿದ್ದರು. "ಜನಾಂಗಗಳು ಮತ್ತು ಮತಗಳನ್ನು ಮಾನ್ಯ ಮಾಡುವ ನೀತಿಯು ಸರ್ಕಾರದ ಪ್ರೋತ್ಸಾಹದ ನಿಲುವಾಗಬಾರದು. ಪರಿಣಾಮವಾದ ಹಿತಾಸಕ್ತಿಗಳ ವಿಭಜನೆಯಿಂದ ಈಗಾಗಲೇ ಈ ದೇಶಕ್ಕೆ ಕೇಡುಂಟಾಗಿದೆ" ಎಂದು ಗೋಪಾಲಕೃಷ್ಣ ಗೋಖಲೆಯವರು ಹೇಳಿದ್ದರು. ಹಂತ ಹಂತವಾಗಿ ಮತೀಯ ಹಕ್ಕು ಮತ್ತು ಹಿತಾಸಕ್ತಿಗಳನ್ನು ಪುರಸ್ಕರಿಸುವುದು ಬ್ರಿಟಿಷರ ಮೂಲ ಕಾರ್ಯ ನೀತಿಯಾಯಿತು. ಭಾರತದ ಇತಿಹಾಸದಲ್ಲಿ ಪ್ರಥಮಬಾರಿಗೆ 1919ರ ಕಾಯಿದೆಯು ದಲಿತವರ್ಗಗಳ ಅಸ್ತಿತ್ವವನ್ನು ಗುರುತಿಸಿತು. ಕೇಂದ್ರೀಯ ಶಾಸನಸಭೆಗೆ ಗೌರ್ನರ್ ಜನರಲ್ ಅವರು ನಾಮಕರಣ ಮಾಡಿದ ಹದಿನಾಲ್ಕು ಜನ ಅಧಿಕಾರೇತರ ಸದಸ್ಯರಲ್ಲಿ ದಲಿತವರ್ಗದ ಒಬ್ಬ ಸದಸ್ಯರಿದ್ದರು. ಪ್ರಾಂತೀಯ ಶಾಸನ ಸಭೆಗಳಲ್ಲಿ ದಲಿತ ವರ್ಗಗಳ ನಾಲ್ಕು ಜನ ಪ್ರತಿನಿಧಿಗಳಿದ್ದರು.

ರಾಜಕೀಯ ಪರಿಸ್ಥಿತಿಯು [illegible] ಸಂಕೀರ್ಣಗೊಳ್ಳಲಾರಂಭಿಸಿತ್ತು. ಭಾರತದ ಕೋಟ್ಯಂತರ ಜನತೆಯ ಸ್ವರಾಜ್ಯದ ಮಹದಾಕಾಂಕ್ಷೆಯನ್ನು [illegible] [illegible] ಕಾಲ [illegible] ಸಾಧ್ಯವಿಲ್ಲವೆಂಬುದು ಬ್ರಿಟಿಷರಿಗೆ ಅರಿವಾಯಿತು. 1928ರಲ್ಲಿ ಭಾರತಕ್ಕೆ ಸೈಮನ್ ಆಯೋಗವು ಆಗಮಿಸಿತು. ಸೈಮನ್ ಆಯೋಗದ ಈ ಭೇಟಿಯು

ಡಾ|| ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಗಳಿಗೆ ಅಧಿಕಾರದ ಕುರಿತು ಪರಿಣಾಮಕಾರಿ ಒತ್ತಾಯವನ್ನು ಹಲವು ಶಿಕ್ಷಣ ಅವಕಾಶವನ್ನು ಒದಗಿಸಿತು. ಸೈಮನ್ ಆಯೋಗಕ್ಕೆ ಅವರು ಸಲ್ಲಿಸಿದ ಮನವಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಸಂಯುಕ್ತ ಮತದಾರ ಸಮುದಾಯವನ್ನು ಮತ್ತು ಸ್ಥಾನಗಳ ಮೀಸಲಾತಿಗೆ ಒತ್ತಾಯಿಸಿದರು. ಅವರು ಇನ್ನೂ ಮುಂದೆ ಹೋಗಿ ಮುಸ್ಲಿಮರಿಗೆ ಪ್ರತ್ಯೇಕ ಮತದಾರ ಸಮುದಾಯದ ಬೇಡಿಕೆಯನ್ನು ವಿರೋಧಿಸಿದರು.

ಅನಂತರ ದಲಿತ ವರ್ಗಗಳಿಗೆ ಸ್ಥಾನಮಾನಗಳನ್ನು ಮೀಸಲಿಡಬೇಕೆಂಬ ಬೇಡಿಕೆಯನ್ನು ಗಾಂಧೀಜಿಯವರು ವಿರೋಧಿಸಿದಾಗ ಅಂಬೇಡ್ಕರ್‌ರವರು ತಮ್ಮ ನಿಲುವನ್ನು ಸಂಪೂರ್ಣವಾಗಿ ಬದಲಿಸಿದರು. ಅವರು ಸಂಯುಕ್ತ ಮತದಾರ ಸಮುದಾಯದ ಬೇಡಿಕೆಯನ್ನು ಕೈಬಿಟ್ಟು ಪ್ರತ್ಯೇಕ ಮತದಾರ ಸಮುದಾಯದ ಬೇಡಿಕೆಯನ್ನು ಅಂಗೀಕರಿಸಿದರು. ಇದು ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ಒಡಕನ್ನುಂಟು ಮಾಡಿ ಗಾಂಧೀಜಿಯವರು ಯರವಾಡ ಜೈಲಿನಲ್ಲಿ ಉಪವಾಸ ಕೈಗೊಳ್ಳುವುದಕ್ಕೆ ದಾರಿ ಮಾಡಿತು. ಅವರಿಬ್ಬರ ನಡುವಣ ಈ ವೈಮನಸ್ಸು ಪೂನಾ ಒಪ್ಪಂದದಲ್ಲಿ ಪರಿಹಾರವಾಗಿ ಅವರನ್ನು ಒಂದುಗೂಡಿಸಿತು.

1930ರ ಮೇ ತಿಂಗಳಲ್ಲಿ ಸೈಮನ್ ಆಯೋಗದ ವರದಿಯು ಬಂದಿತು. ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯದಿಂದ ಸಾರ್ವತ್ರಿಕ ಪೌರತ್ವ ಭಾವನೆಗೆ ಧಕ್ಕೆ ಎಂಬುದನ್ನು ಸೈಮನ್ ಆಯೋಗವು ಮನಗಂಡಿತು. ಆದರೂ, ನಿರೀಕ್ಷೆಯಂತೆ ಭಾರತೀಯ ರಾಜಕೀಯ ಪಕ್ಷಗಳಲ್ಲಿ ಯಾವುದೇ ಸರ್ವಸಮ್ಮತ ಒಪ್ಪಂದವಾಗದ ಕಾರಣ ಭಾರತದ ಚುನಾವಣೆಗಳಲ್ಲಿ ಪ್ರತ್ಯೇಕ ಮತದಾರ ಸಮುದಾಯಗಳನ್ನು ಮುಂದುವರಿಸಲು ಅದು ಶಿಫಾರಸು ಮಾಡಿತು. ಅದು ನೆಹರೂ ವರದಿ ಮತ್ತು ಭಾರತದ ರಾಷ್ಟ್ರೀಯತೆಯ ಆದರ್ಶಗಳನ್ನು ತಿರಸ್ಕರಿಸಿತು. ಸೈಮನ್ ಆಯೋಗವು ದಲಿತ ವರ್ಗಗಳಿಗೆ ಸಂಯುಕ್ತ ಮತದಾರ ಸಮುದಾಯದೊಂದಿಗೆ ಸ್ಥಾನಗಳ ಮೀಸಲಾತಿಯನ್ನು ಸೂಚಿಸಿತು. ಆದರೆ ಅಭ್ಯರ್ಥಿಯ ಅರ್ಹತೆಯನ್ನು ಪ್ರಾಂತ್ಯದ ರಾಜ್ಯಪಾಲರು ದೃಢೀಕರಿಸಿದ ಹೊರತು, ಯಾವ ಅಭ್ಯರ್ಥಿಯೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿರಲಿಲ್ಲ. ನಾಮಕರಣವು ರಾಜಕೀಯದಲ್ಲಿ ಅವರಿಗೆ ತರಬೇತಿ ನೀಡಲು ಯಾವುದೇ ಅವಕಾಶವನ್ನು ಕಲ್ಪಿಸುವುದಿಲ್ಲವಾದ್ದರಿಂದ ಅಂತಹ ನಾಮಕರಣವು ಅವರ ಯಾವ ಮುನ್ನಡೆಯನ್ನೂ ಸಾಧಿಸಲಾರದು ಎಂಬುದು ಆಯೋಗಕ್ಕೆ ಗೊತ್ತಿದ್ದೂ ಈ ಶಿಫಾರಸನ್ನು ಮಾಡಿತು.

ಅಭ್ಯರ್ಥಿಯ ಅರ್ಹತೆಯನ್ನು ದೃಢೀಕರಿಸಲು ರಾಜ್ಯಪಾಲರಿಗೆ ಅಧಿಕಾರ ನೀಡಿದ್ದು ಮತ್ತು ದಲಿತ ವರ್ಗಗಳನ್ನು ಪ್ರತಿನಿಧಿಸಲು ದಲಿತೇತರ ವರ್ಗಗಳಿಂದ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳುವ ಈ ವ್ಯವಸ್ಥೆಯನ್ನು ಅಂಬೇಡ್ಕರ್ ಅವರು ಸಹಜವಾಗಿಯೇ ತಿರಸ್ಕರಿಸಿದರು. ಅದು ಅವರಿಗೆ ಕೇವಲ ಶುದ್ಧ ಮತ್ತು ನೇರ ನಾಮಕರಣವೇ ಹೊರತು ಚುನಾವಣೆ ಎನಿಸಲಿಲ್ಲ.

ಅಂಬೇಡ್ಕರ್ ಅವರು ಪ್ರತ್ಯೇಕ ಮತದಾರ ವರ್ಗಗಳಿಗಾಗಿ ತಮ್ಮ ಬೇಡಿಕೆಯನ್ನು ಒತ್ತಾಯಿಸಿದರು. ಯಾವುದೇ ಒಂದು ರಾಷ್ಟ್ರವನ್ನು ಬೇರೊಂದು ರಾಷ್ಟ್ರವು ಆಳಲಾರದು ಎಂಬುದು ಎಷ್ಟು ಸತ್ಯವೋ, ಯಾವುದೇ ಒಂದು ವರ್ಗವು ಬೇರೊಂದು ವರ್ಗದ ಮೇಲೆ ಆಡಳಿತ ನಡೆಸಲಾರದು ಎಂಬುದೂ ಸಹ ಅಷ್ಟೇ ಸತ್ಯ ಎಂಬುದು ಅಂಬೇಡ್ಕರ್ ಅವರ ಸರಳ ಸಿದ್ಧಾಂತ. ತಮಗೆ ಒಮ್ಮತವೆನಿಸುವ ಪ್ರತಿನಿಧಿಯನ್ನು ಆಯ್ಕೆ ಮಾಡುವಲ್ಲಿ ಯಾವುದೇ ಅಡಚಣೆ, ನಿಯಮ, ಷರತ್ತುಗಳಿಂದ ಮುಕ್ತವಾದ ಹಕ್ಕನ್ನು ಅವರು ಪ್ರತಿಪಾದಿಸಿದರು. ಅಧಿಕಾರದ ಅಂತಹ ಹಂಚಿಕೆಯು ಅಧಿಕಾರ ವರ್ಗಾವಣೆಯ ಫಲಶ್ರುತಿಯಾಗಬೇಕು. ಆಗ ಮಾತ್ರ ಸಮಾಜದ ಮೇಲೆ ಪ್ರಭಾವ ಬೀರುವ ಶಕ್ತಿಗಳಿಗೆ ಸಮಸಮನಾಗಿ ನಿಂತು ನಿಜವಾದ ಸಾಮಾಜಿಕ ಬದಲಾವಣೆಯನ್ನು ತರಲು ಸಾಧ್ಯ ಎಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು. ವಾಸ್ತವವಾದ ರಾಜಕೀಯ ಶಕ್ತಿಯು ಜನತೆಯ ಕೈಗೆ ಬರುವುದು ಸ್ವತಂತ್ರ ಸಂವಿಧಾನ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ ಎಂದು ಅವರು ತಿಳಿದಿದ್ದರು. ಇದೇ ದಲಿತ ವರ್ಗಗಳ ಅಂತಿಮ ಗುರಿಯಾಗಿತ್ತು.

ಸೈಮನ್ ಆಯೋಗದ ನಂತರ ಈ ಪ್ರಕ್ರಿಯೆಯ ಕಾರ್ಯಕ್ಷೇತ್ರವು ಲಂಡನ್ನಿನಲ್ಲಿ ನಡೆದ ದುಂಡು ಮೇಜು ಪರಿಷತ್ತಿನ ಎರಡು ಅಧಿವೇಶನಗಳಿಗೆ ವರ್ಗಾಯಿತು. 12.11.1930 ರಿಂದ 1.12.1931 ರವರೆಗೆ ನಡೆದ ಪ್ರಥಮ ಅಧಿವೇಶನವನ್ನು ಕಾಂಗ್ರೆಸ್ ಬಹಿಷ್ಕರಿಸಿತು. 7.9.1931 ರಿಂದ 1.12.1931ರವರೆಗೆ ನಡೆದ ಎರಡನೆಯ ಅಧಿವೇಶನದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಭಾಗವಹಿಸಿತು.

ಮೊದಲನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರ್ ಅವರು ದಲಿತ ವರ್ಗಗಳನ್ನು ಪ್ರತಿನಿಧಿಸಿದ ರಾಷ್ಟ್ರ ಪ್ರೇಮಿ ಮುಂದಾಳುವಾಗಿ ಮಿಂಚಿದರು. ಭಾರತದ ಸಮಗ್ರ ಅಸ್ಪೃಶ್ಯ ಸಮುದಾಯವು ಪ್ರಸ್ತುತ ಅಧಿಕಾರದಲ್ಲಿರುವ ಅಧಿಕಾರಶಾಹಿ ಸರ್ಕಾರವನ್ನು ಬದಲಿಸಿ, ಜನರಿಂದ, ಜನತೆಗಾಗಿ, ಜನತೆಯ ಸರ್ಕಾರವನ್ನು ಸ್ಥಾಪಿಸುವ ಒಲವುಳ್ಳವರಾಗಿರುವರೆಂದು ಅವರು ಘೋಷಿಸಿದರು.

ಜನತೆಯು ಸ್ವೀಕರಿಸುವಂತಹ ಜವಾಬ್ದಾರಿಯುತವಾದ ಮತ್ತು ಪ್ರಾತಿನಿಧಿಕ ಸರ್ಕಾರವನ್ನು ಒದಗಿಸುವಂತಹ ಸಂವಿಧಾನಕ್ಕಾಗಿ ಅವರು ಒತ್ತಾಯಿಸಿದರು. "ಬಹು ಸಂಖ್ಯೆಯ ಜನರು ಅಂಗೀಕರಿಸದ ಯಾವ ಸಂವಿಧಾನವೂ ಪರಿಣಾಮಕಾರಿಯಾಗದು ಎಂಬುದು ಇನ್ನೂ ಅನೇಕರಿಗೆ ಮನದಟ್ಟಾಗಿಲ್ಲವೆಂಬುದು ನನಗೆ ಶಂಕೆಯುನ್ನುಂಟು ಮಾಡಿದೆ. ನೀವು ಅಸ್ತು ಮಾಡಬೇಕು, ಭಾರತವು ಅಂಗೀಕರಿಸಬೇಕು ಎಂಬ ಕಾಲ ಮುಗಿದುಹೋಯಿತು. ಅದು ಮತ್ತೆ ಖಂಡಿತ ಬರುವುದಿಲ್ಲ, ಸಂವಿಧಾನದ ಕಾರ್ಯ ಪರಿಣಾಮಕಾರಿಯಾಗಬೇಕಾದರೆ ಜನತೆಯ ಅಂಗೀಕಾರವು ಸಂವಿಧಾನದ ಒರಗಲ್ಲಾಗಬೇಕೇ ಹೊರತು, ಆಕಸ್ಮಿಕವಾದ ತರ್ಕದಿಂದ ಅಲ್ಲ" ಎಂದರು. ದಲಿತ ವರ್ಗಗಳ ಸಮಸ್ಯೆಯು ಒಂದು ಸಾಮಾಜಿಕ ಸಮಸ್ಯೆಯಾಗಿದ್ದು, ಅದಕ್ಕೆ ಪರಿಹಾರವನ್ನು ಇತರ ಯಾವುದೇ ವಿಷಯಕ್ಕಿಂತ ರಾಜಕೀಯ ವಿಷಯದಲ್ಲಿ ಕಂಡುಕೊಳ್ಳಬೇಕೆಂಬುದು ಪದೇ ಪದೇ ನಮಗೆ ಮನದಟ್ಟಾಗಿದೆ. ದಲಿತ ವರ್ಗಗಳ ಕೈಗೆ ರಾಜಕೀಯ ಅಧಿಕಾರ ಬಂದ ಹೊರತು ಅವರ ಸಮಸ್ಯೆಗಳು ಖಂಡಿತ ಪರಿಹಾರವಾಗುವುದಿಲ್ಲ" ಎಂಬ ಅವರ ಮಾತುಗಳಲ್ಲಿ ದಲಿತ ವರ್ಗಗಳ ನಾಯಕನಾಗಿ ಡಾ|| ಅಂಬೇಡ್ಕರ್ ಅವರು ಈ ವರ್ಗಗಳಿಗೆ ರಾಜಕೀಯ ಅಧಿಕಾರವನ್ನು ಒತ್ತಾಯಿಸಿದರು.

ನಮ್ಮ ಕುಂದುಕೊರತೆಗಳನ್ನು ಯಾರೂ ಪರಿಹಾರ ಮಾಡಲಾರರು. ಅಷ್ಟೇ ಅಲ್ಲ, ನಮ್ಮಿಂದಲೂ ಅದು ಸಾಧ್ಯವಿಲ್ಲ, ನಮ್ಮ ಕೈಗೆ ರಾಜಕೀಯ ಅಧಿಕಾರ ಬಂದರೆ ಮಾತ್ರ ಅವುಗಳ ನಿವಾರಣೆ ಸಾಧ್ಯ. ಕಾಲಾನುಕ್ರಮದಲ್ಲಿ ಅದ್ಭುತಗಳು ಒದಗಿಬರುವುವೆಂದು ಕಾದು ಕುಳಿತುಕೊಳ್ಳುವುದು ದಲಿತರಿಗೆ ಇನ್ನು ಮುಂದೆ ಸಲ್ಲದು ಎಂಬುದು ಅವರ ನಿಲುವು.

ಎರಡನೇ ದುಂಡು ಮೇಜಿನ ಪರಿಷತ್ತಿನ ಅಧಿವೇಶನಕ್ಕೆ ಮುಂಚೆ ಅಂಬೇಡ್ಕರ್ ಅವರು ಗಾಂಧೀಜಿಯವರನ್ನು ಭೇಟಿ ಮಾಡಿದ್ದರು. ಮಹದೇವ ದೇಸಾಯಿ ಅವರ ದಾಖಲೆಗಳ ಪ್ರಕಾರ ಈ ಭೇಟಿಯ ನಂತರವೂ ಗಾಂಧೀಜಿಯವರು ದುಂಡು ಮೇಜಿನ ಪರಿಷತ್ತಿಗೆ ಲಂಡನ್ನಿಗೆ ತೆರಳುವವರೆಗೆ ಅವರಿಗೆ ಅಂಬೇಡ್ಕರ್ ಅವರು ಹರಿಜನರೆಂಬುದು ಗೊತ್ತಿರಲಿಲ್ಲ. ಅವನೊಬ್ಬ ಬ್ರಾಹ್ಮಣನಿದ್ದು ಹರಿಜನರ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾನೆಂದು ಆತ ಭಾವಿಸಿದ್ದರು. ಆದ್ದರಿಂದಲೇ ಅತಿರೇಕವಾಗಿ ಮಾತನಾಡಿದರು. ಅಂಬೇಡ್ಕರ್‌ರ ಜೀವನಚರಿತ್ರಕಾರ ಧನಂಜಯ (ಕುಮಾರ) ಕೀರ್ ಅವರೀರ್ವರ ಸಮಾಗಮವನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಅದನ್ನು ಇಲ್ಲಿ ವಿಸ್ತಾರವಾಗಿ ಉದ್ಧರಿಸುವುದು ಯುಕ್ತ.

*ಅಂಬೇಡ್ಕರ್* : ಗಾಂಧೀಜಿ, ನನಗೆ ನನ್ನದೆಂಬ ದೇಶವಿಲ್ಲ.

*ಗಾಂಧೀಜಿ* : (ಬೆರಗಾಗಿ, ಅವರ ಮಾತನ್ನು ತಡೆದು) ನಿಮಗೆ ನಿಮ್ಮದಾದ ದೇಶವಿದೆ. ದುಂಡು ಮೇಜಿನ ಪರಿಷತ್ತಿನಲ್ಲಿ ನಿಮ್ಮ ಕೆಲಸದ ಬಗೆಗಿನ ವರದಿ ನನಗೆ ತಲುಪಿದೆ. ನೀವು ಒಬ್ಬ ಉಜ್ವಲ ದೇಶಭಕ್ತರೆಂಬುದು ನನಗೆ ಗೊತ್ತಿದೆ.

*ಅಂಬೇಡ್ಕರ್* : ನನಗೆ ನನ್ನದೆಂಬ ದೇಶವಿದೆ ಎಂದು ನೀವು ಹೇಳುತ್ತೀರಿ. ಅದು ನನಗೆ ಇಲ್ಲವೆಂದು ನಾನು ಮತ್ತೆ ಹೇಳುತ್ತೇನೆ. ನಮ್ಮನ್ನು ಬೆಕ್ಕು ನಾಯಿಗಳಿಗಿಂತ ಕೀಳಾಗಿ ಕಾಣುತ್ತಿರುವ, ನಮಗೆ ಕುಡಿಯಲು ನೀರೂ ಸಿಕ್ಕದಿರುವ ಈ ನೆಲವನ್ನು ನಮ್ಮ ದೇಶವೆಂದು, ಈ ಧರ್ಮವನ್ನು ನಮ್ಮ ಧರ್ಮವೆಂದು ಕರೆಯುವುದಾದರೂ ಹೇಗೆ? ಯಾವನೇ ಆತ್ಮಗೌರವವುಳ್ಳ ಅಸ್ಪೃಶ್ಯನು ಈ ನೆಲದ ಬಗ್ಗೆ ಅಭಿಮಾನ ತಾಳಲಾರ. ನಮ್ಮ ಮೇಲೆ ಈ ದೇಶವು ಹೇರಿರುವ ಅನ್ಯಾಯ ಮತ್ತು ನೋವುಗಳು ಎಷ್ಟು ಅಗಾಧವೆಂದರೆ ನಾವು ತಿಳಿದೋ, ತಿಳಿಯದೆಯೋ ಈ ದೇಶದ ಬಗ್ಗೆ ಅವಿಧೇಯತೆ ತಳೆಯುತ್ತೇವೆ. ಇದಕ್ಕೆ ಕಾರಣ ಸಂಪೂರ್ಣವಾಗಿ ಈ ದೇಶವೇ! ನನ್ನನ್ನು ದ್ರೋಹಿ ಎಂದು ಕರೆದರೆ ನಾನು ದುಃಖಪಡುವುದಿಲ್ಲ. ಏಕೆಂದರೆ ನಮ್ಮ ಕೃತ್ಯಕ್ಕೆ ಹೊಣೆ ನನ್ನನ್ನು ದ್ರೋಹಿ ಎಂದು ಕರೆದ ಈ ದೇಶದ್ದೇ! ನೀವು ಹೇಳಿದಂತೆ ನಾನೇನಾದರೂ ರಾಷ್ಟ್ರೀಯ ಸೇವೆ ಮಾಡಿದ್ದರೆ, ದೇಶಭಕ್ತಿಯ ಕಾರಣಕ್ಕಾಗಿ, ಅದು ಸಹಾಯಕ ಅಥವಾ ಲಾಭದಾಯಕವಾಗಿದ್ದರೆ ಅದು ನನ್ನಲ್ಲಿರುವ ಅಕಳಂಕ ಮನಸ್ಸಾಕ್ಷಿಯಿಂದಾದ್ದೇ ಹೊರತು ದೇಶಭಕ್ತಿಯ ಕಾರಣದಿಂದಲ್ಲ. ಶತಮಾನಗಳಿಂದ ತುಳಿತಕ್ಕೊಳಗಾದ ನನ್ನ ಜನರಿಗೆ ಮಾನವ ಹಕ್ಕುಗಳನ್ನು ದೊರಕಿಸಲು ಮಾಡಿದ ನನ್ನ ಪ್ರಯತ್ನದಲ್ಲಿ ಈ ದೇಶಕ್ಕೆ ನಾನು ಯಾವುದೇ ಕೇಡನ್ನು ಮಾಡಿದ್ದರೆ ಅದು ಪಾಪವಲ್ಲ. ನನ್ನ ಕಾರ್ಯದಿಂದ ಯಾವುದೇ ತೊಂದರೆಯುಂಟಾಗದಿದ್ದರೆ ಅದಕ್ಕೆ ನನ್ನ ಮನಸ್ಸಾಕ್ಷಿ ಕಾರಣವಿರಬಹುದು. ಆ ಮನಸ್ಸಾಕ್ಷಿಯ ಪ್ರೇರಣೆಯಿಂದಾಗಿಯೇ ನಾನು ಯಾವುದೇ ಸಣ್ಣತನವನ್ನು ತೋರದೆ ಅಥವಾ ಈ ದೇಶಕ್ಕೆ ಯಾವ ಕೇಡನ್ನೂ ಉಂಟುಮಾಡದೆ ನನ್ನ ಜನರಿಗೆ ಮಾನವ ಹಕ್ಕುಗಳನ್ನು ಗಳಿಸಿಕೊಡಲು ಶ್ರಮಿಸುತ್ತಿದ್ದೇನೆ.

ಮುಸ್ಲಿಂ ಮತ್ತು ಸಿಖ್ಖರು ಅಸ್ಪೃಶ್ಯರಿಗಿಂತ ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಹೆಚ್ಚು ಮುಂದುವರಿದವರೆಂದು ಎಲ್ಲರಿಗೂ ಗೊತ್ತು. ದುಂಡು ಮೇಜಿನ ಪರಿಷತ್ತಿನ ಮೊದಲ ಅಧಿವೇಶನದಲ್ಲಿ ಮುಸ್ಲಿಮರ ಹಕ್ಕುಗಳಿಗೆ ರಾಜಕೀಯ ಅಂಗೀಕಾರ ದೊರೆಯಿತು ಮತ್ತು ಅವರಿಗೆ ರಾಜಕೀಯ ರಕ್ಷಣೆಯನ್ನು ಶಿಫಾರಸ್ಸು ಮಾಡಲಾಯಿತು. ಅವರ ಹಕ್ಕುಗಳಿಗೆ ಕಾಂಗ್ರೆಸ್ ಒಪ್ಪಿಗೆ ನೀಡಿತು. ಅದರಂತೆ ಮೊದಲ ಅಧಿವೇಶನವು ದಲಿತ ವರ್ಗಗಳ ರಾಜಕೀಯ ಹಕ್ಕುಗಳಿಗೆ

ಅಂಗೀಕಾರ ನೀಡಿತು ಮತ್ತು ಅವರಿಗೆ ರಾಜಕೀಯ ರಕ್ಷಣೆ ನೀಡಲು ಮತ್ತು ಸಾಕಷ್ಟು ಪ್ರಾತಿನಿಧ್ಯ ನೀಡಲೂ ಶಿಫಾರಸ್ಸು ಮಾಡಿತು. ನನ್ನ ಪ್ರಕಾರ ಅದು ದಲಿತ ವರ್ಗಕ್ಕೆ ಪ್ರಯೋಜನವಾಗುತ್ತದೆ. ನಿಮ್ಮ ಅಭಿಪ್ರಾಯವೇನು ?

ಗಾಂಧೀಜಿ : ಅಸ್ಪೃಶ್ಯರನ್ನು ಹಿಂದೂಗಳಿಂದ ರಾಜಕೀಯವಾಗಿ ಬೇರ್ಪಡಿಸುವ ಬಗ್ಗೆ ನನ್ನ ವಿರೋಧವಿದೆ. ಅದು ಸಂಪೂರ್ಣವಾಗಿ ಆತ್ಮಘಾತುಕ.

ಸಭೆ ಮುಗಿಯಿತು. ಆದರೆ ವಿವಾದವನ್ನು ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಕೈಗೆತ್ತಿಕೊಳ್ಳಲಾಯಿತು. ಅಂಬೇಡ್ಕರ್ ಒಂದು ವಿಷಯವನ್ನು ಸ್ಪಷ್ಟಪಡಿಸಿದರು. ದಲಿತ ವರ್ಗಗಳಿಗೆ ಪ್ರತ್ಯೇಕ ಚುನಾಯಿತ ಮಂಡಳಿ ಪದ್ಧತಿಯನ್ನು ಒಳಗೊಳ್ಳದ ಸಂವಿಧಾನವನ್ನು ಒಪ್ಪುವುದು ಸಾಧ್ಯವಿಲ್ಲವೆಂದರು. ಮೀಸಲು ಸ್ಥಾನಗಳಿರುವ ಜಂಟಿ ಚುನಾವಣಾ ಕ್ಷೇತ್ರ ಪದ್ಧತಿಯಲ್ಲಿ ದಲಿತ ಅಭ್ಯರ್ಥಿಗಳು ಮತಕ್ಷೇತ್ರಗಳ ಬಹುಜನರ ದಾಕ್ಷಿಣ್ಯಕ್ಕೆ ಒಳಗಾಗುವ ಮತ್ತು ಓಟುಗಿಟ್ಟಿಸಲು ಅವರ ಪೂರ್ವಾಗ್ರಹಗಳಿಗೆ ಬಲಿಬೀಳುವ ಅಥವಾ ಬಹುಸಂಖ್ಯಾತ ಜಾತಿಯ ಸೂತ್ರದ ಬೊಂಬೆಗಳಾದವರು ಸ್ಥಾನಗಳನ್ನು ಆಕ್ರಮಿಸುವ ಸಾಧ್ಯತೆಗಳು ಇರಬಹುದು.

ಗಾಂಧೀಜಿಯವರ ಪ್ರಕಾರ ಪ್ರತ್ಯೇಕ ಚುನಾವಣಾಕ್ಷೇತ್ರಗಳು ಹಿಂದೂ ಧರ್ಮದಲ್ಲಿ ವಿಭಜನೆಯನ್ನು ತರುತ್ತವೆ. ಆದ್ದರಿಂದ ಅದನ್ನು ಒಪ್ಪಲು ಅವರು ತಯಾರಿರಲಿಲ್ಲ. ಗಾಂಧೀಜಿ ಹೀಗೆ ಘೋಷಿಸಿದರು : “ಅಸ್ಪೃಶ್ಯರ ವಿಷಯವೆಂಬುದು ನನಗೆ ಜೀವನದಷ್ಟೇ ಪ್ರಿಯವಾದುದು. ವಿಶ್ವದ ರಾಜ್ಯವೇ ಸಿಕ್ಕರೂ ನಾನು ಇದನ್ನು ಬಿಡೆನು. ಇದನ್ನು ತಡೆಯುವವನು ನಾನೊಬ್ಬನೇ ಆಗಿದ್ದರೂ ಸಹ ನಾನು ನನ್ನ ಸರ್ವಶಕ್ತಿಯನ್ನು ಉಪಯೋಗಿಸಿ ವಿರೋಧಿಸುತ್ತೇನೆ.” ಅವರ ಬೆದರಿಕೆ ಪೊಳ್ಳಲ್ಲ ಎಂಬುದನ್ನು ಆ ಮೇಲಿನ ಘಟನೆಗಳು ತೋರಿಸಿದವು.

ಎರಡನೆಯ ದುಂಡು ಮೇಜಿನ ಪರಿಷತ್ತಿನ ತರುವಾಯ, ಬ್ರಿಟಿಷ್ ಪ್ರಧಾನ ಮಂತ್ರಿ ರಾಮ್‌ಸೆಮ್ಯಾಕ್‌ಡೊನಾಲ್ಡ್ ಕೋಮುವಾರು ಐತೀರ್ಪು ಎಂದು ಕರೆಯುವ ತೀರ್ಪನ್ನು ನೀಡಿದರು. ಅದು 1932 ಆಗಸ್ಟ್ 17ರಂದು ಅಧಿಕೃತವಾಗಿ ಪ್ರಕಟಿಸಲ್ಪಟ್ಟಿತು. ಐತೀರ್ಪಿನ ಪ್ರಕಾರ ದಲಿತ ವರ್ಗಗಳಿಗೆ ಪ್ರತ್ಯೇಕ ಮೀಸಲು ಚುನಾವಣಾ ಕ್ಷೇತ್ರಗಳನ್ನು ಪ್ರದಾನ ಮಾಡಲಾಯಿತು. ಜೊತೆಗೆ ಅವರಿಗೆ ಎರಡು ಓಟು ನೀಡುವ ಹಕ್ಕಿನ ಹಕ್ಕನ್ನು ಒದಗಿಸಿತು.[9] ಇದರಿಂದಾಗಿ ಅವರು ತಮ್ಮದೇ ಪ್ರತಿನಿಧಿಗಳನ್ನು ಚುನಾಯಿಸಲು ಮತ್ತು ಸಾರ್ವತ್ರಿಕ ಚುನಾವಣೆಯಲ್ಲಿ ಮತ ನೀಡಲು ಸಾಧ್ಯವಿತ್ತು. ಸ್ಥಾನಗಳ ಮೀಸಲಾತಿ ಮತ್ತು ವಿಶೇಷ ಚುನಾವಣಾ ಸವಲತ್ತುಗಳು 20 ವರ್ಷಗಳ ನಂತರ ತಾನೇ ನಿಂತು ಹೋಗುತ್ತಿದ್ದವು. ಅದು

ಮುಸ್ಲಿಂ, ಸಿಖ್, ಯೂರೋಪಿಯನ್ ಮತ್ತು ಕ್ರಿಶ್ಚಿಯನ್ - ಇವರಿಗೆ ಪ್ರತ್ಯೇಕ ಚುನಾವಣಾ ಮಂಡಲಿಯನ್ನು ನೀಡಿತು. ಈ ತೀರ್ಪು ಭಾರತವನ್ನು ಸಂಪೂರ್ಣವಾಗಿ ಛಿದ್ರಗೊಳಿಸಿತು. ಈ ಕೋಮುವಾರು ತೀರ್ಪು ಘೋಷಿಸಲ್ಪಟ್ಟಾಗ ಗಾಂಧೀಜಿಯು ದಲಿತ ವರ್ಗಗಳಿಗೆ ಪ್ರತ್ಯೇಕ ಮತದಾನ ಮಂಡಳಿಗಳನ್ನು ರದ್ದುಪಡಿಸದಿದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಾಗಿ ಘೋಷಿಸಿದರು. ಉಪವಾಸ ಸತ್ಯಾಗ್ರಹವು 20ನೇ ಸೆಪ್ಟೆಂಬರ್ 1932ರಂದು ಆರಂಭಗೊಂಡು 27ನೇ ಸೆಪ್ಟೆಂಬರ್ 1932ರಂದು ಕೊನೆಗೊಂಡಿತು. ಸತ್ಯಾಗ್ರಹದಲ್ಲಿ ಗಾಂಧೀಜಿ ಅಸ್ಪೃಶ್ಯತೆಯ ಕಳಂಕದ ಎಲ್ಲಾ ಕುರುಹುಗಳು ಅಳಿಸಿಹೋಗುವ ತನಕ ನನ್ನ ಆತ್ಮದ ನೋವು ಹೋಗದು ಎಂದು ಹೇಳಿದರು. ಇಲ್ಲಿ ಎರಡು ವಿಷಯಗಳು ಸ್ಪಷ್ಟವಾಗಿದ್ದವು : ಗಾಂಧೀಜಿಯವರ ಜೀವನವನ್ನು ಉಳಿಸಬೇಕು ಮತ್ತು ಅವನ್ನು ಹಾಗೆ ಅಸ್ಪೃಶ್ಯತೆಯ ಕಳಂಕವನ್ನು ಹೋಗಲಾಡಿಸಬೇಕು.

ಹಿಂದೂ ಮುಖಂಡರ ಸಭೆಯು ಮುಂಬಯಿಯಲ್ಲಿ 19ನೇ ಸೆಪ್ಟೆಂಬರ್ 1932ರಂದು ನಡೆಯಿತು. ಪಂಡಿತ ಮದನ ಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಡಾ|| ಅಂಬೇಡ್ಕರ್ ಭಾಗವಹಿಸಿದ್ದರು. ಇದು ಮುಂದೆ ಎರಡು ದಿನಗಳ ಕಾಲ ನಡೆಯಿತು. ಅಂಬೇಡ್ಕರ್ ಮಹಾತ್ಮರ ಜೀವನವನ್ನು ಉಳಿಸುತ್ತಾರೆಯೋ, ಇಲ್ಲವೇ ಎಂದು ಇಡೀ ದೇಶ ಉಸಿರು ಬಿಗಿ ಹಿಡಿದು ಕಾದಿತ್ತು. ಎರಡೂ ಕಡೆ ಬಿರುಸಾದ ಚೌಕಾಸಿ ನಡೆಯಿತು.

21ನೇ ಸೆಪ್ಟೆಂಬರ್ ತೇಜ್‌ಬಹದ್ದೂರು ಸಪ್ರು, ಮೀಸಲು ಸಂಖ್ಯೆಯ ಜಾಗಗಳಿಗೆ ಪ್ರಥಮ ಮತ್ತು ದ್ವಿತೀಯ ಚುನಾವಣೆಗಳನ್ನು ನಡೆಸುವ ಯೋಜನೆಯನ್ನು ಮುಂದಿಟ್ಟರು. ಇದರ ಪ್ರಕಾರ ದಲಿತ ವರ್ಗಗಳು ಯಾವ ಕ್ಷೇತ್ರಭಾಗಕ್ಕೆ ಮೂವರು ಅಭ್ಯರ್ಥಿಗಳಿಗೆ ಕಡಿಮೆಯಿಲ್ಲದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಬೇಕು ಮತ್ತು ಈ ಮೂವರಲ್ಲಿ ಒಬ್ಬ ಅಭ್ಯರ್ಥಿಯನ್ನು ಹಿಂದೂ ಸವರ್ಣೀಯರು ಮತ್ತು ದಲಿತ ವರ್ಗಗಳ ಜಂಟಿ ಮತದಾರ ಮಂಡಲಿಯು ಆರಿಸಬೇಕು. ಅಂಬೇಡ್ಕರ್ ಈ ಪ್ರಸ್ತಾವವನ್ನು ಒಪ್ಪಿದರು. ಆದರೆ ಪ್ರಧಾನ ಮಂತ್ರಿಗಳ ನಿರ್ಣಯದಂತೆ 71 ಸ್ಥಾನ ಬದಲು 197 ಸ್ಥಾನಗಳನ್ನು ಕೊಡಬೇಕೆಂದರು. ಗಾಂಧೀಜಿ ಮೀಸಲು ಸ್ಥಾನಗಳ ವಿಭಜನೆಯ ಬಗ್ಗೆ ತಮ್ಮ ಸಂದೇಹ ವ್ಯಕ್ತಪಡಿಸಿದ್ದನ್ನು ಮತ್ತು ಪ್ರಥಮ ಹಾಗೂ ದ್ವಿತೀಯ ಚುನಾವಣಾ ಪದ್ಧತಿಯು ಎಲ್ಲಾ ಸ್ಥಾನಗಳಿಗೂ ಸಮಾನವಾಗಿರಬೇಕೇ ಹೊರತು ಕೆಲವಕ್ಕೆ ಮಾತ್ರವಲ್ಲ ಎಂದು ಹೇಳಿದ್ದನ್ನು ಹಿಂದೂ ಮುಖಂಡರು ಸಮ್ಮತಿಸಿದರು.

ಅಂಬೇಡ್ಕರರು ಗಾಂಧೀಜಿಯನ್ನು ಸ್ಥಳದಲ್ಲಿ ಭೇಟಿಯಾದರು. ಗಾಂಧೀಜಿಯಷ್ಟೇ ಏಕೆ, ವ್ಯಕ್ತಿನಿಷ್ಠವಾದ ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿರೋಧಿಸುವ ಅಷ್ಟನ್ನ [illegible] ಶಕ್ತಿ ಅವರಿಗಿದ್ದಿರಬೇಕು. ಬಹುಪಾಲು ಮಾತನ್ನು ಅಂಬೇಡ್ಕರರೇ ಆಡಿದರು. ಗಾಂಧೀಜಿ ನಿಶ್ಶಕ್ತರಾಗಿ ದಣಿದಿದ್ದರಿಂದ ಅವರ ಮಾತುಗಳನ್ನು ಬರೀ ಕೇಳಿಸಿಕೊಂಡರು. ಗಾಂಧೀಜಿ ಕೊನೆಯಲ್ಲಿ ಉತ್ತರಿಸಿದರು: "ನಿಮ್ಮ ಬಗ್ಗೆ ನನ್ನ ಪೂರ್ಣ ಸಹಾನುಭೂತಿಯಿದೆ. ಡಾಕ್ಟರ್, ನೀವು ಹೇಳಿದ ಬಹುಪಾಲು ವಿಷಯಗಳ ಬಗ್ಗೆ ನಾನು ನಿಮ್ಮೊಡನೇ ಇದ್ದೇನೆ. ನೀವು ನನ್ನ ಜೀವದ ಬಗ್ಗೆ ಆಸಕ್ತಿಯುಳ್ಳವರೆಂದು ಹೇಳುತ್ತೀರಲ್ಲವೆ?" ಅದಕ್ಕೆ ಅಂಬೇಡ್ಕರ್ "ಹೌದು, ಮಹಾತ್ಮರೆ, ನೀವು ನನ್ನ ಜನಗಳಿಗಾಗಿ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದಾದರೆ ನೀವು ಸಹ ನಮ್ಮ [illegible] ಆಗುವಿರಿ" ಎಂದರು. "ಒಳ್ಳೆಯದು, ಹಾಗಿದ್ದರೆ ಈ ಪರಿಸ್ಥಿತಿಯಲ್ಲಿ [illegible] ಮಾಡಬೇಕಾಗಿದ್ದೇನೆ ಎಂಬುದನ್ನು ತಿಳಿಯಿರಿ. ಹಾಗೆ [illegible] ನನ್ನ ಜೀವ ಉಳಿಸಿ. ಕೌನ್ಸಿಲ್‌ನಲ್ಲಿ ನಿಮ್ಮ ಜನರಿಗೆ [illegible] ನೀವು ಬಿಟ್ಟುಕೊಡಲು ಅವಕಾಶವಿಲ್ಲ ಎಂಬುದು ನನಗೆ ಗೊತ್ತು. ನಿಮ್ಮ [illegible] ಪದ್ಧತಿಯನ್ನು ಒಪ್ಪುತ್ತೇನೆ. ಆದರೆ ಅದರಲ್ಲಿರುವ ಒಂದು ಅಸಂಗತವನ್ನು ತೆಗೆದು ಹಾಕಬೇಕು. ನೀವು ಈ [illegible] ಎಲ್ಲಾ ಸ್ಥಾನಗಳಿಗೆ ಅನ್ವಯಿಸಬೇಕು. ನೀವು [illegible] ಅಸ್ಪೃಶ್ಯ [illegible] ನಾವೆಲ್ಲಾ ಒಂದೇ [illegible] ಬೇರೆಯಾಗಿ ಒಡೆದು ಹೋಗುವುದನ್ನು [illegible] ಸಿದ್ಧನಾಗಿದ್ದೇನೆ."

ಎಲ್ಲಾ ಸ್ಥಾನಗಳಿಗೂ ಪ್ರಾಥಮಿಕ ಚುನಾವಣೆಗಳು ಇರಲೆಂಬ ಗಾಂಧೀಜಿಯ ಸಲಹೆಯನ್ನು ಅಂಬೇಡ್ಕರ್ ಒಪ್ಪಿದರು. [illegible]ಗಳ ಸಂಖ್ಯೆ, ಪ್ರಾಥಮಿಕ ಚುನಾವಣೆ, ಸ್ಥಾನಗಳ ಮೀಸಲಾತಿ [illegible] ವಿವಿಧ ವ್ಯವಸ್ಥೆಗಳು, ಮುಕ್ತಾಯಗೊಳ್ಳುವ ಕಾಲಾವಧಿ ನಿರ್ಣಯ ಮಾಡಬೇಕಾದ ಇಂಥ ಮುಖ್ಯ ವಿಷಯಗಳನ್ನು ಕುರಿತು ಸಮಾಲೋಚನೆ ಮುಂದುವರಿಯಿತು. ಪ್ರಥಮ ಚುನಾವಣಾ ಪದ್ಧತಿಯು ಹತ್ತು ವರ್ಷಗಳ ಕೊನೆಯಲ್ಲಿ ತಾನಾಗೇ ಕೊನೆಗೊಳ್ಳಬೇಕೆಂದು ಅಂಬೇಡ್ಕರ್‌ರ ಯೋಜನೆ ಹೇಳಿದೆ. ಆದರೆ ಮುಂದಿನ ಹತ್ತು ವರ್ಷಗಳ ಕೊನೆಯಲ್ಲಿ ಮೀಸಲು ಸ್ಥಾನಗಳ ಬಗ್ಗೆ ದಲಿತ ವರ್ಗಗಳ ಪ್ರಜಾನಿರ್ಧಾರವು ತೀರ್ಮಾನಿಸಬೇಕಾಗುತ್ತದೆ ಎಂದಿದೆ. ಪ್ರಜಾನಿರ್ಧಾರವೆಂಬುದು ತೊಡಕಿನ ಸಮಸ್ಯೆ. ಮುಂದಿನ ಇಪ್ಪತ್ತು ವರ್ಷಗಳಲ್ಲಿ ಅಸ್ಪೃಶ್ಯತೆ ತೊಲಗುತ್ತದೆ ಎಂಬ ನಂಬಿಕೆಗೆ ಇಂಬುಕೊಡಲು ಅಂಬೇಡ್ಕರ್ ಒಪ್ಪಲಿಲ್ಲ. ಐದು ವರ್ಷಗಳ ಕೊನೆಯಲ್ಲಿ ಪ್ರಜಾನಿರ್ಧಾರವು ಇರಲೆಂದು ಗಾಂಧೀಜಿ

ಅಪೇಕ್ಷಿಸಿದ್ದರು. ಯಾವ ನಿರ್ಣಯಕ್ಕೂ ಬರದೆ ಸಭೆ ಕೊನೆಗೊಂಡಿತು. ಅಂಬೇಡ್ಕರ್ ಮಾರನೇ ದಿನವೆ ಮಧ್ಯಾಹ್ನ ಗಾಂಧೀಜಿಯನ್ನು ಕಂಡರು. ಗಾಂಧೀಜಿ ಅಂತಿಮ ತೀರ್ಮಾನದ ಧ್ವನಿಯಲ್ಲಿ ಹೀಗೆ ಹೇಳಿದರು. "ಅದೋ ನೀವು ಬಂದಿರಿ, ನನ್ನ ಬಾಳಿನ ಐದು ವರ್ಷ". ಪ್ರಜಾಭಿಪ್ರಾಯದ ಪ್ರಶ್ನೆಯನ್ನು ಮುಂದೆ ಪರಸ್ಪರ ಒಪ್ಪಂದದ ಮೇಲೆ ತೀರ್ಮಾನಿಸಬಹುದು ಎಂಬ ಸಿ. ರಾಜಗೋಪಾಲಾಚಾರಿಯವರ ಸಲಹೆಯಂತೆ ಅವರು ಪರಸ್ಪರ ಬೀಳ್ಕೊಂಡರು. ಉಪವಾಸ ಸತ್ಯಾಗ್ರಹದ ಐದನೇ ದಿನ 24ನೇ ದಿನಾಂಕ ಶನಿವಾರ ಸಂಜೆ 5ಕ್ಕೆ ಎಲ್ಲರ ಸಮಕ್ಷಮದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಗಾಂಧೀಜಿ ಅದಕ್ಕೆ ಸಹಿ ಮಾಡಲಿಲ್ಲ. ಅಂಬೇಡ್ಕರ್ ದಲಿತ ವರ್ಗದ ಪರವಾಗಿ ಸಹಿ ಮಾಡಿದರು. ಗಾಂಧೀಜಿಯ ಉಪವಾಸವು ಅಂಬೇಡ್ಕರ ಬಗ್ಗೆ ವ್ಯಯಕ್ತಿಕವಾದ ದ್ವೇಷಭಾವನೆ ಹಾಗೂ ವೈರತ್ವ ಉಂಟು ಮಾಡಿದರೂ, ಇಡೀ ರಾಷ್ಟ್ರದಲ್ಲಿ ಅಸ್ಪೃಶ್ಯತೆ ವಿರುದ್ಧ ತೀವ್ರವಾದ ಅರಿವನ್ನುಂಟು ಮಾಡಿತು. ಅಂಬೇಡ್ಕರ್ ದಲಿತ ವರ್ಗದ ನಿಜವಾದ ನಾಯಕ ಎಂದು ಪರಿಗಣಿತವಾದರು. 1932 ಸೆಪ್ಟೆಂಬರ್ 26ರಂದು ಪೂನಾ ಒಪ್ಪಂದವನ್ನು ಬ್ರಿಟಿಷ್ ಸರ್ಕಾರವು ಒಪ್ಪಿದ ನಂತರ ಗಾಂಧೀಜಿ ಉಪವಾಸ ಸತ್ಯಾಗ್ರಹ ನಿಲ್ಲಿಸಿದರು.

ಪೂನಾ ಒಪ್ಪಂದದಲ್ಲಿ ದಲಿತ ವರ್ಗಗಳು 148 ಸ್ಥಾನಗಳನ್ನು ಪಡೆದವು. ಅಂದರೆ ಬ್ರಿಟಿಷ್ ಪ್ರಧಾನಮಂತ್ರಿ ನೀಡಿದ ಎರಡರಷ್ಟಕ್ಕಿಂತ ಹೆಚ್ಚು ಸ್ಥಾನಗಳು ದೊರೆತಂತಾಯಿತು. ಆದರೆ ಪ್ರತ್ಯೇಕ ಮತದಾರ ಮಂಡಲ ರದ್ದಾದವು ಮತ್ತು ದಲಿತ ವರ್ಗಗಳು ಸಾರ್ವಜನಿಕ ಮತದಾರರ ಪಟ್ಟಿಯಲ್ಲಿ ತಾವು ಸೇರ್ಪಡೆಯಾಗಬೇಕಾಯಿತು. ಅವರು ಚುನಾಯಕ ಗಣಗಳನ್ನು ರೂಪಿಸಿಕೊಳ್ಳಬೇಕು. ಅದು ಮೊದಲಿಗೆ ಪ್ರಥಮ ಚುನಾವಣೆಯಲ್ಲಿ ಪ್ರತಿ ಸ್ಥಾನಕ್ಕೆ ನಾಲ್ವರು ಅಭ್ಯರ್ಥಿಗಳನ್ನು ಚುನಾಯಿಸಬೇಕು. ಈ ನಾಲ್ಕು ಜನ ಅಭ್ಯರ್ಥಿಗಳು ಸಾರ್ವತ್ರಿಕ ಚುನಾವಣೆಗೆ ಅಭ್ಯರ್ಥಿಗಳಾಗುತ್ತಾರೆ ಮತ್ತು ಮತ ನೀಡಿಕೆಯು ದಲಿತ ವರ್ಗ ಮತ್ತು ಇತರ ಚುನಾವಣಾ ಕ್ಷೇತ್ರಕ್ಕೂ ವಿಸ್ತರಿಸಲ್ಪಡುತ್ತದೆ.

ಪ್ರತ್ಯೇಕ ಮತದಾರ ಮಂಡಳಿಯ ಹಕ್ಕನ್ನು ತಾರ್ಕಿಕ ಪರಿಣಾಮಕ್ಕೆ ಒಯ್ಯಲು ಅಂಬೇಡ್ಕರ್ 24ನೇ ಮಾರ್ಚ್ 1947ರಲ್ಲಿ ಒಪ್ಪಿಸಿದ ರಾಜ್ಯಗಳ ಮತ್ತು ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ ಅವರ ಕೋರಿಕೆ ಪತ್ರದಲ್ಲಿ ಮತ್ತು ವಿಧಿಗಳಲ್ಲಿ ಅದನ್ನು ಪುನರುಚ್ಚರಿಸಿದರು. ಅವರು ಈ ಕರಡಿನಲ್ಲಿ ಪ್ರತ್ಯೇಕ

9627-4

ಮತದಾರ ಮಂಡಳಿ ಪದ್ಧತಿಯನ್ನು ರದ್ದು ಮಾಡಬೇಕೆಂದು ಒತ್ತಾಯ ಮಾಡಿದ್ದರು. ಪೂನಾ ಒಪ್ಪಂದದ ನಂತರ 15 ವರ್ಷಗಳು ಕಳೆದವು. ಆದರೆ ಪರಿಶಿಷ್ಟ ಜಾತಿಗಳ ಸಮುದಾಯ ಹೆಚ್ಚು ಬದಲಾವಣೆ ಹೊಂದಲಿಲ್ಲ. ಸ್ವಾತಂತ್ರ್ಯದ ಅರುಣೋದಯದಲ್ಲಿ ಹಾಗೂ ದೇಶ ವಿಭಜನೆಯಲ್ಲಿ ದೇಶ ಅನುಭವಿಸಿದ ರಕ್ತಪಾತದ ಸಂದರ್ಭಕ್ಕೆ ಮುಂಚೆ ಆ ಕೋರಿಕೆ ಪತ್ರವನ್ನು ಒಪ್ಪಿಸಲಾಯಿತು. ಪ್ರತ್ಯೇಕ ಮತದಾರ ಮಂಡಳಿ ಪದ್ಧತಿಯು ಜಾತಿ ವೈಷಮ್ಯಗಳನ್ನು ಈ ಹಿಂದೆ ಅಪಾಯದ ಮಟ್ಟಕ್ಕೆ ಮುಟ್ಟಿಸುವಷ್ಟು ತೀಕ್ಷ್ಣಗೊಳಿಸಿದವು ಮತ್ತು ಒಂದು ಆರೋಗ್ಯಕರ ರಾಷ್ಟ್ರಜೀವನದ ಅಭಿವೃದ್ಧಿಗೆ ಮುಖ್ಯ ಅಡಚಣೆಯಾದವು ಎಂಬುದು ಸಾಬೀತಾಯಿತು. ಹೊಸ ಸಂವಿಧಾನದಲ್ಲಿ ಪ್ರತ್ಯೇಕ ಮತದಾರ ಮಂಡಳಿ ಪದ್ಧತಿ ರದ್ದಾಗಿದೆ.

ಏನೇ ಆದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲು ಸ್ಥಾನಗಳಿರುವುದು ಮುಂದುವರಿಯಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗಿರುವ ಈ ಮೀಸಲಾತಿಯು ಹತ್ತು ವರ್ಷಗಳಾದ ಮೇಲೆ ಕೊನೆಗೊಳ್ಳಬೇಕೆಂದು ಆವೇಶದಿಂದ ವಾದಿಸುವ ಸದಸ್ಯರ ಬಗ್ಗೆ ಅಂಬೇಡ್ಕರ್ ಆತಂಕವಾಡಿದರು. ಅವರು ಹೀಗೆಂದರು : "ಎಡ್ಮಂಡ್ ಬರ್ಕ್‌ನ ಮಾತಿನಲ್ಲಿ, ನಾನು ಹೇಳಲು ಇಚ್ಛಿಸುವುದೇನೆಂದರೆ ಮಹಾನ್ ಸಾಮ್ರಾಜ್ಯಗಳ ಮತ್ತು ಅಲ್ಪ ಮನಸ್ಸುಗಳ ಒಡನಾಟವು ಸಲ್ಲ."

ಮೀಸಲಾತಿ ಅವಧಿಯನ್ನು ಕುರಿತ ಸಂವಿಧಾನದ 334ನೇ ಅನುಚ್ಛೇದದ ಅವಧಿಯನ್ನು ವಿಸ್ತರಿಸುವ ಬಗ್ಗೆ ಮೇಲಿಂದ ಮೇಲೆ ತಿದ್ದುಪಡಿಯಾಗಿರುವುದನ್ನು ನೋಡಿದರೆ ಅಂಬೇಡ್ಕರ್ ನಿಲುವು ಸರಿಯೆನಿಸುತ್ತದೆ. 1990 ಜನವರಿ 25ರಂದು ರಚಿಸಲಾದ ಇತ್ತೀಚಿನ ಸಂವಿಧಾನ (ಅರವತ್ತೆರಡನೆಯ ತಿದ್ದುಪಡಿ) ಅಧಿನಿಯಮವು ಸ್ಥಾನಗಳ ಮೀಸಲಾತಿಯು ಸಂವಿಧಾನದ ಪ್ರಾರಂಭದಿಂದ 50 ವರ್ಷಗಳವರೆಗೆ ಮುಂದುವರಿಯಬೇಕೆಂದು ವ್ಯವಸ್ಥೆ ಮಾಡುತ್ತದೆ.

ದೇಶದ ರಾಜಕೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಪ್ರತಿನಿಧಿಗಳು ಇರುವುದರಿಂದ ಪರಿಶಿಷ್ಟ ಜಾತಿಯ ಸದಸ್ಯರ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯ ಮೇಲೆ ಈವರೆಗೂ ಏನೂ ಪ್ರಭಾವ ಉಂಟಾಗಿಲ್ಲ. ಸಂವಿಧಾನದ 15(4), 16(4), 46, 330, 332 ಮತ್ತು 335ನೇ ಅನುಚ್ಛೇದಗಳ ವಿಶೇಷ ಉಪಬಂಧಗಳನ್ನು ನೀಡಿದ್ದರೂ ಪರಿಶಿಷ್ಟ ಜಾತಿಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿವೆ. ಅವರೆಲ್ಲಾ ಸಾಮಾಜಿಕವಾಗಿ,

ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಸಮಾಜದ ಕೆಳಸ್ತರದಲ್ಲೇ ಮುಂದುವರಿದಿದ್ದಾರೆ. ಸಮಾನ ಅವಕಾಶ ಮತ್ತು ಸಮಾನ ಸ್ಥಾನಮಾನವೆಂಬುವು ಅವರಿಗೆ ದೂರವೇ ಉಳಿದಿದೆ. ಅವರ ಮೇಲಣ ಘೋರ ಕೃತ್ಯಗಳು ಕುಗ್ಗದೆ ಮುಂದುವರಿದಿವೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಅವರಿಂದ ದೂರದ ಕನಸಾಗಿಯೇ ಉಳಿದಿದೆ. ಸ್ವಾತಂತ್ರ್ಯ ಸಮಾನತೆ ಮತ್ತು ಸೋದರತ್ವಗಳು ಅವರಿಗೆ ಟೊಳ್ಳು ಘೋಷಣೆಗಳಾಗಿವೆ.

ಅಂಬೇಡ್ಕರರು ಹತಾಶರಾಗಿ ನಿಧನ ಹೊಂದಿದರು. ಸಂವಿಧಾನದ ಮತ್ತು ಹಿಂದೂ ಕೋಡ್ ಮಸೂದೆಯ ವೇದಿಕೆಯ ಮೇಲೆ ಮನುಸ್ಮೃತಿಯನ್ನು ಸುಡಲು ಮಾಡಿದ ಅವರ ಪ್ರಯತ್ನವೂ ವಿಫಲವಾಯಿತು. ಇಂದು ಎಂದಿಗಿಂತಲೂ ಆಳವಾಗಿ ಕೋಮುವಾರು ಮತ್ತು ಜಾತೀಯ ಕಂದರಗಳು ಮತ್ತಷ್ಟು ಆಳವಾಗಿರುವುದನ್ನು ಕಂಡು ಎಷ್ಟು ನೊಂದುಕೊಳ್ಳುತ್ತಿದ್ದರೋ? 1929ರಷ್ಟು ಹಿಂದೆಯೇ ಅಂಬೇಡ್ಕರ್ ಹೀಗೆ ಬರೆದಿದ್ದರು : "ಇವೊತ್ತಿನ ಬಹಳ ಮುಖ್ಯವಾದ ಅಗತ್ಯವೆಂದರೆ ಜನಸಮುದಾಯದಲ್ಲಿ ಅಖಂಡ ರಾಷ್ಟ್ರೀಯ ಭಾವನೆಯನ್ನು ಮೂಡಿಸುವುದು. ಅವರು ಮೊದಲಿಗೆ ತಾವು ಭಾರತೀಯರು, ಹಿಂದೂಗಳು, ಮುಸ್ಲಿಮರು ಅಥವಾ ಸಿಂಧಿಗಳು ಅನಂತರವೆಂದಲ್ಲ; ಮೊದಲಿಗೆ ಭಾರತೀಯರು ಮತ್ತು ಅನಂತರವೂ ಭಾರತೀಯರು ಎಂಬ ಭಾವನೆ ಮೂಡಿಸುವುದು" ಈ ಮಾತುಗಳು ಸ್ವತಂತ್ರ ಭಾರತದಲ್ಲಿ ಈ ದಿನ ಹೆಚ್ಚು ಪ್ರಸ್ತುತವೆನಿಸಿದೆ.

ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳನ್ನು ಬಲಗೊಳಿಸಿ ಸಂಘಟಿತ ಬೃಹತ್ ರಾಷ್ಟ್ರವಾಗಿ ಮುಂದುವರಿಯುವಂತೆ ಮಾಡಲು ಭಾರತಕ್ಕೆ ಇನ್ನೊಬ್ಬ ಅಂಬೇಡ್ಕರರ ಅಗತ್ಯವಿದೆ.

# ಡಾ|| ಬಿ. ಆರ್. ಅಂಬೇಡ್ಕರ್

** ಎಸ್. ನಿಜಲಿಂಗಪ್ಪ*

ಡಾ|| ಅಂಬೇಡ್ಕರರು ಭಾರತದ ಸ್ವಾತಂತ್ರ್ಯ ಪೂರ್ವ ಮತ್ತು ಅನಂತರ ಕಾಲಮಾನದ ಭಾರತೀಯ ಸಾರ್ವಜನಿಕ ಜೀವನದಲ್ಲಿ ಒಬ್ಬ ಅಪರೂಪದ ಮತ್ತು ಅಸಮಾನ್ಯ ನಾಯಕರಾಗಿದ್ದರು. ಅವರು ಹರಿಜನ ಕುಟುಂಬದಲ್ಲಿ ಜನಿಸಿ, ಸಾಮಾಜಿಕ ತಾರತಮ್ಯಕ್ಕೆ ಬಲಿಯಾದರೂ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದರು; ಭಾರತದ ಮತ್ತು ವಿದೇಶದ ವಿಶ್ವವಿದ್ಯಾಲಯಗಳಿಂದ ಅತ್ಯುನ್ನತ ಪದವಿಗಳನ್ನು ದೊರಕಿಸಿಕೊಂಡರು. ಅವರಲ್ಲಿ ಸೂಕ್ಷ್ಮಸಂವೇದನಾಶೀಲತೆ, ಎದೆಗುಂದದ ದಿಟ್ಟತನ, ವಿಚಾರಶೀಲತೆ, ಅನುಪಮ ಬೌದ್ಧಿಕಶಕ್ತಿ ಮತ್ತು ಸಾರ್ವಜನಿಕ ಹಾಗೂ ರಾಜಕೀಯ ಸಮಸ್ಯೆಗಳಿಗೆ ಸ್ವತಂತ್ರವಾಗಿ ಪರಿಹಾರ ಕಾಣುವ ಸಾಮರ್ಥ್ಯ ,- ಇವು ಇದ್ದವು. ದಲಿತರನ್ನು ಹಿಂದೂಗಳು ನಡೆಸಿಕೊಳ್ಳುತ್ತಿದ್ದ ರೀತಿ ಅವರ ಮನಸ್ಸನ್ನು ಕಲಕಿತು. ಪರಿಣಾಮವಾಗಿ ಅವರು ಅಂಥ ತುಳಿತಕ್ಕೊಳಗಾದ ಜನರ ಬಗ್ಗೆ ಕಾಳಜಿ ವಹಿಸಿದರು. ದಲಿತರು ಹಳ್ಳಿಗಳೊಳಗೆ ವಾಸಿಸುವಂತಿರಲಿಲ್ಲ; ಬಡತನದಲ್ಲಿ ಕನಿಷ್ಠ ಬದುಕ ನಡೆಸಬೇಕಿತ್ತು. ಇವರನ್ನು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆದರೂ ಅವರು ಅಸ್ಪೃಶ್ಯರೆನಿಸಿದ್ದರು. ಇವರ ಬಗ್ಗೆ ಹೆಚ್ಚು ಕಾಳಜಿಯುಳ್ಳ ಗಾಂಧೀಜಿ ಇವರನ್ನು "ಹರಿಜನ" ಎಂದು ಕರೆದರು. ಇದು ಕಳೆದ ನಾಲ್ಕೈದು ದಶಕಗಳಲ್ಲಿ ಜನಪ್ರಿಯ ಹೆಸರಾಯಿತು. ಅಂಬೇಡ್ಕರರು ತಾವೇ ಹರಿಜನರಾಗಿದ್ದರು. ಅವರ ಸಮಸ್ಯೆಗಳನ್ನು ನಿಕಟವಾಗಿ ಬಲ್ಲವರು. ಹಿಂದೂ ಸಮಾಜ ಕಳೆದ ಸಾವಿರಾರು ವರ್ಷಗಳಿಂದ ಪೂಜ್ಯವೆನ್ನುವ ಧರ್ಮಶಾಸ್ತ್ರಗಳ ಆಧಾರದ ಮೇಲೆ ಹರಿಜನರನ್ನು ಕೀಳಾಗಿ ಕಾಣುತ್ತಾ ಬಂದಿರುವುದನ್ನು ನೋಡಿದ ಅಂಬೇಡ್ಕರ್ ಈ ಪೈಶಾಚಿಕ, ಅಮಾನವೀಯ ಹಾಗೂ ಹೀನೈಸುವ ಆಚರಣೆಗಳ ಬಗ್ಗೆ ಸಿಡಿಮಿಡಿಗೊಂಡರು ಮತ್ತು ಅದನ್ನು ಟೀಕಿಸತೊಡಗಿದರು. ತಾರತಮ್ಯದ ಹಿಂಸೆಗೆ ಒಳಗಾದ ತಮ್ಮವರ ಅನುಭವದ ಜೊತೆಗೆ, ವಿಚಾರವಾದಿಯಾದ ಅಂಬೇಡ್ಕರ್ ಹಿಂದೂ ಧರ್ಮ ಗ್ರಂಥಗಳ ಹಾಗೂ ರಾಮಾಯಣ ಮತ್ತು ಮಹಾಭಾರತಗಳ ಬಗ್ಗೆ ತಮ್ಮ ವಿಚಿಕಿತ್ಸಕ ದೃಷ್ಟಿಹರಿಸಿದರು. ಪ್ರಪಂಚದ ಸಾಹಿತ್ಯದಲ್ಲಿ ಅಪ್ರತಿಮವೆನಿಸಿದ ಈ• ಎರಡು ಮಹಾಕಾವ್ಯಗಳ ಬಗ್ಗೆ ಬರೆದರು. ಅವರ

* ಶ್ರೀ ಎಸ್. ನಿಜಲಿಂಗಪ್ಪ : ಸಂವಿಧಾನ ರಚನಾ ಸಭೆಯ ಸದಸ್ಯರು ಮತ್ತು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದರು.

ಅಭಿಪ್ರಾಯಗಳು ಪೂರ್ವಗ್ರಹಿಕೆಯಿಂದ ಕೂಡಿದ್ದು ಅಂಗೀಕಾರಾರ್ಹವಲ್ಲದಿದ್ದರೂ ಪರಿಶೀಲನೆಗೆ ಅರ್ಹವಾಗಿವೆ.

ಹರಿಜನರನ್ನು ಹಿಂದೂ ಸಮಾಜದೊಡನೆ ಸೇರಿಸಬೇಕೆ ಅಥವಾ ಬೇಡವೆ ಎಂಬ ವಿಚಾರದಲ್ಲಿ ಗಾಂಧೀಜಿಯವರೊಡನೆ ಅಂಬೇಡ್ಕರ್ ಭಿನ್ನಾಭಿಪ್ರಾಯ ಹೊಂದಿದ್ದರು. ಪರಿಣಾಮ ಗಾಂಧೀಜಿ ಆಮರಣಾಂತ ಉಪವಾಸ ಮಾಡಿದರು. ಆದರೆ ಅದೃಷ್ಟವಶಾತ್ ಜೈಪು (ಎಂ.ಆರ್. ಜಯಕರ್ ಮತ್ತು ತೇಜ್ ಬಾದುರ್ ಸಪ್ರು)ವೆಂಬ ಒಪ್ಪಂದವಾಯಿತು. ಈ ಭಿನ್ನಾಭಿಪ್ರಾಯಗಳ ವಿಚಾರದಲ್ಲಿ ಒಮ್ಮತಕ್ಕೆ ಬರುವುದು ಸಾಧ್ಯವಲ್ಲದಿದ್ದರೂ ಅವು ಪರಿಶೀಲನೆಗೆ ಅರ್ಹವಾಗಿದೆ. ಆ ಒಪ್ಪಂದವನ್ನು ಕಾರ್ಯರೂಪಕ್ಕೆ ತಂದ ರೀತಿ ಅಂಬೇಡ್ಕರ್ ಅವರಿಗೆ ತೃಪ್ತಿ ತರಲಿಲ್ಲ. ಅವರು ತುಂಬಾ ಸೂಕ್ಷ್ಮ ಪ್ರವೃತ್ತಿಯವರಾಗಿದ್ದರು.

ಇವೆಲ್ಲವುಗಳಿಂದಾಗಿ ಅಂಬೇಡ್ಕರ್‌ರು ಶಾಂತಿ ದೊರಕಿಸಿಕೊಳ್ಳಲು ಬೌದ್ಧರಾಗಿ ಮತಾಂತರ ಹೊಂದಲು ತೀರ್ಮಾನಿಸಿದರು. ಅಸಮಾನತೆ ಮತ್ತು ತಾರತಮ್ಯಗಳಿಂದ ಮುಕ್ತವಾದ ಬೌದ್ಧತತ್ತ್ವವನ್ನು ಅವರು ಅಂಗೀಕರಿಸಿದರು. ಅವರ ಅನುಯಾಯಿಗಳು ಸಾಕಷ್ಟು ಸಂಖ್ಯೆಯಲ್ಲಿ ಬೌದ್ಧಮತಾವಲಂಬಿಗಳಾದರು. ಕೆಲವು ಹರಿಜನರಲ್ಲಿ ಇನ್ನೂ ಆ ಮನೋಭಾವ ಕೆಲಸ ಮಾಡುತ್ತಿರುವಂತೆ ಕಾಣುತ್ತದೆ. ಭಾರತ ಸರ್ಕಾರವು ರಾಜ್ಯ ನೀತಿಯ ನಿರ್ದೇಶಕ ತತ್ತ್ವಗಳಲ್ಲಿನ ಅನೇಕ ಪ್ರಮುಖ ಅಂಶಗಳನ್ನು ಕಾರ್ಯಗತಗೊಳಿಸುವುದರಲ್ಲಿ ಸೋತಿದೆಯಾದರೂ, ಭಾರತ ಸಂವಿಧಾನವನ್ನು ಅನುಸರಿಸಿದ ಮೇಲೆ ಈ 43 ವರ್ಷಗಳ ಅವಧಿಯಲ್ಲಿ ಏನೇನು ನಡೆದಿದೆ ಎಂಬುದನ್ನು ಗಮನಿಸಿದಾಗ ಮತಾಂತರದ ಅಗತ್ಯವಿಲ್ಲ ಎನಿಸುತ್ತದೆ.

ಒಂದು ವಿಚಾರ ಸ್ಪಷ್ಟ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಥವಾ ಬೇರೆ ಯಾವುದೇ ಕ್ಷೇತ್ರದಲ್ಲಿಯಾದರೂ ತಾರತಮ್ಯಭೇದ ಮತ್ತು ಅಸಮಾನತೆ ತೋರುವುದರ ಬಗ್ಗೆ ಅಂಬೇಡ್ಕರ್ ತೀವ್ರವಾಗಿ ವಿರೋಧಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಅವರು ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದ ಕಳಚೂರ್ಯ ದೊರೆ ಬಿಜ್ಜಳನ ಪ್ರಧಾನ ಮಂತ್ರಿಯಾಗಿದ್ದು ಮತ್ತು ಬಹುಶಃ ಎಲ್ಲಾ ಕಾಲಕ್ಕೂ ಕ್ರಾಂತಿಕಾರಿಯಾಗಿ ಉಳಿದಿರುದಬಸವೇಶ್ವರರನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಎಂಟು ಶತಮಾನಗಳ ಹಿಂದೆಯೇ ಅವರು ಆ ದೇವ ಈ ದೇವ ಎನ್ನದೆ ಏಕದೇವೋಪಾಸನೆಯನ್ನು ಎತ್ತಿಹಿಡಿದನು, ಜಾತಿಗಳ ನಡುವಣ ತಾರತಮ್ಯಗಳನ್ನು ಕಿತ್ತೊಗೆದನು. ಸನಾತನ ಧರ್ಮ ಹೇಳುತ್ತದೆಂದು ಅವಿಚಾರದಿಂದ

ಇಂಥ ತಾರತಮ್ಯಭಾವ ತೋರುತ್ತಿದ್ದುದಲ್ಲದೆ, ಹೆಣ್ಣನ್ನು ಕೀಳಾಗಿ ನೋಡುತ್ತಿದ್ದು ಅವರಿಗೆ ಯಾವ ಹಕ್ಕು ಇಲ್ಲದೆ ಹುಟ್ಟಿನಿಂದ ಸಾವಿನವರೆಗೆ ಗಂಡಸರ ಗುಲಾಮರಂತೆ ಜೀವಿಸಬೇಕಿತ್ತು. ಜಾತಿಗಳನ್ನು ಅವರ ಕಸುಬುಗಳಿಂದ ವಿಭಜಿಸಲಾಗಿತ್ತು. ಸಮಾಜದಲ್ಲಿ ಪುರೋಹಿತರ ಸ್ಥಾನ ಮೇಲಿತ್ತು ಮತ್ತು ಕಮ್ಮಾರ, ಚಮ್ಮಾರರ ಸ್ಥಾನ ಕೆಳಗಿತ್ತು. ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಗಿತ್ತು. ಇದರಿಂದ ಬೇಸತ್ತ ಬಸವೇಶ್ವರ ಧಾರ್ಮಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಯಾವುದೇ ತಾರತಮ್ಯವೆನಿಸದ, ಶೋಷಣೆರಹಿತವಾದ ಸಮಾಜವನ್ನು ಕಟ್ಟಿದರು. ಅಲ್ಲಿ ಪ್ರತಿಯೊಬ್ಬನೂ ಯಾವುದಾದರೂ ವೃತ್ತಿಯನ್ನು (ಕಾಯಕ) ಹಿಡಿದು ಬೆವರು ಸುರಿಸಿ ದುಡಿಯಬೇಕಿತ್ತು, ದುಡಿದು ತಿನ್ನಬೇಕಿತ್ತು. ಗಳಿಸಿದ್ದರಲ್ಲಿ ಸ್ವಲ್ಪ ಭಾಗವನ್ನು ಸಾಮಾಜಿಕ ಉದ್ದೇಶಕ್ಕಾಗಿ ಮೀಸಲಿಡಬೇಕಿತ್ತು. ಒಬ್ಬನೇ ದೈವ. ಅವನನ್ನು ಪೂಜಿಸುವುದು ದೇಗುಲದಲ್ಲಿ, ಪುರೋಹಿತನ ಮೂಲಕವಲ್ಲ, ತಾವೇ ಪೂಜಿಸುವುದು. ಮಹಿಳೆಯರೂ ಸಹ ಎಲ್ಲ ರೀತಿಯಲ್ಲಿ ಪುರುಷರಿಗೆ ಸಮಾನರು. ಎಲ್ಲಾ ಜಾತಿಯ ಸ್ತ್ರೀ ಪುರುಷರು ಯಾವುದೇ ವೃತ್ತಿಯನ್ನು ಕೈಗೊಂಡಿರಲಿ, ಸಂಜೆಯಾಯಿತೆಂದರೆ ಗೋಷ್ಠಿಯಲ್ಲಿ ಸೇರುತ್ತಿದ್ದರು. ಅಲ್ಲಿ ಧಾರ್ಮಿಕ, ಅಧ್ಯಾತ್ಮಿಕ ಮುಂತಾದ ಎಲ್ಲಾ ವಿಷಯಗಳನ್ನು ಚರ್ಚಿಸುತ್ತಿದ್ದರು. ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ಮಂಡಿಸುತ್ತಿದ್ದರು. ಪರಿಣಾಮವಾಗಿ ಪದ್ಯದಂತೆ ಕಾಣುವ 'ವಚನ'ವೆಂಬ ಕಾವ್ಯ ಪ್ರಕಾರದಲ್ಲಿ ಅತ್ಯುನ್ನತ ತತ್ವಗಳನ್ನು ಸರಳವಾದ ಪ್ರಾದೇಶಿಕ ಆಡುನುಡಿಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ಹೇಳಿದರು. ವಿಶ್ವಸಾಹಿತ್ಯದಲ್ಲಿ ಅಪೂರ್ವವೆನಿಸುವ ಮೌಲ್ಯದ ಈ ವಚನ ಸಾಹಿತ್ಯ ಇಂದಿಗೂ ಲಭ್ಯ. ಅದು ಕನ್ನಡ ಭಾಷೆಯಲ್ಲಿದೆ. ಬಸವೇಶ್ವರರು ತಮ್ಮ ಕಾಲಕ್ಕಿಂತ ತೀರಾ ಮುಂದಿದ್ದು ಪುರೋಗಾಮಿಗಳೆನಿಸಿದ್ದರು. ಸಾಮಾಜಿಕ ನ್ಯಾಯದ ತನ್ನ ತತ್ವವನ್ನು ಆತ ಕೃತಿಗಿಳಿಸಿದ್ದು ಬ್ರಾಹ್ಮಣ ಕನ್ಯೆ ಮತ್ತು ಹರಿಜನ ಹುಡುಗನ ಮದುವೆಯ ಮೂಲಕ. ಇದರ ಫಲ ಅಶಾಂತಿ. ಅಲ್ಲಿ ಕ್ರಾಂತಿಯೇ ನಡೆದು ಹೋಯಿತು. ಡಾ|| ಅಂಬೇಡ್ಕರ್ ಈ ವಿಚಾರಗಳನ್ನು ಸಂಪೂರ್ಣವಾಗಿ ಒಪ್ಪಿದ್ದರು ಮತ್ತು ಈ ಸಮಾಜ ಸುಧಾರಕನ ಬಗ್ಗೆ ಮೆಚ್ಚಿಗೆ ಹೊಂದಿದ್ದಲ್ಲಿ ಆಶ್ಚರ್ಯವಿಲ್ಲ. ಅವರ ಮರಣಾ ನಂತರ ತಾನು ಬೌದ್ಧರಾಗಿ ಮತಾಂತರಗೊಳಿಸಿದ್ದ ಜನ ಇನ್ನೊಂದು ಜಾತಿಯಾಗಿ ಹೀನಸ್ಥಿತಿಗೆ ಬರುವರೆಂದು ಅವರು ನನಗೆ ಹೇಳಿದ್ದರು. ವೀರಶೈವರು ಅಥವಾ ಲಿಂಗಾಯಿತರು ಬಸವೇಶ್ವರರನ್ನು ಸಂಕುಚಿತವಾಗಿ ತಮ್ಮಲ್ಲೇ ಇಟ್ಟುಕೊಂಡಿದ್ದಾರೆ ಮತ್ತು ಅವರ ತತ್ವಗಳು ಹರಡಲು ಮತ್ತು ಬೆಳೆಯಲು ಅವಕಾಶ ನೀಡುತ್ತಿಲ್ಲ ಎಂದು ಅಂಬೇಡ್ಕರ್ ಹೇಳುತ್ತಿದ್ದರು.

ತನ್ನ ದೇಶಕ್ಕೆ ಮತ್ತು ತನ್ನ ಜನಕ್ಕೆ ಡಾ|| ಅಂಬೇಡ್ಕರ್ ನೀಡಿದ ಅತ್ಯುನ್ನತ ಕಾಣಿಕೆಯೆಂದರೆ ಭಾರತದ ಅಸ್ತಿತ್ವ, ಬೆಳವಣಿಗೆ ಮತ್ತು ಅಭಿವೃದ್ಧಿಗೆ ಆಧಾರವಾದ ಭಾರತ ಸಂವಿಧಾನವನ್ನು ರಚಿಸಲು ಮುಖ್ಯ ಕಾರಣಕರ್ತರಾದುದು. ಹಿಂದೆ ಧರ್ಮಶಾಸ್ತ್ರದ ಕರ್ತೃವಾಗಿ ಬ್ರಾಹ್ಮಣ ಮನು ಇದ್ದರು. ಸ್ವಾತಂತ್ರ್ಯ ನಂತರ ಭಾರತದಲ್ಲಿ ಇದಕ್ಕಾಗಿ ಒಬ್ಬ ಹರಿಜನ ಇದ್ದಾರೆ ಎಂದು ಸರ್ದಾರ್ ವಲ್ಲಭಭಾಯ್ ಪಟೇಲ್ ಹೇಳಿದ್ದರು. ವಾಸ್ತವವಾಗಿ ಡಾ|| ಅಂಬೇಡ್ಕರ್ ಭಾರತ ಸಂವಿಧಾನದ ಜನಕ. ಅದನ್ನು ರೂಪಿಸಲು ಶ್ರೇಷ್ಠ ತಜ್ಞರು ಅವರೊಂದಿಗೆ ಇದ್ದರೂ ಅದರ ಬಹುಮಟ್ಟಿನ ಹೊಣೆ ಅಂಬೇಡ್ಕರರ ಮೇಲೆ ಬಿತ್ತು. ಅವರು ಕಷ್ಟ ಸಾಧ್ಯವಾದ ಈ ಕೆಲಸವನ್ನು ಇಡೀ ರಾಷ್ಟ್ರ ಮೆಚ್ಚುವಂತೆ ಮಾಡಿ ಮುಗಿಸಿದರು. ಸಂವಿಧಾನದ ಪ್ರತಿ ಅನುಚ್ಛೇದವನ್ನು ರಚಿಸಿರುವ ರೀತಿಯನ್ನು ಪ್ರತಿಯೊಬ್ಬರೂ ಮುಕ್ತಕಂಠದಿಂದ ಶ್ಲಾಘಿಸುತ್ತಾರೆ. ಸಂವಿಧಾನ ರಚನೆಯಂಥ ಪವಿತ್ರವಾದ ಕೆಲಸ ಮಾಡಲು ತಮಗೆ ಅತ್ಯುತ್ತಮ ವ್ಯಕ್ತಿ ಸಿಕ್ಕಿದರೆಂದು ಸಂವಿಧಾನ ರಚನಾ ಸಭೆಯ ಸದಸ್ಯರಿಗೆ ಮನದಟ್ಟಾಯಿತು. ಇದಕ್ಕಿಂತ ಉತ್ತಮ ಕಾರ್ಯನಿರ್ವಹಿಸಲು ಯಾರಿಗೂ ಸಾಧ್ಯವಿಲ್ಲವೆಂದು ನನಗೆ ಗೊತ್ತು. ಡಾ|| ಅಂಬೇಡ್ಕರರು ಭಾರತ ಸಂವಿಧಾನದ ಶಿಲ್ಪಿಯಾಗಿ ಭಾರತಕ್ಕೆ ದೊಡ್ಡಸೇವೆಯನ್ನು ಸಲ್ಲಿಸಿದ್ದಾರೆ. ಶತಮಾನಗಳುರುಳಿದರೂ ಅವರನ್ನು ದೇಶ ಕೃತಜ್ಞತೆಯಿಂದ ಸ್ಮರಿಸುತ್ತದೆ.

# ಡಾ|| ಬಿ.ಆರ್. ಅಂಬೇಡ್ಕರ್ – ರಾಷ್ಟ್ರನಾಯಕ, ಖ್ಯಾತ ಸಂಸದೀಯಪಟು, ನ್ಯಾಯಶಾಸ್ತ್ರಜ್ಞ ಸಂವಿಧಾನಕರ್ತೃ

* ಪ್ರೊ. ಪಿ.ಜಿ. ಮಾವಳಂಕರ್

ನಮ್ಮ ಹಿಂದಿನ ಸಂವಿಧಾನಾತ್ಮಕ, ಸಂಸದೀಯ ಮತ್ತು ರಾಜಕೀಯ ಚರಿತ್ರೆಯ ಪುಟಗಳಲ್ಲಿ ತಮ್ಮ ನಿರಂತರ ಹೋರಾಟ, ನಿಸ್ವಾರ್ಥ ಇಚ್ಛಾಶಕ್ತಿ ಹಾಗೂ ನಿಲ್ಲದ ಕ್ರಿಯಾತ್ಮಕತೆಯಿಂದ, ಹಟ್ಟಿ ಬಿಡದ ಅಭಿರುಚಿಯ ಕಾರ್ಯದಕ್ಷತೆಯಿಂದ ಅಂಬೇಡ್ಕರ್ ವಿಶೇಷಸ್ಥಾನವನ್ನು ಪಡೆದಿದ್ದಾರೆ. ಗುಣ ಮತ್ತು ಪಾತ್ರಗಳೆರಡರಲ್ಲೂ ಅವರು ಎತ್ತರದವರು, ಪ್ರತಿಭಾನ್ವಿತರು, ಸ್ವತಂತ್ರಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಭಾರತದ ಕೆಲವೇ ರಾಜಕಾರಣಿಗಳು ಡಾ|| ಅಂಬೇಡ್ಕರರ ಜೀವನದ ಹೋರಾಟದ ಮಟ್ಟ ಮತ್ತು ಸಾಧನೆಗಳ ಹೋಲಿಕೆಗೆ ನಿಲುಕುತ್ತಾರೆ. ಅವರು ಬಹಳ ಕಾಲ ಕಷ್ಟಪಟ್ಟರು. ಬಲವಾಗಿ ಹೋರಾಡಿದರು, ನಿರ್ಭಯವಾಗಿ ಎದುರಿಸಿದ್ದರು. ಅವರಿಗೆ ತಮ್ಮ ಅಭಿಪ್ರಾಯಗಳ ಬಗ್ಗೆ ಸ್ಪಷ್ಟಕಲ್ಪನೆಯಿತ್ತು. ತನ್ನ ನಿಶ್ಚಿತಾಭಿಪ್ರಾಯಗಳ ದಿಟ್ಟತನದ ಬೆಂಬಲ ಹೊಂದಿದ್ದರು. ಈ ಗುರಿಯನ್ನು ಸಾಧಿಸಲು ಅವರು ಯಾರನ್ನೂ ಸುಮ್ಮನೆ ಬಿಡದೆ ಎಲ್ಲರನ್ನೂ ತೊಡಗಿಸಿದರು.

ಶ್ರೀ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಹುಟ್ಟು ಬಂಡಾಯಗಾರ. ಇರುವ ಸಾಮಾಜಿಕ ವ್ಯವಸ್ಥೆಯನ್ನು ಅವರು ಸುಲಭವಾಗಿ ಒಪ್ಪಿಕೊಳ್ಳದೆ, ಅಲ್ಲಿ ಎದ್ದುಕಾಣುವ ಅನ್ಯಾಯ ಮತ್ತು ಅಮಾನುಷತೆಗಳ ವಿರುದ್ಧ ಧೈರ್ಯವಾಗಿ ನಡೆಸುವ ಹೋರಾಟದ ಹಾದಿಯನ್ನೇ ಆರಿಸಿಕೊಂಡರು. ಅಂಬೇಡ್ಕರ್ ಘಾಸಿಗೊಳಗಾದ ತನ್ನ ಮನೆಯ ಒನ್ನಲೆಯನ್ನು ನ್ಯಾಯಯುತ ಮತ್ತು ಸಮಾಜವಾದಿ ಭಾರತೀಯ ಸಮಾಜವನ್ನು ಕಟ್ಟುವ ಆಶಾದಾಯಕ ಅವಕಾಶವನ್ನಾಗಿ ಪರಿವರ್ತಿಸಿದರು. ತಾನು ತೀರ ಆಕಸ್ಮಿಕವಾಗಿ ಹುಟ್ಟಿದ 'ಮಹರ್' ಜನಾಂಗದ ಮೇಲೆ ಹೇರಿದ್ದ ಹಿಂದುಳಿಯುವಿಕೆಯಿಂದ ಮನೋವೇದನೆಗೆ ಒಳಗಾದರೂ ಅವರಲ್ಲಿ ಮುಳುಗಿ ಹೋಗಲು ಸಿದ್ಧರಾಗಲಿಲ್ಲ, ಬಾಬು ಸಾಹೇಬ್ ಅಂಬೇಡ್ಕರ್ ತಮ್ಮ • ಕೌಟುಂಬಿಕ ಸ್ಥಿತಿಗಳ ಮಟ್ಟದಿಂದ ಮೇಲೇರಿದರು. ತಮ್ಮ ಅವಿರತ

---

* ಪ್ರೊ. ಪಿ.ಜಿ. ಮಾವಳಂಕರ್ ಸಂಸತ್ (ಲೋಕಸಭೆ) ಸದಸ್ಯರಾಗಿದ್ದರು.

923.295 4
KLS - EL
C-5779
KLS - EL



ವಿದ್ಯಾಭ್ಯಾಸದಿಂದ ಮತ್ತು ವಿವೇಕಪೂರ್ಣ ಕೃಷಿಯಿಂದ ಆಧುನಿಕ ಭಾರತದ ತಮ್ಮ ಅನೇಕ ಮಿತ್ರರಿಗಿಂತ ಮತ್ತು ಸಮಕಾಲೀನರಿಗಿಂತ ತಾನು ಮಿಗಿಲಾದವರಾಗಿ ಬೆಳೆದರು. ಅವರು ನಿಜವಾದ ಅರ್ಥದಲ್ಲಿ 'ದಲಿತ' ಆದರೆ ಯಾವುದೇ ರೀತಿಯಲ್ಲಿ ದಲಿತ ನಾಯಕರಷ್ಟೇ ಅಲ್ಲ. ಅಂಬೇಡ್ಕರರು ದಿಟವಾದ ರಾಷ್ಟ್ರ ನಾಯಕ ಮತ್ತು ಎದ್ದು ಕಾಣುವ ಭಾರತೀಯ. ಅವರನ್ನು ಪರಿಶಿಷ್ಟ ಜಾತಿಗಳ ನಾಯಕರೆಂದು ವಿವರಿಸುವುದು ಅವರಿಗೆ ಬಹಳ ಅನ್ಯಾಯ ಮಾಡಿದಂತೆಯೇ ಅಂಬೇಡ್ಕರರು ಇಡೀ ರಾಷ್ಟ್ರದ ಪ್ರವರ್ತಕರಾಗಿ ಸುಯೋಗ್ಯ, ವಿಶ್ವಾಸಪೂರ್ಣ ಹಾಗೂ ಗೌರವಾನ್ವಿತವಾದ ಸತ್ಕೀರ್ತಿಯನ್ನು ಪಡೆದಿದ್ದಾರೆ. ಭಾರತದಲ್ಲಿರುವ ಶೋಷಣೆಗೆ ಮತ್ತು ತುಳಿತಕ್ಕೆ ಒಳಗಾದ ಜನರ ಹಿತಕ್ಕಾಗಿ ಅವರು ಪಟ್ಟು ಹಿಡಿದು ಹೋರಾಡಿದರು. ಈ ವಿಸ್ತಾರವಾದ ಉಪಖಂಡದ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಿಷ್ಕೃತವಾದ ಮತ್ತು ಅಭಿವೃದ್ಧಿಗೊಳ್ಳದ ಜನಾಂಗಗಳ ಉದ್ಧಾರಕ್ಕಾಗಿ ಅವರು ನಡೆಸಿದ ಚಳುವಳಿಗಳು ಭಾರತವನ್ನು ದಿಟ್ಟ ಸ್ವತಂತ್ರ ಮತ್ತು ಪ್ರಜಾಸತ್ತಾತ್ಮಕ ರಾಷ್ಟ್ರವಾಗಿ ರೂಪಿಸುವ ಉದ್ದೇಶದತ್ತ ಸಾಗಿಸಿದವು.

ಬಾಬಾ ಸಾಹೇಬ್ ಅಂಬೇಡ್ಕರ್ ಶಿಕ್ಷಣದ ಮೇಲೆ ಹೆಚ್ಚಿನ ಮತ್ತು ನಿರಂತರ ಮಹತ್ವವಿತ್ತರು. ಅಷ್ಟೇ ಅಲ್ಲ, ಒಳ್ಳೆಯ ಮತ್ತು ಯುಕ್ತ ಶಿಕ್ಷಣ ನೀಡಿ ನಾಗರೀಕರನ್ನು ಸಜ್ಜುಗೊಳಿಸುವಲ್ಲಿನ ತಮ್ಮ ಸ್ಥಿರ ನಂಬಿಕೆಗೆ ಅಂಟಿಕೊಂಡರು. ಅಜ್ಞಾನ ಮತ್ತು ನಿರಕ್ಷರತೆಗಳು ವಾಸ್ತವವಾಗಿ ಶಾಪಗಳು. ಅವು ಜನರನ್ನು ಎಲ್ಲ ವಿಧವಾಗಿ ಮತ್ತು ರೀತಿಯಿಂದ ದಾಸ್ಯ ಹಾಗೂ ಕುರುಡುತನದಲ್ಲಿರಿಸುತ್ತವೆ. ಒಳ್ಳೆಯ ಶಿಕ್ಷಣವು ಹೆಣ್ಣು-ಗಂಡಿನ ದೇಹ ಮತ್ತು ಆತ್ಮಗಳನ್ನು ಬಿಡುಗಡೆ ಮಾಡುತ್ತದೆಯಾದ್ದರಿಂದ ಅದರಗು ಅಳೆಯಲಾಗದ ಬೆಲೆಯನ್ನು ಅಂಬೇಡ್ಕರ್ ತಿಳಿದಿದ್ದರು. ಅವರು ತಾನೇ ದೇಶ-ವಿದೇಶಗಳಲ್ಲಿ ದೊರೆಯುವ ಉತ್ತಮವಾದ ಮತ್ತು ಎಲ್ಲ ಶೈಕ್ಷಣಿಕ ಚಾತುರ್ಯಗಳನ್ನು ಮತ್ತು ಪಾಂಡಿತ್ಯವನ್ನು ಪಡೆದಿದ್ದರು. ಶೈಕ್ಷಣಿಕ ವೃತ್ತಿಪರ ಮತ್ತು ಸಾರ್ವಜನಿಕ ಕೆಲಸಗಳ ತಮ್ಮ ಕ್ರಿಯಾಶೀಲ ಹಾಗೂ ಯಶಸ್ವೀ ಬದುಕಿನ ಉದ್ದಕ್ಕೂ ಅವನ್ನು ಬಳಸಿ ತಾವು ಸಮಸ್ತ ಭಾರತವೇ ಹೆಮ್ಮೆಪಡುವಂಥ ಸುರಿತ ವಿದ್ವಾಂಸ ಮುತ್ಸದ್ದಿಯಾಗಿ ಬೆಳಗಿದರು.

ಡಾ|| ಬಿ.ಆರ್. ಅಂಬೇಡ್ಕರ್ ಹುಟ್ಟರಿವು ಮತ್ತು ತರಬೇತಿಯಿಂದ ಎತ್ತರದ 'ವ್ಯಕ್ತಿವಾದಿ'. ಅವರಿಗೆ ಮೂರ್ಖತನವೆಂದರೆ ಜಿಗುಪ್ಸೆ. ಯಾವುದೇ ಬಗೆಯ ಅರೆಮನಸ್ಸಿನ, ಅಪಕ್ವಮತಿಯ ನಾಯಕರನ್ನು ಅವರು ಸಹಿಸುತ್ತಿರಲಿಲ್ಲ. ಮತಭ್ರಾಂತರಾದ ಮತ್ತು ಕಂದಾಚಾರದಲ್ಲಿ ಮುಳುಗಿದವರ ಬಗ್ಗೆ ಅಸಹ್ಯಪಡದಿದ್ದರೂ ಅಪ್ರೀತಿಯನ್ನು ಹೊಂದಿದ್ದರು. ಆದಾಗ್ಯೂ, ತಮಗೆ ಹಂಚಿಕೆಯಾದ ಕ್ಷೇತ್ರಗಳ ಸಾರ್ವಜನಿಕ ಚಟುವಟಿಕೆಗಳಲ್ಲಿ ವಿವಿಧ ವ್ಯಕ್ತಿಗಳ,

STOCK No. C 5779
DATE 6/12/99

ಆದರಲ್ಲೂ ಸಹೋದ್ಯೋಗಿಗಳೊಡನಾಟದ ಅವರ ಕೃತ್ಯಗಳಲ್ಲಿ ಮತ್ತು ವ್ಯವಹಾರಗಳಲ್ಲಿ ಅವರು ಅತಿಶಯವಾದಂಥ ವಿನಯ ಹಾಗೂ ಔದಾರ್ಯಗಳನ್ನು ಹೊಂದಿರುತ್ತಿದ್ದರು. ಅಂಬೇಡ್ಕರ್ ಚಳುವಳಿಗಳನ್ನು ನಡೆಸಿದರೂ, ಸಂಘಗಳನ್ನು ಕಟ್ಟಿದರೂ ಅವರು 'ಸಂಘವ್ಯಕ್ತಿ' ಯಾಗಲಿಲ್ಲ. ಅವರು ತಮ್ಮ ಜನಾಂಗವನ್ನು ಸಮರ್ಥವಾಗಿ ಮತ್ತು ಶ್ಲಾಘನೀಯವಾಗಿ ಮುನ್ನಡೆಸಿದರು. ಆದರೂ ಅವರು ಅನೇಕ ವಿಚಾರಗಳಲ್ಲಿ ಏಕಾಂಗಿಯಾಗೇ ಉಳಿದರು.

1937ರಲ್ಲಿ ಚುನಾಯಿತರಾಗಿ ಮುಂಬಯಿ ವಿಧಾನಸಭೆಯ ಸದಸ್ಯತ್ವವನ್ನು ಪಡೆಯುವ ಮೂಲಕ ಅಂಬೇಡ್ಕರರು ತಮ್ಮ ಸಂಸದೀಯ ಅಧಿಕಾರ ಕಾಲವನ್ನು ಆರಂಭಿಸಿದರು. 1937 ಜುಲೈ 19ರಂದು ಅವರು ವಿಧಾನಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಇದಕ್ಕೆ ಮುಂಚೆ ಅವರು ಮುಂಬಯಿ ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ ಹೊಂದಿ ಸೇವೆ ಸಲ್ಲಿಸಿದ್ದರು. ಈ ಸಂಬಂಧ ಅವರು 1927 ಫೆಬ್ರುವರಿ 18ರಂದು ಪ್ರಮಾಣವಚನ ಸ್ವೀಕರಿಸಿದ್ದರು. ಅವರು ಆಯವ್ಯಯದ ಬಗ್ಗೆ ಪ್ರತಿವರ್ಷ ಮಾಡುತ್ತಿದ್ದ ಭಾಷಣಗಳು ತಮ್ಮ ಸಂಕ್ಷಿಪ್ತತೆ ಮತ್ತು ಉಜ್ವಲತೆಗೆ ಹೆಸರಾಗಿವೆ. ಅವರು ಅನೇಕ ಅಂಶಗಳನ್ನು ಅಡಕವಾಗಿ ಹೇಳಿದ್ದಾರೆ ಮತ್ತು ಟೀಕೆ ಮಾಡಿದ್ದಾರೆ. 1939ರ ಫೆಬ್ರವರಿಯ ಆಯವ್ಯಯದ ಬಗ್ಗೆ ಸಾಕಷ್ಟು ದೀರ್ಘವಾಗಿ ಮಾತನಾಡಿ ಅನೇಕ ನಿಷ್ಪಕ್ಷಪಾತವೂ, ವಿಮರ್ಶಾತ್ಮಕವೂ ಆದ ಪರಿಶೀಲನೆ ನಡೆಸಿದ್ದರು. ಅಂಬೇಡ್ಕರರ ಪಾಂಡಿತ್ಯಪೂರ್ಣ ಹಾಗೂ ಅಸ್ಖಲಿತ ವಾಗ್ಝರಿಗಳು ಇಡೀ ಸದನದ ಗಮನವನ್ನು ಸಹಜವಾಗಿಯೇ ಸೆಳೆದವು. ಅವರು ತಮ್ಮ ಸಂಸತ್ತಿನ ಹೇಳಿಕೆಗಳಲ್ಲಿ, ವಿವೇಚನೆಗಳಲ್ಲಿ ವಿಶ್ವವಿದ್ಯಾಲಯ ಮತ್ತು ಪ್ರಾಥಮಿಕ ಶಿಕ್ಷಣ, ಕೈಗಾರಿಕಾ ವಿವಾದಗಳು, ಪಾನನಿರೋಧ, ಭಾಷಾವಾರು ಪ್ರಾಂತಗಳು, ಮಂತ್ರಿಗಳ ಸಂಬಳಗಳು, ಎರಡನೆಯ ಮಹಾಯುದ್ಧದಲ್ಲಿ ಭಾರತ ಭಾಗವಹಿಸುವುದು, ಇತ್ಯಾದಿ ವಿಷಯಗಳನ್ನು ಕುರಿತು ಇರುತ್ತಿದ್ದವು. ಅವರು ಶಿಕ್ಷಣದ ಪ್ರಗತಿಯನ್ನು ಕುರಿತು, ಅದರಲ್ಲಿಯೂ ಹೆಣ್ಣುಮಕ್ಕಳ ಶಿಕ್ಷಣವು ತೀರಾ ನಿಧಾನಗತಿಯಲ್ಲಿರುವ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸಿದರು (ಶಾಲೆಗೆ ಹೋಗುವ ವಯಸ್ಸಿನ ಹುಡುಗಿಯರನ್ನು ಶಿಕ್ಷಣಕ್ಕೊಳಪಡಿಸಲು ಈ ವೇಗದಲ್ಲಿ 300ವರ್ಷಗಳು ಬೇಕಾದೀತು!) ದಲಿತ ವರ್ಗದ ಜನ ತೀರ ಅನಿಷ್ಟ ಸನ್ನಿವೇಶದಲ್ಲಿ ಬದುಕುತ್ತಿರುವ ವಾಸ್ತವವನ್ನು ಕಂಡು ಮರುಗಿದರು. ಅಂಬೇಡ್ಕರರು ಕಾಂಗ್ರೆಸ್ ಆಡಳಿತ ಪಕ್ಷದವರೊಡನೆ ಮೇಲೆ (ಮುಖ್ಯಮಂತ್ರಿ ಬಿ.ಜಿ. ಖೇರ್, ಗೃಹಮಂತ್ರಿ, ಕೆ.ಎಂ. ಮುನ್ಷಿ ಮತ್ತು ಇತರರು) ಮತ್ತು ಸಭಾಧ್ಯಕ್ಷರ ಮೇಲೆ (ಜಿ.ಪಿ. ಮಾವಳಂಕರ್) ಕತ್ತಿಝಳಪಿಸಿದ್ದುಂಟು ಮತ್ತು ಅವರನ್ನು ಜರಿದದ್ದೂ ಇದೆ. 1937ರ ಆಗಸ್ಟ್ 23ರಂದು ಡಾ|| ಬಿ.ಆರ್. ಅಂಬೇಡ್ಕರ್‌ರು ಮಂತ್ರಿಗಳ ಸಂಬಳದ ಬಿಲ್ಲಿನ ತಿದ್ದುಪಡಿ ಕುರಿತಂತೆ ಹೇಳಿಕೆ ನೀಡುವಾಗ "ನನ್ನ ಸನ್ಮಾನ್ಯ ಸ್ನೇಹಿತರಾದ

ಮುಖ್ಯಮಂತ್ರಿ (ಬಿ.ಜಿ. ಖೇರ್)ರವರ ಪ್ರಸ್ತಾವದ ಬಗ್ಗೆ" ಎಂದು ಆರಂಭಿಸಿದ್ದರು. ಅವರಿಗೆ ವಿಷಯವನ್ನು ಇಮ್ಮತ್ರಕ್ಕೆ ಒಯ್ಯುವ ಅಪೇಕ್ಷೆಯಿರಲಿಲ್ಲ. ಸದರಿ ಬಿಲ್ಲು ಒಪ್ಪಿತ ಅಳತೆಯಲ್ಲಿರಬೇಕು. ಅದು ಸಂಪೂರ್ಣವಾಗಿ ಪಕ್ಷದ ಮತದ ಮೂಲಕ ಸಾಗಬಾರದು ಎಂಬುದು ಅವರ ಉದ್ದೇಶವಾಗಿತ್ತು. ಆದಕ್ಕೆ ಅವರು ಆ ಬಿಲ್ಲಿನ ತತ್ತ್ವದ ವಿರುದ್ಧ ತಮ್ಮ ಆಕ್ಷೇಪಣೆಯನ್ನು ದಾಖಲು ಮಾಡಿದರು. ಅವರು ಮಂತ್ರಿಗಳಿಗೆ ಗೊತ್ತುಪಡಿಸಿದ ಸಂಬಳದ ಪ್ರಮಾಣವನ್ನು ಒಪ್ಪಲಿಲ್ಲ. ಅವರು ತಮ್ಮ ಕಾರಣಗಳನ್ನು ಮತ್ತು ವಾದಗಳನ್ನು ಸಮರ್ಥವಾಗಿ ಮಂಡಿಸಿದರು, ವಿವರವಾದ ಮತ್ತು ತೌಲನಿಕವಾದ ಅಂಕಿ-ಅಂಶಗಳನ್ನು ಚೊಕ್ಕವಾಗಿ ಮುಂದಿರಿಸಿದರು. ಒಬ್ಬ ಮಂತ್ರಿಯ ಸಂಬಳವನ್ನು ಗೊತ್ತು ಪಡಿಸಲು ಅಂಬೇಡ್ಕರ್ ನಾಲ್ಕು ಪರಿಗಣನೆಗಳ ತಮ್ಮ ಆಲೋಚನೆಯನ್ನು ವ್ಯಕ್ತಪಡಿಸಿದರು.

1. ನಿಸ್ಸಂದೇಹವಾಗಿ ಸಮುದಾಯದ ನಾಯಕರಾಗಿರುವ ಮಂತ್ರಿಗಳ ಸಾಮಾಜಿಕ ಮಟ್ಟವನ್ನು ಪರಿಗಣಿಸುವುದು.

2. 'ಜೀವನಕ್ಕೆ ಸಾಕಾಗುವಷ್ಟು ವರಮಾನ' ವೆಂಬುದನ್ನು ಪರಿಗಣಿಸುವುದು.

3. ಪ್ರಜಾರಾಜ್ಯದ ಪರಿಗಣನೆ

4. ಆಡಳಿತದ ಶುದ್ಧತೆ ಮತ್ತು ಸಮಗ್ರತೆಯ ಪರಿಗಣನೆ.

ಅಂಬೇಡ್ಕರರು ಮುಂದುವರಿದು ನುಡಿದರು, ದೇಶದ ಪ್ರಥಮ ಪ್ರಜೆಗಳಾದ ಮಂತ್ರಿಗಳು ಕಲೆಯನ್ನು, ವಿದ್ಯೆಯನ್ನು ಪ್ರೋತ್ಸಾಹಿಸುತ್ತಾ ಸುಸಂಸ್ಕೃತ ಜೀವನವನ್ನು ನಡೆಸುತ್ತಾ ಉಳಿದವರಿಗೆ ಆದರ್ಶವಾಗಿರಬೇಕು. ಮಂತ್ರಿಗಳ ಸಂಬಳವನ್ನು ನಿರ್ಧರಿಸುವಾಗ ಕೊನೆಯ ಮೂರು ಪರಿಗಣನೆಗಳನ್ನು ನಿರ್ಲಕ್ಷಿಸಬಾರದು ಏಕೆ ಎಂಬುದನ್ನು ಅವರು ವಿವರಿಸಿದರು. ಮಂತ್ರಿ ಮಂಡಲ ಕಾರ್ಯಕ್ಷಮತೆ ಹೊಂದಿರುವುದರಿಂದ ಕೂಡಿರಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು. ಕಾರ್ಯಾಂಗವು ಬುದ್ಧಿಶಕ್ತಿಯ ವಿಶ್ವಸ್ಥ ನಿಧಿಯಾಗಿರಬೇಕು ಎಂದು ಅವರು ಹೇಳಿದರು. ನಿರೀಕ್ಷೆಗೆ ತಕ್ಕಂತೆ ಸರ್ಕಾರದ ಬಿಲ್ಲು ಕೊನೆಗೆ ಅಂಗೀಕಾರವಾದರೂ, ಸಮರ್ಥರಾದಂಥ ಮುಂಬಯಿ ನಗರ, ಬೈಕಲ ಮತ್ತು ಪರೇಲ್‌ನ ವಿಧಾನಸಭಾ ಸದಸ್ಯರಿಂದ ತೀವ್ರವಾದ ವಿರೋಧವಿಲ್ಲದಿರಲಿಲ್ಲ. ವಿಷಯಗಳನ್ನು ನುಣುಚು ಮಾತುಗಳಿಂದ ತೇಲಿಸದ ಬಿ.ಆರ್. ಅಂಬೇಡ್ಕರ್ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳುತ್ತಿದ್ದರು ಮತ್ತು ತತ್‌ಕ್ಷಣದಲ್ಲಿಯೇ ಪರಿಗಣಿತ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರು.

ಸ್ವಾತಂತ್ರ್ಯದ ಅರುಣೋದಯದಲ್ಲಿ ಕೆಲಕಾಲ ಇಡೀ ರಾಜಕೀಯ ವಾತಾವರಣವು ಮೂಲವಾಗಿ ಬದಲಾಯಿತು. ಅಂಬೇಡ್ಕರ್ ಆಗಲೇ ಒಬ್ಬ ಸಮರ್ಥ ರಾಷ್ಟ್ರೀಯ ನಾಯಕರಾಗಿ ಮೂಡಿದ್ದರು ಮಾತ್ರವಲ್ಲ, ಸ್ವಾತಂತ್ರ್ಯ ನಂತರದ ನೆಹರೂ ಯುಗದಲ್ಲಿ ರಾಷ್ಟ್ರ ಕಾರ್ಯದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಕಾಂಗ್ರೆಸ್ ಪಕ್ಷ ಅವರನ್ನು ಸಂವಿಧಾನ ರಚನಾ ಸಮಿತಿಗೆ ನಾಮಕರಣ ಮಾಡಿತು. ಆ ತರುವಾಯ ವಿಧಾನಸಭೆಗೆ ನಾಮಕರಣ ಮಾಡಿತು. ಆ ಸಮಿತಿಯು ಹೊಸ ಸರ್ವತಂತ್ರ ಸ್ವತಂತ್ರ ರಾಷ್ಟ್ರಕ್ಕೆ ಸಂವಿಧಾನವನ್ನು ರಚಿಸುವ ಮತ್ತು ನಡೆಸುವ ಕಷ್ಟಸಾಧ್ಯವೂ, ಐತಿಹಾಸಿಕವೂ ಆದ ಕರಡು ರಚನಾ ಸಮಿತಿಯ ಅಧ್ಯಕ್ಷತೆಯನ್ನು ಕೊನೆಗೆ ಅವರಿಗೆ ಒಪ್ಪಿಸಿದರು. ಪಂಡಿತ್ ಜವಾಹರಲಾಲ್ ನೆಹರೂ ಅವರು ಅಂಬೇಡ್ಕರರನ್ನು ಭಾರತದ ಮೊದಲ ಕಾನೂನು ಮಂತ್ರಿಯನ್ನಾಗಿ ಮಾಡಿ ಮಂತ್ರಿಮಂಡಲಕ್ಕೆ ಸೇರಿಸಿಕೊಂಡರು. ಆ ಅಧಿಕಾರದಿಂದ ಅಂಬೇಡ್ಕರರು ಚಾರಿತ್ರಿಕವಾದ ಹಿಂದೂ ಕೋಡ್ ಬಿಲ್ಲನ್ನು ರಚಿಸಿ ಅಂಗೀಕಾರ ಪಡೆದರು. ಈ ಬಿಲ್ಲಿಗೆ ಅನೇಕ ಸಂಪ್ರದಾಯವಾದಿಗಳಿಂದ ಮತ್ತು ಇತರ ಮೂಲಗಳಿಂದ ವಿರೋಧ ವ್ಯಕ್ತವಾಯಿತು. ಆದರೆ ನೆಹರೂ ವಿವಾದಾತ್ಮಕವಾದರೂ ರಚನಾತ್ಮಕವಾದ ಯಶಸ್ವೀ ಸಾಧನೆಗಾಗಿ ಅವರಿಗೆ ದೃಢವಾಗಿ ಒತ್ತಾಸೆ ಕೊಟ್ಟರು. ಈ ಸಾಹಸ ಕಾರ್ಯದಿಂದ 'ಆಧುನಿಕ ಮನು' ಎಂಬ ಬಿರುದನ್ನು ಪಡೆದರು. ಭಾರತದ ಈ ಪ್ರಸಿದ್ಧ ಕಾನೂನು ಮಂತ್ರಿಗಳು ಲೋಕಸಭೆಯಲ್ಲಿ ನಡೆಸಿದ ಅದ್ವಿತೀಯ ನಿರ್ವಹಣೆಯನ್ನು ನಾನು ಪ್ರೇಕ್ಷಕರ ಗ್ಯಾಲರಿಯಲ್ಲಿದ್ದು ಅನೇಕ ಸಲ ಗಮನಿಸಿದ್ದೇನೆ. 1947ರಿಂದ 1951ರ ವರೆಗಿನ ನಮ್ಮ ಸ್ವತಂತ್ರ ದೇಶ ಹೊಸ ಪ್ರಜಾರಾಜ್ಯವಾಗಿ ರೂಪುಗೊಳ್ಳುತ್ತಿರುವ ಪರ್ವಕಾಲಗಳವು. (1951 ಸೆಪ್ಟೆಂಬರ್‌ನಲ್ಲಿ ಅಂಬೇಡ್ಕರ್ ಅನಾರೋಗ್ಯದಿಂದ ರಾಜೀನಾಮೆ ನೀಡಿದರು) 1937-39ರ ಅವಧಿಯಲ್ಲಿ ಮುಂಬಯಿ ವಿಧಾನಸಭೆಯಲ್ಲಿ ಅಂಬೇಡ್ಕರರನ್ನು ನಾನು ನೋಡಿದ ಅಸ್ಪಷ್ಟ ನೆನಪು ಬರುತ್ತಿದೆ. ನಾನು ತೀರಾ ಸಣ್ಣವನಿದ್ದು ಅವರ ಸಂಸದೀಯ ಪಟುತ್ವ ಮತ್ತು ವಾದ ಚಾತುರ್ಯಗಳನ್ನು ಅರ್ಥಮಾಡಿಕೊಳ್ಳಲಾಗದಿದ್ದರೂ ಮೆಚ್ಚಿಕೊಂಡಿದ್ದೆ. ದೆಹಲಿಯಲ್ಲಿ ಪಾರ್ಲಿಮೆಂಟಿನ ಕೆಳಮನೆಯಲ್ಲಿ ಅಂಬೇಡ್ಕರರು ವಹಿಸಿದ ಪ್ರಮುಖ ಹಾಗೂ ನಿರ್ಣಾಯಕ ಪಾತ್ರ ನನಗೆ ಸ್ಪಷ್ಟವಾಗಿ ನೆನಪಿದೆ. ಅವರು ಅಂದವಾದ ಮತ್ತು ಶಿಸ್ತಿನ ಉಡುಪು ಧರಿಸುತ್ತಿದ್ದರು. ಡಾ|ಬಿ.ಆರ್. ಅಂಬೇಡ್ಕರ್ ಸದನದಲ್ಲಿ ಮಾತನಾಡುವಾಗ ಅಥವಾ ಉತ್ತರ ನೀಡುವಾಗ ಯಾವಾಗಲೂ ಪೂರ್ಣಸಿದ್ಧರಾಗಿ ಕ್ರಮಬದ್ಧ ಟಿಪ್ಪಣಿಯೊಡನೆ ಬರುತ್ತಿದ್ದರು. ಅವರ ಧ್ವನಿ ಗಟ್ಟಿಯಾಗಿ ಪ್ರಭಾವಶಾಲಿಯಾಗಿರುತ್ತಿತ್ತು, ಅವರ ವ್ಯಾಕರಣ ಸ್ಪಷ್ಟ ಮತ್ತು ಆದರ್ಶವಾಗಿರುತ್ತಿತ್ತು.

ಅವರ ಶೈಲಿ ವಿಶ್ವಾಸಪೂರ್ಣ, ಗಂಭೀರ ಹಾಗೂ ಸ್ಫೂರ್ತಿಯುತವಾಗಿರುತ್ತಿತ್ತು. ಅವರು ಎಂದೂ ತಮ್ಮ ಬಗ್ಗೆ ಮತ್ತು ತಮ್ಮ ಅಭಿಪ್ರಾಯದ ಬಗ್ಗೆ ಸಂದಿಗ್ಧರಾಗಿರುತ್ತಿರಲಿಲ್ಲ. ಅಧಿಕೃತತೆ ಮತ್ತು ಉತ್ಕೃಷ್ಟತೆಯಿಂದ ಕೂಡಿದ ಅವರ ಮಾತು ಮನವೊಲಿಸುವಂತೆ ವಿಮರ್ಶಾತ್ಮಕವಾಗಿರುತ್ತಿತ್ತು. ಎದುರಾಳಿಯ ನಿಲುವನ್ನು ಕೆಡವಿ, ತನ್ನ ವಾದವನ್ನು ಆಕರ್ಷಕ ಹಾಗೂ ಅಂಗೀಕಾರಾರ್ಹವಾಗುವಂತೆ ಮಾಡುವ ಯಾವುದೇ ಅವಕಾಶವನ್ನು ಅವರು ಬಿಡುತ್ತಿರಲಿಲ್ಲ. ಅಂಬೇಡ್ಕರರು ವಿಶೇಷವಾಗಿ ಪ್ರಶ್ನೋತ್ತರ ವೇಳೆಯಲ್ಲಿ ಮಿಂಚುತ್ತಿದ್ದರು. ಅವರ ಉತ್ತರಗಳು ಸ್ಫುಟ ಹಾಗೂ ನೇರ. ಅವರು ಶಬ್ದಗಳನ್ನು ವ್ಯರ್ಥವಾಗಿ ಬಳಸುತ್ತಿರಲಿಲ್ಲ. ಅವರು ಯುಕ್ತ ರೀತಿಯಲ್ಲಿ ತತ್‌ಕ್ಷಣವೇ ಉತ್ತರಿಸುತ್ತಿದ್ದರು. ಕೇಳಿದ ಮಾಹಿತಿಯನ್ನು ಬಿಟ್ಟು ಉಳಿದುದೇನನ್ನೂ ಹೇಳುತ್ತಿರಲಿಲ್ಲ. ಅವರ ಉತ್ತರಗಳು ಎಷ್ಟು ಪೂರ್ಣ ಮತ್ತು ಅಧಿಕೃತವಾಗಿರುತ್ತಿದ್ದುವೆಂದರೆ ಮತ್ತೆ ಅನುಬಂಧಗಳ ಅಗತ್ಯವಿರಲಿಲ್ಲ. ಒಬ್ಬ ಸದಸ್ಯನು ತನ್ನ ಮೂಲ ಪ್ರಶ್ನೆಯ ವಿಷಯವನ್ನು ಬಿಟ್ಟು ವಿವರವನ್ನು ಕೇಳಿದಾಗ ಅಂಬೇಡ್ಕರರು ಸುಮ್ಮನೆ ಕುಳಿತುಕೊಳ್ಳುತ್ತಿದ್ದರು. ಇಲ್ಲವೇ ನಿಂತು ''ನೋಟೀಸು' ಎಂದು ಕೂಗುತ್ತಿದ್ದರು (ಅಂದರೆ ಹೊಸ ಪ್ರಶ್ನೆಗೆ ಅಗತ್ಯವಾದ ಮಾಹಿತಿ ಒದಗಿಸಲು ಮುಂಚೆಯೇ ಯುಕ್ತ ನೋಟೀಸನ್ನು ಕೊಡಬೇಕು ಎಂದರ್ಥ!) ಹಾಗೂ ಮಂತ್ರಿಗಳು ಸಲಿಗೆಯಿಂದಿಲ್ಲ, ಸದಸ್ಯರೊಡನೆ ವಿನಯದಿಂದ ವರ್ತಿಸುತ್ತಿಲ್ಲ ಎಂದು ಯಾರಾದರೂ ಭಾವಿಸಿರಬಹುದು. ಕೆಲವು ಸಂದರ್ಭಗಳಲ್ಲಿ ಅವರು ಒರಟಾಗಿ ತೋರಿದ್ದಿರಬಹುದು. ಆದರೆ ಅಂಬೇಡ್ಕರ್‌ರ ವ್ಯಕ್ತಿತ್ವ ಹಾಗೂ ಜ್ಞಾನಭಂಡಾರ ನಿಲುವಿನ ಬಗ್ಗೆ ಪ್ರಮಾಣಗಳು ಎಲ್ಲಾ ಕೋಪ-ಅಸಮಾಧಾನಗಳನ್ನು ಕರಗಿಸಿಬಿಡುತ್ತಿದ್ದುವು.

ನವಜಾತ ಭಾರತ ಗಣರಾಜ್ಯಕ್ಕೆ ಪ್ರಜಾತಂತ್ರದ ಸಂವಿಧಾನವನ್ನು ರಚಿಸುವ ಸವಾಲು ಎಷ್ಟು ದೊಡ್ಡದಾಗಿತ್ತೆಂದರೆ, ಅದು ಬಹುಮುಖಿಯಾದ, ಅನುಪಮವಾದ ಮತ್ತು ಸ್ಫುಟವಾದ ಪಾಂಡಿತ್ಯವನ್ನು ಎಲ್ಲ ಕಡೆಯಿಂದ ಅಪೇಕ್ಷಿಸುತ್ತಿತ್ತು. ಸುದೈವದಿಂದ ಅಂಥ ಪ್ರತಿಭೆ ಹಾಗೂ ಅನುಭವಗಳು ಸಂವಿಧಾನ ರಚನಾ ಸಭೆಯ ಸದಸ್ಯರಿಗೆ ವಿಫುಲವಾಗಿದ್ದುವು. ಈ ಸಮಿತಿಗೆ ಅಸಾಮಾನ್ಯ ಕಲ್ಪನಾಶಕ್ತಿಯನ್ನು ಬಳಸುವ ನಾಯಕತ್ವ ದೊರಕಿತು. ಅದರ ಸದಸ್ಯರೆಲ್ಲರೂ ವಿಸ್ತಾರವಾದ ಅನುಭವ ಹಾಗೂ ಶ್ರೀಮಂತವಾದ ಮುಂಗಾಣ್ಕೆಯನ್ನು ಹೊಂದಿದವರು, ಏಕಮನಸ್ಕರು, ಒಪ್ಪಿಸಿದ ಕೆಲಸದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಳ್ಳುವವರು, ತಮ್ಮ ಅಭಿಪ್ರಾಯಗಳಲ್ಲಿ ಮತ್ತು ನಡವಳಿಕೆಗಳಲ್ಲಿ ಬಹು ನೈಪುಣ್ಯಪೂರ್ಣರು ಮತ್ತು ಅಸಾಧಾರಣ ನಿಸ್ವಾರ್ಥಿಗಳಾಗಿರುವವರೂ ಆಗಿದ್ದರು. ಸಮಿತಿಯ ಪ್ರತಿಯೊಬ್ಬ

ಸದಸ್ಯನೂ ರತ್ನದಂತಿದ್ದು, ಆ ಸಮಿತಿಯ ಅಧ್ಯಕ್ಷತೆಯನ್ನು ಮತ್ತೊಂದು ರತ್ನ ಡಾ|| ಅಂಬೇಡ್ಕರ್ ಅಲಂಕರಿಸಿದ್ದರು. ಇಂಥ ಜವಾಬ್ದಾರಿಯುತ ಕಾರ್ಯಗಳನ್ನು ಕೈಗೊಳ್ಳಲು ತಮ್ಮನ್ನು ಆಹ್ವಾನಿಸುತ್ತಾರೆಂದು ಅವರು ನಿರೀಕ್ಷಿಸಿರಲಿಲ್ಲ. "ಸಮಿತಿಯು ಕರಡು ರಚನಾ ಸಮಿತಿಗೆ ನನ್ನನ್ನು ಆರಿಸಿದಾಗ ಆಶ್ಚರ್ಯವಾಯಿತು ಮತ್ತು ಸಮಿತಿ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದಾಗಲಂತೂ ಹೆಚ್ಚಿನ ಆಶ್ಚರ್ಯವಾಯಿತು" ಎಂದಿದ್ದಾರೆ ಅಂಬೇಡ್ಕರ್. ಸಮಿತಿಯು ಇದಕ್ಕಿಂತ ಹೆಚ್ಚು ಜಾಣತನದ ಮತ್ತು ಫಲಕಾರೀ ತೀರ್ಮಾನವನ್ನು ಕೈಗೊಳ್ಳಲು ಸಾಧ್ಯವಿರಲಿಲ್ಲ. ಅಂಬೇಡ್ಕರರ ಮತ್ತು ಕರಡು ರಚನಾ ಸಮಿತಿಯ ಮುಖ್ಯ ಕಾರ್ಯಭಾರವು ಪಂಡಿತ್ ಜವಾಹರಲಾಲ್ ನೆಹರೂ, ಸರ್ದಾರ್ ವಲ್ಲಭಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದ್ ಮತ್ತು ಮೌಲಾನಾ ಅಬ್ದುಲ್ ಕಲಂ ಆಜಾದ್ ಅವರನ್ನೊಳಗೊಂಡ ನಾಲ್ವರು ಪ್ರಭುತ್ವ ಶಕ್ತಿಯುಳ್ಳ ನಾಯಕರಿಂದ ಗೌರವ ಹೊಂದಿತು ಮತ್ತು ಬೆಂಬಲವನ್ನು ತುಂಬಿಕೊಂಡಿತು. ಸಮಿತಿಯ ಸದಸ್ಯತ್ವವು ಘನತೆಯುಳ್ಳದ್ದೂ, ನಿಷ್ಪಕ್ಷಪಾತವೂ ಆಗಿದ್ದು, ಖಚಿತ ಹಾಗೂ ಅನುಕೂಲಕರವಾಗಿತ್ತು. 9 ಅಧಿವೇಶನಗಳಲ್ಲಿ 165 ಅನುಚ್ಛೇದಗಳ ಮಂಡನೆಯಲ್ಲಿ, ಅದರ ಪ್ರಸ್ತುತ ಪ್ರತಿಯನ್ನು ಕೇವಲ 3 ವರ್ಷಗಳ ದಾಖಲೆಯ ಅವಧಿಯಲ್ಲಿ (1946 ಡಿಸೆಂಬರ್ 9 ರಿಂದ 1949 ನವೆಂಬರ್ 26) ರೂಪುಗೊಳಿಸಿತು.

ನಮ್ಮ ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಸಂವಿಧಾನ ಸೌಧವನ್ನು ನಿರ್ಮಿಸುವಲ್ಲಿ ತೊಡಗಿದ ಸಮಿತಿಯ ತಂಡವನ್ನು ಕ್ರಿಯಾಶೀಲವಾಗಿ ಮತ್ತು ಸಮರ್ಥವಾಗಿ ಮುನ್ನಡೆಸುವಾಗ ಡಾ|| ಅಂಬೇಡ್ಕರ್‌ರವರ ಉನ್ನತ ವ್ಯಕ್ತಿತ್ವದ ಪರಿಪಾಕದಲ್ಲಿದ್ದ ಬುದ್ಧಿ ಮತ್ತು ಹೃದಯಗಳ ವಿವಿಧ ಗುಣಗಳು ಸೊಗಸಾಗಿ ಅರಳಿದವು. ಸಮಿತಿಯ ಸದಸ್ಯರಾಗಿ ಅವರು ಭವ್ಯ ರೀತಿಯಲ್ಲಿ ನಡೆದುಕೊಂಡರು. ಅವರು ಈ ಯೋಜನೆಯನ್ನು ತಾವೇ ನಡೆಸಿದರು. ಅಷ್ಟೇ ಅಲ್ಲ, ನಡೆಸಲ್ಪಟ್ಟರು. ಅವರು ವಿವಿಧ ಪ್ರಸ್ತಾವಗಳನ್ನು ಸೇರಿಸಿದರು, ಕೆಲವನ್ನು ಒಪ್ಪಿಕೊಂಡರು, ಅವಕ್ಕೆ ವ್ಯಾಪಕ ಒಮ್ಮತಾಭಿಪ್ರಾಯ ದೊರಕಿಸಲು ಹೆಣಗಿದರು. ಕೊನೆಯಲ್ಲಿ ಸಂವಿಧಾನ ರಚನಾ ಸಮಿತಿಯೊಳಗೆ ಸ್ವತಂತ್ರವಾಗಿ ಮತ್ತು ವಿಮರ್ಶಾತ್ಮಕವಾಗಿ ಹೊಮ್ಮಿದ್ದ ಅನೇಕ ವಿಷಯಗಳಲ್ಲಿ ವಿರುದ್ಧ ಅಂಶಗಳು ಹಾಗೂ ಭಿನ್ನತೆಗಳು - ಇವುಗಳಲ್ಲಿ ಗುಣಾತ್ಮಕ ಹೊಂದಾಣಿಕೆಯನ್ನು ತರಲು ಯತ್ನಿಸಿದರು.

"ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಸರ್ವಧರ್ಮ ಸಮಭಾವನೆ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಹಾಗೂ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ

ನ್ಯಾಯ, ವಿಚಾರ ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿತಗೊಳಿಸಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ" ಎಂದು ಸಂತೋಷದಿಂದ, ಉತ್ಸಾಹದಿಂದ ಹೇಳುವಂತಾಯಿತು.

ಈ ಮನ್ವಂತರದ ಮಹಾಸಾಧನೆಯ ಯಶಸ್ಸನ್ನು ಡಾ|| ಅಂಬೇಡ್ಕರ್ ಅವರಿಗೆ ಸಮಸ್ತ ಭಾರತೀಯರು ತೃಪ್ತಿ ಹಾಗೂ ಕೃತಜ್ಞತೆಯಿಂದ ಅರ್ಪಿಸಿದ್ದಾರೆ. ಸಂವಿಧಾನ ರಚನಾ ಸಮಿತಿಯು ನಿರ್ಣಯಿಸಿದ 'ಸಂವಿಧಾನವು ಅಂಗೀಕಾರವಾಗಲಿ' ಎಂಬ ಪ್ರಸ್ತಾವವನ್ನು ಡಾ|| ಅಂಬೇಡ್ಕರ್ ಮಂಡಿಸಿದರು. 17ನೇ ನವೆಂಬರ್ 1949ರಂದು ಮೂರನೆಯ ಬಾರಿ ಅದನ್ನು [illegible] ಎಲ್ಲಾ ಸದಸ್ಯರು ಅದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದರು. [illegible] ರಚನಾ ಸಮಿತಿಯ ನುರಿತ ಸದಸ್ಯರು ಮತ್ತು ಅನುಭವಿ ಅಧ್ಯಕ್ಷರು 25ನೇ ನವೆಂಬರ್ 1949ರಂದು ಉತ್ತರ ನೀಡಲು ಎದ್ದರು. ಅವರ ಉತ್ತರವು ಸಹಜವಾಗಿಯೇ ವಿವರಣಾತ್ಮಕ, ಅಂಕಿ ಅಂಶ ಸಹಿತ, ವಿಶ್ಲೇಷಣಾತ್ಮಕವಾಗಿದ್ದುದಲ್ಲದೆ ಉದಾತ್ತ ಭಾವನೆಗಳಿಂದ ಕೂಡಿತ್ತು, ಕೃತಜ್ಞತೆಯು ಸಮರ್ಪಣೆಯೂ ಇತ್ತು. ಅಂಬೇಡ್ಕರರು ಈ ಅಂತಿಮ ಅವಕಾಶವನ್ನು ಬಳಸಿಕೊಂಡು [illegible] ಜೊತೆಗೆ ಸ್ವಲ್ಪಮಟ್ಟಿನ [illegible] ಎಚ್ಚರಿಕೆಯನ್ನು ನೀಡಿದರು. ಅಂಬೇಡ್ಕರರು [illegible] ಒಳ್ಳೆಯ ಸಂವಿಧಾನವಾದರೂ ಅದು ಕೆಟ್ಟದ್ದಾಗಿ ಪರಿವರ್ತಿತವಾಗಬಹುದು. ಏಕೆಂದರೆ ಅದನ್ನು ಕಾರ್ಯರೂಪಕ್ಕೆ ತರಬೇಕಾದವರು ಕೆಟ್ಟವರಿರುತ್ತಾರೆ. ಸಂವಿಧಾನವು ಎಷ್ಟೇ ಕೆಟ್ಟದ್ದಾದರೂ ಅದನ್ನು ಕೃತಿಗಿಳಿಸುವವರು ಒಳ್ಳೆಯವರಾಗಿದ್ದಲ್ಲಿ ಅದು ಒಳ್ಳೆಯದಾಗಿ ಪರಿವರ್ತಿತವಾಗುತ್ತದೆ. ಸಂವಿಧಾನದ ಕಾರ್ಯರೂಪವು ಸಂವಿಧಾನದ ಸ್ವರೂಪವನ್ನೇ ಅವಲಂಬಿಸಿಲ್ಲ ಮತ್ತೆ ಅವರು ಹೀಗೆ ಘೋಷಿಸಿದರು "ಭಾರತೀಯರು ದೇಶವನ್ನು ತಮ್ಮ ಮತಕ್ಕಿಂತ ಉನ್ನತವೆನ್ನುತ್ತಾರೋ ಅಥವಾ ದೇಶಕ್ಕಿಂತ ಮತವನ್ನು ದೊಡ್ಡದು ಮಾಡುವರೋ? ನನಗೆ ಗೊತ್ತಿಲ್ಲ" ಅವರು ಪ್ರವಾದಿಯಂತೆ ಅಲಂಕಾರಿಕವಾಗಿ ಹೀಗೆ ಹೇಳಿದರು "ಈ ಪ್ರಜಾಪ್ರಭುತ್ವ ಪದ್ಧತಿಯನ್ನು (ಬೌದ್ಧ ಭಿಕ್ಷು ಸಂಘಗಳನ್ನು) ಭಾರತ ಕಳೆದುಕೊಂಡಿತು. ಅದು ಎರಡನೆಯ ಸಲವೂ ಕಳೆದುಕೊಳ್ಳುವುದೇನು? ನನಗೆ ಗೊತ್ತಿಲ್ಲ. ಹೊಸದಾಗಿ ಹುಟ್ಟಿರುವ ಪ್ರಜಾಪ್ರಭುತ್ವಕ್ಕೆ ತನ್ನ ಸ್ವರೂಪವನ್ನು ಉಳಿಸಿಕೊಳ್ಳಲು ಸಾಧ್ಯ. ಆದರೆ ವಾಸ್ತವವಾಗಿ ನಿರಂಕುಶ ಪ್ರಭುತ್ವಕ್ಕೆ ಜಾಗ ಮಾಡಿಕೊಡುತ್ತದೆ. ಏನಾದರೂ ಇದ್ದಂತೆ ಘಟಿಸಿದರ ಎರಡನೆಯ ಅಪಾಯವು

ವಾಸ್ತವವಾಗುವ ಸಂಭವವೇ ಹೆಚ್ಚು. ನಾವು ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿಯೂ ಮಾಡಬೇಕಾಗಿದೆ. ರಾಜಕೀಯ ಪ್ರಜಾಪ್ರಭುತ್ವವು ಬದುಕಲು ತನ್ನ ಬುನಾದಿಯಾಗಿ ಸಾಮಾಜಿಕ ಪ್ರಜಾಪ್ರಭುತ್ವವನ್ನು ಹೊಂದಿರಬೇಕು. ಸಾಮಾಜಿಕ ಪ್ರಜಾಪ್ರಭುತ್ವವು ಒಂದು ಜೀವನ ವಿಧಾನ. ಹಾಗೆಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರಭಾವಗಳನ್ನು ಜೀವನದ ತತ್ವಗಳಾಗಿ ಅಂಗೀಕರಿಸುವುದು. 26ನೇ ಜನವರಿ 1950ರಂದು ನಾವು ವಿರೋಧಾಭಾಸಗಳ ಜೀವನವನ್ನು ಪ್ರವೇಶಿಸಲಿದ್ದೇವೆ. ರಾಜಕೀಯದಲ್ಲಿ ನಮಗೆ ಸಮಾನತೆಯಿದೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆಯಿದೆ, ರಾಜಕೀಯದಲ್ಲಿ ನಾವು 'ಒಬ್ಬ ಮನುಷ್ಯ ಒಂದು ಓಟು' ಮತ್ತು 'ಒಂದು ಓಟು ಒಂದು ಬೆಲೆ' ತತ್ತ್ವವನ್ನು ಅಂಗೀಕರಿಸಿದ್ದೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯಿಂದಾಗಿ ಒಬ್ಬ ಮನುಷ್ಯ ಒಂದು ಮೌಲ್ಯ ಎಂಬ ತತ್ವದ ನಿರಾಕರಣೆಯನ್ನು ಮುಂದುವರಿಸಿದ್ದೇವೆ. ಈ ವಿರೋಧಾಭಾಸದ ಜೀವನವನ್ನು ಇನ್ನೆಷ್ಟು ಕಾಲ ಮುಂದುವರಿಸುವುದು? ಆ ತತ್ವವನ್ನು ಬಹಳ ಕಾಲ ನಿರಾಕರಿಸಿದರೆ ನಾವು ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಗಂಡಾಂತರಕ್ಕೆ ಒಡ್ಡಿದಂತಾಗುತ್ತದೆ. ಸಾಧ್ಯವಾದಷ್ಟು ಬೇಗನೆ ನಾವು ಈ ವಿರೋಧಾಭ್ಯಾಸಗಳನ್ನು ಅಳಿಸಬೇಕು. ಇಲ್ಲವಿದ್ದರೆ ಸಂವಿಧಾನ ರಚನಾ ಸಮಿತಿಯು ತುಂಬಾ ಕಷ್ಟಪಟ್ಟು ರೂಪಿಸಿದ ರಾಜಕೀಯ ಪ್ರಜಾಪ್ರಭುತ್ವ ರಚನೆಯನ್ನು ಅಸಮಾನತೆಯಿಂದ ತೊಂದರೆಗೀಡಾದ ಜನ ಹಾಳುಗೆಡುವುತ್ತಾರೆ" ಡಾ|| ಅಂಬೇಡ್ಕರರು ತಮ್ಮ ಮಾತುಗಳನ್ನು ಸಮಾಪ್ತಿಗೊಳಿಸುತ್ತಾ ಯುಕ್ತವಾಗಿ ಎಚ್ಚರಿಕೆ ನೀಡಿದರು. ಜನರು ಜನರಿಂದಾದ ಸರ್ಕಾರದಿಂದ ಬೇಸರ ಹೊಂದುತ್ತಾರೆ. ಅವರು ಜನರ ಸರ್ಕಾರವನ್ನು ಹೊಂದಲು ಸಿದ್ಧರಾಗುತ್ತಾರೆ. ಅದು ಜನರ ಸರ್ಕಾರವೋ ಅಥವಾ ಜನರಿಗಾಗಿನ ಸರ್ಕಾರವೋ ಎಂಬ ಬಗ್ಗೆ ಅವರು ನಿರಾಸಕ್ತರಾಗುತ್ತಾರೆ. 'ಜನರ ಸರ್ಕಾರ' 'ಜನರಿಗಾಗಿರುವ ಸರ್ಕಾರ' ಮತ್ತು 'ಜನರಿಂದಾದ ಸರ್ಕಾರ' ಎಂಬ ತತ್ವವನ್ನು ಪ್ರತಿಷ್ಠೆಗೊಳಿಸಲು ಯತ್ನಿಸುತ್ತಿರುವ ಸಂವಿಧಾನವನ್ನು ಉಳಿಸುವ ಮನಸ್ಸಿದ್ದರೆ, ನಮ್ಮ ದಾರಿಯಲ್ಲಿ ಅಡ್ಡವಿರುವ, ಜನರಿಂದಾದ ಸರ್ಕಾರಕ್ಕೆ ಬದಲು ಜನರಿಗಾಗಿರುವ ಸರ್ಕಾರವನ್ನು ಇಷ್ಟಪಡುವಂತೆ ಪ್ರೇರಿಸುವ ಅಥವಾ ಅವನ್ನು ನಿವಾರಿಸುವ ನಮ್ಮ ಪ್ರಯತ್ನವನ್ನು ದುರ್ಬಲವಾಗುವಂತೆ ಮಾಡುವ ಕೆಡುಕುಗಳನ್ನು ಗುರುತಿಸುವಲ್ಲಿ ಹಿಂದೇಟು ಹಾಕದಂತೆ ನಾವು ನಿರ್ಧಾರ ಕೈಗೊಳ್ಳಬೇಕು. ದೇಶಸೇವೆ ಮಾಡಲು ಅದೊಂದೇ ಮಾರ್ಗ. ಇದಕ್ಕಿಂತ ಉತ್ತಮವಾದುದನ್ನು ನಾನು ಕಾಣೆ.

ಸ್ವಾತಂತ್ರ್ಯ ನಂತರ ಇಂದಿನ ಜನಾಂಗವಾಗಿರುವ ನಾವು ಆ ವಿವೇಕಪೂರ್ಣ, ಅನುಭವ ಪೂರ್ಣ ಮತ್ತು ನಿಷ್ಕಪಟ ನುಡಿಗಳಿಗೆ ಸ್ಪಂದಿಸಿ, ಹಾರೈಸುತ್ತ ಗಮನ ಹರಿಸಬೇಡವೆ?

ಅಮೂಲ್ಯವಾದ ಕಾಲವು ಜಾರಿಹೋಗುವ ಮುನ್ನ ನಾವು ಹಾಗೆ ಮಾಡಬೇಕಲ್ಲವೆ? ಸ್ವಾತಂತ್ರ್ಯದ ಜ್ವಾಲೆ ಹಾಗೂ ಪ್ರಜಾಪ್ರಭುತ್ವದ ಹಿಲಾಲು ಕಳಾಹೀನವಾಗಿ ಕೊನೆಗೆ ಆರಿಹೋಗುವುದಲ್ಲವೆ? ದೇವರು ನಮಗೆ ನೆರವಾಗಲಿ ಮತ್ತು ನಮ್ಮ ಪ್ರೀತಿಯ ಪ್ರಜಾಪ್ರಭುತ್ವ ಗಣರಾಜ್ಯವನ್ನು ಉಳಿಸಲಿ.

# ಸಾಮಾಜಿಕ ನ್ಯಾಯದ ಅನ್ವೇಷಣೆ

* ಪ್ರೊ. ಸಿದ್ಧೇಶ್ವರ ಪ್ರಸಾದ್

ಶ್ರೀ ಭೀಮರಾವ್ ಅಂಬೇಡ್ಕರ್ ಅವರನ್ನು ನೆನಪು ಮಾಡಿಕೊಳ್ಳುತ್ತಾ ಬರ್ಮದ ಅಂದಿನ ಪ್ರಧಾನಮಂತ್ರಿಯವರು ಹೀಗೆಂದಿದ್ದಾರೆ : "ಅಂಬೇಡ್ಕರರು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸುವಲ್ಲಿ ಚಾರಿತ್ರಿಕ ಪಾತ್ರ ವಹಿಸಿದವರಲ್ಲಿ ಮೊದಲಿಗರು" ಈ ಅಭಿಪ್ರಾಯವು ಅಂಬೇಡ್ಕರರಿಗೆ ಅರ್ಹ ಗೌರವವಷ್ಟೇ ಅಲ್ಲ, ಅವರ ವ್ಯಕ್ತಿತ್ವದ ಮತ್ತು ಅವರ ಸೇವೆಯ ನಿಜವಾದ ಮೌಲ್ಯ ನಿರ್ಧರಣೆಯಾಗಿದೆ. ಅವರ ಜೀವನವು (1891-1956) ಸಾಮಾಜಿಕ ಅನ್ಯಾಯದ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ ನಡೆಸಿದ ಹೋರಾಟ ಮತ್ತು ಅದರ ಅನ್ವೇಷಣೆಯ ವೀರಗಾಥೆ ಆಗಿದೆ. ಈ ಹೋರಾಟದಲ್ಲಿ ಅವರು ಪಡೆದ ಗೆಲುವು ಕೇವಲ ಕೆಲವರಿಗೆ ಮಾತ್ರ ಸಾಧ್ಯ. ಅವರು ಸಂವಿಧಾನದ ಸಮಿತಿಯ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು. ತಾವು ಕಂಡ ಕನಸನ್ನು ನನಸು ಮಾಡಿಕೊಂಡ ವಿಶ್ವದ ಇತಿಹಾಸದ ಕೆಲವೇ ಅದೃಷ್ಟ ಶಾಲಿಗಳಲ್ಲಿ ಅವರೊಬ್ಬರು. ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವಿಲ್ಲದ ರಾಜಕೀಯ ಪ್ರಜಾಪ್ರಭುತ್ವವು ಅಪೂರ್ಣವೆಂಬುದು ಡಾ|| ಅಂಬೇಡ್ಕರರ ಅಭಿಪ್ರಾಯ. 29ನೇ ಏಪ್ರಿಲ್ 1947ರಂದು ಸಂವಿಧಾನ ರಚನಾ ಸಭೆಯ ಸರ್ದಾರ್ ವಲ್ಲಭಬಾಯಿ ಪಟೇಲರು ಮಂಡಿಸಿದ ಪ್ರಸ್ತಾವವನ್ನು ಅಂಗೀಕರಿಸಿ ಅಸ್ಪೃಶ್ಯತೆಯನ್ನು ರದ್ದುಗೊಳಿಸಿದ್ದಲ್ಲದೆ ಅದರ ಆಚರಣೆಯನ್ನು ದಂಡನೀಯ ಅಪರಾಧವೆಂದು ಘೋಷಿಸಿದರು. ಈ ವಿಚಾರದಲ್ಲಿ ಮಹಾತ್ಮಗಾಂಧಿ ಮತ್ತು ಅಂಬೇಡ್ಕರ್ ಅವರಷ್ಟೇ ಅಲ್ಲ, ಇಡೀ ದೇಶ ಒಮ್ಮತ ಸೂಚಿಸಿತು. ಈ ಕ್ರಮವು ಭಾರತದ ಇತಿಹಾಸದಲ್ಲಿ ಅತ್ಯಂತ ಶ್ಲಾಘನೀಯವಾದ ಅಧ್ಯಾಯವೆಂದು ವಿಶ್ವವೇ ಕೊಂಡಾಡಿತು. "ನ್ಯೂಯಾರ್ಕ್ ಟೈಮ್ಸ್" ಪತ್ರಿಕೆ ಅಸ್ಪೃಶ್ಯತಾ ನಿರ್ಮೂಲನವನ್ನು ಅಮೆರಿಕದ ಗುಲಾಮೀ ಪದ್ಧತಿ ರದ್ಧಿಯಾತಿಗೆ ಹೋಲಿಸಿತು.

25ನೇ ನವೆಂಬರ್ 1949ರಂದು ಸಂವಿಧಾನ ರಚನಾಸಭೆಯಲ್ಲಿ ಅಂಬೇಡ್ಕರರು ಮಾಡಿದ ಭಾಷಣವು ಅಂದಿಗಿಂತ ಇಂದು ತೀರಾ ಪ್ರಸ್ತುತವೆನಿಸಿದೆ. ಏಕೆಂದರೆ ಅಂದು ಅವರು ವ್ಯಕ್ತಪಡಿಸಿದ ಎಲ್ಲಾ ಆತಂಕಗಳು ದುರದೃಷ್ಟವಶಾತ್

*: ಪ್ರೊ. ಸಿದ್ದೇಶ್ವರ ಪ್ರಸಾದ್ ಅವರು ಕೇಂದ್ರ ಸಚಿವರಾಗಿದ್ದರು.

ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ನಿಜವೆಂದು ಸಾಬೀತಾಗಿದೆ. ಅವರ ಭಾಷಣಾನಂತರ ನಡೆದ ಸರಣಿ ಘಟನೆಗಳು ಅವರನ್ನು ಮಂತ್ರಿಮಂಡಲಕ್ಕೆ ರಾಜೀನಾಮೆ ನೀಡಲು ಒತ್ತಾಯಿಸಿದವಷ್ಟೇ ಅಲ್ಲದೆ ಅವರ ರಾಜಕೀಯ ಪ್ರಭಾವವು ಕ್ಷೀಣಿಸುವಂತೆ ಮಾಡಿದವು. ಆದರೆ ಅವರನ್ನು ಹೋರಾಟದಿಂದ ವಿಮುಖಿಗೊಳಿಸಲಿಲ್ಲ ಎಂಬುದು ಚಾರಿತ್ರಿಕ ಸತ್ಯ. ನ್ಯಾಯವನ್ನು ಅರಸಿದವರು ಅನ್ಯಾಯವೆಸಗುವವರ ಕ್ರೋಧ ಗಳಿಸುವಂತಾಯಿತು. ಅಬ್ರಹಾಂ ಲಿಂಕನ್ ಮತ್ತು ಮಹಾತ್ಮಗಾಂಧಿ ಇದೇ ಕಾರಣಕ್ಕಾಗಿ ಕೊಲೆಗೀಡಾದರು.

*ಅಂಬೇಡ್ಕರ್ ತಮ್ಮ ಐತಿಹಾಸಿಕ ಭಾಷಣದಲ್ಲಿ ಹೀಗೆ ಹೇಳಿದ್ದರು :*

"ಬರೀ ರಾಜಕೀಯ ಪ್ರಜಾಪ್ರಭುತ್ವದಿಂದ ನಾವು ತೃಪ್ತಿಪಟ್ಟುಕೊಳ್ಳಬಾರದು. ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿ ಪರಿವರ್ತಿಸಲು ಪ್ರಯತ್ನಿಸಬೇಕು. ಸಾಮಾಜಿಕ ಪ್ರಜಾಪ್ರಭುತ್ವವನ್ನು ಆದರಿಸಿದರೆ ಮಾತ್ರ ರಾಜಕೀಯ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಪ್ರಜಾಪ್ರಭುತ್ವವೆಂದರೇನು? ಸಾಮಾಜಿಕ ಪ್ರಜಾಪ್ರಭುತ್ವವೆಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವವೆಂಬ ತತ್ವಗಳನ್ನು ಒಪ್ಪುವ ಪದ್ಧತಿ. ಈ ಮೂರೂ ಬೇರ್ಪಡಿಸಲಾಗದವು. ಸ್ವಾತಂತ್ರ್ಯವನ್ನು ಸಮಾನತೆಯಿಂದ, ಸಮಾನತೆಯನ್ನು ಸ್ವಾತಂತ್ರ್ಯದಿಂದ ಪ್ರತ್ಯೇಕಿಸಲಾಗದು. ಸಮಾನತೆಯಿಲ್ಲದೆ ಸ್ವಾತಂತ್ರ್ಯ ಬಹುಸಂಖ್ಯಾತರ ಮೇಲೆ ಕೆಲವೇ ಕೆಲವರ ದಬ್ಬಾಳಿಕೆಯಾಗಿ ಪರಿಣಮಿಸುತ್ತದೆ. ಸ್ವಾತಂತ್ರವಿಲ್ಲದ ಸಮಾನತೆ ಸ್ಫೂರ್ತಿಯ ಚಿಲುಮೆಯನ್ನು ಬತ್ತಿಸುತ್ತದೆ. ಸೋದರತ್ವವಿಲ್ಲದ ಸಮಾನತೆ ಮತ್ತು ಸ್ವಾತಂತ್ರ್ಯಗಳು ಸಹಜವಾಗಿ ಯಶಸ್ವಿಯಾಗುವುದಿಲ್ಲ. ಸೋದರಭಾವನೆಯನ್ನು ದಂಡದ ಮೂಲಕವೇ ಜಾರಿಗೊಳಿಸಬೇಕಾಗಬಹುದು. ಭಾರತೀಯ ಸಮಾಜದಲ್ಲಿ ಎರಡು ವಿಷಯಗಳು ಸಂಪೂರ್ಣವಾಗಿ ಕಾಣೆಯಾಗಿವೆ ಎಂಬುದನ್ನು ಆರಂಭದಲ್ಲೇ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಮೊದಲನೆಯದು ಸಮಾನತೆ. ಭಾರತೀಯ ಸಮಾಜವು ಸಮಾನ ಸ್ಥಾನಮಾನಗಳಿಲ್ಲದ ವರ್ಣಗಳಾಗಿ ವರ್ಗೀಕರಿಸಲ್ಪಟ್ಟಿದೆ. ಕೆಲವು ವರ್ಗಗಳು ಮೇಲು, ಮತ್ತೆ ಕೆಲವು ಕೀಳು, ಆರ್ಥಿಕ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ನಮ್ಮ ಸಮಾಜದಲ್ಲಿ ಕೆಲವರು ಅತ್ಯಧಿಕ ಐಶ್ವರ್ಯ ಹೊಂದಿದವರಿದ್ದಾರೆ. ಮತ್ತೆ ಉಳಿದವರು ಕಡುಬಡತನದಲ್ಲಿ ಜೀವಿಸುತ್ತಿದ್ದಾರೆ. 1950 ಜನವರಿ 26ರಿಂದ ನಾವು ಒಂದು ವಿಷಮ ವ್ಯವಸ್ಥೆ ಎಂದರೆ ರಾಜಕೀಯ ಸಮಾನತೆಯುಳ್ಳ ಆದರೆ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯಿಲ್ಲದ ವ್ಯವಸ್ಥೆ ನಮಗೆ ಪ್ರಾಪ್ತವಾಗುತ್ತದೆ. ರಾಜಕೀಯದಲ್ಲಿ ಒಬ್ಬ ವ್ಯಕ್ತಿ, ಒಂದು ಮತ ಎಂಬ ತತ್ವವನ್ನು ಒಪ್ಪಿಕೊಂಡಿದ್ದೇವೆ. ಆದರೆ ನಮ್ಮ ಸಾಮಾಜಿಕ ಮತ್ತು

ಆರ್ಥಿಕ ಜೀವನದಲ್ಲಿ ನಮ್ಮ ಸ್ಥಾಪಿತ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ತಾರತಮ್ಯಗಳು ಮುಂದುವರಿದಿವೆ. ಅಂದರೆ ನಾವು ಸಮ ಸಮಾಜ ತತ್ವವನ್ನು ಕಡೆಗಣಿಸುತ್ತಾ ಬಂದಿದ್ದೇವೆ. ಎಷ್ಟು ಕಾಲ ನಾವು ಇಂಥ ವಿರೋಧಾಭಾಸದ ಜೀವನ ನಡೆಸುವುದು? ಎಲ್ಲಿಯವರೆಗೆ ನಾವು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ನಿರ್ಲಕ್ಷಿಸುವುದು? ಬಹುಕಾಲದವರೆಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ನಿರ್ಲಕ್ಷಿಸುವುದು ರಾಜಕೀಯ ಪ್ರಜಾಪ್ರಭುತ್ವವನ್ನು ಗಂಡಾಂತರಕ್ಕೆ ಸಿಕ್ಕಿಸುತ್ತದೆ. ಈ ವಿರೋಧಾಭಾಸಗಳ ಸನ್ನಿವೇಶವನ್ನು ಆದಷ್ಟು ಬೇಗನೆ ನಾವು ಕೊನೆಗಾಣಿಸಬೇಕು. ಇಲ್ಲದಿದ್ದರೆ ಅಸಮಾನತೆಗೆ ಬಲಿಯಾದ ಜನ ಸಂವಿಧಾನ ರಚನಾಸಮಿತಿಯು ಪ್ರಯತ್ನಪೂರ್ವಕವಾಗಿ ಸ್ಥಾಪಿಸಿರುವ ರಾಜಕೀಯ ಪ್ರಜಾಪ್ರಭುತ್ವದ ಅಡಿಪಾಯವನ್ನೇ ಹಾಳು ಮಾಡಬಹುದು!"

ಮೇಲ್ಕಂಡ ಮಾತುಗಳಲ್ಲಿ ಡಾ|| ಅಂಬೇಡ್ಕರರ ಜೀವನಾದರ್ಶಗಳ ಸಾರಸಂಗ್ರಹ ಅಡಗಿದೆ. ಈ ಜೀವನ ಸಿದ್ಧಾಂತವು ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತೆಗಳನ್ನು ಆಧಾರವಾಗಿ ಹೊಂದಿದೆ. ಅವರು ಎಂದೂ ಒಂದು ತತ್ತ್ವವನ್ನು ಬಲಿಕೊಟ್ಟು ಇನ್ನೊಂದು ತತ್ವಕ್ಕೆ ಪ್ರಾಮುಖ್ಯತೆ ಕೊಡಲಿಲ್ಲ, ಅವರು ಈ ಮೂರು ಪರಿಕಲ್ಪನೆಗಳನ್ನು 'ತ್ರಿಮೂರ್ತಿ' ಎಂಬ ಒಂದೇ ಪದದಲ್ಲಿ ವ್ಯಕ್ತಮಾಡಿರುವುದು ಅವು ಪರಸ್ಪರ ಅವಲಂಬಿಕ ಹಾಗೂ ಪೂರಕ ಎಂಬುದನ್ನು ಸೂಚಿಸುತ್ತದೆ. ದೇಹವು ಒಂದು ಅಂಗವನ್ನು ನಿರ್ಲಕ್ಷಿಸಿದರೆ, ಉಳಿದ ಅಂಗಗಳು ತಂತಾನೇ ಶಕ್ತಿ ಕಳೆದುಕೊಳ್ಳುತ್ತವೆ. ಅದರಂತೆ ಈ ಮೂರರಲ್ಲಿ ಯಾವುದೇ ಒಂದು ಪರಿಕಲ್ಪನೆಯನ್ನು ನಿರ್ಲಕ್ಷಿಸಿದರೆ ಪ್ರಜಾಪ್ರಭುತ್ವದ ಶರೀರವು ಕ್ಷೀಣಿಸಲು ಪ್ರಾರಂಭವಾಗುತ್ತದೆ.

"ದೇಹದ ಅಂಗಗಳು ಪರಸ್ಪರ-ಅವಲಂಬಿಗಳೂ ಹಾಗೂ ಪೂರಕಗಳೂ ಆಗಿರುತ್ತವೆ" ಎಂಬ ತತ್ತ್ವವನ್ನು ನಿರ್ಲಕ್ಷಿಸಿದರೆ ದೇಹದ ಸ್ಥಿತಿ ಕ್ಷೋಭೆಗೊಳ್ಳುತ್ತದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆ ಈ ಮೂರು ಅಂಶಗಳಲ್ಲಿ ಯಾವುದಾದರೂ ಒಂದಕ್ಕೆ ಅತಿಪ್ರಾಶಸ್ತ್ಯ ಕೊಟ್ಟರೆ ಇಡೀ ವ್ಯವಸ್ಥೆಯಲ್ಲಿ ಅದು ಅಸಮತೋಲವನ್ನುಂಟು ಮಾಡುತ್ತದೆ ಮತ್ತು ಈ ವ್ಯವಸ್ಥೆಯಿಂದ ಅತೃಪ್ತರಾದ ಜನ ಇಡೀ ವ್ಯವಸ್ಥೆಯನ್ನೇ ಹಾಳು ಮಾಡಲು ಯತ್ನಿಸುವರು. ಅಧಿಕಾರ ಸೂತ್ರ ಹಿಡಿದ ವ್ಯಕ್ತಿಗಳು ಸಾಮಾಜಿಕ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಪ್ರಜಾಪ್ರಭುತ್ವಗಳ ವಿರುದ್ಧವಾಗಿ ರಾಜಕೀಯ ಪ್ರಭುತ್ವಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಾಗ ಪರಿಸ್ಥಿತಿ ಇನ್ನೂ ದಾರುಣವಾಗಿ ದೇಶದ ಸ್ವಾಭಾವಿಕ ಬೆಳವಣಿಗೆ ಕುಂಠಿತವಾಗುತ್ತದೆ. ಇತಿಹಾಸವು ಕಾಲಪ್ರವಾಹದ ಒಂದು ಭಾಗ ಮತ್ತು ಅದರ ಹರಿವನ್ನು

ಯಾರಾದರೂ ನಿಲ್ಲಿಸ ಹೋದರೆ ಸಾವು ಅಥವಾ ವಿನಾಶ ಖಂಡಿತ. ಈ ತತ್ವವು ಒಬ್ಬ ವ್ಯಕ್ತಿಯ ಏಳು ಮತ್ತು ಬೀಳಿಗೆ ಮಾತ್ರ ಅನ್ವಯಿಸದೆ ಒಂದು ಸಮಾಜಕ್ಕೆ ಅನ್ವಯಿಸುತ್ತದೆ. ಅಲಂಕಾರಿಕ ಭಾಷೆಯಲ್ಲಿ ಹೇಳಿರುವ ಮಾತುಗಳನ್ನು ಅದರ ಸರಿಯಾದ ಅರ್ಥದಲ್ಲಿ ಅರ್ಥೈಸದಿದ್ದರೆ, ಅದು ಇಡೀ ವ್ಯವಸ್ಥೆಯನ್ನು ನಾಶಗೊಳಿಸುತ್ತದೆ. ಇದಕ್ಕೆ ಜ್ವಲಂತ ಉದಾಹರಣೆಯೆಂದರೆ - ವರ್ಣವ್ಯವಸ್ಥೆಗೆ (ಜಾತಿಪದ್ಧತಿ) ಆಧಾರವೆಂದು ಹೇಳಲಾಗುವ ವೇದಗಳ ಶ್ಲೋಕ. ಆ ಶ್ಲೋಕವು ಹೀಗಿದೆ :

ಬ್ರಾಹ್ಮಣೋ ಅಸ್ಯ ಮುಖಮಾಸೀದ್ ಬಾಹೂ ರಾಜನ್ಯ ಕೃತಃ<br>
ಉರೂ ತದಸ್ಯತ್ ವೈಶ್ಯ : ಪದ್ಭ್ಯಾಗುಂ ಶೂದ್ರೋ ಅಜಾಯತ್॥

ಹಾಗೆಂದರೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಕ್ರಮವಾಗಿ ಈ ವಿಸ್ತಾರವಾದ ಸಮಾಜದ ಬಾಯಿ, ಕೈ, ತೊಡೆ ಮತ್ತು ಕಾಲುಗಳು. ಸಾತ್ವೇಳ್ಕರ್‌ಜಿಯವರು ಈ ಶ್ಲೋಕದ ಬಗ್ಗೆ ಹೀಗೆ ಹೇಳಿದ್ದಾರೆ. ಇದು ಎಲ್ಲ ವರ್ಣದವರ ಕರ್ಮಗಳ ವಿವರವನ್ನು ಅಲಂಕಾರಿಕ ಭಾಷೆಯಲ್ಲಿ ಹೇಳುತ್ತದೆ. ಶೂದ್ರರಿಗೆ ಈ ಮಂತ್ರದಲ್ಲಿ ಉನ್ನತ ಸ್ಥಾನ ಕೊಡಲಾಗಿದೆ. ಇಡೀ ದೇಹ ಕಾಲುಗಳ ಮೇಲೆ ನಿಂತಿದೆ. ಅದರಂತೆ ಇದೇ ಸಮಾಜವು ಶೂದ್ರರನ್ನು ಅವಲಂಬಿಸಿರುತ್ತದೆ. ಭಾರತೀಯ ಸಮಾಜವು ರೋಗಗ್ರಸ್ತವಾಗಲು ಕಾರಣ ತನ್ನ ಪಾದಗಳೆನಿಸಿದ ಶೂದ್ರರ ಬಗ್ಗೆ ನಿರ್ಲಕ್ಷ್ಯ ತೋರಿದ್ದು.

'ವರ್ಣ'ಗಳ (ಜಾತಿ ವ್ಯವಸ್ಥೆ) ಹುಟ್ಟು ಮೇಲಿನ ಶ್ಲೋಕದಲ್ಲಿ ವಿವರಿಸಿದ ಮಾನವ ದೇಹದ ವಿವಿಧ ಅಂಗಗಳ ಪರಸ್ಪರ ಸಂಬಂಧವನ್ನು ಆಧಾರವಾಗಿಟ್ಟುಕೊಂಡದ್ದಾಗಿದೆ. ಒಂದು ಅಂಗ ಉಳಿದವುಗಳಿಗಿಂತ ಶ್ರೇಷ್ಠವಾದುವೆಂದು ಹೇಳುವುದು ಇದರ ಉದ್ದೇಶವಲ್ಲ. ದೇಹದ ಪ್ರತಿ ಅಂಗವೂ ಇನ್ನೊಂದಕ್ಕೆ ಪರಸ್ಪರಾವಲಂಬಿ ಹಾಗೂ ಪರಸ್ಪರ ಪೂರಕ ಎಂಬುದನ್ನು ಒತ್ತಿ ಹೇಳುವುದೇ ಅದರ ಉದ್ದೇಶ. ಆದರೆ ದುರದೃಷ್ಟವಶಾತ್ ಇದೇ ಶ್ಲೋಕವನ್ನು ಒಂದು ವರ್ಣವು ಇನ್ನೊಂದಕ್ಕೆ ಮೇಲಾದುದು ಎಂದು ತೋರಲು ಮೇಲಿಂದ ಮೇಲೆ ಉದ್ಧರಿಸುವುದುಂಟು.

ವರ್ಣವ್ಯವಸ್ಥೆಯು ನಾಲ್ಕು ವರ್ಣಗಳಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಅದು ಮುಂದುವರಿದು ಐದನೇ ವರ್ಣ - ಅತಿ ಶೂದ್ರ ಅಥವಾ ಅಸ್ಪೃಶ್ಯ ವರ್ಗ ಹುಟ್ಟಿಸಿತು. ಇದು ಅಷ್ಟೇ ಅಲ್ಲ, ಈ ಐದು ವರ್ಣಗಳಿಂದ ಸಾವಿರಾರು ಜಾತಿಗಳು ಮತ್ತು ಉಪಜಾತಿಗಳು ಹುಟ್ಟಿಕೊಂಡವು. "ಶೂದ್ರ ಯಾರು?" (ಶೂದ್ರ ಕೌನ್) ಎಂಬ ಪುಸ್ತಕದಲ್ಲಿ ಡಾ॥ ಅಂಬೇಡ್ಕರ್ ಸಾಮಾಜಿಕ ನ್ಯಾಯದ

ಬಗ್ಗೆ ವಿವರವಾದ ಐತಿಹಾಸಿಕ ವಿಶ್ಲೇಷಣೆ ಮಾಡಿದ್ದಾರೆ. ಕೊನೆಯಲ್ಲಿ ಶೂದ್ರರು ಸೂರ್ಯವಂಶ ಕ್ಷತ್ರಿಯರು, ಹೊಟ್ಟೆಕಿಚ್ಚಿನಿಂದ ಬ್ರಾಹ್ಮಣರು ಜನಿವಾರ ಹಾಕಿಕೊಳ್ಳಲು ಅವರಿಗೆ ಅವಕಾಶ ಕೊಡಲಿಲ್ಲ. ಹೀಗಾಗಿ ಅವರು ಶೂದ್ರರಾಗಿ ಉಳಿಯಬೇಕಾಯಿತು. ಒಮ್ಮೆ ಅಂಬೇಡ್ಕರ್ ಹೀಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದರು. ಭಾರತದ ಸ್ವಾತಂತ್ರ್ಯಕ್ಕೆ ಹೋರಾಡುವ ಜನರು ಮೊಟ್ಟಮೊದಲು ಈಗ ಇರುವ ಅಮಾನವೀಯವಾದ ವರ್ಣವ್ಯವಸ್ಥೆಯನ್ನು ನಿವಾರಿಸಲು ಯತ್ನಿಸಬೇಕು. ಆಗ ಮಾತ್ರ ಭಾರತದಲ್ಲಿ ಸ್ವಾತಂತ್ರ್ಯಕ್ಕೆ ಸ್ವಲ್ಪವಾದರೂ ಅರ್ಥ ಬರುತ್ತದೆ ಮತ್ತು ಅದು ಒಂದು ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಬುನಾದಿಯನ್ನು ಹಾಕುತ್ತದೆ.

ಗೀತೆಯ ಈ ಶ್ಲೋಕದಲ್ಲಿ ವರ್ಣವ್ಯವಸ್ಥೆಗೆ ಅತಿಪ್ರಾಚೀನ ಮತ್ತು ಅಧಿಕೃತವಾದ ತಾತ್ವಿಕ ಹಾಗೂ ಸಾಮಾಜಿಕ ಆಧಾರವು ಕಾಣುತ್ತದೆ.

> ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮವಿಭಾಗಶಯಃ
> ತಸ್ಯಕರ್ತಾರಮಪಿ ಮಾಂ ವಿದ್ಧ್ಯ ಕರ್ತಾರಮವ್ಯಯಂ ॥

ಹಾಗೆಂದರೆ ಗುಣಕರ್ಮಗಳ ವ್ಯತ್ಯಾಸದಿಂದ ನಾಲ್ಕು ಬಗೆಯ ಜಾತಿಗಳು ನನ್ನಿಂದ ಸೃಷ್ಟಿಸಲ್ಪಟ್ಟಿವೆ. ನಾನು ಅದರ ಕರ್ತನಾದರೂ ನಾನು ನಿರ್ಲಿಪ್ತನೊ, ಪರಿವರ್ತನಾರಹಿತವಾಗಿರುತ್ತೇನೆಂದು ತಿಳಿ.

ಸಮಾಜದಲ್ಲಿ ಜನರ ನಾಲ್ಕು ವರ್ಗಗಳು ವ್ಯಕ್ತಿಗಳ ಕಸುಬಿನ ಆಧಾರದ ಮೇಲೆ ರೂಪಿಸಲ್ಪಟ್ಟಿವೆ ಎಂಬುದು ಈ ಶ್ಲೋಕದಿಂದ ಸ್ಪಷ್ಟವಾಗುತ್ತದೆ. ಹುಟ್ಟೇ ವರ್ಣವ್ಯವಸ್ಥೆ ಹಾಗೂ ಜಾತಿಪದ್ಧತಿಗಳಿಗೆ ಆಧಾರ ಎಂದು ಸಾಂಪ್ರದಾಯಕವಾಗಿ ಜನ ಗ್ರಹಿಸಿದ್ದರು. ಇಂದು - ಭಾರತೀಯ ಸಮಾಜ ಹುಟ್ಟು ಆಧಾರವಾದ ವರ್ಣವ್ಯವಸ್ಥೆಯಲ್ಲಿ ನಂಬಿಕೆಯಿಟ್ಟುದರ ಪರಿಣಾಮವಾಗಿ ತನ್ನ ಕ್ರಿಯಾತ್ಮಕತೆಯನ್ನು ಕಳೆದುಕೊಂಡಿದೆ ಎಂದು ಎಲ್ಲರೂ ಒಪ್ಪುತ್ತಾರೆ. ಪ್ರಜಾಪ್ರಭುತ್ವದ ಸಮಗ್ರ ಅಭಿವೃದ್ಧಿಯಾಗಬೇಕಾದರೆ ಈಗಿರುವ ಹುಟ್ಟಿನ ಆಧಾರದ ಮೇಲೆ ನಿಂತಿರುವ ಉಚ್ಚ - ನೀಚ ಕುಲಗಳ ಸಾಮಾಜಿಕ ಪದ್ಧತಿಯನ್ನು ನಾವು ನಿವಾರಿಸಬೇಕು ಎಂಬುದು ಅಂಬೇಡ್ಕರರ ದೃಢ ಅಭಿಪ್ರಾಯ. ಅಂಥ ವಾತಾವರಣದಲ್ಲಿ ಮಾತ್ರ ಜನರು ತಮ್ಮ ಅಂತರ್ಗತ ಗುಣಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವ ಸ್ಫೂರ್ತಿಯನ್ನು ಪಡೆಯುತ್ತಾರೆ. ಭಾರತ ಸಂವಿಧಾನದಲ್ಲಿ ಯುಕ್ತ ಅವಕಾಶಗಳನ್ನು ಮಾಡಿ ಅಸ್ಪೃಶ್ಯತೆಯ ನಿವಾರಣೆ ಮಾಡಿದ್ದರೂ ವರ್ಣವ್ಯವಸ್ಥೆ ಮತ್ತು ಜಾತಿಪದ್ಧತಿ ಇನ್ನೂ ರೂಢಿಯಲ್ಲಿವೆ ಮತ್ತು ಅವನ್ನು ಉತ್ಕಟವಾಗಿ ಸಮರ್ಥಿಸುವವರೂ ಇದ್ದಾರೆ.

ಮಹಾತ್ಮಗಾಂಧಿ ಅಸ್ಪೃಶ್ಯತೆಯನ್ನು ಹಿಂದೂಧರ್ಮದ ಒಂದು ಕಳಂಕ ಎಂದು ಪರಿಗಣಿಸಿದರೂ ಹುಟ್ಟು ಆಧಾರಿತ ಜಾತಿ ಪದ್ಧತಿಯನ್ನು ವಿರೋಧಿಸಿದರೂ ಅವರು ವರ್ಣವ್ಯವಸ್ಥೆಯ ಬೆಂಬಲಿಗರಾಗಿದ್ದರು. ಅವರ ಅಭಿಪ್ರಾಯದಲ್ಲಿ ವರ್ಣವು ಮಾನವರು ಮಾಡುವ ಕೆಲಸದ ಸ್ವರೂಪದ ಮೇಲೆ ನಿರ್ಧರಿತವಾಗಬೇಕು. ಶಾಸ್ತ್ರಗಳಲ್ಲಿ ವರ್ಣಿಸಿರುವ ವರ್ಣಾಶ್ರಮ ಪದ್ಧತಿಯು ಈಗ ವಾಡಿಕೆಯಲ್ಲಿಲ್ಲ ಮತ್ತು ಈಗಿರುವ ಜಾತಿ ಪದ್ಧತಿಯು ಬೇರೆಯೇ, ಅದನ್ನು ಆದಷ್ಟು ಬೇಗ ನಿವಾರಿಸಬೇಕು ಎಂದು ಗಾಂಧೀಜಿ ಅಭಿಪ್ರಾಯಪಟ್ಟಿದ್ದಾರೆ. ಗಾಂಧೀಜಿ ಹೇಳಿದರು, ನಾಲ್ಕು ವರ್ಗಗಳು ಸಹಜವಾದವು ಮತ್ತು ಅನಿವಾರ್ಯವಾದವು ಅಷ್ಟೇ ಅಲ್ಲ, ಸಮಾಜದ ನಿಜವಾದ ಬುನಾದಿ ಪಂಡಿತ್ ಗೋಪಿನಾಥ ಕವಿರಾಜರ ಪ್ರಕಾರ ವರ್ಣವ್ಯವಸ್ಥೆ ಮತ್ತು ಆಶ್ರಮವ್ಯವಸ್ಥೆಗಳು ವ್ಯಕ್ತಿಯು ಮೋಕ್ಷ ದೊರಕಿಸಿಕೊಳ್ಳಲು ಇರುವ ಸಾಮಾಜಿಕ ಸಂಸ್ಥೆಗಳು. ಇವೊತ್ತಿನ ಯುಗದಲ್ಲಿ ಬಹಳ ಜನ ಅದರ ವೈಶಿಷ್ಟ್ಯಗಳನ್ನು ಗ್ರಹಿಸುವುದಿಲ್ಲ, ಆದರೆ ಐತಿಹಾಸಿಕವಾಗಿ ಮತ್ತು ತಾರ್ಕಿಕವಾಗಿ ವರ್ಣಪದ್ಧತಿ ಮತ್ತು ಆಶ್ರಮಪದ್ಧತಿಗಳು ವಿಚಾರಪೂರ್ಣ ಎನಿಸುತ್ತದೆ. ಡಾ॥ ಭಗವಾನ್‌ದಾಸರು ಈ ವಿಷಯವಾಗಿ ವ್ಯಾಪಕ ಅಧ್ಯಯನ ಮಾಡಿದರು. ಅವರು ಇವೊತ್ತಿನ ಸಂದರ್ಭದ ಹಿನ್ನೆಲೆಯಲ್ಲಿ ಮನುಸ್ಮೃತಿಯನ್ನು ಅರ್ಥೈಸಿದ್ದಾರೆ.

ಡಾ॥ ಅಂಬೇಡ್ಕರರ ಸಾಮಾಜಿಕ ನ್ಯಾಯದ ಅನ್ವೇಷಣೆಯಾಗಲಿ ಹಾಗೂ 'ವರ್ಣ' ಮತ್ತು ಜಾತಿಪದ್ಧತಿಯ ಖಂಡನೆಯಾಗಲೀ ಅಸಂಗತವಲ್ಲವೆ? ಶಾಸ್ತ್ರಗಳಲ್ಲಿ ವಿವರಿಸಿರುವ ವರ್ಣಾಶ್ರಮ ಪದ್ಧತಿಯು ಈ ದಿನ ಯಾವುದೇ ಸಮಾಜದಲ್ಲಿ ರೂಢಿಯಲಿಲ್ಲ ಮತ್ತು ಈಗಿರುವ ಜಾತಿಪದ್ಧತಿ ವರ್ಣಾಶ್ರಮ ಪದ್ಧತಿಗಿಂತ ತೀರಾ ಭಿನ್ನವಾದದ್ದು. ಆದ್ದರಿಂದ ಅದನ್ನು ರದ್ದುಗೊಳಿಸಬೇಕಿದೆ - ಎಂದು ಗಾಂಧೀಜಿ ಯುಕ್ತವಾಗಿ ನುಡಿದರು. ಅಸ್ಪೃಶ್ಯತೆ ನಿವಾರಣೆಗೆ ಗಾಂಧೀಜಿ ಚಳವಳಿ ಮಾಡಿದರೇ ಹೊರತು ಜಾತಿಪದ್ಧತಿಯ ನಿರ್ಮೂಲನೆಗಾಗಿ ಅಲ್ಲ, ಜ್ಯೋತಿಬಾಫುಲೆಯಂತೆ, ಅಂಬೇಡ್ಕರ್ ವರ್ಣವ್ಯವಸ್ಥೆ ಮತ್ತು ಜಾತಿಪದ್ಧತಿಯನ್ನು ಅಮಾನವೀಯ ಮತ್ತು ಅನ್ಯಾಯ ಎಂದು ಪರಿಗಣಿಸಿದರು ಮತ್ತು ಅವರು ನಿರಂತರವಾಗಿ ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತೆಗಳ ಆಧಾರಿತ ಒಂದು ಹೊಸ ಸಾಮಾಜಿಕ ವ್ಯವಸ್ಥೆಗಾಗಿ ಹೋರಾಡಿದರು.

• ವರ್ಣಾಶ್ರಮ ಧರ್ಮಕ್ಕೆ ಆಧಾರವಾದ ಋಗ್ವೇದ, ಗೀತೆಗಳ ಗುಣಕರ್ಮಗಳನ್ನು ಧರ್ಮಪಂಡಿತರು ವ್ಯಾಖ್ಯಾನ ಮಾಡುವಾಗ ಅದರೊಡನೆ ಕರ್ತವ್ಯಗಳು ಮತ್ತು ಮರು ಹುಟ್ಟುಗಳನ್ನು ಸೇರಿಸಿದರು ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಧಾರ್ಮಿಕವಾಗಿ ಪರಿವರ್ತಿಸಿದರು. ದೇವರಿಗೆ ಹೆದರುವ ದೇಶದ

ಜನ ಅದನ್ನು ಎದುರಿಸಲಿಲ್ಲ, ಸನಾತನಗಳು, ವೈದಿಕ ಮತ್ತು ಪೌರಾಣಿಕ ಸಂಪ್ರದಾಯ ಪಾಲಕರು ಈ ಪದ್ಧತಿಯನ್ನು ಧರ್ಮದ ಭಾಗವಾಗಿ ಬೆಂಬಲಿಸಿದರು. ಮಹಾವೀರ ಮತ್ತು ಗೌತಮ ಬುದ್ಧರು ಈ ಪದ್ಧತಿಯನ್ನು ವಿರೋಧಿಸಿದರೂ ಪರ್ಯಾಯವಾಗಿ ಯಾವುದೇ ಉತ್ತಮ ಪದ್ಧತಿಯನ್ನು ಸೂಚಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಜೈನಧರ್ಮ ಮತ್ತು ಬೌದ್ಧಧರ್ಮಗಳು ಸನಾತನ ಧರ್ಮದ ಮೇಲೆ ಮೇಲುಗೈ ಸಾಧಿಸಲಾಗಲಿಲ್ಲ. ಅನಂತರ ಆಪಸ್ತಂಭ ಮತ್ತು ಬೋಧಿಯಾನ, ಮನು ಮತ್ತು ಯಾಜ್ಞವಲ್ಕ ಹಾಗೂ ಅರ್ಥಶಾಸ್ತ್ರಜ್ಞ ಚಾಣಕ್ಯ ಇವರು ಶೂದ್ರರಿಗೆ ಅವರ ಹಕ್ಕುಗಳನ್ನು ಕಿತ್ತುಕೊಂಡಿರುವ ವರ್ಣಾಶ್ರಮ ಪದ್ಧತಿಯನ್ನು ಬೆಂಬಲಿಸಿದರು. ಮನುವು ಶೂದ್ರರನ್ನು, ಪ್ರಾಣಿಗಳನ್ನು ಸಮಾನವಾಗಿ ಕಂಡನು. ಒಬ್ಬ ಬ್ರಾಹ್ಮಣನು ಒಬ್ಬ ಶೂದ್ರನನ್ನು ಕೊಂದ ಪಾಪವು, ಒಂದು ನಾಯಿ ಅಥವಾ ಒಂದು ಬೆಕ್ಕನ್ನು ಕೊಂದ ಪಾಪದಷ್ಟೇ ಎಂಬುದು ಅವನ ಅಭಿಪ್ರಾಯ.

ಇಂಥ ತಾರತಮ್ಯವಿರುವ ಪದ್ಧತಿಯ ವಿರುದ್ಧ ಯಾವುದೇ ಚಳವಳಿ ನಡೆಯಲ್ಲಿ ಅಥವಾ ಯಾವ ವ್ಯಕ್ತಿಯೂ ಇದನ್ನು ವಿರೋಧಿಸಲಿಲ್ಲ. ಗೌತಮ ಬುದ್ಧ ಪ್ರಾರಂಭಿಸಿದ ಧರ್ಮಾಂತರ ಪದ್ಧತಿ ಕೂಡ ವರ್ಣವ್ಯವಸ್ಥೆ ಮತ್ತು ಜಾತಿ ಪದ್ಧತಿಯನ್ನು ರದ್ದು ಮಾಡಲಾಗಲಿಲ್ಲ. ಭಕ್ತಿ ಚಳವಳಿ ಇದನ್ನು ಸ್ವಲ್ಪ ತಗ್ಗಿಸಿತಾದರೂ ಪೂರ್ಣವಾಗಿ ನಿವಾರಿಸಲಾಗಲಿಲ್ಲ.

ಇದರ ಹಿಂದಿರುವ ಕಾರಣವೇನು? ವರ್ಣ ಪದ್ಧತಿಯ ತಾತ್ವಿಕ - ಸಾಮಾಜಿಕ ಆಧಾರವನ್ನು ಯಾರೂ ಮುಟ್ಟುವ ಗೊಡವೆಗೆ ಹೋಗಲಿಲ್ಲ. ಈ ವಾಸ್ತವತೆಯೇ ಅದರ ಕಾರಣ. ಗೀತೆಯ ಸ್ವಧರ್ಮ ಮತ್ತು ಗುಣಕರ್ಮಗಳು ಜಾತಿಪದ್ಧತಿಯ ಆಧಾರಗಳಾದವು. ಏಕೆಂದರೆ ಗೀತೆಯ ತತ್ವವು ಅಭೇದ ಮತ್ತು ಅದ್ವೈತಗಳನ್ನು ಪ್ರತಿಪಾದಿಸುತ್ತದೆ ಮತ್ತು ವರ್ಣಪದ್ಧತಿಯು ಪಕ್ಷಪಾತವೂ ಮತ್ತು ಅದ್ವೈತಕ್ಕೆ ವಿರುದ್ಧವೂ ಆಗಿದೆ. ವರ್ಣವ್ಯವಸ್ಥೆಯ ಬೆಂಬಲಕ್ಕಾಗಿ ಋಗ್ವೇದದಲ್ಲಿನ ಋಕ್ಕುಗಳಲ್ಲಿ ಮೊದಲಿಗೆ ಈ ರೀತಿ ಉಲ್ಲೇಖಿಸಲಾಗಿದೆ. ಲೋಕದಲ್ಲಿ ಸತ್ಯವೆಂಬುದು ಒಂದು, ಜ್ಞಾನಿಗಳು ಅದನ್ನು ಬೇರೆ ಬೇರೆ ಹೆಸರಿನಲ್ಲಿ ಕರೆಯುತ್ತಾರೆ (ಋಗ್ವೇದ 1, 164, 46). ಅದ್ವೈತ ತತ್ವದಲ್ಲಿ ಮೋಕ್ಷ ಸಂಪಾದಿಸಿಸಲು ವರ್ಣವ್ಯವಸ್ಥೆಯು ಯಾವ ಸನ್ನಿವೇಶಗಳಲ್ಲಿ ಮತ್ತು ಹೇಗೆ ಬಂತು ಎಂಬ ಬಗ್ಗೆ ಈ ತನಕ ಸಂಶೋಧನೆ ನಡೆದಿಲ್ಲ. ಅದ್ವೈತದಲ್ಲಿ ನಂಬಿಕೆಯಿದ್ದ ಆದಿಶಂಕರಾಚಾರ್ಯರು ಹೇಗೆ ವರ್ಣವ್ಯವಸ್ಥೆಯನ್ನು ಬೆಂಬಲಿಸಿದರು ಎನ್ನುವುದು ಆಶ್ಚರ್ಯವೆನಿಸುತ್ತದೆ.

ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ ಜೋಶಿಯವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಹುಟ್ಟಿನ ಆಧಾರದ ಮೇಲೆ ಸೃಷ್ಟಿಸಲ್ಪಟ್ಟಿದ್ದಾರೆ ಎಂಬುದಕ್ಕೆ ಮಾನವ ಜನಾಂಗದ ಚರಿತ್ರೆಯಲ್ಲಿ ಸಾಕ್ಷಿಯಿಲ್ಲ ಎಂದಿದ್ದಾರೆ. ಅದೇ ಮಾನವ ಜನಾಂಗದಲ್ಲಿ ಹಳೆಯದರ ಬದಲು ಹೊಸ ಮೌಲ್ಯಗಳೊಡನೆ ಸಂಸ್ಕೃತಿಯು ವಿಕಾಸವಾಗಿದೆ ಎಂಬುದು ಐತಿಹಾಸಿಕ ಸತ್ಯ. ಗುಣ ಮತ್ತು ಕರ್ಮಗಳು ಪರಸ್ಪರ ವಿರೋಧಿಗಳಲ್ಲ. ಇದು ಸಾವಿರಾರು ಮಾನವ ಜೀವಿಗಳು ಜ್ಞಾನ, ನಿಗ್ರಹ, ಧೈರ್ಯ, ವ್ಯಾಪಾರ ಮತ್ತು ದೈಹಿಕ ದುಡಿಮೆ - ಈ ಎಲ್ಲಾ ಗುಣಗಳನ್ನು ಹೊಂದಿದ್ದಾರೆಂಬ ವಾಸ್ತವ ಸಂಗತಿ ಇದನ್ನು ಸಾಧಿಸಿ ತೋರಿಸಿದೆ. ಈ ಗುಣಗಳು ಬಹುಶಃ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಲ್ಲರಲ್ಲೂ ಕಂಡು ಬರುತ್ತವೆ. ಭಕ್ತಿ ಚಳವಳಿಯು ಜಾತಿಪದ್ಧತಿಯನ್ನು ನಿವಾರಿಸುವಲ್ಲಿ ಸ್ವಲ್ಪಮಟ್ಟಿನ ಸಾಧನೆ ಮಾಡಿತಾದರೂ ಅದನ್ನು ಸಂಪೂರ್ಣವಾಗಿ ನಿವಾರಿಸುವಲ್ಲಿ ಸೋತಿತು.

ಈ ಹಿನ್ನೆಲೆಯಲ್ಲಿ ನಾವು ಅಂಬೇಡ್ಕರರು ಸಾಮಾಜಿಕ ನ್ಯಾಯದ ಅನ್ವೇಷಣೆಯಲ್ಲಿ ಎಂಥ ಯಾತನೆಯನ್ನು ಅನುಭವಿಸಿದರೆಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಅವರು ಅಸ್ಪೃಶ್ಯ ಕುಟುಂಬದಲ್ಲಿ ಹುಟ್ಟಿದ್ದರಿಂದ ಸಂಕಟ ಅನುಭವಿಸಬೇಕಾಯಿತು. ಅದು ಅವರ ಮನಸ್ಸನ್ನು ಅಶಾಂತಿಯ ನೆಲೆಯಾಗಿಸಿತು. ಪರಿಣಾಮವಾಗಿ ಸಾಮಾಜಿಕ ನ್ಯಾಯಕ್ಕಾಗಿ ಅವರು ಕೆಲಸ ಮಾಡಿದರು ಮತ್ತು ಆ ದಿಸೆಯಲ್ಲಿ ಅಪರಿಮಿತ ಕಾಣಿಕೆಯನ್ನು ನೀಡಿದರು. ಅಂಬೇಡ್ಕರರು ಎರಡನೆಯ ಮನು ಎಂದು ಪರಿಗಣಿಸಲ್ಪಟ್ಟಿದ್ದು ಬಹುದೊಡ್ಡ ಗೌರವವೆಂದೇ ಹೇಳಬಹುದು.

ಸಂವಿಧಾನದ ಪ್ರಸ್ತಾವನೆಯಲ್ಲಿ ಡಾ|| ಅಂಬೇಡ್ಕರರು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳಿಗೆ ಸಂಬಂಧಪಟ್ಟಂತೆ ನ್ಯಾಯಕ್ಕೆ ಆದ್ಯತೆ ಕೊಟ್ಟಿದ್ದಾರೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರಭಾವದ ಆದರ್ಶಗಳು ಫ್ರೆಂಚ್ ಕ್ರಾಂತಿಯ ನಂತರ ಇಡೀ ಯೂರೋಪಿನಲ್ಲಿ ಅಂಗೀಕಾರವನ್ನು ಪಡೆದಿದ್ದವು. ನ್ಯಾಯದ ಪರಿಕಲ್ಪನೆ ಸಂಪೂರ್ಣವಾಗಿ ಭಾರತೀಯ ಪರಂಪರೆಯ ಕಾಣಿಕೆ. ಏನೇ ಇರಲಿ, ನ್ಯಾಯದ ಪರಿಕಲ್ಪನೆ ಅನಂತರ ಜಾತೀಯ ಪರಿಗಣನೆಗಳಿಂದ ಪ್ರಭಾವಗೊಳ್ಳುವ ಧರ್ಮದ ಸಂಪರ್ಕದಿಂದ ದೋಷಪೂರ್ಣವಾಯಿತು.

ಭಾರತೀಯ ನ್ಯಾಯ ಪರಂಪರೆಯು ಸಮತೋಲನವನ್ನು ಕಳೆದು ಕೊಂಡಿತು, ಪಕ್ಷಪಾತಿಯಾಯಿತು ಮತ್ತು ತನ್ನ ಘನತೆಯನ್ನು ಕಳೆದುಕೊಂಡಿತು. ವೇದಗಳು, ಉಪನಿಷತ್ತುಗಳು, ಗೀತೆ, ರಾಮಾಯಣ ಮತ್ತು ಮಹಾಭಾರತ,

ಪುರಾಣ ಮೊದಲಾದವು ಘೋಷಿಸಿದ ತತ್ತ್ವಗಳ ಪ್ರಕಾರ ಹುಟ್ಟಿ ಆಧಾರಿತವೂ ಮತ್ತು ತಾರತಮ್ಯ ಪೋಷಕವೂ ಆದ ವರ್ಣವ್ಯವಸ್ಥೆಗೆ ಭಾರತೀಯ ನ್ಯಾಯ ಪರಂಪರೆಯಲ್ಲಿ ಯಾವುದೇ ಸ್ಥಾನವಿಲ್ಲ.

ಅದ್ವೈತದರ್ಶನದ ಆಧಾರದ ಮೇಲೆ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಪದ್ಧತಿಯನ್ನು ಸ್ಥಾಪಿಸಲು ಸಾಧ್ಯವೆ? ಎಂದು ಕೆಲವು ಜನ ಸಂಶಯ ವ್ಯಕ್ತಪಡಿಸುತ್ತಾರೆ. ಇದು ಸಾಧ್ಯವಷ್ಟೇ ಅಲ್ಲ, ಅತ್ಯಗತ್ಯ ಮತ್ತು ಅನಿವಾರ್ಯವೆಂದು ನನಗನ್ನಿಸುತ್ತದೆ. ಅದ್ವೈತ ದರ್ಶನಕ್ಕೆ ಸೂಕ್ತ ಮಾನ್ಯತೆ ದೊರೆಯದಿದ್ದರೆ ಈ ಪ್ರಪಂಚದಲ್ಲಿ ಯಾವುದೇ ಧರ್ಮ, ಸಮಾಜ, ಪದ್ಧತಿ ಅಥವಾ ಮಾನವೀಯ ಮೌಲ್ಯಗಳು ಬಾಳಲಾರವು.

ಈಗಿರುವ ಸನ್ನಿವೇಶದಲ್ಲಿ ವೇದಗಳ ಕಾಲದಿಂದ ರೂಢಿಯಲ್ಲಿದ್ದ ಅದ್ವೈತ ಸಂಪ್ರದಾಯದಿಂದಾಗಿ ಹೊಸ ಸಾಧ್ಯತೆಗಳ ಹೊಸ ಯುಗಕ್ಕಾಗಿ ಹಂಬಲಿಸುತ್ತದೆ. ವಿದ್ಯಾ (ಆಧ್ಯಾತ್ಮ ಜ್ಞಾನ) ಮತ್ತು ಅವಿದ್ಯಾ (ತಾರ್ಕಿಕ ಜ್ಞಾನ)ಗಳು ಒಟ್ಟಿಗೇ ಮಾನವ ಜೀವನದ ಪರಿಪೂರ್ಣತೆಯತ್ತ ನಡೆಸುತ್ತವೆ, ಅದರಂತೆ ಸಮಗ್ರ ಸಾಮಾಜಿಕ ಪ್ರಗತಿ ಸಾಧಿಸುತ್ತವೆ ಎಂಬ ಅರಿವು ವೇದಗಳ ಕಾಲದಿಂದ ರೂಢಿಯಲ್ಲಿತ್ತು. ಆದರೆ ಪ್ರಾಚೀನ ಭಾರತದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಮತ್ತು ಸಂಪನ್ಮೂಲಗಳನ್ನು ಒದಗಿಸಲು ಸಾಧ್ಯವಾಗಲಿಲ್ಲ, ಏಕೆಂದರೆ ಆ ಕಾಲದಲ್ಲಿ ಭಾರತವು ವೈಜ್ಞಾನಿಕವಾಗಿ ಮುಂದುವರಿದಿರಲಿಲ್ಲ. ಸಂವಿಧಾನದಲ್ಲಿ ಘೋಷಿಸಿರುವ ವರ್ಣವ್ಯವಸ್ಥೆ ಅಥವಾ ಜಾತಿ ಪದ್ಧತಿಯ ಆಧಾರ ಹೊಂದಿರದ ನ್ಯಾಯ, ಸ್ವಾತಂತ್ರ್ಯ ಮತ್ತು ಸೋದರತೆಗಳ ಆಧಾರವುಳ್ಳ ವ್ಯವಸ್ಥೆಯನ್ನು ಸ್ಥಾಪಿಸಲು ವೈಜ್ಞಾನಿಕ ಪ್ರಗತಿಯಿಂದ ಸಾಧ್ಯವಾಗುತ್ತದೆ. ಆ ವ್ಯವಸ್ಥೆಯಲ್ಲಿ ನಮ್ಮ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವುದು ಸಾಧ್ಯವಾಗುತ್ತದೆ.

ಹದಿನಾಲ್ಕು ವರ್ಷಗಳವರೆಗಿನ ಮಕ್ಕಳಿಗೆ ಕಡ್ಡಾಯ, ಸಾರ್ವತ್ರಿಕ ಶಿಕ್ಷಣ ಜಾರಿಗೆ ತರುವ ಬಗ್ಗೆ ಭಾರತವು ಮೊದಲ ಮನುವಿನ ಬೋಧನೆ ಬಗ್ಗೆ ಎರಡನೇ ಮನುವಿನ ಸಲಹೆಗಳ ಬಗ್ಗೆ ಗಮನಕೊಡಲಿಲ್ಲ ಮತ್ತು ಅದರ ಪರಿಣಾಮಗಳು ನಮ್ಮ ಎದುರಿಗೇ ಇವೆ.

ಅದ್ವೈತ ದರ್ಶನದ ಆಧಾರದ ಮೇಲೆ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಲು ಸಮಾಜ ಮೂರನೇ ಮನುವಿಗಾಗಿ ಕಾಯಬೇಕೆ? ಎರಡನೆ ಮನುವಿನ (ಡಾ|| ಅಂಬೇಡ್ಕರ್) ಕೆಲಸಗಳು ಈ ನಿಟ್ಟಿನಲ್ಲಿ ನಮಗೆ ಮಾರ್ಗದರ್ಶನ ನೀಡುತ್ತವೆ.

# ಡಾ|| ಅಂಬೇಡ್ಕರ್ - ಸಾಮಾಜಿಕ ಕ್ರಾಂತಿಕಾರ

* ಶ್ರೀಮತಿ ರೇಣುಕಾ ರಾಯ್

ಭಾರತ ವಿಭಜನೆಯ ಬೆಲೆ ತೆತ್ತು ಸ್ವಾತಂತ್ರ್ಯ ಪಡೆದುಕೊಂಡಾದ ಮೇಲೆ ಗಾಂಧೀಜಿ, ಪಂಡಿತ್ ನೆಹರೂ ಮತ್ತಿತರ ನಾಯಕರ ಒತ್ತಾಸೆಯಂತೆ ಸಂವಿಧಾನ ರಚನಾ ಸಭೆಯು ಅಸ್ತಿತ್ವಕ್ಕೆ ಬಂತು. ಈ ಸಭೆಯ ಬಹುತೇಕ ಸದಸ್ಯರು ವಿವಿಧ ವಿಧಾನಸಭೆಗಳಿಂದ ಚುನಾಯಿತರಾಗಿದ್ದರು. ಈ ಸಂವಿಧಾನ ರಚನಾ ಸಭೆಯಲ್ಲಿ ಕೇವಲ ವಿಧಾನಸಭೆಗಳಿಂದ ಚುನಾಯಿತರಾದವರಷ್ಟೇ ಅಲ್ಲ, ಜೀವನದ ವಿವಿಧ ರಂಗಗಳಲ್ಲಿ ಕೆಲಸ ಮಾಡಿದ ಪ್ರತಿಭಾವಂತರು ಹಾಗೂ ಮಹಿಳೆಯರಿಗೆ ಈ ಸಭೆಯಲ್ಲಿ ಸೂಕ್ತ ಸ್ಥಾನವಿರಬೇಕೆಂದು, ಹೀಗಾದರೆ ಮಾತ್ರ, ಸಂವಿಧಾನ ರಚನಾ ಸಭೆಯು ಕೇವಲ ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿದ್ದವರಿಗಷ್ಟೇ ಅಲ್ಲದೆ ಸಮಗ್ರ ದೇಶದ ಎಲ್ಲರನ್ನೂ ಪ್ರತಿನಿಧಿಸಿದಂತಾಗುತ್ತದೆ ಎಂದು ಗಾಂಧೀಜಿ, ಪಂಡಿತ್ ನೆಹರೂ ಹಾಗೂ ಇತರರು ಅಭಿಪ್ರಾಯಪಟ್ಟರು. ಇದರಿಂದಾಗಿ, ರಾಜಕೀಯ ಕ್ಷೇತ್ರದಿಂದ ಹೊರಗಡೆ ವಿವಿಧ ರಂಗಗಳಲ್ಲಿ ಸ್ಥಾನ ಪಡೆದಿದ್ದ ಪ್ರತಿಭಾವಂತರು ಸಂವಿಧಾನ ರಚನಾ ಸಭೆಯಲ್ಲಿ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಯಿತು. ಹೀಗೆ ಸೇರ್ಪಡೆಯಾದವರಲ್ಲಿ ಮಹಾನ್ ವ್ಯಕ್ತಿ ಡಾ||ಅಂಬೇಡ್ಕರ್ ಅವರೂ ಒಬ್ಬರು. ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಅವರು ನೀಡಿದ ಕೊಡುಗೆ ಅದ್ವಿತೀಯವಾದುದು.

ದೃಢ ಸ್ವಭಾವ ಹಾಗೂ ಸಂಕಲ್ಪ ಶಕ್ತಿಯ ಪ್ರತೀಕವಾಗಿದ್ದ ಡಾ||ಅಂಬೇಡ್ಕರ್ ತಮಗೆ ಸರಿಯೆನಿಸಿದ ಸಂಗತಿಗಳಿಂದ ಸುಲಭವಾಗಿ ದೂರ ಸರಿಯುತ್ತಿರಲಿಲ್ಲ.

ಪರಿಶಿಷ್ಟ ಜಾತಿಯವರಾಗಿದ್ದ ಡಾ||ಅಂಬೇಡ್ಕರ್ ಅವರು ಎಷ್ಟು ದೊಡ್ಡದೇ ಸ್ಥಾನ-ಮಾನ ಹೊಂದಿದ್ದರೂ ಕ್ರೂರ ಜಾತಿ ಪದ್ಧತಿಯ ಕರಾಳತೆಯ ಕಹಿಯುಂಡಿದ್ದರು. ಜಾತಿ-ಜಾತಿಗಳ ನಡುವೆ ಭೇದಭಾವವಿರಬಾರದೆಂಬ ಹಾಗೂ ಎಲ್ಲ ಜಾತಿಯವರನ್ನು ಸಮಾನವಾಗಿ ಪರಿಗಣಿಸಬೇಕೆಂಬ ಗಾಂಧೀಜಿಯವರ ಸಿದ್ಧಾಂತವನ್ನು ಡಾ|| ಅಂಬೇಡ್ಕರ್ ಒಪ್ಪಿದ್ದರಾದರೂ, ಶತಶತಮಾನಗಳಿಂದ ಭಾರತದಲ್ಲಿ ಆಚರಣೆಯಲ್ಲಿರುವ ಜಾತಿ ಪದ್ಧತಿಯ ಕಠೋರ ಹಾಗೂ

---

* ಶ್ರೀಮತಿ ರೇಣುಕಾರಾಯ್ ಸಂವಿಧಾನ ಸಭೆಯ ಸದಸ್ಯರಾಗಿದ್ದರು.

ಸಂಕುಚಿತತೆಯ ಕಾರಣ ಗಾಂಧೀಜಿಯವರ ಸಿದ್ಧಾಂತ ಯಶಸ್ವಿಯಾಗಲಾರದೆಂದು ಭಾವಿಸಿದರು. ಕೆಳ ಜಾತಿಗಳ ಜನ ಮಡಿವಂತಿಕೆಯ ಹಿಂದೂ ಧರ್ಮವನ್ನು ತೊರೆದು, ಮಾನವರೆನ್ನೆಲ್ಲಾ ಒಂದೇ ಎಂದು ಪರಿಗಣಿಸುವ ಬೌದ್ಧ ಧರ್ಮಕ್ಕೆ ಹಿಂತಿರುಗಿದಾಗ ಮಾತ್ರ ಅವರಿಗೆ ಸಮಾನತೆ ಸಿಗಲು ಸಾಧ್ಯವೆಂದು ಡಾ|| ಅಂಬೇಡ್ಕರ್ ನಂಬಿದ್ದರು. ಡಾ||ಅಂಬೇಡ್ಕರ್ ಅವರ ಈ ನಿಲುವು ಸರಿಯಾಗಿತ್ತೆಂದು ನನಗನಿಸುತ್ತದೆ. ಗೌತಮ ಬುದ್ಧನ ಸಿದ್ಧಾಂತಗಳನ್ನು ಭಾರತದಲ್ಲಿ ತತ್ವಶಃ ಅಳವಡಿಸಿಕೊಂಡಿದ್ದರೆ, ತರುವಾಯದ ನಮ್ಮ ಇತಿಹಾಸವೇ ಬೇರೆಯಾಗಿರುತ್ತಿತ್ತು. ಬುದ್ಧನು ಜನಿಸಿದ ನಾಡಿನಲ್ಲಿಯೇ ಆತನ ವಿಚಾರಗಳಿಗೆ, ತತ್ವಗಳಿಗೆ ಮನ್ನಣೆ ಸಿಗದೇ ಹೋದದ್ದು ದೇಶದ ದುರಂತ. ಬುದ್ಧನ ವಿಚಾರಗಳು ನೆರೆಹೊರೆಯ ದೇಶಗಳಿಗೆ ಮೆಚ್ಚುಗೆಯಾಗಿ ಆ ದೇಶಗಳ ಗೌರವ ಆದರಗಳಿಂದ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಆ ದೇಶಗಳ ಸ್ಥಳೀಯ ಸಂಪ್ರದಾಯಗಳಿಗನುಗುಣವಾಗಿ ಮೂಲ ವಿಚಾರಗಳಲ್ಲಿ ಕೆಲವು ಮಾರ್ಪಾಟುಗಳಾದವು.

ಡಾ|| ಅಂಬೇಡ್ಕರ್ ಅವರ ಚಿಂತನೆಯನ್ನು ಕೇವಲ ತುಳಿತಕ್ಕೊಳಗಾದ ಜನಾಂಗಗಳು ಹಾಗೂ ಜಾತಿಭ್ರಷ್ಟರೆಂದು ಪರಿಗಣಿಸಲ್ಪಟ್ಟವರು ಮಾತ್ರವಲ್ಲ, ಇಡೀ ದೇಶವೇ ಒಪ್ಪಿಕೊಂಡಿದ್ದರೆ, ಮಹಿಳೆಯರ ವಿಚಾರದಲ್ಲಿ ಈಗ ಹೆಚ್ಚು ಹೆಚ್ಚಾಗಿ ಕಂಡುಬರುತ್ತಿರುವ ಅಹಿತಕರ ಘಟನೆಗಳು, ಅಶಾಂತಿ ಹಾಗೂ ಮೌಲ್ಯಗಳ ಅಧಃಪತನ ಇವುಗಳನ್ನು ಖಂಡಿತಾ ತಡೆಗಟ್ಟಬಹುದಾಗಿತ್ತು.

ನಾನು ಮೊದಲು ಡಾ|| ಅಂಬೇಡ್ಕರ್ ಅವರ ಬಗ್ಗೆ ಇಷ್ಟೆಲ್ಲಾ ಹೇಳಿದ್ದು ಡಾ|| ಅಂಬೇಡ್ಕರ್ ಕೇವಲ ಪರಿಶಿಷ್ಟ ಜಾತಿಗಳ ನಾಯಕರಾಗಿದ್ದರೆಂಬ ಅಥವಾ ಕರಡು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ನೀಡಿದ ಮಹಾನ್ ಕೊಡುಗೆಗಾಗಿ ಗೌರವಿಸಲ್ಪಡುತ್ತಿದ್ದರೆಂಬ ಕಾರಣದಿಂದ ಮಾತ್ರವಲ್ಲ, ಇಂದಿನ ಸಂದಿಗ್ಧ ಪರಿಸ್ಥಿತಿಗೆ ಗಣನೀಯವಾಗಿ ಸಹಾಯ ಮಾಡಬಲ್ಲ ರಾಷ್ಟ್ರೀಯ ದೃಷ್ಟಿಕೋನವನ್ನು ಹೊಂದಿದ್ದ ನಾಯಕರಲ್ಲಿ ಡಾ|| ಅಂಬೇಡ್ಕರ್ ಅವರೂ ಒಬ್ಬರಾಗಿದ್ದರೆಂಬ ಕಾರಣದಿಂದ.

ನಾನು ಡಾ|| ಅಂಬೇಡ್ಕರ್ ಅವರನ್ನು ಮೊದಲು ಭೇಟಿಯಾಗಿದ್ದು ಅವರು ಸಮಾಜದಲ್ಲಿನ ಜಾತೀಯತೆಯ ಕಾರಣದಿಂದ ನೊಂದ ಜನರಿಗಾಗಿ ಬೌದ್ಧ ಧರ್ಮದ ತತ್ವಗಳನ್ನು ಪ್ರಚುರಪಡಿಸಿದ ಮೇಲೆ. ಸಂವಿಧಾನ ರಚನಾ ಸಭೆಯು ರಚನೆಯಾದ ತರುವಾಯ ಎಷ್ಟೋ ಸಮಯದ ನಂತರ ನಾನು ಅವರನ್ನು ಅತಿ ನಿಕಟವಾಗಿ ಗಮನಿಸುವಂತಾಯಿತು. ವಿವಿಧ ವಿಷಯಗಳ ಬಗ್ಗೆ ಅವರಿಗಿದ್ದ ಜ್ಞಾನ, ಸಂವಿಧಾನ ರಚಿಸುವಾಗ ಅದರಲ್ಲಿ ಅಳವಡಿಸಿಕೊಳ್ಳಬೇಕಾದ ವಿಷಯಗಳ

ಬಗ್ಗೆ ಆಳವಾದ ತಿಳುವಳಿಕೆ ಇತ್ಯಾದಿಗಳನ್ನು ಕಂಡ ನನಗೆ ಅವರಲ್ಲಿ ಬಹಳ ಗೌರವವಿತ್ತು. ದೃಢ ನಿರ್ಧಾರಗಳಿಗೆ ಅವರು ಕಟಿಬದ್ಧರಾಗಿದ್ದರು. ಒಂದು ವಿಷಯದ ಬಗ್ಗೆ ಸದಸ್ಯರುಗಳಲ್ಲಿ ಭಿನ್ನಮತವಿದ್ದಾಗ, ಅವರುಗಳನ್ನು ಒಪ್ಪಿಸಿ ಸಮನ್ವಯ ಸ್ಥಾಪಿಸುವಲ್ಲಿ ಅವರು ಬಹುಮುಖ್ಯ ಪಾತ್ರವನ್ನು ವಹಿಸುತ್ತಿದ್ದರು. ಕೆಲವು ಕಠಿಣ ಸನ್ನಿವೇಶಗಳಲ್ಲಿಯೂ 'ರಾಜಿ' ಮಾಡಿಸಲು ಮುಖ್ಯ ಕಾರಣರಾಗಿದ್ದ ಪಂಡಿತ ಜವಾಹರಲಾಲ್ ನೆಹರೂ ಅವರಿಗೆ ಈ ದೃಷ್ಟಿಯಿಂದ ಡಾ|| ಅಂಬೇಡ್ಕರ್ ತುಂಬಾ ನೆರವಾಗುತ್ತಿದ್ದರು. ಸಂವಿಧಾನ ರಚನಾ ಸಭೆಯಲ್ಲಿನ ಸದಸ್ಯರು ವಿವಿಧ ಅಭಿಪ್ರಾಯಗಳನ್ನು ಉಳ್ಳವರಾಗಿದ್ದರೆಂಬ ಸಂಗತಿಯನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಭಾರತ ಸಂವಿಧಾನದ ಪ್ರಸ್ತಾವನೆ ಒಳಗೊಂಡಿರುವ ಉದ್ದೇಶಗಳಿಗೆ ಅನುಸಾರವಾಗಿ ಸಂವಿಧಾನದಲ್ಲಿನ ವಿವಿಧ ಅಧ್ಯಾಯಗಳನ್ನು ರಚಿಸಲಾಗಿದೆ. ಸಭೆಯ ಸದಸ್ಯರ ಭಿನ್ನಮತದ ಕಾರಣದಿಂದ ಕೆಲವೊಂದು ಬಹುಮುಖ್ಯ ಬಾಬುಗಳಿಗೆ ಸಂಬಂಧಪಟ್ಟಂತೆ - ರಾಜನೀತಿಯ ನಿರ್ದೇಶಕ ತತ್ವಗಳು - ಇದರಲ್ಲಿ ವ್ಯವಸ್ಥೆ ಮಾಡಲಾಗಿದೆ. ಆ ಬಹುಮುಖ್ಯ ವಿಷಯಗಳ ಬಗ್ಗೆ 40 ವರ್ಷಗಳು ಕಳೆದರೂ ಇನ್ನೂ ಕಾನೂನುಗಳು ರಚನೆಯಾಗಿಲ್ಲ. ಆಗ ದಂಡ ಸಂಹಿತೆ ಜಾರಿಯಲ್ಲಿತ್ತು. ಸಿವಿಲ್ ಸಂಹಿತೆಯನ್ನು ತಯಾರಿಸಲು ಮತ್ತೆ ಕೆಲ ಸಮಯ ಬೇಕಾಗಿತ್ತು ಎಂಬುದು ಡಾ|| ಅಂಬೇಡ್ಕರ್ ಹಾಗೂ ಕೆಲವು ವಕೀಲರ ಅಭಿಪ್ರಾಯವಾಗಿತ್ತು. ಇದರಿಂದಾಗಿ ಸಂವಿಧಾನವನ್ನು ಕಾನೂನಾಗಿಸುವಲ್ಲಿ ವಿಳಂಬವಾಗುತ್ತಿತ್ತು. ಆದರೆ, ಸಂವಿಧಾನವನ್ನು ಸಿದ್ಧಗೊಳಿಸಲು ಮತ್ತಷ್ಟು ಸಮಯ ಕಾಯಲು ದೇಶ್ಕ ಜನ ಸದಸ್ಯರು ತಯಾರಿರಲಿಲ್ಲ, ಆದಷ್ಟು ಬೇಗನೆ ಸಿದ್ಧವಾಗುವುದು ಅವರ ಅಭಿಪ್ರಾಯವಾಗಿತ್ತು. ಸಂವಿಧಾನವನ್ನು 1949ರ ಅಕ್ಟೋಬರ್ ತಿಂಗಳಲ್ಲಿ ಕಾನೂನಾಗಿಸಲಾಗಿತ್ತಾದರೂ ಅದರ ಹಿಂದೆ ಆವೃತ್ತಿಯ ತಯಾರಿಕೆಯಲ್ಲಿ ಇಬ್ಬರು ಹಿಂದಿ ತಜ್ಞರ ನಡುವಣ ವಿವಾದದಿಂದಾಗಿ, ಸಂವಿಧಾನವನ್ನು ಅಂತಿಮವಾಗಿ 1949ರ ನವೆಂಬರ್ 26ರಂದು ಅಂಗೀಕರಿಸಲಾಯಿತೆಂಬ ಸಂಗತಿಯನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

ಡಾ|| ಅಂಬೇಡ್ಕರ್ ಮಾಡಿದ ಅಮೋಘ ಭಾಷಣದಲ್ಲಿ, ಗಾಂಧೀಜಿ ಹಾಗೂ ಇನ್ನಿತರ ನಾಯಕರು ಕನಸು ಕಂಡಿದ್ದ ಗ್ರಾಮ ಪಂಚಾಯಿತಿ ವ್ಯವಸ್ಥೆ ಪರ್ಯಾಯಗಳಲ್ಲಿ ಅವನತಿಯತ್ತ ಸಾಗುತ್ತಾ ಬಂದು, ಇಂದು ಅದು ಕೆಟ್ಟ ರೀತಿಯ ಸಂಕುಚಿತ ಮನೋಭಾವದ ಜನರ ವೇದಿಕೆಯಾಗಿದೆಯೆಂದು, ಪಂಚಾಯಿತಿಯಲ್ಲಿ ಹೆಚ್ಚಾಗಿ ಬ್ರಾಹ್ಮಣರು ಹಾಗೂ ಉಚ್ಚ ವರ್ಗದವರೆಂದು

ಕರೆಸಿಕೊಳ್ಳುವ ಜನ ಎಲ್ಲ ಅಧಿಕಾರಗಳನ್ನು ಹೊಂದಿದ್ದಾರೆಂದು ತಿಳಿಸಿದ ಡಾ|| ಅಂಬೇಡ್ಕರ್, ಪಂಚಾಯಿತಿಗಳು ತೆಗೆದುಕೊಂಡ ನಿರ್ಣಯಗಳು ಕೆಳವರ್ಗದ ಜನಕ್ಕೆ ವಿಶೇಷವಾಗಿ ಮಹಿಳೆಯರ ವಿಚಾರದಲ್ಲಿ ಅನುಚಿತವಾಗಿವೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಡಾ|| ಅಂಬೇಡ್ಕರ್ ಅವರು ವ್ಯಕ್ತಪಡಿಸಿದ ಅಭಿಪ್ರಾಯದ ಹಿನ್ನೆಲೆಯಲ್ಲಿ ಆ ವಿಷಯದ ಬಗ್ಗೆ ಸಮಗ್ರವಾಗಿ ನಾವು ಗಮನಿಸಿದೆವು. ಸಂವಿಧಾನ ಸಭೆಯ ಬಹುತೇಕ ಮಹಿಳಾ ಸದಸ್ಯರು ಹಾಗೂ ಜವಾಹರಲಾಲ್ ನೆಹರೂ ಅವರಂಥ ಪ್ರಗತಿಶೀಲ ನಾಯಕರು, ಡಾ|| ಅಂಬೇಡ್ಕರ್ ಅವರು ಅತ್ಯಂತ ಸುಸಂಬಂಧವಾದ ವಿಷಯವನ್ನು ಎತ್ತಿದ್ದಾರೆಂದು ಅಭಿಪ್ರಾಯಪಟ್ಟರು. ಗ್ರಾಮ ಪಂಚಾಯತ್ ಪ್ರಶ್ನೆಯನ್ನು ಆಗ ಸದ್ಯಕ್ಕೆ ಕೈಬಿಡಲಾಯಿತು. ಈ ವಿಷಯವಾಗಿ ಗಾಂಧೀಜಿಯವರ ಜತೆ ಚರ್ಚೆ ನಡೆಸಿದ್ದು, ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನಿರ್ಮಿಸಬೇಕೆಂದು, ಇದರಲ್ಲಿ ಸಮಾಜದ ಎಲ್ಲ ಜನರಿಗೆ ಸೂಕ್ತ ಪ್ರಾತಿನಿಧ್ಯವಿರಬೇಕೆಂದು, ಈ ಪ್ರತಿನಿಧಿಗಳು ಸಮಾಜದ ಎಲ್ಲ ಜನರಿಗೆ ಒಳಿತಾಗುವ ನಿರ್ಧಾರಗಳನ್ನು ಕೈಗೊಳ್ಳಲು ಸಮರ್ಥರಿರಬೇಕೆಂದು ಹಾಗೂ ಪರಿಶಿಷ್ಟ ಜಾತಿಗಳವರ ಅಥವಾ ಮಹಿಳೆಯರ ಪ್ರಗತಿಗೆ ಅಡ್ಡಿಯುಂಟು ಮಾಡುವ ನಿರ್ಧಾರಗಳನ್ನು ಸ್ವೇಚ್ಛೆಯಾಗಿ ಏರುವಂತಾಗಬಾರದೆಂದು ಗಾಂಧೀಜಿಯವರು ಸಲಹೆ ನೀಡಿದ್ದು ನನಗೆ ಜ್ಞಾಪಕದಲ್ಲಿದೆ. ಇದನ್ನು ಒಮ್ಮೆಗೆ ಮಾಡಲು ಸಾಧ್ಯವಾಗದಿದ್ದುದರಿಂದ, ಈ ವಿಷಯದಲ್ಲಿ ಕೂಡಲೇ ಕ್ರಮ ಕೈಗೊಳ್ಳದಿರುವ ನಿರ್ಧಾರವನ್ನು ಸಂವಿಧಾನ ರಚನಾ ಸಭೆ ಕೈಗೊಂಡಿತು. ಈ ಬಗ್ಗೆ ವ್ಯಾಪಕ ಚರ್ಚೆಯ ನಂತರ ಈ "ಪಂಚಾಯತ್‌ರಾಜ್" ವಿಚಾರವನ್ನು 40ನೇ ಅನುಚ್ಛೇದದಲ್ಲಿ ರಾಜನೀತಿಯ ನಿರ್ದೇಶಕ ತತ್ವಗಳ ಅಡಿಯಲ್ಲಿ ತರಲಾಯಿತು. ಅದು ಹೀಗಿದೆ - "ಗ್ರಾಮ ಪಂಚಾಯತ್‌ಗಳನ್ನು ವ್ಯವಸ್ಥೆ ಮಾಡಲು ಹಾಗೂ ಅವು ಸ್ವಯಂ ಸರ್ಕಾರದ ರೀತಿಯಲ್ಲಿ ಕಾರ್ಯನಿರ್ವಹಿಸಲು ಅಗತ್ಯವಾದ ಅಧಿಕಾರಗಳು ಹಾಗೂ ಪ್ರಾಧಿಕಾರವು ಅವುಗಳಿಗೆ ದೊರೆಯುವಂತೆ ಮಾಡಲು ರಾಜ್ಯವು ಕ್ರಮಗಳನ್ನು ಕೈಗೊಳ್ಳತಕ್ಕದ್ದು". ಮುಖ್ಯ ಅಂಶಗಳಲ್ಲಿ ರಾಜನೀತಿಯ ನಿರ್ದೇಶಕ ತತ್ವಗಳನ್ನು ಪರ್ಯಾಲೋಚನೆಗೆ ಸಹ ತೆಗೆದುಕೊಳ್ಳಲಾಗದು ಎಂಬ ಸಂಗತಿಯನ್ನು ಆ ಸಮಯದಲ್ಲಿ ಸಂವಿಧಾನ ಸಭೆಯ ಸದಸ್ಯರು ಮನಗಂಡಿರಲಿಲ್ಲ. ಇತ್ತೀಚೆಗೆ ಕಾಂಗ್ರೆಸ್ ಆಡಳಿತದಲ್ಲಿ ಹಾಗೂ ರಾಜೀವ್‌ಗಾಂಧಿಯವರ ಕಾಲದಲ್ಲಿ ಮತ್ತು ನಂತರ ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವ ವಿಚಾರವನ್ನು ಕೈಗೆತ್ತಿಕೊಳ್ಳಲಾಯಿತು. ಕೆಲವು ಬದಲಾವಣೆಗಳೊಂದಿಗೆ ಅದು ಅಸ್ತಿತ್ವಕ್ಕೆ ಬರುವುದು ಸಾಧ್ಯವಿದೆ. ಪಂಚಾಯತ್‌ರಾಜ್ ವ್ಯವಸ್ಥೆಯು ಯಶಸ್ವಿಯಾಗಿ ಕೆಲಸ

ಮಾಡಬೇಕಾದರೆ, ಹಿಂದುಳಿದ ವರ್ಗಗಳು ಹಾಗೂ ದುರ್ಬಲ ವರ್ಗಗಳು ಅದರಲ್ಲಿ ಪಾಲ್ಗೊಳ್ಳುವುದು ಬಹು ಮುಖ್ಯವಾಗಿದೆ. ದೇಶದ ಪರಿಸ್ಥಿತಿಗಳು ಅವನತಿಯತ್ತ ಸಾಗುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರು ಹೆಚ್ಚು ಜವಾಬ್ದಾರಿಯನ್ನು ಹೊರಲು ಸಮರ್ಥರಾಗಬೇಕು. ಮಹಿಳೆಯರ ಉನ್ನತಿಗೆ ಸಂಬಂಧಪಟ್ಟಂತೆ - ಸ್ವಾತಂತ್ರ್ಯ ಪಡೆದ ಹೊಸತರಲ್ಲಿ ಹಾಗೂ 20 ವರ್ಷಗಳ ಹಿಂದೆ ಮಧ್ಯಂತರ ಅವಧಿಯಲ್ಲಿ ಮುಂದಾಳುಗಳು ಕೈಗೆತ್ತಿಕೊಂಡಿರುವ ಕಾರ್ಯ ಕುಂಠಿತವಾಗುತ್ತಿರುವಂತೆ ಕಾಣುತ್ತಿದೆ. ಮಹಿಳೆಯರಿಗೆ "ಸುರಕ್ಷೆ" ಇಲ್ಲದಿರುವುದು ಅಷ್ಟೇ ಅಲ್ಲ, ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರಿಗೆ ಸಮಾನಾವಕಾಶಗಳನ್ನು ಕಲ್ಪಿಸಿದ್ದ ಕಾನೂನುಗಳು ನಿಜವಾಗಿಯೂ ಜಾರಿಯಾಗಿಲ್ಲ.

ವಿವಾಹ ಹಾಗೂ ಸ್ವತ್ತಿನ ಹಕ್ಕುಗಳ ವಿಚಾರದಲ್ಲಿ ಮಹಿಳೆಯರಿಗೆ ಸಮಾನತೆಯನ್ನು ತಂದುಕೊಡುವ ಹಿಂದು ಸಂಹಿತೆಯನ್ನು ಮಂಡಿಸುವಲ್ಲಿ ಡಾ॥ ಅಂಬೇಡ್ಕರ್ ಅವರು ಮುಖ್ಯ ಪಾತ್ರವಹಿಸಿದ್ದರು. ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರ ನಿರ್ದೇಶನದಲ್ಲಿ ಹೋರಾಟ ನಡೆಸಿ ಸ್ವಾತಂತ್ರ್ಯ ಪಡೆದ ಅಂದಿನ ದಿನಗಳಲ್ಲಿ, ಅವರ ಸಹಕಾರವಿಲ್ಲದೆ ಸಂಹಿತೆಯು ತಾತ್ಕಾಲಿಕ ಸಂಸತ್ತಿನಿಂದ ಅನುಮೋದನೆಯಾಗುವಂತೆ ಮಾಡುವ ಸಾಮರ್ಥ್ಯ ನಮಗಿರಲಿಲ್ಲ. ಆದರೆ, ಡಾ॥ ಅಂಬೇಡ್ಕರ್ ಅವರು ಮಹಿಳಾ ಸದಸ್ಯರ ಸಹಕಾರದಿಂದ ಇತರ ಪ್ರಗತಿಶೀಲ ಧೋರಣೆಯ ನಾಯಕರ ಮನವೊಲಿಸಿ, ಈ ಸಂಹಿತೆಯು ಕಾನೂನಾಗುವಂತೆ ಮಾಡಲು ತುಂಬಾ ಮುತುವರ್ಜಿ ವಹಿಸಿದರು. ಸಂಹಿತೆಯನ್ನು ಕಾನೂನಾಗಿಸಲು ವಿಳಂಬ ಮಾಡುವ ದೃಷ್ಟಿಯಿಂದ ಕೆಲವು ಮುಖ್ಯ ಸದಸ್ಯರು "ಉದ್ದುದ್ದ ಭಾಷಣ" ಮಾಡಿದರು. ಇವರ ಉದ್ದನೆಯ ಭಾಷಣಕ್ಕೆ ಸಭಾಧ್ಯಕ್ಷರು ಮತ್ತು ಉಪಾಧ್ಯಕ್ಷರು ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಲಿಲ್ಲ. ಇದರಿಂದಾಗಿ ಈ ಸಂಹಿತೆಯನ್ನು ಬೆಂಬಲಿಸಿದ್ದ ಡಾ॥ ಅಂಬೇಡ್ಕರ್ ಹಾಗೂ ಇತರ ನಾಯಕರಿದ್ದ ತಾತ್ಕಾಲಿಕ ಸಂಸತ್ತು, ಸಂಹಿತೆಯನ್ನು ಅನುಮೋದಿಸುವುದಕ್ಕೆ ವೇಳೆಯೇ ಇಲ್ಲದಂತಾಯಿತು. ಈ ಸಮಯದಲ್ಲಿ, ನಾನು ಹಾಗೂ ದುರ್ಗಾಬಾಯಿ ಅವರು ಪಂಡಿತ್ ಜವಾಹರಲಾಲ್ ನೆಹರು ಅವರನ್ನು ಭೇಟಿಯಾಗಿ ಈ ವಿಷಯದ ಬಗ್ಗೆ ಚರ್ಚಿಸಿದೆವು. ಆಗ, ನೆಹರೂ ಅವರು ನಮ್ಮನ್ನು ಕುರಿತು "ಮಹಿಳೆಯರಿಗೆ ಸಮಾನ ಹಕ್ಕು ನೀಡಲು ನನಗೆ ಇಷ್ಟವಿದೆ" ಎಂಬುದನ್ನು ನೀವು ಒಪ್ಪುವಿರಾ ಎಂದು ಕೇಳಿದಾಗ, ನಾವು "ಖಂಡಿತಾ ನಿಮಗಿಷ್ಟವಿದೆ" ಎಂದೆವು. ಆಗ ನೆಹರೂ ಅವರು "ಹಾಗಿದ್ದರೆ, • ಮಹಿಳೆಯರಿಗೆ ಸಮಾನ ಹಕ್ಕು ನೀಡುವ ವಿಚಾರವನ್ನು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನಾಗಿಸೋಣ, ನಾವು ಚುನಾವಣೆಯಲ್ಲಿ ಗೆದ್ದರೆ, ವಿವಾಹ ಹಾಗೂ ಸ್ವತ್ತಿನ ವಿಚಾರಗಳಲ್ಲಿ ಹಿಂದೂ ಮಹಿಳೆಯರಿಗೆ ಸಮಾನ ಹಕ್ಕು ನೀಡುವ ಮಸೂದೆಯನ್ನು ಯಾರೂ ತಡೆಯಲು

ಸಾಧ್ಯವಿಲ್ಲ” ಎಂದು ಹೇಳಿದರು. ಡಾ॥ಅಂಬೇಡ್ಕರ್ ಹಾಗೂ ನಮ್ಮಲ್ಲಿ ಬಹುತೇಕ ಸದಸ್ಯರು ಈ ವಿಚಾರವನ್ನು ಮುಂದೂಡುವ ಸೂಚನೆಯನ್ನು ಒಪ್ಪಲು ತಯಾರಿರಲಿಲ್ಲವಾದರೂ, ಬೇರೆ ಮಾರ್ಗವೇ ಇರಲಿಲ್ಲ, ನಂತರ ಹಿಂದು ಸಂಹಿತೆಯನ್ನು ವಿಭಜಿಸಿ ಎರಡು ಪ್ರತ್ಯೇಕ ವಿಧೇಯಕಗಳನ್ನಾಗಿಸಿ, ಎಂದರೆ, ಒಂದು “ವಿವಾಹದ ಬಗ್ಗೆ” ಇನ್ನೊಂದು “ಸ್ವತ್ತಿನ ಬಗ್ಗೆ” ಮೊದಲನೇ ಸಂಸತ್ತಿನಿಂದ ಅವುಗಳಿಗೆ ಅನುಮೋದನೆ ಪಡೆದು ಕಾನೂನುಗಳನ್ನಾಗಿ ಮಾಡಲಾಯಿತು. ಮಹಿಳೆಯರು ಡಾ॥ ಅಂಬೇಡ್ಕರ್ ಅವರಿಗೆ ಚಿರಋಣಿಗಳು. ಏಕೆಂದರೆ, ಮಹಿಳೆಯರಿಗೆ ಹಕ್ಕುಗಳನ್ನು ಕಲ್ಪಿಸುವ ವಿಧೇಯಕಗಳನ್ನು ತಂದರೆಂಬ ಕಾರಣ ಮಾತ್ರದಿಂದಲ್ಲ, ಆ ಸಮಯದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿದ್ದ ಲೋಪಗಳನ್ನು ಮತ್ತು ಅದರಿಂದಾಗಬಹುದಾಗಿದ್ದ ತೊಂದರೆಗಳನ್ನು ನಮ್ಮ ಗಮನಕ್ಕೆ ತಂದುದಕ್ಕಾಗಿ. ಹಲವು ಒಳ್ಳೆಯ ಗುಣಗಳನ್ನು ಹೊಂದಿದ್ದ ಡಾ॥ ಅಂಬೇಡ್ಕರ್ ಅವರು ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಕೇವಲ ಎರಡು ವರ್ಷಗಳ ಅವಧಿಯಲ್ಲಿ, ಬೇರೆಯವರಿಗೆ “ಒಳ್ಳೆಯ ಮಾದರಿ”ಯಾಗುವಂಥ ಬೃಹತ್ ಪ್ರಮಾಣದ ಕೃತಿಯ ಕರಡನ್ನು ತಯಾರಿಸಿದರು.

ನಾನು ಮೊದಲೇ ಹೇಳಿರುವಂತೆ, ಸಂವಿಧಾನ ರಚನಾ ಸಭೆಯ ಸದಸ್ಯಳಾಗಿ ಡಾ॥ ಅಂಬೇಡ್ಕರ್ ಅವರೊಂದಿಗೆ ಕೆಲಸ ಮಾಡುವುದಕ್ಕಿಂತ ಮುಂಚಿನಿಂದಲೂ ನಾನು ಅವರ ಮಹಾನ್ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದೆನು. ಡಾ॥ ಅಂಬೇಡ್ಕರ್ ಅವರು ಒಬ್ಬ ಅಸಾಧಾರಣ ವ್ಯಕ್ತಿಯಾಗಿದ್ದರು. ಎಲ್ಲ ಸಮಸ್ಯೆಗಳನ್ನು ದೃಢ ಸಂಕಲ್ಪದಿಂದ ಬಗೆಹರಿಸುತ್ತಿದ್ದರು. ಆದರೆ, ಡಾ॥ ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಯವರೆಂಬ ಕಾರಣದಿಂದ ಎಷ್ಟೋ ವೇಳೆ “ಅಪಮಾನ”ವನ್ನು ಅನುಭವಿಸಬೇಕಾಯಿತು. ಆದರೆ, ಅವರ ಅಂತಃಸತ್ವ ಹಾಗೂ ಅಗಾಧ ಶಕ್ತಿಗೆ ಅಡೆತಡೆಗಳನ್ನು ಒಡ್ಡಲು ಯಾವುದರಿಂದಲೂ ಸಾಧ್ಯವಾಗಲಿಲ್ಲ ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಅವರ ಮಹಾನ್ ವ್ಯಕ್ತಿತ್ವಕ್ಕೆ ಸೂಕ್ತ ಮನ್ನಣೆ ನೀಡುತ್ತಿರುವುದು ನನಗೆ ಸಂತೋಷವನ್ನುಂಟು ಮಾಡಿದೆ. ರಾಷ್ಟ್ರದ ಸ್ವಾತಂತ್ರ್ಯ ಸಮರದ ಮುಂಚೂಣಿಯಲ್ಲಿದ್ದು ಗೌರವಕ್ಕೆ ಪಾತ್ರರಾಗಿರುವ ನಾಯಕರು ವಹಿಸಿದ್ದಷ್ಟೇ ಮಹತ್ವದ ಪಾತ್ರವನ್ನು ಡಾ॥ ಅಂಬೇಡ್ಕರ್ ಅವರು ವಹಿಸಿದ್ದಾರೆ. ಕ್ರೂರ ಜಾತಿ ಪದ್ಧತಿಯ ಕರಾಳತೆಯ ವಿರುದ್ಧ ಹಾಗೂ ವ್ಯಕ್ತಿಗಳಿಗೆ ಉಂಟಾಗುತ್ತಿದ್ದ ಅನ್ಯಾಯದ ವಿರುದ್ಧ ಡಾ॥ ಅಂಬೇಡ್ಕರ್ ನಡೆಸಿದ ಹೋರಾಟಕ್ಕೆ ಭಾರತದ ಇತಿಹಾಸದಲ್ಲಿ ಸರಿಯಾದ ಸ್ಥಾನವಿರಬೇಕು.

● ○ ●

# ಡಾ|| ಅಂಬೇಡ್ಕರ್ ಸಂವಿಧಾನ ಸಭೆಗೆ ಹಾಗೂ ಸಂಸತ್ತಿಗೆ ಅವರು ನೀಡಿದ ಕಾಣಿಕೆ

** ಎಸ್.ಎಲ್. ಶಕ್ಧರ್*

ಸಂವಿಧಾನ ರಚನಾ ಸಭೆಯು ಮೊಟ್ಟಮೊದಲ ಸಭೆ ಸೇರಿದ್ದು, 1946ರ ಡಿಸೆಂಬರ್ 9ರಂದು. ಪಂಡಿತ್ ಜವಾಹರಲಾಲ್ ನೆಹರೂ ಅವರು ತಮ್ಮ ಉದ್ದೇಶಗಳ ಗೊತ್ತುವಳಿಯನ್ನು ಆ ಸಭೆಯಲ್ಲಿ 1946ರ ಡಿಸೆಂಬರ್13ರಂದು ಮಂಡಿಸಿದರು. ಸಂವಿಧಾನ ರಚನಾ ಸಭೆಯು ಗೊತ್ತುವಳಿಯನ್ನು 1947ರ ಜನವರಿ 22ರಂದು ಅವಿರೋಧವಾಗಿ ಅಂಗೀಕರಿಸಿತು. 1947ರ ಆಗಸ್ಟ್ 29ರಂದು ಕರಡು ರಚನಾ ಸಮಿತಿಯೊಂದನ್ನು ರಚಿಸಲಾಯಿತು. ಸಂವಿಧಾನದ ಸಲಹೆಗಾರರು ಸಿದ್ಧಪಡಿಸಿದ್ದ ಸಂವಿಧಾನದ ಪಾಠಗಳನ್ನು (ಉಪಬಂಧಗಳನ್ನು) ಪರಿಶೀಲಿಸಿ ಸಮಿತಿಯು ಪರಿಷ್ಕರಿಸಿದ ಕರಡು ಸಂವಿಧಾನವನ್ನು ಪರ್ಯಾಲೋಚನೆಗಾಗಿ ಸಭೆಗೆ ಒಪ್ಪಿಸುವುದು ಈ ಸಮಿತಿಯ ಕೆಲಸವಾಗಿತ್ತು.

ಡಾ|| ಅಂಬೇಡ್ಕರ್ ಅವರು ಪಶ್ಚಿಮ ಬಂಗಾಳ ವಿಧಾನಸಭಾ ಸದಸ್ಯರಿಂದ ಸಂವಿಧಾನ ರಚನಾ ಸಭೆಗೆ ಚುನಾಯಿತರಾದರು. ಕರಡು ರಚನಾ ಸಮಿತಿಗೆ ಚುನಾಯಿತರಾದ ಅವರನ್ನು ನಂತರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಬೃಹತ್ ರಾಷ್ಟ್ರಗಳ ಸಂವಿಧಾನಗಳ ಬಗ್ಗೆ ಮತ್ತು 1935ನೇ ಇಸವಿಯ ಭಾರತ ಸರ್ಕಾರದ ಅಧಿನಿಯಮದ ಬಗ್ಗೆ ಅವರಿಗಿದ್ದ ಅಪಾರ ಜ್ಞಾನದಿಂದಾಗಿ ಸಂವಿಧಾನ ರಚನೆಯಲ್ಲಿ ಅವರು ಮಹತ್ವದ ಪಾತ್ರ ವಹಿಸುವಂತಾಯಿತು. ಸಂವಿಧಾನ ಕರಡಿನಲ್ಲಿನ ನಿರ್ದಿಷ್ಟ ಉಪಬಂಧಗಳನ್ನು ಒಳಗೊಂಡ ತತ್ವಗಳನ್ನು ಅವರು ನಿರೂಪಿಸುತ್ತಿದ್ದ ರೀತಿ, ಸಭೆಯ ಯಾವುದೇ ಟೀಕೆ-ಟಿಪ್ಪಣಿಗಳನ್ನು ಸಮರ್ಪಕವಾಗಿ ಹಾಗೂ ಮನವೊಪ್ಪುವಂತೆ ಮಾಡುತ್ತಿತ್ತು. ಖ್ಯಾತ ಸಂವಿಧಾನ ಇತಿಹಾಸಕಾರ ಎಂ.ಪಿ. ಪೈಲೀ ಅವರು ಭಾರತದ ಸಂವಿಧಾನವನ್ನು ರೂಪಿಸುವಲ್ಲಿ ಡಾ|| ಅಂಬೇಡ್ಕರ್ ಅವರು ಸಲ್ಲಿಸಿದ ಕೊಡುಗೆಯನ್ನು ಹೀಗೆ ಹೇಳಿದ್ದಾರೆ.

ಸಂವಿಧಾನದ ರಚನಾ ಸಭೆಯ ಚರ್ಚೆಗಳಲ್ಲಿ ಇನ್ಯಾರೂ ಪರಿಣಾಮಕಾರಿಯಾಗಿ ಅಭಿಪ್ರಾಯಗಳನ್ನು ಮಂಡಿಸುವ, ಅಭಿಪ್ರಾಯಗಳನ್ನು

---

* ಶ್ರೀ ಎಸ್.ಎಲ್. ಶಕ್ಧರ್ ಲೋಕಸಭೆಯ ಮಾಜಿ ಮಹಾಕಾರ್ಯದರ್ಶಿ ಹಾಗೂ ಚುನಾವಣಾ ಆಯೋಗದ ಮಾಜಿ ಅಧ್ಯಕ್ಷರಾಗಿದ್ದರು.

ಸ್ಪಷ್ಟವಾಗಿ ಮತ್ತು ಸುಲಭವಾಗಿ ಅರ್ಥವಾಗುವಂತೆ ತಿಳಿಸಿ ಹೇಳುವಷ್ಟು, ಪ್ರಭಾವಶಾಲಿಗಳಾಗಿರಲಿಲ್ಲ. ಆದಾಗ್ಯೂ, ಯಾರೇ ಸದಸ್ಯರು ಒಂದು ವಿಷಯದ ಬಗ್ಗೆ ಟೀಕೆ ಮಾಡಿ, ಸರಿಯಾದುದನ್ನು ಎತ್ತಿ ಹೇಳಿದಾಗ ಅದನ್ನು ಡಾ|| ಅಂಬೇಡ್ಕರ್ ಒಪ್ಪಿಕೊಳ್ಳುತ್ತಿದ್ದರು. ಸಂವಿಧಾನಕ್ಕೆ ಡಾ||ಅಂಬೇಡ್ಕರ್ ಅವರ ಕೊಡುಗೆ ನಿಸ್ಸಂದೇಹವಾಗಿಯೂ ಅತಿದೊಡ್ಡದು, ಅಪ್ರತಿಮವಾದುದು.

ನಿಜವಾಗಿಯೂ ಡಾ||ಅಂಬೇಡ್ಕರ್ ಅವರು ಆಧುನಿಕ "ಮನು" ಭಾರತದ ಸಂವಿಧಾನದ ಪಿತಾಮಹ ಅಥವಾ ಮುಖ್ಯ ರೂವಾರಿ ಎಂದು ಕರೆಸಿಕೊಳ್ಳಲು ಡಾ|| ಅಂಬೇಡ್ಕರ್ ಅವರು ಅರ್ಹರಾಗಿದ್ದಾರೆ.

ಪರಿಶಿಷ್ಟ ಜಾತಿ, ಜನಾಂಗಗಳ ಹಿತಾಸಕ್ತಿಯನ್ನು ಕಾಪಾಡಬೇಕೆಂಬ ತೀವ್ರ ಕಾಳಜಿಯೇ ಡಾ|| ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯನ್ನು ಪ್ರವೇಶಿಸಲು ಮೂಲ ಕಾರಣ. ಅದು ಅವರ ಆಶಯವಾಗಿತ್ತು. ಡಾ||ಅಂಬೇಡ್ಕರ್ ಅವರು ಸಂವಿಧಾನಕ್ಕೆ ನೀಡಿರುವ ಮಹಾನ್ ಕೊಡುಗೆಯನ್ನು ಕುರಿತು, 1956ರ ಡಿಸೆಂಬರ್ 6ರಂದು ಡಾ|| ಅಂಬೇಡ್ಕರ್ ಅವರು ನಿಧನರಾದ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಲೋಕಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಿದಾಗ ಆಡಿದ ಮಾತುಗಳು ಹೀಗಿವೆ :

"ಹಿಂದು ಸಮಾಜದ ಕ್ರೂರ ಪದ್ಧತಿಗಳ ವಿರುದ್ಧ ಸಿಡಿದೆದ್ದ ಬಂಡಾಯದ ಸಂಕೇತವಾಗಿ ಅವರು ನೆನಪಿನಲ್ಲಿ ಉಳಿಯುತ್ತಾರೆ. ಅವರು ಬಂಡೆದ್ದ ವಿಷಯಗಳು ಎಂಥವುಗಳೆಂದರೆ ಎಲ್ಲರೂ ಅವುಗಳ ವಿರುದ್ಧ ಬಂಡೇಳಲೇಬೇಕಾಗುತ್ತದೆ. ವಾಸ್ತವವಾಗಿ ನಾವು ಬೇರೆ ಬೇರೆ ವಿಧಗಳಲ್ಲಿ ಬಂಡೆದ್ದಿದ್ದೇವೆ. ಸಮಾಜದ ಬಹುಜನರು ತಮ್ಮ ಕನಿಷ್ಠ ಹಕ್ಕುಗಳನ್ನು ಅನುಭವಿಸದಂತೆ ಮಾಡುವ, ಹಿಂದಿನಿಂದ ಬಂದಿರುವ ಸಂಪ್ರದಾಯಗಳನ್ನು ತಿರಸ್ಕರಿಸಿ, ಈ ಸಂಸತ್ತು ತಾನು ರೂಪಿಸಿದ ವಿಷಯಗಳ ಬಗ್ಗೆ ಕಾನೂನುಗಳನ್ನು ರಚಿಸುತ್ತದೆ"

ಸ್ವಾತಂತ್ರ್ಯ ಪಡೆದು ನಾಲ್ಕು ದಶಕಗಳು ಕಳೆದಿದ್ದರೂ ಜಾತೀಯತೆಯ ಅನಿಷ್ಟವನ್ನು ತೊಡೆದುಹಾಕಲು ನಮಗಿನ್ನೂ ಸಾಧ್ಯವಾಗಿಲ್ಲ. ಅಲ್ಪಸಂಖ್ಯಾತರಿಗೆ ಹಾಗೂ ಸಮಾಜದಲ್ಲಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗದ ಜನರಿಗೆ ಸಂವಿಧಾನದಲ್ಲಿ ವಿಶೇಷ ರಕ್ಷಣೆಯನ್ನು ಒದಗಿಸುವ ವಿಚಾರದಲ್ಲಿ ಕೆಲವು ಟೀಕೆಗಳಿದ್ದವು. ಡಾ|| ಅಂಬೇಡ್ಕರ್ ಅವರು ಈ ವಿಚಾರದಲ್ಲಿ

ದೂರದೃಷ್ಟಿಯುಳ್ಳವರಾಗಿದ್ದರು. ಅವರು ಸಂವಿಧಾನ ರಚನಾ ಸಭೆಯಲ್ಲಿ ಹೀಗೆ ಹೇಳಿದ್ದಾರೆ :

"ನನ್ನ ಮಟ್ಟಿಗೆ ಹೇಳುವುದಾದರೆ, ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಒದಗಿಸುವ ಸಂವಿಧಾನ ರಚನಾ ಸಭೆಯು ಒಳ್ಳೆಯ ಕೆಲಸವನ್ನು ಮಾಡಿದೆಯೆಂಬುದರಲ್ಲಿ ನನಗೆ ಸಂದೇಹವಿಲ್ಲ. ಈ ದೇಶದಲ್ಲಿ ಅಲ್ಪಸಂಖ್ಯಾತರು ಹಾಗೂ ಬಹುಸಂಖ್ಯಾತರು - ಇಬ್ಬರೂ ತಪ್ಪು ದಾರಿಯನ್ನು ಅನುಸರಿಸಿದ್ದಾರೆ. ಅಲ್ಪಸಂಖ್ಯಾತರ ಅಸ್ತಿತ್ವವನ್ನು ನಿರಾಕರಿಸುವುದು ಬಹುಸಂಖ್ಯಾತರ ತಪ್ಪು. ಹಾಗೆಯೇ ಅಲ್ಪಸಂಖ್ಯಾತರು ಶಾಶ್ವತವಾಗಿ ಅಲ್ಪಸಂಖ್ಯಾತರಾಗಿ ಉಳಿಯ ಬಯಸುವುದೂ ಸಹಾ ತಪ್ಪೆ. ಈ ಎರಡೂ ಉದ್ದೇಶಗಳನ್ನು ಈಡೇರಿಸುವ ಒಂದು ಸೂತ್ರವನ್ನು ಕಂಡುಕೊಳ್ಳಬೇಕು. ಮೊದಲಿಗೆ ಅದು ಅಲ್ಪಸಂಖ್ಯಾತರ ಅಸ್ತಿತ್ವವನ್ನು ಮಾನ್ಯ ಮಾಡಬೇಕು. ಮುಂದೊಂದು ದಿನ ಬಹುಸಂಖ್ಯಾತರು ಹಾಗೂ ಅಲ್ಪಸಂಖ್ಯಾತರು ಒಂದಾಗಿ ಬಾಳಲು ಸಾಧ್ಯವಾಗಬೇಕು. ಸಂವಿಧಾನ ರಚನಾ ಸಭೆಯು ಸೂಚಿಸಿದ ಪರಿಹಾರವನ್ನು ಸ್ವಾಗತಿಸಬೇಕಾಗುತ್ತದೆ. ಯಾಕೆಂದರೆ, ಅದು ಎರಡು ಉದ್ದೇಶಗಳನ್ನು ಈಡೇರಿಸುವ ಪರಿಹಾರಗಳನ್ನು ಒಳಗೊಂಡಿದೆ. ಅಲ್ಪಸಂಖ್ಯಾತರ ರಕ್ಷಣೆಯ ವಿರುದ್ಧ ಒಂದು ಬಗೆಯ ದ್ವೇಷ ಮನೋಭಾವವನ್ನು ಬೆಳೆಸಿಕೊಂಡಿರುವವರಲ್ಲಿ, ನಾನು ಎರಡು ವಿಷಯಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ, ಅಲ್ಪಸಂಖ್ಯಾತರು ಸ್ಫೋಟಕ ಶಕ್ತಿಯಿದ್ದಂತೆ. ಒಂದು ವೇಳೆ ಅವರು ಸ್ಫೋಟಿಸಿದರೆ, ರಾಷ್ಟ್ರದ ಹಂದರವೇ ಆ ಸ್ಫೋಟಕ್ಕೆ ಸಿಡಿಯುತ್ತದೆ. ಇನ್ನು ಎರಡನೆಯದಾಗಿ ಹೇಳಬಯಸುವುದೇನೆಂದರೆ, ಭಾರತದಲ್ಲಿನ ಅಲ್ಪಸಂಖ್ಯಾತರು ತಮ್ಮ ಅಸ್ತಿತ್ವವನ್ನು ಬಹುಸಂಖ್ಯಾತರ ಕೈಯಲ್ಲಿಡಲು ಒಪ್ಪಿದ್ದಾರೆ. ಹೀಗಾಗಿ ಅಲ್ಪಸಂಖ್ಯಾತರ ವಿಚಾರದಲ್ಲಿ ಬಹುಸಂಖ್ಯಾತರು ತಮ್ಮ ಕರ್ತವ್ಯಗಳನ್ನು ಅರ್ಥ ಮಾಡಿಕೊಂಡು ನಡೆಯಬೇಕು. ಅವರ ವಿರುದ್ಧ ಯಾವುದೇ ತಾರತಮ್ಯ ನೀತಿಯನ್ನು ಅನುಸರಿಸಬಾರದು. ಅಲ್ಪಸಂಖ್ಯಾತರ ವಿಚಾರದಲ್ಲಿ ಬಹುಸಂಖ್ಯಾತರು ತಾರತಮ್ಯ ಮಾಡುವ ಅಭ್ಯಾಸವನ್ನು ಕೈ ಬಿಟ್ಟರೆ, ಅಲ್ಪಸಂಖ್ಯಾತರು ಅಲ್ಪಸಂಖ್ಯಾತರಾಗಿಯೇ ಉಳಿಯುವುದಕ್ಕೆ ಆಸ್ಪದವೇ ಇರುವುದಿಲ್ಲ".

ಪತ್ರಿಕಾ ಸ್ವಾತಂತ್ರ್ಯ ಕುರಿತು ಒಂದು ಮಾತು ಇತ್ತೀಚಿನ ವರ್ಷಗಳಲ್ಲಿ ಎಲ್ಲೆಲ್ಲೂ ಕೇಳಿಬರುತ್ತಿದೆ. ನಮ್ಮ ಸಂವಿಧಾನವು ಈ ವಿಷಯದಲ್ಲಿ ನಿರ್ದಿಷ್ಟವಾಗಿ ಉಪಬಂಧವೇರ್ಪಡಿಸಿಲ್ಲ. ಸಂವಿಧಾನವನ್ನು ಅಂಗೀಕರಿಸುವ ಸಮಯದಲ್ಲಿ, ಈ ವಿಷಯ ಬಿಟ್ಟುಹೋದ ಬಗ್ಗೆ ಟೀಕೆ ಇತ್ತು. ಇತ್ತೀಚೆಗೆ 'ಮಾನಹಾನಿ' ಕುರಿತ ವಿಧೇಯಕದ ಸಂಬಂಧದಲ್ಲಿ ಈ ಟೀಕೆ ಕೇಳಿಬಂತು. ಪತ್ರಿಕಾ ಸ್ವಾತಂತ್ರ್ಯದ

ಬಗ್ಗೆ ಸಂವಿಧಾನದಲ್ಲಿ ಉಂಟಾಗಿರುವ ಲೋಪಕ್ಕೆ ಕರಡು ರಚನಾ ಸಮಿತಿಯನ್ನು ಗುರಿ ಮಾಡಿದ ಟೀಕೆಗೆ ಡಾ॥ ಅಂಬೇಡ್ಕರ್ ಅವರು ಸಮಿತಿಯ ಪರವಾಗಿ ಹೀಗೆ ಉತ್ತರಿಸಿದ್ದಾರೆ

"ನಾಗರಿಕರಿಗೆ ಕೊಡಲಾಗದ ಹಾಗೂ ಅವರು ವೈಯಕ್ತಿಕವಾಗಿ ಚಲಾಯಿಸಲಾಗದಂತಹ ವಿಶೇಷ ಹಕ್ಕುಗಳನ್ನು ಪತ್ರಿಕೆಗಳೂ ಹೊಂದಿಲ್ಲ. ಒಬ್ಬ ಪತ್ರಿಕಾ ಸಂಪಾದಕ ಅಥವಾ ಪತ್ರಿಕೆಯ ವ್ಯವಸ್ಥಾಪಕನೂ ನಾಗರಿಕರೇ. ಅವರು ಪತ್ರಿಕೆಗಳಲ್ಲಿ ಬರೆಯುವಾಗ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಚಲಾಯಿಸುತ್ತಿದ್ದಾರಷ್ಟೇ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ವಿಶೇಷವಾಗಿ ನಮೂದಿಸುವ ಅವಶ್ಯಕತೆಯಿಲ್ಲ" ಹೀಗಾಗಿ, "ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ" ಎಂಬ ಪದಗಳು ಪತ್ರಿಕಾ ಸ್ವಾತಂತ್ರ್ಯವನ್ನು ಒಳಗೊಳ್ಳಲು ಸಾಕಾಗುತ್ತಿವೆಯೋ ಹೇಗೆ ಎಂಬ ಸಂದೇಹಕ್ಕೆ ತೆರೆ ಬಿದ್ದಂತಾಯಿತು. ರೇಡಿಯೋ, ದೂರದರ್ಶನ ಮತ್ತು ಸಿನೆಮಾ ಮತ್ತಿತರ ಮಾಧ್ಯಮಗಳ ಮೂಲಕ ವ್ಯಕ್ತಪಡಿಸುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಇದೇ ಮಾತು ಅನ್ವಯಿಸುತ್ತದೆ.

ಡಾ॥ ಅಂಬೇಡ್ಕರ್ ಮತ್ತು ಕರಡು ರಚನಾ ಸಮಿತಿಯಲ್ಲಿನ ಅವರ ಸಹೋದ್ಯೋಗಿಗಳು ಸಂವಿಧಾನದ ಕರಡು ರಚನೆಯ ಸಂಬಂಧದಲ್ಲಿ, ಅವರು ಮಾಡಿದ ಕಾರ್ಯದಿಂದ ಅತ್ಯಂತ ಗೌರವ ಆದರಗಳಿಗೆ ಪಾತ್ರರಾಗಿದ್ದರು. ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದ ಡಾ॥ ರಾಜೇಂದ್ರ ಪ್ರಸಾದ್ ಅವರು ಈ ಬಗ್ಗೆ ಹೀಗೆಂದಿದ್ದಾರೆ :

"ಅಧ್ಯಕ್ಷತೆ ಪೀಠದಲ್ಲಿ ಕುಳಿತು ಆಯಾಯ ದಿನವೇ ವೀಕ್ಷಿಸಿ, ತೀವ್ರ ಶ್ರದ್ಧೆ, ಆಸಕ್ತಿಗಳಿಂದ ಕಾರ್ಯನಿರ್ವಹಿಸಿದ್ದಾರೆ. ಕರಡು ರಚನಾ ಸಮಿತಿಯ ಸದಸ್ಯರು ಮತ್ತು ವಿಶೇಷವಾಗಿ ಸಮಿತಿಯ ಅಧ್ಯಕ್ಷರಾದ ಡಾ॥ ಅಂಬೇಡ್ಕರ್ ಅವರು ಅನಾರೋಗ್ಯದಿಂದ ಇದ್ದರೂ ಆಸಕ್ತಿಯಿಂದ ಕೆಲಸ ಮಾಡಿದ್ದಾರೆ. ಬೇರಾರೂ ಹೀಗೆ ಕೆಲಸ ಮಾಡುತ್ತಿರಲಿಲ್ಲವೆಂದು ನನಗೆ ತೋರುತ್ತದೆ. ನಾವು ಡಾ॥ ಅಂಬೇಡ್ಕರ್ ಅವರನ್ನು ಕರಡು ರಚನಾ ಸಮಿತಿಯಲ್ಲಿ ಸೇರಿಸಿ, ಅದರ ಅಧ್ಯಕ್ಷರನ್ನಾಗಿ ಮಾಡುವ ತೀರ್ಮಾನವನ್ನು ತೆಗೆದುಕೊಂಡೆವು. ಸರಿಯಾಗಿದ್ದ ಮತ್ತು ಎಂದಿಗೂ ಸರಿಯೆಂದೆನಿಸುವ ತೀರ್ಮಾನವನ್ನು ನಾವೆಂದೂ ಮಾಡಿರಲಿಲ್ಲ. ಡಾ॥ ಅಂಬೇಡ್ಕರ್ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರಷ್ಟೇ ಅಲ್ಲ, ತಾವು ಮಾಡಿದ ಕೆಲಸಕ್ಕೆ ಒಂದು ಹೊಳಪನ್ನು ತಂದುಕೊಟ್ಟರು".

ಅಗಾಧವಾದ ಬುದ್ಧಿಶಕ್ತಿ ಮತ್ತು ಬೌದ್ಧಿಕ ಪ್ರಾಮಾಣಿಕತೆಯನ್ನು ಹೊಂದಿದ್ದ ಡಾ॥ ಅಂಬೇಡ್ಕರ್ ಅವರು ಕರಡು ಸಂವಿಧಾನದ ರಚನೆಗೆ ಸಂಬಂಧಿಸಿದ ಎಲ್ಲ

ಗೌರವವನ್ನು ಸಂವಿಧಾನದ ಸಲಹೆಗಾರರಿಗೆ, ಸಮಿತಿಯಲ್ಲಿ ತನ್ನೊಂದಿಗೆ ಕೆಲಸ ಮಾಡಿದ ಸಹೋದ್ಯೋಗಿಗಳಿಗೆ, 'ಸಂವಿಧಾನದ ಪ್ರಧಾನ ರಚನಾಕಾರನೆಂದು' ತಾವು ಕರೆದ ಶ್ರೀ ಎಸ್.ಎನ್. ಮುಖರ್ಜಿಯವರಿಗೆ ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ಸಲ್ಲಿಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಅಭಿನಂದಿಸಿ ಹೀಗೆಂದಿದ್ದಾರೆ :

"ಕಾಂಗ್ರೆಸ್ ಪಕ್ಷದ ಶಿಸ್ತಿನಿಂದಾಗಿ ಸಂವಿಧಾನ ರಚನಾ ಸಭೆಯಲ್ಲಿ, ಸಂವಿಧಾನದಲ್ಲಿನ ಪ್ರತಿಯೊಂದು ಅನುಚ್ಛೇಧಗಳು ಮತ್ತು ತಿದ್ದುಪಡಿಗಳಿಗೆ ಬರಬಹುದಾಗಿದ್ದ ಟೀಕೆ ಟಿಪ್ಪಣಿಗಳ ಅರಿವಿನೊಂದಿಗೆ ಸಂವಿಧಾನವನ್ನು ಮಂಡಿಸಲು ಕರಡು ರಚನಾ ಸಮಿತಿಗೆ ಸಾಧ್ಯವಾಯಿತು. ಸಭೆಯಲ್ಲಿ ಕರಡು ಸಂವಿಧಾನವು ಸುಸೂತ್ರವಾಗಿ ಅಂಗೀಕಾರವಾಗುವಂತೆ ಮಾಡಿದ ಕಾಂಗ್ರೆಸ್ ಪಕ್ಷವು ಎಲ್ಲ ಗೌರವಕ್ಕೆ ಪಾತ್ರವಾಗಿದೆ".

ಮುಂದೆ, ಸಂವಿಧಾನದ ಕಾರ್ಯನಿರ್ವಹಣೆ ಕುರಿತು ಡಾ|| ಅಂಬೇಡ್ಕರ್ ಅವರು, ಸಂವಿಧಾನದ ಕಾರ್ಯನಿರ್ವಹಣೆಯು ಸಂಪೂರ್ಣವಾಗಿ ಸಂವಿಧಾನದ ಸ್ವರೂಪವನ್ನು ಆಧರಿಸಿರಬಾರದೆಂದಿದ್ದಾರೆ. ಈ ಬಗ್ಗೆ ಅವರ ಮಾತುಗಳು ಹೀಗಿವೆ :

"ಸಂವಿಧಾನವು, ರಾಜ್ಯದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದಾದಷ್ಟೇ. ರಾಜ್ಯದ ಈ ಮೂರು ಅಂಗಗಳ ಕಾರ್ಯ ನಿರ್ವಹಣೆಯು ಜನತೆ ಮತ್ತು ರಾಜಕೀಯ ಪಕ್ಷಗಳನ್ನು ಆಧರಿಸಿದೆ. ಅವರು ತಮ್ಮ ಆಕಾಂಕ್ಷೆಗಳನ್ನು ಮತ್ತು ಧೋರಣೆಗಳನ್ನು ಈಡೇರಿಸಿಕೊಳ್ಳಲು ತಮ್ಮ ದಾಳಗಳನ್ನಾಗಿಸಿಕೊಳ್ಳುತ್ತಾರೆ...".

ಡಾ|| ಅಂಬೇಡ್ಕರ್ ಅವರು ನೆಹರೂ ಸಚಿವ ಸಂಪುಟದಲ್ಲಿ ಕಾನೂನು ಸಚಿವರಾಗಿದ್ದರು. 1951ರ ಸೆಪ್ಟೆಂಬರ್ ತಿಂಗಳಲ್ಲಿ ಸಚಿವ ಪದವಿಗೆ ರಾಜೀನಾಮೆಯಿತ್ತರು. ಅವರು 1952ರ ಮಾರ್ಚ್ ತಿಂಗಳಲ್ಲಿ ರಾಜ್ಯಸಭೆಗೆ ಚುನಾಯಿತರಾದರು. ಅವರು 1956ರ ಡಿಸೆಂಬರ್ 6 ರಂದು ಹಠಾತ್ ನಿಧನರಾದರು. ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರ ಮಾತುಗಳಲ್ಲಿ ಹೇಳುವುದಾದರೆ "ಭಾರತ ಸಂವಿಧಾನ ರಚನೆಯಲ್ಲಿ ಡಾ|| ಅಂಬೇಡ್ಕರ್ ಅವರು ಬಹು ಮಹತ್ವದ ಪಾತ್ರ ವಹಿಸಿದ್ದರು. ತರುವಾಯ ಸಂವಿಧಾನ ರಚನಾ ಸಭೆಯ ಕಾನೂನು ರಚನಾ ಭಾಗದಲ್ಲಿ ಮತ್ತು ನಂತರ ತಾತ್ಕಾಲಿಕ ಸಂಸತ್ತಿನಲ್ಲಿ ಅವರದು ಬಹುಮುಖ್ಯ ಪಾತ್ರವಾಗಿತ್ತು".

ಸಂಸತ್ತಿನಲ್ಲಿ ಹಿಂದು ಕಾನೂನು ಸುಧಾರಣೆಯ ಸಂಬಂಧದಲ್ಲಿ ಡಾ|| ಅಂಬೇಡ್ಕರ್ ಮಾಡಿದ ಪ್ರಯತ್ನಗಳಿಂದಾಗಿಯೂ ಅವರು ನಮ್ಮ ನೆನಪಿನಲ್ಲಿ ಉಳಿಯುತ್ತಾರೆ. ಅವರು 1951ರ ಫೆಬ್ರವರಿ 5 ರಂದು ಹಿಂದು ಸಂಹಿತೆ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಿದರು. 1952ರ ಮೊದಲು ಮಹಾಚುನಾವಣೆಗಳಿಗೆ ಮುಂಚಿತವಾಗಿಯೇ ಆ ವಿಧೇಯಕಕ್ಕೆ ಸಂಸತ್ತಿನ ಅನುಮೋದನೆ ಪಡೆಯುವ ಅಪೇಕ್ಷೆ ಅವರದಾಗಿತ್ತು. ಆವರ ಜೀವಿತಾವಧಿಯಲ್ಲಿ ಈ ವಿಧೇಯಕವನ್ನು ಭಾಗ ಭಾಗವಾಗಿ ಮಾತ್ರವೇ ಅನುಮೋದಿಸಲಾಯಿತು. ಡಾ|| ಅಂಬೇಡ್ಕರ್ ತಮ್ಮ ಮೂಲ ವಿಧೇಯಕದಲ್ಲಿ ಸೇರಿಸಲಾಗಿದ್ದ ತತ್ವಗಳು ಹಲವಾರು ದೃಷ್ಟಿಯಿಂದ ಉತ್ತಮವಾಗಿದ್ದವೆಂದು ಅವರ ಸಮಕಾಲೀನದಲ್ಲಿ ಕೆಲವರು ಅಭಿಪ್ರಾಯಪಟ್ಟರು.

ನಾನು ಈ ಮಹಾನ್ ಚೇತನಕ್ಕೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ. ನಾನು ಅವರ ಸಂಪರ್ಕಕ್ಕೆ ಬಂದಿದ್ದು, ಅವರು ಸಂವಿಧಾನದ ರಚನಾ ಸಭೆಯ ಕರಡು ರಚನಾ ಸಮಿತಿಯಲ್ಲಿ ಕೆಲಸ ಮಾಡಲು ಆರಂಭಿಸಿದ ಸಮಯದಿಂದಲೇ. ಆಗಿನ ಕೇಂದ್ರ ಕಾನೂನು ರಚನಾ ಸಭೆಯ ಕಾರ್ಯದರ್ಶಿಗಳು, ನಂತರ ಕೇಂದ್ರ ಸಂವಿಧಾನ ಸಭೆಯ (ಕಾನೂನು ರಚನೆ) ಹಾಗೂ ತಾತ್ಕಾಲಿಕ ಸಂಸತ್ತಿನ ಮತ್ತು ಲೋಕಸಭೆಯ ಕಾರ್ಯದರ್ಶಿಗಳೂ ಆಗಿದ್ದ ಶ್ರೀ ಎಂ.ಎನ್. ಕೌಲ್ ಅವರ ಕಚೇರಿಯ ಮುಖಾಂತರ, ನಾನು ಡಾ|| ಅಂಬೇಡ್ಕರ್ ಅವರ ಸಂಪರ್ಕಕ್ಕೆ ಬಂದೆ. ಸಂಸತ್ತಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಡಾ|| ಅಂಬೇಡ್ಕರ್ ಅವರು ಶ್ರೀ ಕೌಲ್ ಅವರ ಜೊತೆ ಆಗಾಗ್ಗೆ ಸಮಾಲೋಚನೆ ನಡೆಸುತ್ತಿದ್ದರು. ನಾನು ಶ್ರೀ ಕೌಲ್ ಅವರ ಜೊತೆಗೂಡಿ ಪದೇ ಪದೇ ಡಾ|| ಅಂಬೇಡ್ಕರ್ ಅವರನ್ನು ಭೇಟಿ ಮಾಡಿ ವಿವಿಧ ಕರಡು ಅನುಚ್ಛೇದಗಳ ಬಗ್ಗೆ ಮಾತನಾಡುತ್ತಿದ್ದೆವು. ಸಂಸತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ.ವಿ. ಮಾವಲಂಕರ್ ಅವರ ಅನುಮೋದನೆ ಪಡೆದು, ಸಂವಿಧಾನದಲ್ಲಿ ಉಲ್ಲೇಖಿತವಾಗಿರುವ ಸಂಸತ್ತನ್ನು ಸಂಭೋದಿಸಿ ರಾಷ್ಟ್ರಪತಿಯ ಭಾಷಣ, ಸಂಸತ್ತಿನ ಉಭಯಸದನಗಳ ಜಂಟಿ ಅಧಿವೇಶನಗಳು, ಸಂಸತ್ತಿನ ವಿಶೇಷಾಧಿಕಾರಿಗಳು, ಹಣಕಾಸಿನ ಕಾರ್ಯ ವಿಧಾನಗಳು, ಧನ ವಿನಿಯೋಗ ವಿಧೇಯಕ, ಸಂಸತ್ತಿನ ಸಚಿವಾಲಯ ಮತ್ತು ಇತರ ಸಂಗತಿಗಳ ಬಗ್ಗೆ ಇನ್ನೂ ಅನೇಕ ಇತರ ಸಂಗತಿಗಳ ಬಗ್ಗೆ - ನಾವು ಸಲಹೆ ನೀಡಲು ಸಾಧ್ಯವಾಗಿತ್ತು. ಪ್ರಪಂಚದ ಬೇರೆ ಬೇರೆ ಸಂವಿಧಾನಗಳಲ್ಲಿ ಈ ವಿಷಯಗಳ ಬಗ್ಗೆ ಇರುವಂಥ ಉಪಬಂಧಗಳನ್ನು ಕಲೆ ಹಾಕಿ, ಆ ಕುರಿತು ಡಾ|| ಅಂಬೇಡ್ಕರ್ ಅವರೊಡನೆ ಚರ್ಚಿಸುತ್ತಿದ್ದೆವು. ಡಾ|| ಅಂಬೇಡ್ಕರ್ ಅವರು ಚರ್ಚೆಗಳಲ್ಲಿ ಅತ್ಯಂತ

ಸಂಯಮ ತೋರುತ್ತಿದ್ದರು. ಅವುಗಳನ್ನು ಆಲಿಸುತ್ತಿದ್ದರು, ಒಳ್ಳೆಯ ವಿಮರ್ಶೆ ಮಾಡುತ್ತಿದ್ದರು. ವಿವಿಧ ಆಲೋಚನೆಗಳನ್ನು ಹೆಣೆಯುತ್ತಿದ್ದರು. ಅವರ ಆಲೋಚನೆಗಳು ಅತ್ಯಂತ ಸ್ಪಷ್ಟವಾಗಿದ್ದವು, ವಿಚಾರಗಳು ಸ್ಫುಟವಾಗಿದ್ದವು. ಕಾನೂನು ಪಾರಿಭಾಷಿಕಗಳ ಬಗ್ಗೆ ಅಗಾಧ ಪಾಂಡಿತ್ಯ ಹೊಂದಿದ್ದರು. ಹಲವು ಸಂಜೆಗಳನ್ನು ಇವರೊಡನೆ ಕಳೆದಿದ್ದು, ಈ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದುದು ನನಗಿನ್ನೂ ನೆನಪಿದೆ.

ಆ ತರುವಾಯ, ನಾನು ಸಂಸದೀಯ ವ್ಯವಹಾರಗಳ ಕಾರ್ಯದರ್ಶಿಯಾದ ಮೇಲೆ ಪುನಃ ಅವರೊಡನೆ ಕೆಲಸ ಮಾಡುವ ಅವಕಾಶ ಒದಗಿತು. ಅವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಕುರಿತ ಸಂಪುಟ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡುವಾಗ, ನಾನು ಇಲಾಖೆಯ ಕಾನೂನು ಕಾರ್ಯದರ್ಶಿಯಾಗಿ ಸಂಸತ್ತಿನ ಎರಡೂ ಸದನಗಳ ವ್ಯವಹಾರಗಳ ಬಗ್ಗೆ ಪಟ್ಟಿ ತಯಾರಿಸಿ ಕೊಡಬೇಕಾಗಿತ್ತು. ಅವರಿಗೆ, ಪ್ರಿಯವಾದ ಹಿಂದು ಸಂಹಿತೆಯನ್ನು ಅವರು ಎಷ್ಟು ಸಮರ್ಪಕವಾಗಿ ಮುಂದಿರಿಸಿದರು ಎಂಬುದನ್ನು ನನಗೆ ನೆನಪಿಸಿಕೊಳ್ಳಬಯಸುತ್ತೇನೆ. ಸಂಹಿತೆ ಕುರಿತು ಸದಾ ಚಿಂತಿಸುತ್ತಿದ್ದರು. ತಾವು ಪರ್ಯಾಲೋಚಿಸಬೇಕಾದ ವಿಷಯಗಳ ಕುರಿತ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡುತ್ತಿದ್ದರು. ಅವು ಹಿಂದು ಸಂಹಿತೆಯಾಗಿದ್ದಿರಬಹುದು, ಸಂವಿಧಾನವಾಗಿದ್ದಿರಬಹುದು ಅಥವಾ ವಿಧೇಯಕವಾಗಿದ್ದಿರಬಹುದು, ಎಲ್ಲದರಲ್ಲೂ ಆಳವಾದ ಅಧ್ಯಯನ ಅವರದಾಗಿತ್ತು. ಅಧ್ಯಯನಶೀಲರಾಗಿದ್ದ ಡಾ॥ ಅಂಬೇಡ್ಕರ್ ಅವರು ಚಿಂತನಶೀಲರಾಗಿದ್ದರು. ಹಳೆಯ ಆಲೋಚನೆಗಳನ್ನು ಅರಗಿಸಿಕೊಂಡು, ಹೊಸ ಹೊಸ ಆಲೋಚನೆಗಳನ್ನು ಮಾಡುತ್ತಿದ್ದರು.

ಸಂಸತ್ತು, ಈ ಮಹಾಮೇಧಾವಿ, ಸಂವಿಧಾನ ಕರ್ತೃ ಮತ್ತು ಸಂಸದೀಯ ಪಟುವಿನ ಪ್ರತಿಮೆಯನ್ನು ಸಂಸತ್ತಿನ ಆವರಣದ ಪ್ರಮುಖ ಸ್ಥಳದಲ್ಲಿ ಸ್ಥಾಪಿಸಿ, ಸೂಕ್ತ ಗೌರವ ಸಲ್ಲಿಸಿದೆ. ಕೆಲವು ವರ್ಷಗಳಿಂದ ಈ ಸ್ಥಳದಲ್ಲಿ ಡಾ॥ಅಂಬೇಡ್ಕರ್ ಜಯಂತಿಯನ್ನು ಪ್ರತಿ ವರ್ಷ ಆಚರಿಸಿಕೊಂಡು ಬರಲಾಗುತ್ತಿದೆ.

# ಬಾಬಾ ಸಾಹೇಬ್ ಡಾ|| ಭೀಮರಾವ್ ಅಂಬೇಡ್ಕರ್ : ಕೆಲವು ನೆನಪುಗಳು

* ಅಕ್ಷಯ ಕುಮಾರ ಜೈನ್

19ನೇ ಶತಮಾನ ನಮ್ಮ ದೇಶದ ಹಲವು ಮಹಾನ್ ವ್ಯಕ್ತಿಗಳು ಜನ್ಮ ತಾಳಿದ ಯುಗ. ರಾಜರನ್ನು ಜಾಗೃತಿಯನ್ನುಂಟು ಮಾಡಿದ ಮಹಾತ್ಮಾಗಾಂಧಿ, ಜವಾಹರಲಾಲ್ ನೆಹರು, ಸರದಾರ್ ಪಟೇಲ್, ಮಾಳವೀಯಾಜೀ ಮತ್ತು ಮೌಲಾನಾ ಅಜಾದ್ ಅವರಂತ ಮಹಾನ್ ವ್ಯಕ್ತಿಗಳು ಈ ಶತಮಾನದಲ್ಲಿ ಜನಿಸಿದರು. ಈ ಶತಮಾನದಲ್ಲಿಯೇ ದೇಶದಲ್ಲಿ ಸಾಮಾಜಿಕ ಕ್ರಾಂತಿಯೂ ಪ್ರಾರಂಭವಾಯಿತು. ಮಹಾನ್ ನಾಯಕರಲ್ಲಿ ಒಬ್ಬರಾದ ಡಾ|| ಭೀಮರಾವ್ ಅಂಬೇಡ್ಕರ್ ಅವರು 1891ರ ಏಪ್ರಿಲ್ 14ರಂದು ಅಸ್ಪೃಶ್ಯ ಜಾತಿಯೆಂದು ಪರಿಗಣಿಸಲ್ಪಟ್ಟಿದ್ದ "ಮಹಾರ್" ಜಾತಿಯಲ್ಲಿ ಜನಿಸಿದರು.

ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಾಲ್ಕು ವರ್ಗಗಳಾಗಿ ವಿಭಜಿಸಲಾಗಿತ್ತು. ಆ ಕಾಲದ ಬೇಡಿಕೆಗೆ ಅನುಗುಣವಾಗಿ ಈ ರೀತಿಯ ಚಾತುರ್ ವರ್ಣದ, ಶ್ರಮ ವಿಭಾಗದ ವ್ಯವಸ್ಥೆ ಜಾರಿಗೆ ಬಂದಿತ್ತು. ಕಾಲಾನುಕ್ರಮದಲ್ಲಿ ಈ ಚತುರ್ ವರ್ಣಗಳ ಸ್ಥಾನದಲ್ಲಿ ಕೆಲವು ಉಪ ಸಮೂಹಗಳು ಎಂದರೆ, ಮೇಲು ಜಾತಿ - ಕೆಳಜಾತಿ, ಸ್ಪೃಶ್ಯ ಅಸ್ಪೃಶ್ಯ, ಮುಂದುವರಿದ ವರ್ಗ - ಹಿಂದುಳಿದ ವರ್ಗ ಎಂಬ ಪಂಗಡಗಳು ಅಸ್ತಿತ್ವಕ್ಕೆ ಬಂದವು. ಇಂತಹ ಜಾತಿಯ ವ್ಯವಸ್ಥೆಯ ವಾತಾವರಣದಲ್ಲಿ ಪ್ರತಿಭಾವಂತರಾಗಿದ್ದ ಬಾಲಕ ಡಾ|| ಅಂಬೇಡ್ಕರ್ ಅವರು ಸಾಮಾಜಿಕ ಹೆಜ್ಜೆಹೆಜ್ಜೆಗೂ ಅಪಮಾನಕ್ಕೆ ಗುರಿಯಾಗಬೇಕಾಯಿತು. ಡಾ||ಅಂಬೇಡ್ಕರ್ ಅವರು ದಿಲ್ಲಿಯಲ್ಲಿ ಭಾರತ ಸರ್ಕಾರದ ಮಂತ್ರಿಯಾಗಿದ್ದಾಗ ಡಾ|| ಅಂಬೇಡ್ಕರ್ ಅವರನ್ನು ನೋಡುವ, ಅವರೊಂದಿಗೆ ಮಾತನಾಡುವ ಕೆಲವು ಅವಕಾಶಗಳು ನನಗೆ ದೊರೆತಿದ್ದವು. ಬಾಲಕನಾಗಿದ್ದಾಗ ಅವರು ಅನುಭವಿಸಿದ್ದ ಕೆಲವು ಹೃದಯವಿದ್ರಾವಕ ಘಟನೆಗಳನ್ನು ಹೇಳುತ್ತಿದ್ದರು. ಹಿಂದು ಸಮಾಜದ ಕೆಲವು ನಾಯಕರ ಸಂಕುಚಿತ ಮನೋಭಾವನೆಯಿಂದ ಬೇಸತ್ತು ಕೊನೆಗೆ ಬೌದ್ಧ ಧರ್ಮವನ್ನು ಸ್ವೀಕರಿಸಬೇಕಾಗಿ ಬಂದ ಪ್ರಸಂಗವನ್ನು ಈ ಘಟನೆಗಳಿಂದ ತಿಳಿಯಬಹುದು. ಡಾ|| ಅಂಬೇಡ್ಕರ್ ಅವರಿಗೆ ಏಳು

---

* ಶ್ರೀ ಜೈನ್ ಅವರು ಪ್ರಸಿದ್ಧ ಪತ್ರಕರ್ತರು ಮತ್ತು ಪದ್ಮಭೂಷಣ ಪ್ರಶಸ್ತಿ ವಿಜೇತರು.

ವರ್ಷಗಳಾಗಿದ್ದಾಗ, ಅವರು ಒಂದು ದಿನ ತನ್ನ ಸೋದರಿ ಸಂಬಂಧಿಯೊಂದಿಗೆ ಎತ್ತಿನ ಗಾಡಿಯಲ್ಲಿ ಕುಳಿತು ಪಕ್ಕದ ಊರಿಗೆ ಪ್ರಯಾಣ ಮಾಡುತ್ತಿದ್ದರು. ಇದನ್ನು ಒಬ್ಬ ಪಂಡಿತ ನೋಡಿ, ಸಿಟ್ಟಿಗೆದ್ದು, ಒಬ್ಬ ಅಸ್ಪೃಶ್ಯನನ್ನು ಮೇಲ್ಜಾತಿಯ ಜನರೊಂದಿಗೆ ಬಂಡಿಯಲ್ಲಿ ಕೂರಿಸಿಕೊಂಡು ಹೋಗುತ್ತಿದ್ದ, ಆ ಗಾಡಿ ಹೊಡೆಯುತ್ತಿದ್ದವನನ್ನು ನಿಂದಿಸಿದ. ಇದರ ಪರಿಣಾಮವಾಗಿ, ಗಾಡಿಕಾರನು ಆ ಹುಡುಗರನ್ನು ಮತ್ತು ಬಾಲಕ ಅಂಬೇಡ್ಕರನನ್ನು ಗಾಡಿಯಿಂದ ಇಳಿಸುವುದನ್ನು ಬಿಟ್ಟು ಹೊರಕ್ಕೆ ದಬ್ಬಿದನು.

ಒಬ್ಬ ಕ್ಷೌರಿಕನೊಂದಿಗೆ ನಡೆದ ಇನ್ನೊಂದು ಘಟನೆ ಹೀಗಿದೆ : ಆಗ ಡಾ॥ ಅಂಬೇಡ್ಕರ್‌ರವರಿಗೆ ಹತ್ತು ವರ್ಷ. ಡಾ॥ ಅಂಬೇಡ್ಕರ್ ಅವರು ಒಬ್ಬ ಕ್ಷೌರಿಕನ ಬಳಿಗೆ ಹೋಗಿ ಕ್ಷೌರ ಮಾಡುವಂತೆ ಕೇಳಿಕೊಂಡರು. ಕ್ಷೌರಿಕನು ಆ ಸಮಯದಲ್ಲಿ ಒಂದು ಎಮ್ಮೆ (ಕೋಣದ) ಕೂದಲನ್ನು ಕತ್ತರಿಸುತ್ತಿದ್ದ. ಡಾ॥ ಭೀಮರಾವ್ ಅಂಬೇಡ್ಕರತ್ತ ತಿರುಗಿದ ಕ್ಷೌರಿಕ, ತಾನು ಮೇಲ್ಜಾತಿಯ ಜನರಿಗಷ್ಟೇ ಕ್ಷೌರ ಮಾಡುವನೇ ಹೊರತು, ಕೀಳು ಜಾತಿಯವರಿಗಲ್ಲ ಎಂದ. ಈ ಘಟನೆಯಿಂದ ಡಾ॥ ಅಂಬೇಡ್ಕರ್, ಅವರು ತಮ್ಮಂತ ಕೀಳು ಜಾತಿಯ ಜನರ ಬದುಕು ಪ್ರಾಣಿಗಳಿಗಿಂತಲೂ ಕೀಳಾಗಿದೆ ಎಂಬ ಅಭಿಪ್ರಾಯಕ್ಕೆ ಬರಬೇಕಾಯಿತು.

ಶಾಲೆಯಲ್ಲಿ ಓದುತ್ತಿದ್ದಾಗ ಡಾ॥ ಅಂಬೇಡ್ಕರ್ ಅವರ ತರಗತಿಯಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳಿಗಿಂತ ಮುಂದಿರುತ್ತಿದ್ದರು. ಎಲ್ಲರಿಗಿಂತ ಮೊದಲೇ ತರಗತಿಯ ಕೋಣೆಗೆ ಬರುತ್ತಿದ್ದರು. ಒಮ್ಮೆ ಅವರು ಸಂಪ್ರದಾಯಸ್ಥ ಬ್ರಾಹ್ಮಣನಾಗಿದ್ದ ತನ್ನ ಉಪಾಧ್ಯಾಯರ ಸಮೀಪದಲ್ಲಿ ಕುಳಿತುಕೊಂಡರು. ಇದನ್ನು ಕಂಡು ಸಿಟ್ಟಿಗೆದ್ದ ಉಪಾಧ್ಯಾಯನು ಆ ಸ್ಥಳದಿಂದ ಎದ್ದು ಹೋಗುವಂತೆಯೂ, ಅದು ಮೇಲ್ಜಾತಿಯವರಿಗೆ ಮೀಸಲಾಗಿರಿಸಿದ ಸ್ಥಳವೆಂತಲೂ ಕಠಿಣ ಶಬ್ದಗಳಲ್ಲಿ ಡಾ॥ ಅಂಬೇಡ್ಕರ್‌ನ್ನು ನಿಂದಿಸಿದನು. ಅಷ್ಟೇ ಅಲ್ಲ, ಎಂದೂ ಮೇಲ್ಜಾತಿಯ ವಿದ್ಯಾರ್ಥಿಗಳೊಂದಿಗೆ ಕುಳಿತುಕೊಳ್ಳಬಾರದೆಂದು ಸೂಚಿಸಿದನು. ಹಿಂದಿನ ಸೀಟಿನಲ್ಲಷ್ಟೇ ಕುಳಿತುಕೊಳ್ಳಬೇಕೆಂದು ಸೂಚಿಸಿದನು. ಶಾಲಾ ದಿನಗಳಲ್ಲಿ ನಡೆದುಹೋದ ಈ ಘಟನೆಯನ್ನು ವಯಸ್ಸಾದ ಮೇಲೆಯೂ ಡಾ॥ ಅಂಬೇಡ್ಕರ್ ಅವರು ಮರೆತಿರಲಿಲ್ಲ.

ಡಾ॥ ಭೀಮರಾವ್ ಅಂಬೇಡ್ಕರ್ ಅವರು 1916ರಲ್ಲಿ ಅಮೇರಿಕಾದ ಕೊಲಂಬೋ ವಿಶ್ವವಿದ್ಯಾಲಯದಿಂದ ಎಂ.ಎ., ಪಿ.ಎಚ್.ಡಿ. ಪದವಿಯನ್ನು ಗಳಿಸಿದರು. ಸ್ವದೇಶಕ್ಕೆ ಹಿಂತಿರುಗಿದ ತರುವಾಯ, ಮುಂಬೈನ ಸಿಡೆನ್‌ಹೆಮ್ ಕಾಲೇಜಿನಲ್ಲಿ ಅರ್ಥ ಶಾಸ್ತ್ರದ ಪ್ರಾಧ್ಯಾಪಕರಾಗಿ ಸೇರಿಕೊಂಡರು. ಆ ಸಂದರ್ಭದಲ್ಲಿ

ನಡೆದ, ತಾವೆಂದು ಮರೆಯಲಾಗದ ಒಂದು ಘಟನೆಯನ್ನು ಡಾ|| ಅಂಬೇಡ್ಕರ್ ಅವರು ಹೇಳುತ್ತಿದ್ದರು. ಒಂದು ದಿನ ಪ್ರಾಧ್ಯಾಪಕರ ಕೊಠಡಿಯಲ್ಲಿಟ್ಟಿದ್ದ "ಸುರಾಹಿ"ಯಿಂದ ತಾವು ನೀರು ಕುಡಿದರು. ತಾವು ಸುರಾಹಿ (ಹೂಜಿ) ಮುಟ್ಟಿದುದರ ಪರಿಣಾಮ, ಸುರಾಹಿಯನ್ನು ಎತ್ತಿ ಹೊರಕ್ಕೆ ಎಸೆಯಲಾಯಿತು. ಅವನ ಸಹೋದ್ಯೋಗಿಗಳು ಅವರ ಜೊತೆ ಒಂದೇ ಸುರಾಹಿಯಿಂದ ನೀರು ಕುಡಿಯಲು ತಯಾರು ಇದ್ದಿದ್ದಿಲ್ಲ. ಈ ಘಟನೆಯಿಂದ ಮನನೊಂದ ಡಾ|| ಅಂಬೇಡ್ಕರ್ ಅವರು ಪ್ರಾಧ್ಯಾಪಕನ ಕೆಲಸ ತೊರೆದು ಕಾನೂನು ಪದವಿ ಅಭ್ಯಾಸ ಮಾಡುವುದಕ್ಕೋಸ್ಕರ ಬ್ರಿಟನ್ನಿಗೆ ತೆರಳಿದರು. ಕಾನೂನು ಪದವಿ ಪಡೆದ ತರುವಾಯ ಮುಂಬೈ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಕೀರ್ತಿ ಮತ್ತು ಗೌರವಗಳು ಅವರಿಗೆ ಸಂದವು. ನ್ಯಾಯಾಧೀಶರ ಮತ್ತು ಸಹೋದ್ಯೋಗಿ ವಕೀಲರ ಗೌರವ ಪ್ರಶಂಸೆಗಳಿಗೆ ಅವರು ಪಾತ್ರರಾಗಿದ್ದರು. ಅವರಿಗೆ ಕುಡಿಯಲು ನೀರು ಕೊಡಲು ವಾಟರ್‌ಮ್ಯಾನ್ ನಿರಾಕರಿಸುತ್ತಿದ್ದನು. ಇಂತಹುದೇ ಇನ್ನೊಂದು ಪ್ರಸಂಗದಲ್ಲಿ ತಾವು ತಾಳ್ಮೆಯನ್ನು ಕಳೆದುಕೊಂಡ ಘಟನೆಯನ್ನು ಡಾ||ಅಂಬೇಡ್ಕರ್ ಅವರು ವಿವರಿಸುತ್ತಿದ್ದರು. ಆ ಘಟನೆ ಹೀಗಿದೆ: ಮುಂಬೈನ ಠಾಕೂರ್ ದ್ವಾರಾದಲ್ಲಿ ಹೊಸದಾಗಿ ಒಂದು ದೇವಾಲಯವನ್ನು ನಿರ್ಮಿಸಲಾಗಿತ್ತು. ಅತಿ ಶೀಘ್ರದಲ್ಲಿಯೇ ಉದ್ಘಾಟನೆಯಾಗಲಿದ್ದ ಆ ದೇವಾಲಯವನ್ನು ನೋಡಿ ಹೋಗುವಂತೆ ದೇವಾಲಯದ ಕಾರ್ಯದರ್ಶಿಯು ಡಾ|| ಅಂಬೇಡ್ಕರ್ ಅವರನ್ನು ಆಮಂತ್ರಿಸಿದ್ದ. ಡಾ|| ಅಂಬೇಡ್ಕರ್ ಅವರು ಗೌರವದೊಂದಿಗೆ ದೇವಾಲಯದ ಒಳಗೆ ಪ್ರವೇಶಿಸಿದರು. ಇದನ್ನು ಕಂಡು ದೇವಾಲಯದ ಹೊರಗೆ ಜಮಾಯಿಸಸಿದ ಮೇಲ್ಜಾತಿಯ ಜನ ಡಾ|| ಅಂಬೇಡ್ಕರ್‌ರವರನ್ನು ಬಯ್ದರು, ಘೇರಾವು ಮಾಡಿದರು, ಅಪಮಾನಗೊಳಿಸಿದರು ಮತ್ತು ದೇವಸ್ಥಾನದಿಂದ ಹೊರಗೆ ತಳ್ಳಿದರು. ಈ ಘಟನೆಯಿಂದ ನೊಂದ ಡಾ|| ಅಂಬೇಡ್ಕರ್ ಅವರು ತಮ್ಮ ಜನಾಂಗದ ಯುವಕರನ್ನು ಸಂಘಟಿಸಿ, ಹಿಂದೂ ಸಮಾಜದಲ್ಲಿ ಮನುಷ್ಯ - ಮನುಷ್ಯನ ನಡುವೆ ಇರುವಂತಹ ಭೇದಭಾವವನ್ನು ಇಲ್ಲವೆಂದು ಎತ್ತಿ ತೋರಿಸಲು ಅಂದೇ ತೀರ್ಮಾನಿಸಿದರು.

ಜನರನ್ನು ಎಚ್ಚರಿಸುವ ಉದ್ದೇಶದಿಂದ ಅವರು 1920ರಲ್ಲಿ "ಮೂಕ ನಾಯಕ" ಎಂಬ ಪಾಕ್ಷಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ನಾಲ್ಕು ವರ್ಷಗಳ ತರುವಾಯ "ಬಹಿಷ್ಕೃತ - ಹಿತಕಾರಿ" ಎಂಬ ಪತ್ರಿಕೆಯನ್ನು ಹೊರತಂದರು, ತುಳಿತಕ್ಕೊಳಗಾದವರನ್ನು ಸಂಘಟಿಸುವುದೇ ಇದರ ಉದ್ದೇಶವಾಗಿತ್ತು. ತುಳಿತಕ್ಕೊಳಗಾದವರ ಪರವಾಗಿ ಅವರು ಪ್ರಾರಂಭಿಸಿದ ಚಳುವಳಿಗೆ ಒಳ್ಳೆಯ

ಪ್ರತಿಕ್ರಿಯೆ ದೊರೆಯಿತು ಮತ್ತು ಮೂರು ವರ್ಷಗಳ ನಂತರ 1927ರಲ್ಲಿ ಅವರು "ಬಹಿಷ್ಕೃತ ಭಾರತ" ಎಂಬ ಇನ್ನೊಂದು ಪಾಕ್ಷಿಕವನ್ನು ಪ್ರಾರಂಭಿಸಿದರು.

ಅದೇ ವರ್ಷ ಡಾ॥ಅಂಬೇಡ್ಕರ್ ಅವರ ಜೀವನದಲ್ಲಿ ನಡೆದ ಮತ್ತೊಂದು ಘಟನೆ ಹೀಗಿದೆ : ಅವರು ಯುವಕರ ಒಂದು ಗುಂಪು ಕಟ್ಟಿಕೊಂಡು ಸಾರ್ವಜನಿಕ ಬಾವಿಯಿಂದ ನೀರು ತರಲು ಹೋದಾಗ, ಸವರ್ಣೀಯರು ಲಾಠಿ ಮತ್ತು ಭರ್ಜಿಗಳನ್ನು ಹಿಡಿದುಕೊಂಡು ಇವರನ್ನು ವಿರೋಧಿಸಿದರು. ಹಿಂಸಾಚಾರ ಸಂಭವಿಸುವ ಶಂಕೆ ಉಂಟಾಯಿತು. ಪೋಲೀಸರು ಡಾ॥ ಅಂಬೇಡ್ಕರ್‌ರವರನ್ನು ಅಲ್ಲಿಂದ ಹೊರಟು ಹೋಗುವಂತೆ ಮನವೊಲಿಸಿದರು. ಮೇಲ್ಜಾತಿಯ ಜನರ ಈ ಮನೋಭಾವದ ವಿರುದ್ಧ ಡಾ॥ ಅಂಬೇಡ್ಕರ್ ಅವರು ಸಿಡಿದೆದ್ದರು. ಕೆಳ ವರ್ಗದ ಜನರ ಹಕ್ಕುಗಳಿಗಾಗಿ ನ್ಯಾಯಾಲಯ ಕಟ್ಟೆಯನ್ನು ಏರಿದರು. 1937ರಲ್ಲಿ ಮುಂಬೈ ಉಚ್ಛ ನ್ಯಾಯಾಲಯದಲ್ಲಿ ಈ ಮೊಕದ್ದಮೆಯು ಇತ್ಯರ್ಥವಾಗಿ ಡಾ॥ ಅಂಬೇಡ್ಕರ್ ಅವರಿಗೆ ನ್ಯಾಯ ದೊರೆಯಿತು.

ಲಂಡನ್ನಿನಲ್ಲಿ ನಡೆದ ಎಲ್ಲಾ ಮೂರು ದುಂಡು ಮೇಜಿನ ಪರಿಷತ್ತುಗಳಿಗೆ (1930-33)ಡಾ॥ಅಂಬೇಡ್ಕರ್ ಅವರು ಹರಿಜನ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಹರಿಜನರಿಗಾಗಿಯೇ ಪ್ರತ್ಯೇಕ ಚುನಾವಣಾ ಕ್ಷೇತ್ರ ಇರಬೇಕೆಂದು 1931ರಲ್ಲಿ ಅವರು ಆಗ್ರಹಪಡಿಸಿದರು. ಡಾ॥ ಅಂಬೇಡ್ಕರ್ ಅವರ ಈ ವಿಚಾರವನ್ನು ಗಾಂಧೀಜಿ ವಿರೋಧಿಸಿದರು. ಆದರೆ, ಆಗಿನ ಸರ್ಕಾರ ಡಾ॥ ಅಂಬೇಡ್ಕರ್ ಅವರ ನಿಲುವನ್ನು ಒಪ್ಪಿಕೊಂಡಿತು ಮತ್ತು ಕೋಮು ಐತೀರ್ಪನ್ನು ಹೊರಡಿಸಿತು. ಇದರ ಪರಿಣಾಮ, ಗಾಂಧೀಜಿ ಪುಣೆಯಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದರು. ತರುವಾಯ, ಮಹಾತ್ಮಾಗಾಂಧೀಜಿಯವರ ಜೀವ ಉಳಿಸುವ ಉದ್ದೇಶದಿಂದ ಪೂಣಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದರ ಒಪ್ಪಂದದ ಯಶಸ್ಸು ಡಾ॥ ಅಂಬೇಡ್ಕರ್ ಅವರಿಗೆ ಸಲ್ಲಬೇಕು.

ಹರಿಜನರು ಒಟ್ಟಾಗಿ ಹಿಂದು ಧರ್ಮವನ್ನು ತೊರೆದು ಬೇರೊಂದು ಧರ್ಮವನ್ನು ಒಪ್ಪಿಕೊಳ್ಳಬೇಕೆಂದು 1935ರಲ್ಲಿ ತಾವು ಕರೆ ಕೊಟ್ಟಿದ್ದುದಾಗಿ ಡಾ॥ ಬಾಬಾ ಸಾಹೇಬ ಅಂಬೇಡ್ಕರ್ ಅವರು ನನ್ನೊಂದಿಗೆ ಹೇಳಿದ್ದರು. ಸಿಖ್ಖರು ಡಾ॥ ಅಂಬೇಡ್ಕರ್ ಅವರ ತೀರ್ಮಾನವನ್ನು ಬೆಂಬಲಿಸಿದರು. ಆದರೆ, ಅವರ ಅನುಯಾಯಿಗಳು ಅನುಮೋದಿಸಲಿಲ್ಲ, ಇದರಿಂದಾಗಿ, ಡಾ॥ಅಂಬೇಡ್ಕರ್ ಅವರು ಈ ವಿಷಯದಲ್ಲಿ ಮುಂದುವರಿಯಲಿಲ್ಲ.

1946ರಲ್ಲಿ ಮಧ್ಯಂತರ ಸರ್ಕಾರದ ರಚನೆಯಾಯಿತು. ಸಂವಿಧಾನ ರಚನಾ ಸಭೆಯ ಉಪವೇಶನಗಳು ನವದೆಹಲಿಯಲ್ಲಿ ಪ್ರಾರಂಭವಾದವು. ಆ ದಿನಗಳಲ್ಲಿ ನಡೆದ ಒಂದು ಘಟನೆ ಬಹಳ ಸ್ವಾರಸ್ಯಕರವಾಗಿದೆ - ಒಂದು ದಿನ ಪಂಡಿತ ಜವಾಹರಲಾಲ್ ನೆಹರು ಮತ್ತು ಶ್ರೀಮತಿ ಸರೋಜಿನಿ ನಾಯ್ಡು ಅವರು ಗಾಂಧೀಜಿಯವರನ್ನು ಭೇಟಿ ಮಾಡಿದರು. ಸ್ವಲ್ಪಮಟ್ಟಿಗೆ ಕಳೆಗುಂದಿದ್ದ ಪಂಡಿತ್ ನೆಹರೂರವರನ್ನು ಕುರಿತು ಕಾರಣವೇನೆಂದು ಗಾಂಧೀಜಿಯವರು ಕೇಳಿದರು. ಭಾರತದ ಹೊಸ ಸಂವಿಧಾನವನ್ನು ರೂಪಿಸುವ ಒಬ್ಬ ತಜ್ಞ ಬೇಕಾಗಿದೆ ಎಂದು ಪಂಡಿತ್‌ಜಿ ಉತ್ತರಿಸಿದರು. ಕೆಲವು ಏಷ್ಯಾ ದೇಶಗಳ ಸಂವಿಧಾನವನ್ನು ರಚಿಸಿದ್ದ ಮಿ. ಐವರ್ ಜೆನ್ನಿಂಗ್ಸ್ ಅವರನ್ನು ಈ ಕೆಲಸಕ್ಕೆ ಕರೆಸಿಕೊಳ್ಳಬೇಕೆಂದು ಸೂಚಿಸಲಾಯಿತು. ಆಗ ಗಾಂಧೀಜಿಯವರು ನಮ್ಮ ದೇಶದ ಮಹಾ ಸಂವಿಧಾನ ತಜ್ಞರಾದ ಡಾ|| ಭೀಮರಾವ್ ಅಂಬೇಡ್ಕರ್ ಅವರ ಹೆಸರು ಏಕೆ ಹೊಳೆಯಲಿಲ್ಲ ಎಂದು ಪಂಡಿತ್ ನೆಹರೂರವರನ್ನು ಪ್ರಶ್ನಿಸಿದರು. ಇದರ ಪರಿಣಾಮವಾಗಿ ಕಾಂಗ್ರೆಸ್ ಪಕ್ಷವು ಡಾ|| ಅಂಬೇಡ್ಕರ್ ಅವರನ್ನು ಸಂವಿಧಾನ ಸಭೆಗೆ ನಾಮಕರಣ ಮಾಡಿತು. ಅಂದು ಡಾ|| ಅಂಬೇಡ್ಕರ್ ಅವರು ನಮ್ಮ ದೇಶದ ಸಂವಿಧಾನಕ್ಕೆ ಒಂದು ರೂಪ ಕೊಡುವಲ್ಲಿ ನೀಡಿದ ಮಹತ್ ಕೊಡುಗೆ ಇಂದು ಜನಜನಿತವಾಗಿದೆ.

1950-51ರಲ್ಲಿ ಹಿಂದೂ ಮಹಿಳೆಯರಿಗೆ ವರದಾನವೆನಿಸುವ ಒಂದು ಹಿಂದೂ ಸಂಹಿತೆ. ವಿಧೇಯಕವನ್ನು ತರಲಾಯಿತು. ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಅವರೊಡನೆ ಸಮಾಲೋಚಿಸಿಯೇ ಈ ವಿಧೇಯಕವನ್ನು ತಯಾರಿಸಲಾಗಿತ್ತು. ಆದರೆ, ಈ ವಿಧೇಯಕದ ಸಂಬಂಧದಲ್ಲಿ ತಲೆದೋರಿದ ಕೆಲವು ಭಿನ್ನಾಭಿಪ್ರಾಯಗಳಿಂದಾಗಿ ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಅವರು 1951ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತ ಸರ್ಕಾರಕ್ಕೆ ರಾಜೀನಾಮೆಯನ್ನು ಸಲ್ಲಿಸಿದರು.

ಮರು ವರ್ಷ ನಡೆದ ಲೋಕಸಭಾ ಚುನಾವಣೆಗಳಲ್ಲಿ ಡಾ|| ಅಂಬೇಡ್ಕರ್ ಅವರು ಸ್ಪರ್ಧಿಸಿದ್ದರಾದರೂ ಗೆಲ್ಲಲಿಲ್ಲ. ಅವರ ಆರೋಗ್ಯ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಾ ಬಂದಿತ್ತು. ತಾವು ಬೌದ್ಧ ಮತವನ್ನು ಸೇರಬೇಕೆಂಬ 1935ರಲ್ಲಿ ಮಾಡಿದ ನಿರ್ಣಯವನ್ನು ಈಡೇರಿಸಲು ಅವರು ಬಯಸಿದರು. ಇದರ ಪರಿಣಾಮವಾಗಿ 1956ರ ಅಕ್ಟೋಬರ್ 14ರಂದು ತಮ್ಮ ಸಹಸ್ರಾರು ಅನುಯಾಯಿಗಳೊಂದಿಗೆ ನಾಗಪುರದಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಂಡರು.

ಈ ಮತಾಂತರದ ತರುವಾಯ, ಬೌದ್ಧ ಧರ್ಮವು ಪ್ರಸಿದ್ಧಿಯಾಯಿತು. ಹೆಚ್ಚು ಹೆಚ್ಚು ಜನ ಆ ಧರ್ಮವನ್ನು ಸ್ವೀಕರಿಸಿದರು.

ಆ ತರುವಾಯ ಡಾ|| ಅಂಬೇಡ್ಕರ್ ಅವರು ಹೆಚ್ಚು ಕಾಲ ಬದುಕಲಿಲ್ಲ. 1956ರ ಡಿಸೆಂಬರ್ 6 ರಂದು ದೆಹಲಿಯಲ್ಲಿ ತಮ್ಮ ಕೊನೆಯುಸಿರೆಳೆದರು.

ಡಾ|| ಭೀಮರಾವ್ ಅಂಬೇಡ್ಕರ್ ಅವರು ಬಾಬಾ ಸಾಹೇಬರೆಂದೇ ಪ್ರಸಿದ್ಧರಾಗಿದ್ದಾರೆ. ಸಮಾಜ ಸುಧಾರಕರಾಗಿ, ಸಂವಿಧಾನದ ರೂವಾರಿಯಾಗಿ, ಆಧುನಿಕ ಮನುವಾಗಿ ಕೀರ್ತಿಯನ್ನು ಸಂಪಾದಿಸಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ನಾವೆಲ್ಲಾ ಅವರಿಗೆ ಭಕ್ತಿ ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸೋಣ.

● ○ ●

# ಭಾಗ-ಮೂರು

# ಅವರ ಚಿಂತನಗಳು

## (ಸಂವಿಧಾನ ಸಭೆಯಲ್ಲಿ ಮಾಡಿದ ಡಾ|| ಬಿ.ಆರ್. ಅಂಬೇಡ್ಕರ್ ಅವರ ಆಯ್ದ ಭಾಷಣಗಳಿಂದ ಎತ್ತಿಕೊಂಡ ಭಾಗಗಳು)

27-7

# ಬಲಿಷ್ಠ ಒಕ್ಕೂಟ ಸರ್ಕಾರ

ಸನ್ಮಾನ್ಯ ಅಧ್ಯಕ್ಷರೇ,

ಈ ನಿರ್ಣಯದ ಮೇಲೆ* ಮಾತನಾಡಲು ನನ್ನನ್ನು ಕರೆದುದಕ್ಕಾಗಿ ನಾನು ನಿಮಗೆ ತುಂಬಾ ಆಭಾರಿಯಾಗಿದ್ದೇನೆ. ನಿಮ್ಮ ಆಹ್ವಾನ ನನಗೆ ನಿಜವಾಗಿಯೂ ಆಶ್ಚರ್ಯ ತಂದಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನಗಿಂತ ಮೊದಲು ಮಾತನಾಡುವ ಸುಮಾರು 20-22 ಸದಸ್ಯರು ಇದ್ದುದರಿಂದ, ಮಾತನಾಡುವ ಸರದಿಯು ನನಗೆ ನಾಳೆ ಬರಬಹುದೆಂದು ಭಾವಿಸಿದ್ದೆ. ಹಾಗಿದ್ದರೆ, ತುಂಬಾ ಚೆನ್ನಾಗಿರುತ್ತಿತ್ತು. ನಾನು ಈ ಬಗ್ಗೆ ತಯಾರಿ ನಡೆಸಿಕೊಂಡು ಮಾತನಾಡಬಹುದಾಗಿತ್ತು. ನಾನು ಇಂದು ಮಾತನಾಡಲು ತಯಾರಾಗಿ ಬಂದಿರಲಿಲ್ಲ. ಇಂತಹ ವಿಷಯದ ಮೇಲೆ, ಇಂತಹ ಸಂದರ್ಭದಲ್ಲಿ, ಪೂರ್ಣವಾದ ಹೇಳಿಕೆಯನ್ನು ಕೊಡಲು ನಾನು ಉದ್ದೇಶಿತನಾದ್ದರಿಂದ, ಇದಕ್ಕೆ ಸಾಕಷ್ಟು ತಯಾರಾಗಲು ಇಚ್ಚಿಸಿದ್ದೆ. ನನಗೆ ಹತ್ತು ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೀರಿ, ಈ ಪರಿಮಿತಿಗಳೊಳಗೆ ನಮ್ಮ ಮುಂದಿರುವ ನಿರ್ಣಯದ ಬಗ್ಗೆ ನಾನು ಎಷ್ಟರ ಮಟ್ಟಿಗೆ ನ್ಯಾಯ ಒದಗಿಸಬಹುದು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಆದರೂ, ಈ ವಿಷಯದ ಬಗ್ಗೆ ಆದಷ್ಟು ಸಂಕ್ಷಿಪ್ತವಾಗಿ ನನ್ನ ಅಭಿಪ್ರಾಯಗಳನ್ನು ಮಂಡಿಸಲು ಬಯಸುತ್ತೇನೆ.

---

* ಅಡಿ ಟಿಪ್ಪಣಿ :

ಸಂ. ಸಭೆ ಸಂಪುಟ 1, 17ನೇ ಡಿಸೆಂಬರ್, 1946

** ಪಂಡಿತ ಜವಾಹರಲಾಲ್ ನೆಹರು ಅವರು 1946ರ ಡಿಸೆಂಬರ್ 13ರಂದು ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸಿದ ನಿರ್ಣಯ.

"(1) ಈ ಸಂವಿಧಾನ ರಚನಾ ಸಭೆಯು ಭಾರತವನ್ನು ಒಂದು ಸ್ವತಂತ್ರ ಸಾರ್ವಭೌಮತ್ವ ಗಣರಾಜ್ಯವನ್ನಾಗಿ ಉದ್ಘೋಷಿಸಲು ಮತ್ತು ಆದರ ಮುಂದಿನ ಆಡಳಿತ ನಡೆಸಿಕೊಂಡು ಹೋಗುವುದಾಗಿ ಸಂವಿಧಾನವನ್ನು ರೂಪಿಸಲು ತನ್ನ ದೃಢವಾದ ಮತ್ತು ನಿಷ್ಠಾಪೂರ್ಣವಾದ ಸಂಕಲ್ಪವನ್ನು ಘೋಷಿಸುತ್ತದೆ; ಮತ್ತು

(2) ಈಗ ಬ್ರಿಟಿಷ್ ಇಂಡಿಯಾದಲ್ಲಿ ಒಳಗೊಂಡಿರುವ ರಾಜ್ಯ ಕ್ಷೇತ್ರಗಳು, ಭಾರತೀಯ ಸಂಸ್ಥಾನಗಳಿಂದ ಬಂದಿರುವ ರಾಜ್ಯ ಕ್ಷೇತ್ರಗಳು ಮತ್ತು ಬ್ರಿಟಿಷ್ ಇಂಡಿಯಾದ ಹೊರಗಡೆ ಇರುವಂತಹ ಭಾರತದ ಇತರ ಭಾಗಗಳು ಮತ್ತು ಸ್ವತಂತ್ರ ಸಾರ್ವಭೌಮತ್ವ ಭಾರತವಾಗಿ ರೂಪುಗೊಳ್ಳಲು ಒಪ್ಪಿಕೊಂಡಿರುವ ರಾಜ್ಯಗಳು ಮತ್ತು ಇತರ ರಾಜ್ಯ ಕ್ಷೇತ್ರಗಳು - ಒಳಗೊಂಡ ಒಂದು ಒಕ್ಕೂಟವೇರ್ಪಡತಕ್ಕದ್ದು; ಮತ್ತು

(3) ಸದರಿ ರಾಜ್ಯ ಕ್ಷೇತ್ರಗಳ ತಮ್ಮ ಈಗಿನ ಎಲ್ಲೆಗಳೊಂದಿಗೆ ಆಗಲಿ ಅಥವಾ ಸಂವಿಧಾನ ರಚನಾ ಸಭೆಯು ಅಥವಾ ಆ ತರುವಾಯ ಸಂವಿಧಾನದ ಕಾನೂನು ನಿರ್ಧರಿಸಬಹುದಾದಂತಹ ಎಲ್ಲೆಗಳೊಂದಿಗೆ ಆಗಲಿ, ಉಳಿಕೆ ಅಧಿಕಾರಗಳೊಂದಿಗೆ ಸ್ವಯಂ ಆಡಳಿತ ಘಟಕಗಳ ಸ್ಥಾನವನ್ನು ಹೊಂದಿರತಕ್ಕದ್ದು, ಅದನ್ನು ಉಳಿಸಿಕೊಂಡು ಹೋಗತಕ್ಕದ್ದು, ಆ ರಾಜ್ಯ ಕ್ಷೇತ್ರಗಳು ಒಕ್ಕೂಟದಲ್ಲಿ ನಿಹಿತವಾಗುವ ಅಥವಾ ಅದಕ್ಕೆ ವಹಿಸಿಕೊಡಲಾಗುವ ಅಥವಾ ಒಕ್ಕೂಟದಲ್ಲಿ ವಿಹಿತವಾಗಿರೋದು ಇಂಗಿತವಾಗುವ ಎಲ್ಲ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು; ಮತ್ತು

ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನಡೆದಿರುವ ಚರ್ಚೆಯ ಹಿನ್ನೆಲೆಯಲ್ಲಿ ನೋಡಿದರೆ, ಈ ನಿರ್ಣಯವು ಸ್ಪಷ್ಟವಾಗಿ ಎರಡು ಭಾಗಗಳನ್ನು ಒಳಗೊಂಡಿರುತ್ತದೆ. ಒಂದನೆಯದು ವಿವಾದಾಸ್ಪದವಾಗಿದ್ದರೆ, ಎರಡನೆಯದು ವಿವಾದಾತೀತವಾಗಿದೆ. ವಿವಾದಾತೀತವಾಗಿರುವ ಭಾಗವು ಈ ನಿರ್ಣಯದ (5ರಿಂದ 7ರವರೆಗಿನ ಪ್ಯಾರಾಗ್ರಾಫ್‌ಗಳಲ್ಲಿ ಒಳಗೊಂಡಿದೆ) ಈ ಪ್ಯಾರಾಗ್ರಾಫ್‌ಗಳು, ಈ ದೇಶದ ಭವಿಷ್ಯತ್ ಸಂವಿಧಾನದ ಉದ್ದೇಶಗಳನ್ನು ವಿವರಿಸುತ್ತವೆ. ಈ ನಿರ್ಣಯವನ್ನು ಸಮಾಜವಾದೀ ಸಿದ್ಧಾಂತಕ್ಕೆ ಹೆಸರಾಗಿರುವ ಪಂಡಿತ್ ಜವಾಹರಲಾಲ್ ನೆಹರು ಅವರು ಮಂಡಿಸಿದ್ದು, ವಿವಾದಾತೀತವಾಗಿದ್ದರೂ, ನನ್ನ ಮನಸ್ಸಿಗೆ ನಿರಾಶಾದಾಯಕವೆನಿಸುತ್ತದೆ. ಈ ನಿರ್ಣಯದ ಆ ಭಾಗದಲ್ಲಿ ಅವರು ಮಾಡಿರುವುದಕ್ಕಿಂತಲೂ ಹೆಚ್ಚಿಗೆಯಾಗಿ ಮಾಡಬಹುದಾಗಿತ್ತು ಎಂದು ನಾನು ನಿರೀಕ್ಷಿಸಿದ್ದೆ. ಇತಿಹಾಸದ ವಿದ್ಯಾರ್ಥಿಯಾಗಿ, ನಿರ್ಣಯದ ಈ ಭಾಗವು ಅದನ್ನು ಒಳಗೊಂಡಿರಬಾರದಾಗಿತ್ತು ಎಂಬುದು ನನ್ನ ಅನಿಸಿಕೆ. ಈ ನಿರ್ಣಯವನ್ನು ಯಾರಾದರೂ ಓದಿದರೆ, ಇದು ಫ್ರೆಂಚ್ ಸಂವಿಧಾನ ಸಭೆಯು ಮಾಡಿದ ಮಾನವ ಹಕ್ಕುಗಳ ಘೋಷಣೆಯನ್ನು ಅವರ ನೆನಪಿಗೆ ತರುತ್ತದೆ. 150 ವರ್ಷಗಳು ಗತಿಸಿದ ತರುವಾಯ, ಮಾನವ ಹಕ್ಕುಗಳ ಘೋಷಣೆ ಮತ್ತು ಅದರಲ್ಲಿ ಒಳಗೊಂಡಿರುವಂಥ ತತ್ವಗಳು ನಮ್ಮ ಮಾನಸಿಕ ಧೋರಣೆಯ ಅವಿಭಾಜ್ಯ ಅಂಗವಾಗಿದೆ ಎಂದು ನನಗನ್ನಿಸುತ್ತದೆ. ವಿಶ್ವದ ಮುಂದುವರಿದ ದೇಶದ ಪ್ರತಿಯೊಬ್ಬ ಆಧುನಿಕ ಮಾನವನ ಮಾನಸಿಕ ಸಮತೋಲನದ ಭಾಗವಾಗಿ ಬಂದಿದೆಯಷ್ಟೇ ಅಲ್ಲ, ಸಂಪ್ರದಾಯಸ್ಥವಾಗಿರುವ ನಮ್ಮ ದೇಶದಲ್ಲಿಯೂ ಬಂದಿದೆ

---

(4) ಸಾರ್ವಭೌಮ ಸ್ವತಂತ್ರ ಭಾರತದ ಎಲ್ಲ ಅಧಿಕಾರಗಳು ಮತ್ತು ಪ್ರಾಧಿಕಾರವು ಅದರ ಘಟಕ ಭಾಗಗಳು ಮತ್ತು ಸರ್ಕಾರದ ಅಂಗಗಳು ಜನತೆಯಿಂದಲೇ ನೀಡಲ್ಪಟ್ಟವುಗಳಾಗಿರತಕ್ಕದ್ದು; ಮತ್ತು

(5) ಕಾನೂನು ಹಾಗೂ ಸಾರ್ವಜನಿಕ ನೀತಿನಿಷ್ಠೆಗಳಿಗೊಳಪಟ್ಟು ಭಾರತದ ಎಲ್ಲ ಜನರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವೂ, ಸ್ಥಾನಮಾನದಲ್ಲಿ, ಅವಕಾಶಗಳಲ್ಲಿ ಹಾಗೂ ಕಾನೂನಿನ ಮುಂದೆ ಸಮಾನತೆಯ ಆಲೋಚನೆ, ಅಭಿವ್ಯಕ್ತಿ, ಶ್ರದ್ಧೆ, ನಂಬಿಕೆ, ಉಪಾಸನೆ, ವೃತ್ತಿ - ಇವುಗಳಲ್ಲಿ ಸ್ವಾತಂತ್ರ್ಯವೂ ಸಂಘ ಸ್ಥಾಪನೆ ಮತ್ತು ಕ್ರಮ ಕೈಗೊಳ್ಳುವಿಕೆಗಳು - ಇವುಗಳನ್ನು ಖಾತರಿಪಡಿಸುವುದು ಮತ್ತು ಅವುಗಳನ್ನು ದೊರಕಿಸಿಕೊಡುವುದು; ಮತ್ತು

(6) ಅಲ್ಪ ಸಂಖ್ಯಾತರಿಗೆ, ಹಿಂದುಳಿದ ಹಾಗೂ ಬುಡಕಟ್ಟು ಪ್ರದೇಶದ ಜನರಿಗೆ, ಅವಹಾತ ವಂಚಿತರಾದ ಮತ್ತು ಇತರ ಹಿಂದುಳಿದ ವರ್ಗಗಳ ಜನರಿಗೆ ಸಾಕಷ್ಟು ರಕ್ಷಣೆಗಳನ್ನು ಒದಗಿಸತಕ್ಕದ್ದು; ಮತ್ತು

(7) ಗಣರಾಜ್ಯದ ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ನಾಗರೀಕ ದೇಶಗಳ ನ್ಯಾಯ ಮತ್ತು ಕಾನೂನಿಗನುಸಾರವಾಗಿ ಭೂಮಿ, ಸಮುದ್ರ ಮತ್ತು ವಾಯು ಇವುಗಳ ಮೇಲಣ ಸಾರ್ವಭೌಮ ಹಕ್ಕುಗಳನ್ನು ಕಾಪಾಡಿಕೊಂಡು ಬರುವುದು; ಮತ್ತು

(8) ಪ್ರಾಚೀನವಾದ ನಮ್ಮ ದೇಶವು ಪ್ರಪಂಚದಲ್ಲಿ ಒಳ್ಳೆಯ ಸ್ಥಾನ - ಗೌರವವನ್ನು ಗಳಿಸಿ ವಿಶ್ವಶಾಂತಿಗೆ ಮತ್ತು ಮನುಕುಲದ ಒಳಿತಿಗೆ ಪೂರ್ಣವಾದ ಮತ್ತು ಸ್ವಇಚ್ಛೆ ಪೂರ್ವಕವಾದ ಕಾಣಿಕೆಯನ್ನು ಸಲ್ಲಿಸುತ್ತದೆ.

ಎಂಬುದನ್ನು ನಾನು ಹೇಳಬಯಸುತ್ತೇನೆ. ಈ ನಿರ್ಣಯವು ಬರೀ ಪಾಂಡಿತ್ಯವನ್ನು ಪ್ರದರ್ಶಿಸುತ್ತದೆ ಎಂಬುದನ್ನು ನಾನು ಪುನರುಚ್ಚರಿಸಬಯಸುತ್ತೇನೆ. ಈ ತತ್ವಗಳು, ನಮ್ಮ ದೃಷ್ಟಿಕೋನದ ನಿಶ್ಯಬ್ಧ - ನಿಷ್ಕಳಂಕತೆಯಿಂದ ಕೂಡಿವೆ. ಆದ್ದರಿಂದ, ಅವು ನಮ್ಮ ನಂಬಿಕೆಯ ಒಂದು ಭಾಗವಾಗಿ ರೂಪುಗೊಂಡಿರುವುದೆಂದು ಘೋಷಿಸುವುದು ಅನಗತ್ಯವಾಗಿದೆ. ಇವು ನಮ್ಮ ಅಭಿಪ್ರಾಯಗಳನ್ನು ರೂಪಿಸುತ್ತವೆ ಎಂದು ಘೋಷಿಸುವುದು ಅನಾವಶ್ಯಕ. ಈ ನಿರ್ಣಯದಲ್ಲಿ ಕೆಲವು ಕೊರತೆಗಳು ಇವೆ. ನಿರ್ಣಯದ ಈ ಭಾಗವು ಕೆಲವು ಹಕ್ಕುಗಳ ಬಗ್ಗೆ ನಿರೂಪಿಸುತ್ತದೆಯಾದರೂ, ಪರಿಹಾರ ಕ್ರಮಗಳ ಬಗ್ಗೆ ಏನೂ ಹೇಳುವುದಿಲ್ಲ. ನಮಗೆಲ್ಲಾ ಗೊತ್ತಿರುವಂತೆ, ಪರಿಹಾರವನ್ನು ಒದಗಿಸದ ಹಕ್ಕುಗಳಿಗೆ ಯಾವುದೇ ಬೆಲೆಯೂ ಇರುವುದಿಲ್ಲ. ನಮ್ಮ ಹಕ್ಕುಗಳಿಗೆ ತೊಂದರೆಯಾದಾಗ ಅವುಗಳ ನಿವಾರಣೆಗೆ ಪರಿಹಾರವನ್ನು ಪಡೆಯುವಂತಿರಬೇಕು. ಅಂತಹ ಪರಿಹಾರಗಳನ್ನು ಈ ನಿರ್ಣಯವು ಒಳಗೊಂಡಿಲ್ಲವೆಂದು ನನಗನ್ನಿಸುತ್ತದೆ. ಯಾವನೇ ವ್ಯಕ್ತಿಯ ಜೀವ, ಸ್ವಾತಂತ್ರ್ಯ ಅಥವಾ ಸ್ವತ್ತನ್ನು ಕಾನೂನಿನ ಯುಕ್ತ ಕ್ರಮಕ್ಕನುಸಾರವಾಗಿದೆಯಲ್ಲದೇ ಕಸಿದುಕೊಳ್ಳಲಾಗದು ಎಂಬ ಸಾಮಾನ್ಯ ಸೂತ್ರಕ್ಕೂ ಈ ನಿರ್ಣಯದಲ್ಲಿ ಯಾವುದೇ ಸ್ಥಾನವಿಲ್ಲವಾಗಿದೆ. ಈ ಮೂಲಭೂತ ಹಕ್ಕುಗಳು, ಕಾನೂನು ಮತ್ತು ನೈತಿಕತೆಗೆ ಒಳಪಟ್ಟು ನೀಡಲಾಗಿದೆ. ಹಾಗಾದರೆ, ಕಾನೂನು ಎಂದರೆ ಏನು? ನೈತಿಕತೆ ಎಂದರೆ ಏನು? ಎಂಬ ಪ್ರಶ್ನೆಗಳು ಏಳುತ್ತವೆ. ಇದನ್ನು ಅಧಿಕಾರದಲ್ಲಿರುವ ಕಾರ್ಯಾಂಗವು ನಿರ್ಧರಿಸುತ್ತದೆ. ಒಂದು ಕಾರ್ಯಾಂಗವು ಇದನ್ನು ಒಂದು ದೃಷ್ಟಿಯಿಂದ ನೋಡಿದರೆ, ಇನ್ನೊಂದು ಕಾರ್ಯಾಂಗವು ಇದನ್ನು ಮತ್ತೊಂದು ದೃಷ್ಟಿಯಿಂದ ನೋಡಬಹುದು. ಈ ವಿಷಯವನ್ನು ಕಾರ್ಯಾಂಗದ ವಿವೇಚನೆಗೆ ಬಿಟ್ಟಿದ್ದೇ ಆದರೆ, ಮೂಲಭೂತ ಹಕ್ಕುಗಳ ಸ್ಥಿತಿ ಏನಾಗುತ್ತದೆ ಎಂಬುದು ನಮಗೆ ಸರಿಯಾಗಿ ತಿಳಿಯದಂತಾಗುತ್ತದೆ.

ಸನ್ಮಾನ್ಯರೆ, ಈ ನಿರ್ಣಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ನ್ಯಾಯದ ಬಗ್ಗೆ ಕೆಲವೊಂದು ವಿಧಗಳಿವೆ. ಅವೆಲ್ಲಾ ಸಾಕಾರಗೊಳ್ಳಬೇಕೆಂಬುದೇ ನಿರ್ಣಯದ ಹಿಂದಿರುವ ಉದ್ದೇಶವಾಗಿದ್ದಿದ್ದರೆ ಹಾಗೂ ಈ ನಿರ್ಣಯವನ್ನು ಸೂಚಿಸಿದವರ ಕಳಕಳಿ ಅದೇ ಆಗಿದ್ದಿದ್ದರೆ, ಆ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನ್ಯಾಯವನ್ನು ಸಾಕಾರಗೊಳಿಸುವುದಕ್ಕೆ ರಾಷ್ಟ್ರಕ್ಕೆ ಅನುವು ಮಾಡಿಕೊಡುವಂತಹ ಇನ್ನೂ ಕೆಲವೊಂದು ವಿಧಗಳು ಇರಬೇಕಾಗಿತ್ತೆಂದು ನನಗನಿಸುತ್ತದೆ. ಆ ದೃಷ್ಟಿಯಿಂದ ದೇಶದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯ ಕೊಡಲು, ಕೈಗಾರಿಕೆಗಳ

ರಾಷ್ಟ್ರೀಕರಣ ಮತ್ತು ಭೂಮಿಗಳ ರಾಷ್ಟ್ರೀಕರಣ ಕೈಗೊಳ್ಳಲಾಗುತ್ತದೆ ಎಂಬುದು ನಿರ್ಣಯದಲ್ಲಿ ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಇರಬೇಕಿತ್ತು ಎಂಬುದೇ ನನ್ನ ಎಣಿಕೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯದಲ್ಲಿ ವಿಶ್ವಾಸವಿಡುವಂತಹ ಯಾವುದೇ ಭಾವೀ ಸರ್ಕಾರಕ್ಕೆ ಅದರ ಅರ್ಥ ವ್ಯವಸ್ಥೆಯು ಸಮಾಜವಾದೀ ಅರ್ಥ ವ್ಯವಸ್ಥೆ ಆಗಿರದಿದ್ದರೆ, ಅದು ಹೇಗೆ ಸಾಧ್ಯವಾಗುತ್ತದೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಆದಕಾರಣ, ವೈಯುಕ್ತಿಕವಾಗಿ, ಈ ಪ್ರಸ್ತಾಪಗಳಿಗೆ ನನ್ನ ಆಕ್ಷೇಪಣೆ ಇಲ್ಲದಿದ್ದರೂ, ಈ ನಿರ್ಣಯ ಸ್ವಲ್ಪಮಟ್ಟಿನ ನಿರಾಶೆ ಉಂಟು ಮಾಡುತ್ತದೆಂದು ನನಗನ್ನಿಸುತ್ತದೆ. ಈ ಮಾತುಗಳನ್ನು ಹೇಳಿ, ಆ ಬಗ್ಗೆ ಹೇಳುವುದನ್ನು ಇಲ್ಲಿಗೆ ನಿಲ್ಲಿಸಲು ನಿರ್ಧರಿಸಿದ್ದೇನೆ.

ಈಗ, ನಿರ್ಣಯದ ಮೊದಲ ಭಾಗಕ್ಕೆ ಬರುತ್ತೇನೆ. ಅದರಲ್ಲಿ ನಾಲ್ಕು ಪ್ಯಾರಾಗಳಿವೆ. ಸದನದಲ್ಲಿ ಆದ ಚರ್ಚೆ ದೃಷ್ಟಿಯಿಂದ ಹೇಳುವುದಾದರೆ, ಇದು ವಾದ-ವಿವಾದಕ್ಕೆ ಆಸ್ಪದ ಕೊಟ್ಟಿರುವ ವಿಷಯ "ಗಣರಾಜ್ಯ" ಪದವನ್ನು ಬಳಸಿರುವುದರ ಮೇಲೆ ವಾದ ವಿವಾದ ಕೇಂದ್ರೀಕೃತವಾಗಿದೆಯೆಂದು ಕಾಣುತ್ತದೆ. ನಾಲ್ಕನೇ ಪ್ಯಾರಾದಲ್ಲಿ ಬರುವ "ಸಾರ್ವಭೌಮತ್ವವು ಪ್ರಜೆಗಳಿಂದ ಪ್ರಾಪ್ತವಾಗುತ್ತದೆ" ಎಂಬ ವಾಕ್ಯದ ಮೇಲೆ ಕೇಂದ್ರೀಕೃತವಾಗಿದೆ. ಮುಸ್ಲಿಂ ಲೀಗ್ ಇಲ್ಲದೆ, ಈ ಸಭೆಯು ಈ ನಿರ್ಣಯದ ಮೇಲೆ ಚರ್ಚೆಗೆ ಮುಂದಾಗುವುದು ಸರಿಯಲ್ಲವೆಂದು ಕಾಣುತ್ತದೆ ಎಂದು ನನ್ನ ಗೆಳೆಯ ಡಾ. ಜಯಕರ್ ಎತ್ತಿದ ಅಂಶದಿಂದ ವಾದವಿವಾದ ಉದ್ಭವಿಸಿದೆ. ಸನ್ಮಾನ್ಯರೇ, ಇನ್ನು ಭವಿಷ್ಯದಲ್ಲಿ ಈ ಮಹಾನ್ ದೇಶದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಯ ಬೆಳವಣಿಗೆ ಅಂತಿಮ ರೂಪದ ಬಗ್ಗೆ ಈಗ ನನ್ನ ಮನಸ್ಸಿನಲ್ಲಿ ಎಳ್ಳಷ್ಟೂ ಸಂಶಯ ಉಳಿದಿಲ್ಲ, ಇಂದು, ನಾವು ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಒಡೆದು ಹೋಳಾಗಿದ್ದೇವೆ ಎಂದು ಭಾವಿಸಿದ್ದೇನೆ. ನಾವು ಕಾದಾಟದ ಪಾಳೆಯಗಳಲ್ಲಿದ್ದೇವೆ. ಅಂಥದೊಂದು ಪಾಳೆಯದ ಮುಂದಾಳುಗಳಲ್ಲಿ ಭಾಗಶಃ ನಾನು ಒಬ್ಬನೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಸನ್ಮಾನ್ಯರೆ, ಅದೇನೇ ಇರಲಿ, ಕಾಲ ಹಾಗೂ ಸಂದರ್ಭಗಳು ಕೂಡಿ ಬಂದರೆ, ಈ ದೇಶ ಅಖಂಡ ರಾಷ್ಟ್ರವಾಗುವುದನ್ನು ಈ ಪ್ರಪಂಚದ ಯಾವ ಶಕ್ತಿಯೂ ತಪ್ಪಿಸಲಾರದು. ನಮ್ಮಲ್ಲಿ ಎಷ್ಟೇ ಜಾತಿಗಳಿರಲಿ, ಎಷ್ಟೇ ಜನಾಂಗಗಳಿರಲಿ, ನಾವು ಒಂದು ರೀತಿಯಲ್ಲಿ ಅಖಂಡ ಜನತೆಯಾಗಿದ್ದೇವೆ ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಭಾರತದ ವಿಭಜನೆಗೆ ಮುಸ್ಲಿಂ ಲೀಗ್ ಚಳುವಳಿ ನಡೆಸುತ್ತಿರಬಹುದು. ಆದರೆ, ಮುಂದೊಂದು ದಿನ, ಮುಸ್ಲಿಂ ಬಂಧುಗಳಿಗೆ ಜ್ಞಾನೋದಯ ಆಗೇ ಆಗುತ್ತದೆ.

ಅವರಿಗೂ ಅಖಂಡ ಭಾರತವೇ ಮೇಲು ಎಂದು ಅನ್ನಿಸುತ್ತದೆ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ.

ನಮ್ಮ ಅಂತಿಮ ಧ್ಯೇಯದ ಬಗ್ಗೆ ಹೇಳುವುದಾದರೆ, ನಮಗಾರಿಗೂ ಯಾವುದೇ ಭಯ ಇರಬೇಕಾಗಿಲ್ಲ. ಯಾವುದೇ ಅನುಮಾನ ಇರಬೇಕಾಗಿಲ್ಲ. ಆ ಅಂತಿಮ ಭವಿಷ್ಯದ ಬಗ್ಗೆ ನಾವು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಆದರೆ, ಇಂದಿನ ನಮ್ಮ ವೈವಿಧ್ಯಮಯವಾದ ಜನ ಸಮುದಾಯವು ಒಮ್ಮನಸ್ಸಿನ ತೀರ್ಮಾನಕ್ಕೆ ಬರುವಂತೆ ಮತ್ತು ಏಕತೆಯ ಹಾದಿಯತ್ತ ಸಾಗುವಂತೆ ಮಾಡುವುದು ಹೇಗೆ ಎಂಬುದೇ ನಮ್ಮ ಮುಂದಿರುವ ಸವಾಲು.

ಅದೇನೇ ಇರಲಿ, ನನಗೆ ಅಂತಿಮ ಧ್ಯೇಯಕ್ಕೆ ಸಂಬಂಧಿಸಿದ್ದು ನಮ್ಮ ಸಮಸ್ಯೆ ಅಲ್ಲ. ಆರಂಭದ್ದೇ ಸಮಸ್ಯೆ. ಆದ್ದರಿಂದ, ಸನ್ಮಾನ್ಯ ಅಧ್ಯಕ್ಷರೇ, ಸಂಕಲ್ಪ ಶಕ್ತಿಯುಳ್ಳ ಗೆಳೆಯರು ನಮ್ಮ ಜೊತೆಗೂಡಬೇಕಾದರೆ, ಈ ದೇಶದ ಪ್ರತಿಯೊಂದು ಪಕ್ಷವೂ, ಪ್ರತಿಯೊಂದು ವರ್ಗವೂ, ಈ ಹಾದಿಯತ್ತ ಸಾಗಬೇಕಾದರೆ, ಯಾರೂ ಈ ಪ್ರಮಾಣಕ್ಕೆ ಇನ್ನೂ ಸಿದ್ಧರಾಗಿಲ್ಲವೋ ಅಂಥ ಜನರ ಪೂರ್ವ ಕಲ್ಪಿತ ಭಾವನೆಗಳನ್ನು ಬಹು ಸಂಖ್ಯಾತ ಪಕ್ಷವು ಗೌರವಿಸಿದ್ದಾದರೆ ಅದು ಒಳ್ಳೆಯ ಮುತ್ಸದ್ದಿತನವೆಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ಅದಕ್ಕೋಸ್ಕರವೇ ನಾನು ಈ ಮನವಿ ಮಾಡುತ್ತಿದ್ದೇನೆ. ಘೋಷಣೆಗಳನ್ನು ಬದಿಗಿಡೋಣ. ಜನರಲ್ಲಿ ಗಾಬರಿ ಹುಟ್ಟಿಸುವಂತಹ ಮಾತುಗಳನ್ನು ಬಿಡೋಣ. ನಮ್ಮ ವಿರೋಧಿಗಳ ಪೂರ್ವ ಕಲ್ಪಿತ ಭಾವನೆಗಳನ್ನೂ ಸಹ ಗೌರವಿಸೋಣ, ಅವರನ್ನು ಒಂದುಗೂಡಿಸೋಣ, ಹಾಗೆ ಮಾಡಿದ್ದಾದರೆ, ಅವರು ಆ ಹಾದಿಯತ್ತ ಸಾಗಲು ನಮ್ಮೊಂದಿಗೆ ತಾವಾಗಿಯೇ ಸೇರಬಹುದು. ನಾವು ಈ ನಿಟ್ಟಿನಲ್ಲಿ ತುಂಬಾ ಶ್ರಮಿಸಿದರೆ, ಅದು ಖಂಡಿತ ನಮ್ಮನ್ನು ಏಕತೆಯ ಕಡೆಗೆ ಒಯ್ಯುತ್ತದೆ. ಆದ್ದರಿಂದ, ಈ ವೇದಿಕೆಯಿಂದ ನಾನು ಡಾ. ಜಯಕರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಏಕೆಂದರೆ, ನಮ್ಮದು ತಪ್ಪೋ, ಸರಿಯೋ, ನಮ್ಮ ದೃಷ್ಟಿ, ನಮ್ಮ ಕಾನೂನುಬದ್ಧ ಹಕ್ಕುಗಳಿಗೆ ಅನುಸಾರವಾಗಿದೆಯೋ ಇಲ್ಲವೋ, ಅದು ಮೇ 16ರ ಅಥವಾ ಡಿಸೆಂಬರ್ 6ರ ಹೇಳಿಕೆಗೆ ಸರಿಹೊಂದುತ್ತದೆಯೋ ಇಲ್ಲವೋ ಇವೆಲ್ಲಾ ಜಿಜ್ಞಾಸೆ ಬೇಕಾಗಿಲ್ಲವೆಂಬುದನ್ನು ನಾವು ಅರಿತುಕೊಳ್ಳಬೇಕು. ಕಾನೂನು ಹಕ್ಕುಗಳ ವಿಷಯವೆಂದು ಪರಿಗಣಿಸುವುದಕ್ಕಿಂತ ಅತಿ ದೊಡ್ಡ ಪ್ರಶ್ನೆಯಾಗಿದೆ. ಇದು ಕಾನೂನು ಹಕ್ಕುಗಳ ವ್ಯಾಪ್ತಿಗೊಳಪಡುವ ವಿಷಯವೇ ಇಲ್ಲ, ಕಾನೂನು ತೊಡಕಿನ ವಿಷಯವಂತೂ ಅಲ್ಲವೇ ಅಲ್ಲ. ಕಾನೂನು ಪರಿಗಣನೆಗಳನ್ನೆಲ್ಲಾ ಬದಿಗಿಟ್ಟು ಸ್ವಲ್ಪ ಪ್ರಯತ್ನ ಮಾಡೋಣ. ನಮ್ಮೊಂದಿಗೆ ಸಾಗಲು ಯಾರು ಸಿದ್ಧರಾಗಿಲ್ಲವೋ, ಅವರು ಬರುತ್ತಾರೆ. ಅವರು ಬರುವಂತೆ ಮಾಡೋಣ, ಇದೇ ನನ್ನ ಮನವಿ.

ಚರ್ಚೆಯಾಗುತ್ತಿದ್ದಾಗ, ತತ್‌ಕ್ಷಣವೇ ನನ್ನ ಗಮನ ಸೆಳೆದ ಎರಡು ಪ್ರಶ್ನೆಗಳನ್ನು ನಾನು ಒಂದು ಚೀಟಿಯಲ್ಲಿ ಬರೆದುಕೊಂಡೆ. ಮೊದಲನೇ ಪ್ರಶ್ನೆ, ನಿನ್ನೆ ದಿನ ಸಭೆಯಲ್ಲಿ ಮಾತನಾಡಿದ ನನ್ನ ಗೆಳೆಯ ಬಿಹಾರದ ಪ್ರಧಾನ ಮಂತ್ರಿಯವರು ಎತ್ತಿದ ಪ್ರಶ್ನೆ. ಅವರು ಹೇಳಿದರು, ರಾಜ್ಯಾಂಗ ಸಭೆಗೆ ಬರದ ಹಾಗೆ ಮುಸ್ಲಿಂ ಲೀಗನ್ನು ಈ ನಿರ್ಣಯ ಹೇಗೆ ತಡೆಯುತ್ತದೆ? ಈ ದಿನ ನನ್ನ ಗೆಳೆಯ ಡಾ. ಶ್ಯಾಮ ಪ್ರಸಾದ ಮುಖರ್ಜಿಯವರು ಇನ್ನೊಂದು ಪ್ರಶ್ನೆ ಕೇಳಿದರು, ಈ ನಿರ್ಣಯವು ಕ್ಯಾಬಿನೆಟ್ ಮಿಷನ್ನಿನ ಪ್ರಸ್ತಾಪಕ್ಕೆ ಅನುಗುಣವಾಗಿದೆಯೇ? ಸನ್ಮಾನ್ಯರೇ, ಇವೆರಡೂ ತುಂಬಾ ಮುಖ್ಯವಾದ ಪ್ರಶ್ನೆಗಳೆಂದು ನನ್ನ ಭಾವನೆ. ಅವುಗಳಿಗೆ ಉತ್ತರ ಕೊಡಲೇಬೇಕು. ಅದರಲ್ಲೂ ಸ್ಪಷ್ಟ ಉತ್ತರ ಕೊಡಲೇಬೇಕು. ಈ ನಿರ್ಣಯಕ್ಕೆ ಅದನ್ನು ಸಾಕಾರಗೊಳಿಸುವ ಉದ್ದೇಶವಿರಬಹುದು ಅಥವಾ ಇಲ್ಲದಿರಬಹುದು. ಅದು ಅಸ್ಪಷ್ಟ ಲೆಕ್ಕಾಚಾರದ ಫಲ ಶ್ರುತಿ ಆಗಿರಬಹುದು ಅಥವಾ ಆಕಸ್ಮಾತ್ತಾಗಿ ರೂಪಿತವಾದುದಾಗಿರಬಹುದು. ಈ ನಿರ್ಣಯದಲ್ಲಿ ಮುಸ್ಲಿಂ ಬಂಧುಗಳನ್ನು ಹೊರಗಿಡುವ ಅಂಶ ಇದೆಯೆಂಬುದನ್ನು ನಾನು ಸಮರ್ಥಿಸುತ್ತೇನೆ.

ಈ ಸಂಬಂಧದಲ್ಲಿ ನಿರ್ಣಯದ 3ನೇ ಪ್ಯಾರಾಕ್ಕೆ ನಾನು ತಮ್ಮ ಗಮನ ಸೆಳೆಯಬಯಸುತ್ತೇನೆ. ಅದು ಮಹತ್ವದ್ದು ಮತ್ತು ತುಂಬಾ ಮುಖ್ಯವಾದದ್ದು ಎಂದು ನನ್ನ ಅನಿಸಿಕೆ. 3ನೇ ಪ್ಯಾರಾದಲ್ಲಿ ಭಾರತದ ಭಾವಿ ರಾಜ್ಯಾಂಗದ ಬಗ್ಗೆ ಅದರಲ್ಲಿ ಹೇಳಲಾಗಿದೆ. ಈ ನಿರ್ಣಯವನ್ನು ಮಂಡಿಸಿದವರ ಆಶಯ ಏನು ಎಂಬುದೇ ನನಗೆ ಗೊತ್ತಾಗುತ್ತಿಲ್ಲ. ಆದರೆ, ಈ ನಿರ್ಣಯವು ಅಂಗೀಕಾರವಾದ ಮೇಲೆ, ಈ ನಿರ್ಣಯದ 3ನೇ ಪ್ಯಾರಾದಲ್ಲಿ ಹೇಳಿರುವಂತೆ, ರಾಜ್ಯಾಂಗವನ್ನು ರಚಿಸಲು ಅದು ರಾಜ್ಯಾಂಗ ಸಭೆಗೆ ಒಂದು ರೀತಿಯ ನಿರ್ದೇಶನದಂತಾಗುತ್ತದೆಂದು ನಾನು ಭಾವಿಸುತ್ತೇನೆ. ಪ್ಯಾರಾ 3ಏನು ಹೇಳುತ್ತದೆ? ಪ್ಯಾರಾ 3 ಹೀಗೆ ಹೇಳುತ್ತದೆ, ಈ ರಾಷ್ಟ್ರದಲ್ಲಿ, ಎರಡು ವಿಭಿನ್ನ ಆಡಳಿತ ವ್ಯವಸ್ಥೆ ಇರತಕ್ಕದ್ದು, ಕೆಳಹಂತದಲ್ಲಿ ಒಂದು - ಎಂದರೆ ಸ್ವಾಯುತ್ತ ಪ್ರಾಂತಗಳು ಅಥವಾ ರಾಜ್ಯಗಳು ಅಥವಾ ಅಖಂಡ ಭಾರತಕ್ಕೆ ಸೇರಬಯಸುವ ಇತರ ಪ್ರದೇಶಗಳು ಈ ಸ್ವಾಯುತ್ತ ಘಟಕಗಳಿಗೆ ಸಂಪೂರ್ಣ ಅಧಿಕಾರ ಇರುತ್ತದೆ. ಅವುಗಳಿಗೆ ಉಳಿಕೆ ಅಧಿಕಾರಗಳೂ ಇರುತ್ತವೆ. ಮೇಲಿನ ಹಂತದಲ್ಲಿ, ಪ್ರಾಂತೀಯ ಘಟಕಗಳ ಮೇಲೆ, ಒಂದು ಒಕ್ಕೂಟ ಸರ್ಕಾರ ಇರುತ್ತದೆ. ಕೆಲವೊಂದು ಶಾಸಕಾಂಗ, ಕಾರ್ಯಾಂಗ ಮತ್ತು ಆಡಳಿತ ವಿಷಯಗಳು ಒಕ್ಕೂಟ ಸರ್ಕಾರದ ಅಧೀನದಲ್ಲಿರುತ್ತವೆ. ನನಗೆ ತಿಳಿದಮಟ್ಟಿಗೆ, ನಿರ್ಣಯದ ಈ ಭಾಗದಲ್ಲಿ,

ಪ್ರಾಂತಗಳನ್ನು ಗುಂಪಾಗಿ ಒಂದುಗೂಡಿಸುವುದರ ಬಗ್ಗೆಯಾಗಲಿ, ಒಕ್ಕೂಟ ಹಾಗೂ ಪ್ರಾಂತಗಳ ನಡುವೆ ಇರಬೇಕಾದ ಮಧ್ಯವರ್ತಿ ವ್ಯವಸ್ಥೆಯ ಬಗ್ಗೆಯಾಗಲೀ ಯಾವುದೇ ಉಲ್ಲೇಖ ಇಲ್ಲ, ಕ್ಯಾಬಿನೆಟ್ ಮಿಷನ್ನಿನ ಸೂಚಿಕೆಯ ಬೆಳಕಿನಲ್ಲಿ ಅಥವಾ ಕಾಂಗ್ರೆಸ್ಸು ತನ್ನ ವಾರ್ಧಾ ಅಧಿವೇಶನದಲ್ಲಿ ಅಂಗೀಕರಿಸಿದ ನಿರ್ಣಯದ ಬೆಳಕಿನಲ್ಲಿ ಗಮನಿಸಿದರೆ, ಪ್ರಾಂತಗಳನ್ನು ಒಂದುಗೂಡಿಸುವುದರ ಬಗ್ಗೆ ಯಾವುದೇ ಉಲ್ಲೇಖವಿಲ್ಲದಿರುವುದು ನನಗೆ ಸಖೇದಾಶ್ಚರ್ಯ ಉಂಟು ಮಾಡಿದೆ. ನನ್ನ ವ್ಯಕ್ತಿಗತ ಅಭಿಪ್ರಾಯ ಹೇಳಬೇಕಾದರೆ, ಒಂದುಗೂಡಿಸುವ ಯೋಜನೆಯು ನನಗೆ ಇಷ್ಟವಿಲ್ಲ. 1935ರ ಗೌವರ್ನಮೆಂಟ್ ಆಫ್ ಇಂಡಿಯಾ ಕಾಯ್ದೆಯ ಅನ್ವಯ ನಾವು ಕೇಂದ್ರದಲ್ಲಿ ರಚಿಸಿದ್ದ ಸರ್ಕಾರಕ್ಕಿಂತಲೂ ಹೆಚ್ಚು ಬಲಿಷ್ಠವಾದ ಕೇಂದ್ರ ಸರ್ಕಾರ ಇರಬೇಕೆಂಬುದು ನನ್ನ ಬಯಕೆ. ಆದರೆ, ಸನ್ಮಾನ್ಯರೇ, ಈ ಅಭಿಪ್ರಾಯಗಳು, ಈ ಆಶೋತ್ತರಗಳು ನಿರ್ಣಯದಲ್ಲಿ ಇಲ್ಲವೇ ಇಲ್ಲ. ನಾವು ಬಹುದೂರ ಕ್ರಮಿಸಿ ಬಂದಿದ್ದೇವೆ. 150 ವರ್ಷಗಳ ಆಡಳಿತದ ಫಲಶ್ರುತಿಯಾಗಿ ಈ ದೇಶದಲ್ಲಿ ರಚಿತವಾಗಿದ್ದ ಬಲಿಷ್ಠ ಕೇಂದ್ರ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ ಪಕ್ಷ ಯಾವ ಆಧಾರಗಳ ಮೇಲೆ ಸಮ್ಮತಿಸಿತು ಎಂಬುದು ಕಾಂಗ್ರೆಸ್ ಪಕ್ಷಕ್ಕೇ ಚೆನ್ನಾಗಿ ಗೊತ್ತಿದೆ. ಆ ಸರ್ಕಾರ ಶ್ಲಾಘನೀಯವಾದುದಾಗಿತ್ತು, ಆ ಸರ್ಕಾರದ ಬಗ್ಗೆ ತುಂಬಾ ಗೌರವವಿತ್ತು. ಅದು ಕಷ್ಟದ ಕಾಲದಲ್ಲಿ ಕೆಲಸ ಮಾಡಿತ್ತು ಎಂದು ನಾನು ಹೇಳಲೇಬೇಕಾಗಿದೆ. ಆ ವಸ್ತುಸ್ಥಿತಿಯನ್ನು ಬದಿಗಿಟ್ಟು, ನಮಗೆ ಬಲಿಷ್ಠ ಕೇಂದ್ರ ಸರ್ಕಾರ ಬೇಕಿಲ್ಲವೆಂದು ಹೇಳಿ ಒಂದು ಮಧ್ಯವರ್ತಿ ವ್ಯವಸ್ಥೆ, ಒಕ್ಕೂಟ ಸರ್ಕಾರ ಮತ್ತು ಪ್ರಾಂತಗಳ ನಡುವೆ ಉಪ-ಸಂಯುಕ್ತ ವ್ಯವಸ್ಥೆ ಇರಲೇಬೇಕೆಂಬುದನ್ನು ಒಪ್ಪಿಕೊಂಡಿರುವಾಗ, ಪ್ರಾಂತಗಳನ್ನು ಗುಂಪಾಗಿ ಒಂದುಗೂಡಿಸುವ ಯಾವುದೇ ಉಲ್ಲೇಖ ಪ್ಯಾರಾ 3ರಲ್ಲಿ ಏಕಿಲ್ಲ? ಎಂದು ತಿಳಿಯಬಯಸುತ್ತೇನೆ. ಕಾಂಗ್ರೆಸ್ ಪಕ್ಷ, ಮುಸ್ಲಿಂ ಲೀಗ್ ಹಾಗೂ ಬ್ರಿಟಿಷ್ ಸರ್ಕಾರ ಗುಂಪಾಗಿ ಒಂದುಗೂಡಿಸುವ ಉಪವಿಧಿಯ ಅರ್ಥಾನ್ವಯದ ಬಗ್ಗೆ ಒಮ್ಮತ ಇಲ್ಲದಿರಬಹುದು. ಆದರೆ, ವಿವಿಧ ಗುಂಪುಗಳಾಗಿ ಒಂದುಗೂಡಿದ ಪ್ರಾಂತಗಳು, ಒಕ್ಕೂಟದ ರಚನೆಗೆ ಅಥವಾ ಉಪ-ಸಂಯುಕ್ತ ವ್ಯವಸ್ಥೆಗೆ ಸಮ್ಮತಿ ಇತ್ತರೆ, ಅದಕ್ಕೆ ಕಾಂಗ್ರೆಸ್ಸಿನ ಯಾವುದೇ ಆಕ್ಷೇಪಣೆ ಇರಲಾರದೆಂದೇ ನನ್ನ ಭಾವನೆ.

ಇಲ್ಲಿ ನಾನು ತಪ್ಪಿದ್ದೇನೆಂಬುದನ್ನು ತೋರಿಸಿಕೊಟ್ಟರೆ, ನಾನು ತಪ್ಪನ್ನು ಸರಿಪಡಿಸಿಕೊಳ್ಳಲು ಸಿದ್ಧನಿದ್ದೇನೆ. ಕಾಂಗ್ರೆಸ್ ಪಕ್ಷದ ಅಂತರಾಳವನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆಂದು ನಂಬಿದ್ದೇನೆ. ನನ್ನ ಪ್ರಶ್ನೆ ಏನೆಂದರೆ,

ಈ ನಿರ್ಣಯವನ್ನು ಮಂಡಿಸಿದವರು, ಅವರು ಹಾಗೂ ಅವರ ಪಕ್ಷವು ಒಪ್ಪಲು ಸಿದ್ಧವಿದ್ದ ನಿಬಂಧನೆಗಳ ಆಧಾರದ ಮೇಲೆ ಪ್ರಾಂತಗಳ ಒಕ್ಕೂಟ ರಚನೆಯ ಅಥವಾ ಪ್ರಾಂತಗಳನ್ನು ಗುಂಪಾಗಿ ಒಂದುಗೂಡಿಸುವ ಕಲ್ಪನೆಗೆ ಈ ನಿರ್ಣಯದಲ್ಲಿ ಏಕೆ ಉಲ್ಲೇಖ ಮಾಡಲಿಲ್ಲ? ಉತ್ತರ ನನಗೆ ಕಂಡು ಬಂದಿಲ್ಲ. ಏನೇನೂ ಇಲ್ಲ, ಆದ್ದರಿಂದ, ಈ ನಿರ್ಣಯವು ಮೇ 16ರ ಹೇಳಿಕೆಗೆ ಹೇಗೆ ಅನುಗುಣವಾಗಿಲ್ಲ ಅಥವಾ ಈ ರಾಜ್ಯಾಂಗ ರಚನಾ ಸಭೆಯಲ್ಲಿ ಮುಸ್ಲಿಂ ಲೀಗ್ ಸೇರದಂತೆ ಈ ನಿರ್ಣಯವು ಹೇಗೆ ತಡೆಯುತ್ತದೆ ಎನ್ನುವ ಬಗ್ಗೆ ಬಿಹಾರದ ಪ್ರಧಾನ ಮಂತ್ರಿಯವರು ಮತ್ತು ಡಾ. ಶ್ಯಾಮ ಪ್ರಸಾದ ಮುಖರ್ಜಿಯವರು ಈ ಸಭೆಯಲ್ಲಿ ಎತ್ತಿದ ಎರಡು ಪ್ರಶ್ನೆಗಳಿಗೆ, ಈ 3ನೇ ಪ್ಯಾರಾದ ಪ್ರಯೋಜನವನ್ನು ಮುಸ್ಲಿಂ ಲೀಗ್ ಪಡೆದುಕೊಳ್ಳುತ್ತದೆ ಮತ್ತು ಅದೇ ಭಾಗವಹಿಸದಿರುವುದಕ್ಕೂ ಕಾರಣ ಎಂದು ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತದೆಂಬುದೇ ಉತ್ತರವೆಂದು ಹೇಳಬಯಸುತ್ತೇನೆ. ಸನ್ಮಾನ್ಯರೇ, ನನ್ನ ಗೆಳೆಯ ಡಾ. ಜಯಕರ್ ಅವರು ನಿನ್ನೆ ದಿನ ಈ ವಿಷಯದ ಮೇಲಿನ ತೀರ್ಮಾನವನ್ನು ಮುಂದೂಡಬೇಕೆಂದು ತಮ್ಮ ವಾದ ಮುಂದಿಟ್ಟರು. ಸ್ವಲ್ಪ ಮಟ್ಟಿಗೆ ಇನ್ನೊಂದು ರೀತಿಯಲ್ಲಿ ಅವರಿಗೆ ನೋವುಂಟಾಗದಂತೆ ಹೇಳಬೇಕಾದರೆ, ಅವರು ತಮ್ಮ ವಾದವನ್ನು ಕಾನೂನು ರೀತಿಯಲ್ಲಿ ಮಂಡಿಸಿದ್ದಾರೆ. ಅವರ ಮೂಲ ವಾದ ಏನೆಂದರೆ, ನಿಮಗೆ ಆ ರೀತಿ ಮಾಡುವ ಹಕ್ಕು ಇದೆಯೇ? ರಾಜ್ಯಾಂಗ ಸಭೆಯ ಕಾರ್ಯ ವಿಧಾನಕ್ಕೆ ಸಂಬಂಧಪಟ್ಟ ಕ್ಯಾಬಿನೆಟ್ ಮಿಷನ್ನಿನ ಹೇಳಿಕೆಯಿಂದ ಕೆಲವೊಂದು ಭಾಗಗಳನ್ನು ಅವರು ಓದಿ ಹೇಳಿದ್ದಾರೆ. ಈ ನಿರ್ಣಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಈ ರಾಜ್ಯಾಂಗ ಸಭೆಯು ಏಕಾಏಕಿ ಅಳವಡಿಸಿಕೊಳ್ಳುತ್ತಿರುವ ವಿಧಾನವು ಆ ಪತ್ರದಲ್ಲೇ ಗೊತ್ತುಪಡಿಸಿರುವ ವಿಧಾನಕ್ಕೆ ಅನುಗುಣವಾಗಿಲ್ಲವಲ್ಲ ಎಂಬುದೇ ಅವರ ವಾದ.

ಸನ್ಮಾನ್ಯರೆ, ಈ ವಿಷಯವನ್ನು ಇನ್ನೊಂದು ರೀತಿಯಲ್ಲಿ ಮಂಡಿಸಬಯಸುತ್ತೇನೆ. ಈ ನಿರ್ಣಯವನ್ನು ನೇರವಾಗಿ ಅಂಗೀಕರಿಸುವ ಅಧಿಕಾರ ತಮಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸಬೇಕೆಂದು ನಾನು ತಮ್ಮನ್ನು ಕೇಳುತ್ತಿಲ್ಲ, ನಾನು ಕೇಳುವದೇನೆಂದರೆ, ತಾವು ಹಾಗೆ ಮಾಡುವುದು ಸಾಧುವೇ? ಹಾಗೆ ಮಾಡುವುದು ಸರಿಯೇ? ಏಕೆಂದರೆ, ಅಧಿಕಾರವೇ ಬೇರೆ, ಯುಕ್ತಾಯುಕ್ತ ಪರಿಜ್ಞಾನವೇ ಬೇರೆ. ಈ ರಾಜ್ಯಾಂಗ ಸಭೆಯಲ್ಲಿ ನಿಹಿತವಾಗಿರುವ ಅಧಿಕಾರದ ದೃಷ್ಟಿಕೋನದಿಂದ ಈ ವಿಷಯವನ್ನು ಪರಿಶೀಲಿಸಬೇಕೆಂದು ನಾನು ಆಗ್ರಹಪಡಿಸುತ್ತಿಲ್ಲ, ಆದರೆ, ಈ ಸಭೆಯು ಇನ್ನೊಂದು ದೃಷ್ಟಿಕೋನದಿಂದ ಎಂದರೆ, ಈ ಹಂತದಲ್ಲಿ ಹಾಗೆ ಮಾಡುವುದು ಸರಿಯೇ, ಮುತ್ಸದ್ಧಿತನವೇ,

ಸಾಧುವೇ, ಎಂಬ ದೃಷ್ಟಿಕೋನದಿಂದ ಈ ವಿಷಯವನ್ನು ಪರಿಶೀಲಿಸಬೇಕೆಂದು ನಾನು ಹೇಳಿಕೊಳ್ಳುತ್ತೇನೆ. ಹಾಗೆ ಮಾಡುವುದು ಸಾಧು ಅಲ್ಲ, ಯುಕ್ತಾಯುಕ್ತ ಪರಿಜ್ಞಾನದಿಂದ ಮಾಡಿದುದಾಗುವುದಿಲ್ಲ ಎನ್ನುವುದು ಉತ್ತರವಾದ ಪಕ್ಷದಲ್ಲಿ, ಕಾಂಗ್ರೇಸ್ ಮತ್ತು ಮುಸ್ಲಿಂಲೀಗ್ ನಡುವಣ ವಿವಾದಕ್ಕೆ ಒಂದು ಪರಿಹಾರ ಕಂಡುಕೊಳ್ಳಲು ಇನ್ನೊಂದು ಪ್ರಯತ್ನ ಮಾಡಬಹುದೆಂದು ನಾನು ಸಲಹೆ ಮಾಡುತ್ತೇನೆ. ಈ ವಿಷಯ ಬಹಳ ಸೂಕ್ಷ್ಮವಾದುದು, ಬಹಳ ಮುಖ್ಯವಾದುದು. ಒಂದು ಪಕ್ಷದ ಪ್ರತಿಷ್ಠೆಯ ಅಥವಾ ಇನ್ನೊಂದು ಪಕ್ಷದ ಪ್ರತಿಷ್ಠೆಯ ಆಧಾರದ ಮೇಲೆ ಅದು ಖಂಡಿತಾ ಬಗೆಹರಿಯುವುದೇ ಇಲ್ಲ ಎಂಬುದು ನನಗೆ ಮನವರಿಕೆಯಾಗಿದೆ. ರಾಷ್ಟ್ರಗಳ ಭವಿಷ್ಯವನ್ನು ನಿರ್ಣಯಿಸುವಾಗ, ಜನತೆಯ ಘನತೆಯನ್ನು, ಧುರೀಣರ ಘನತೆಯನ್ನು ಹಾಗೂ ಪಕ್ಷಗಳ ಘನತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತಿಲ್ಲ, ರಾಷ್ಟ್ರದ ಘನತೆಯೇ ಎಲ್ಲಕ್ಕಿಂತ ಮುಖ್ಯವಾಗಿರಬೇಕು. ಈ ರಾಜ್ಯಾಂಗ ಸಭೆಯ ಹಿತದೃಷ್ಟಿಯಿಂದಷ್ಟೇ ಅಲ್ಲ, ಅದು ಸಮಸ್ತ ದೃಷ್ಟಿಯಿಂದ ಕಾರ್ಯ ತತ್ಪರವಾಗಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡೇ ನಾನು ಈ ಸಭೆ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಮೊದಲು ಮುಸ್ಲಿಂಲೀಗಿನ ಪ್ರತಿಕ್ರಿಯೆಯನ್ನು ಆಲಿಸಬಹುದೆಂದು ಹೇಳುತ್ತಾ ಡಾ. ಜಯಕರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ನಾವು ದುಡುಕಿದರೆ ಮುಂದೇನಾಗಬಹುದು ಎಂಬುದನ್ನು ಸಹ ನಾವು ಆಲೋಚಿಸಬೇಕು. ಈ ಸಭೆಯ ಮೇಲೆ ಹಿಡಿತ ಹೊಂದಿರುವ ಕಾಂಗ್ರೆಸ್ಸಿನ ಉದ್ದೇಶಗಳೇನು? ಅದರ ಮನಸ್ಸಿನಲ್ಲೇನಿದೆ? ಎಂಬುದು ನನಗೆ ಗೊತ್ತಿಲ್ಲ. ಅವರೇನು ಆಲೋಚನೆ ಮಾಡುತ್ತಿದ್ದಾರೆಂದು ತಿಳಿದುಕೊಳ್ಳುವ ಅತಿ ಮಾನುಷ ಶಕ್ತಿ ನನ್ನಲ್ಲಿಲ್ಲ, ಅವರ ಯುಕ್ತಿಗಳೇನು? ಅವರ ಕಾರ್ಯ ತಂತ್ರಗಳೇನು? ನನಗೆ ಗೊತ್ತಿಲ್ಲ. ಆದರೆ, ಈ ವಿಷಯಕ್ಕೆ ಹೊರಗಿನವನಾದ ನಾನು, ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಮುಂದಿನ ಭವಿಷ್ಯವನ್ನು ಮೂರು ರೀತಿಯಲ್ಲಿ ನಿರ್ಧರಿಸಬಹುದೆಂದು ತೋರುತ್ತದೆ. ಒಂದು ಪಕ್ಷವು ಇನ್ನೊಂದರ ಆಶೋತ್ತರಗಳನ್ನು ಗೌರವಿಸಬೇಕು. ಇದು ಒಂದು ರೀತಿ. ಸಂಧಾನ ಸಂಧಿಗೆ ಬರುವುದು - ಇನ್ನೊಂದು ರೀತಿ. ಇಲ್ಲವೇ, ಬಹಿರಂಗವಾಗಿ ಯುದ್ಧಕ್ಕಿಳಿಯುವುದು - ಮೂರನೇ ರೀತಿ. ಸನ್ಮಾನ್ಯರೇ, ರಾಜ್ಯಾಂಗ ಸಭೆಯ ಸದಸ್ಯರಲ್ಲಿ ಕೆಲವರು ಯುದ್ಧಕ್ಕೆ ಸಿದ್ಧರಿದ್ದಾರೆಂದು ನನಗೆ ಹೇಳಿದ್ದಾರೆ. ಈ ರಾಷ್ಟ್ರದ ಯಾರೇ ಆಗಲಿ, ಈ ರಾಷ್ಟ್ರದ ರಾಜಕೀಯ ಸಮಸ್ಯೆಗಳನ್ನು ಯುದ್ಧದ ಮಾರ್ಗ ಹಿಡಿದು ಬಗೆಹರಿಸಿಕೊಳ್ಳಲು ಆಲೋಚಿಸುವುದೇ ಗಾಬರಿ ಉಂಟು ಮಾಡುವಂತಹ ವಿಚಾರ. ಈ ಬಗೆಯ ಆಲೋಚನೆಯನ್ನು ಈ ದೇಶದ ಎಷ್ಟು ಮಂದಿ ಬೆಂಬಲಿಸುತ್ತಾರೋ, ನನಗೆ ಗೊತ್ತಿಲ್ಲ. ಅಂಥವರಲ್ಲಿ ಬಹಳ ಮಂದಿ ಹಾಗೇಕೆ ಆಲೋಚಿಸುತ್ತಿದ್ದಾರೆಂದರೆ, ಅವರುಗಳು ಹಾಗೆ ಆಲೋಚಿಸಲು ಕಾರಣವೇನೆಂದರೆ, ನನಗೆ ತಿಳಿದ ಮಟ್ಟಿಗೆ, ಅವರಲ್ಲಿ ಬಹಳಷ್ಟು ಮಂದಿ, ಆ

ಬಹಳಷ್ಟು ಮಂದಿಯಲ್ಲಿ ಅನೇಕರು ತಾವುಗಳು ಆಲೋಚಿಸುತ್ತಿರುವುದು ಯುದ್ಧ. ಬ್ರಿಟಿಷರ ವಿರುದ್ಧದ ಯುದ್ಧವೆಂದು ತಿಳಿದುಕೊಂಡಿದ್ದಾರೆ. ಸನ್ಮಾನ್ಯರೇ, ಈ ಬಗೆಯ ಯುದ್ಧವು ಬ್ರಿಟಿಷರ ವಿರುದ್ಧ ಮಾತ್ರ ಎಂದು ಜನರ ಮನಸ್ಸಿನಲ್ಲಿ ತಿಳುವಳಿಕೆ ಇಲ್ಲವೆ, ಭಾವನೆ ಮೂಡುವಂತೆ ಮಾಡಿದ್ದೇಯಾದರೆ ಅಂಥದೊಂದು ವಿಧಾನಕ್ಕೆ ನನ್ನದೇನೂ ಆಕ್ಷೇಪಣೆ ಇರಲಾರದು. ಆದರೆ, ಅಂಥ ಹೋರಾಟ ಬ್ರಿಟಿಷರ ಮೇಲೆ ಮಾತ್ರ ಎಂದಂತಾಗುತ್ತದೆಯೇ? ಈ ದೇಶದಲ್ಲಿ ಯುದ್ಧ ಪ್ರಾರಂಭವಾದರೆ, ಆ ಯುದ್ಧಕ್ಕೂ ಈ ದಿನ ನಮ್ಮ ಮುಂದೆ ನೆನೆಗುದಿಗೆ ಬಿದ್ದಿರುವ ವಿಷಯಕ್ಕೂ ಏನಾದರೂ ಸಂಬಂಧ ಇದ್ದದ್ದೇ ಆದರೆ, ಅದು ಬ್ರಿಟಿಷರ ವಿರುದ್ಧ ಯುದ್ಧ ಅಲ್ಲ. ಅದು ಮುಸ್ಲಿಮರ ವಿರುದ್ಧ ಯುದ್ಧ ಆದರಲ್ಲೂ ಬ್ರಿಟಿಷರು ಹಾಗೂ ಮುಸ್ಲಿಮರಿಬ್ಬರ ವಿರುದ್ಧ ಯುದ್ಧವಾದೀತು. ಈ ಸಭೆಯಲ್ಲಿ ಸ್ಪಷ್ಟ ಮಾತುಗಳಲ್ಲಿ ಹೇಳಲು ನಾನು ಹಿಂಜರಿಯುವುದಿಲ್ಲ. ಅವರು ಯೋಚಿಸಿದ ಯುದ್ಧವು, ನಾನು ಆತಂಕ ಪಟ್ಟಿದ್ದಕ್ಕಿಂತಲೂ ಹೇಗೆ ಭಿನ್ನವಾದುದೆಂಬುದು ನನಗೆ ತಿಳಿಯುತ್ತಿಲ್ಲ.

ಸನ್ಮಾನ್ಯರೆ, ಅಮೇರಿಕಾದೊಡನೆ ಸಂಧಾನಕ್ಕೆ ಸಂಬಂಧಪಟ್ಟಂತೆ ಬರ್ಕ್ ಮಹಾಶಯ ಮಾಡಿದ ಉದಾತ್ತ ಭಾಷಣದ ಒಂದು ಭಾಗವನ್ನು ಈ ಸಭೆಯಲ್ಲಿ ಓದಬಯಸುತ್ತೇನೆ. ಈ ಸಭೆಯ ಮನೋಧರ್ಮದ ಮೇಲೆ ಆತನ ಮಾತುಗಳು ಸ್ವಲ್ಪ ಮಟ್ಟಿನ ಪರಿಣಾಮ ಉಂಟು ಮಾಡುತ್ತದೆಂದು ನಂಬಿದ್ದೇನೆ. ಬ್ರಿಟಿಷರು ಅಮೇರಿಕಾ ಸಂಸ್ಥಾನಗಳಲ್ಲಿ ದಂಗೆಯೆದ್ದ ವಸಾಹತುಗಳನ್ನು ನಿಗ್ರಹಿಸಲು ಹಾಗೂ ಅಲ್ಲಿನ ಜನರ ಆಶೋತ್ತರಗಳಿಗೆ ವಿರುದ್ಧವಾಗಿ ಅವುಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಲು ಹವಣಿಸಿದ್ದುದು ತಮಗೆ ತಿಳಿದೇ ಇದೆ. ವಸಾಹತುಗಳನ್ನು ಗೆಲ್ಲುವ ಬ್ರಿಟಿಷರ ಆಕಾಂಕ್ಷೆಯನ್ನು ಖಂಡಿಸಿ ಬರ್ಕ್ ಮಹಾಶಯ ಹೀಗೆ ಹೇಳಿದ್ದಾನೆ.

"ಮೊದಲನೆಯದಾಗಿ, ಸನ್ಮಾನ್ಯರೆ, ಬಲದಿಂದ ಗೆಲ್ಲಬಹುದು, ಆದರೆ ಅದು ತಾತ್ಕಾಲಿಕ ಮಾತ್ರ; ಆ ಕ್ಷಣ ಹತೋಟಿಗೆ ತರಬಹುದು, ಆದರೆ, ಪುನಃ ದಂಗೆಯೇಳುವುದನ್ನು ತಪ್ಪಿಸಲಾಗದು; ಸತತವಾಗಿ ಹತೋಟಿಯಲ್ಲಿಟ್ಟುಕೊಳ್ಳಬೇಕಾದಂಥ ದೇಶವನ್ನು ಆಳುವುದು ಸಾಧ್ಯವಿಲ್ಲ".

"ನನ್ನ ಇನ್ನೊಂದು ಆಕ್ಷೇಪಣೆ, ಏನೆಂದರೆ, ಬಲ ಯಾವಾಗಲೂ ಅನಿಶ್ಚಿತ. ಬಲದಿಂದ ಯಾವಾಗಲೂ ಭಯ ಉಂಟಾಗಲಾರದು. ಸೈನ್ಯದಿಂದಲೇ ಗೆಲುವು ಸಾಧ್ಯವಿಲ್ಲ. ನೀವು ವಿಫಲರಾದರೆ, ನಿಮಗೆ ಏನೂ ತೋಚುವುದಿಲ್ಲ. ಸಂಧಾನ ವಿಫಲವಾದರೆ, ಬಲ ವಿಜೃಂಭಿಸುತ್ತದೆ. ಆದರೆ ಬಲಕ್ಕೆ ಸೋಲುಂಟಾದರೆ, ಸಂಧಾನದ ಆಶಾಕಿರಣವೇ ಬತ್ತಿ ಹೋಗುತ್ತದೆ".

ಅಧಿಕಾರ ಮತ್ತು ಆಳ್ವಿಕೆಯನ್ನು ಪ್ರೀತಿ ವಿಶ್ವಾಸದಿಂದ ಸ್ಥಾಪಿಸಬಹುದು. ಆದರೆ, ಅವುಗಳನ್ನು ಶಕ್ತಿಯುಡುಗಿದ ಮತ್ತು ಸೋಲುಂಡ ಆಕ್ರಮಣಕಾರರು ಹಿಂಸೆಯ ಮೂಲಕ ಭಿಕ್ಷೆಯಂತೆ ಪಡೆಯುವುದು ಎಂದೂ ಸಾಧ್ಯವಿಲ್ಲ...."

"ಬಲದ ಬಳಕೆಗೆ ನನ್ನ ಇನ್ನೊಂದು ಆಕ್ಷೇಪಣೆಯೆಂದರೆ, ಬಲವನ್ನು ಒಳ್ಳೆಯದಕ್ಕೆ ಬಳಸಿಕೊಳ್ಳುವ ಬದಲು, ಅದರ ಮೂಲ ಉದ್ದೇಶಕ್ಕೆ ಹಾನಿ ತರುತ್ತೀರಿ. ನೀವು ಕಾಳಗದಲ್ಲಿ ತೊಡಗಿದ್ದು ನಿಮ್ಮದ್ದನ್ನು ಮರಳಿ ಪಡೆಯುವುದಕ್ಕೇನಲ್ಲ. ಬದಲಿಗೆ ಈ ಕಾಳಗದಲ್ಲಿ ನಿಮ್ಮ ಶಕ್ತಿಗುಂದಿದೆ, ಧೈರ್ಯ ಕುಗ್ಗಿದೆ, ಶಕ್ತಿ ವೃಥಾ ಹಾಳಾಗುತ್ತಿದೆ ಮತ್ತು ನಿಮ್ಮ ಸಾಮರ್ಥ್ಯ ಕ್ಷೀಣಿಸುತ್ತದೆ."

ಈ ನುಡಿ ಮುತ್ತು ಕಡೆಗಣಿಸುವಂಥವಲ್ಲ. ಹಿಂದೂ-ಮುಸ್ಲಿಂ ಸಮಸ್ಯೆಯನ್ನು ಬಲ ಪ್ರಯೋಗ ಮಾಡಿ ಅಂದರೆ ಯುದ್ಧದಿಂದ ಪರಿಹರಿಸಬಹುದೆಂದು, ಮುಸ್ಲಿಮರನ್ನು ಅಂಕೆಗೆ ತರಬಹುದೆಂದು ಹಾಗೂ ಅವರ ಸಮ್ಮತಿ ಪಡೆಯದೇ ಸಿದ್ಧಪಡಿಸಬಹುದಾದ ರಾಜ್ಯಾಂಗದ ವ್ಯಾಪ್ತಿಗೆ ಅವರನ್ನು ತರಬಹುದು ಎಂಬ ಆಲೋಚನೆ ಯಾರ ಮನಸ್ಸಿನಲ್ಲೇನಾದರೂ ಇದ್ದರೆ, ಈ ದೇಶ ನಿರಂತರವಾಗಿ ಅವರನ್ನು ನಿಗ್ರಹಿಸುತ್ತಲೇ ಇರಬೇಕಾಗುತ್ತದೆ. ಈ ಕಾರ್ಯವು ನಿರಂತರವಾಗಿ ನಡೆಯುತ್ತಿರಬೇಕಾಗಬಹುದು. ನಾನು ಈಗಾಗಲೇ ಸಾಕಷ್ಟು ಸಮಯ ತೆಗೆದುಕೊಂಡಿದ್ದೇನೆ. ಹೆಚ್ಚು ಸಮಯ ತೆಗೆದುಕೊಳ್ಳಲು ಬಯಸುವುದಿಲ್ಲ. ಬರ್ಕ್ ಮಹಾಶಯನ ಮಾತುಗಳನ್ನು ಇನ್ನೊಮ್ಮೆ ಉಲ್ಲೇಖಿಸಿ ನನ್ನ ಮಾತು ಮುಗಿಸುತ್ತೇನೆ. ಬರ್ಕ್ ಮಹಾಶಯ ಎಲ್ಲೋ ಒಂದು ಕಡೆ ಹೇಳಿದ ನೆನಪು.

"ಅಧಿಕಾರ ಕೊಡುವುದು ಸುಲಭ. ಆದರೆ, ಜ್ಞಾನ ಕೊಡುವುದು ಕಷ್ಟ. ಈ ಸಭೆಗೆ ಪರಮಾಧಿಕಾರಗಳು ಇದ್ದ ಪಕ್ಷದಲ್ಲಿ ಅವುಗಳನ್ನು ಯುಕ್ತಾಯುಕ್ತ ಪರಿಜ್ಞಾನದಿಂದ ಚಲಾಯಿಸಲು ಸಿದ್ಧವಿದೆಯೆಂಬುದನ್ನು ನಮ್ಮ ಸದ್ವರ್ತನೆಯಿಂದ ರುಜುವಾತುಪಡಿಸೋಣ. ಈ ರೀತಿಯಿಂದ ಮಾತ್ರ ರಾಷ್ಟ್ರದ ಎಲ್ಲ ವರ್ಗಗಳ ಜನರನ್ನು ನಮ್ಮೊಂದಿಗೆ ಒಯ್ಯಬಹುದಾಗಿದೆ. ಇದನ್ನು ಬಿಟ್ಟರೆ, ಏಕತೆಗೆ ನಮ್ಮನ್ನು ಒಯ್ಯುವ ಬೇರಾವ ಮಾರ್ಗವೂ ಇಲ್ಲ." ಆ ಬಗ್ಗೆ ನಾವು ಯಾವುದೇ ಅನುಮಾನ ಪಡಬೇಕಿಲ್ಲ.

● ○ ●

# ಕರಡು ಸಂವಿಧಾನ ಕುರಿತು

ಮಾನ್ಯ ಅಧ್ಯಕ್ಷರೇ,

ಕರಡು ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಸಂವಿಧಾನವನ್ನು ಮಂಡಿಸುತ್ತಾ, ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

1947ರ ಆಗಸ್ಟ್ 29ರಂದು ಸಂವಿಧಾನ ರಚನಾ ಸಭೆಯು ಅಂಗೀಕರಿಸಿದ ನಿರ್ಣಯಕ್ಕೆ ಅನುಗುಣವಾಗಿ ಕರಡು ರಚನಾ ಸಮಿತಿಯನ್ನು ನೇಮಿಸಲಾಯಿತು.

ಸಂವಿಧಾನ ರಚನಾ ಸಮಿತಿಯು ನೇಮಿಸಿದ್ದಂಥ ಒಕ್ಕೂಟ ಅಧಿಕಾರಗಳ ಸಮಿತಿ, ಒಕ್ಕೂಟ ಸಂವಿಧಾನ ಸಮಿತಿ, ಪ್ರಾಂತೀಯ ಸಂವಿಧಾನ ಸಮಿತಿ ಮತ್ತು ಮೂಲಭೂತ ಹಕ್ಕುಗಳು, ಅಲ್ಪಸಂಖ್ಯಾತರು, ಬುಡಕಟ್ಟು ಪ್ರದೇಶ - ಇತ್ಯಾದಿಗಳ ಕುರಿತ ಸಲಹಾ ಸಮಿತಿಗಳು ನೀಡಿದ ವರದಿಗಳ ಆಧಾರದ ಮೇಲೆ ಸಂವಿಧಾನ ರಚನಾ ಸಭೆಯು ಕೈಗೊಂಡ ತೀರ್ಮಾನಗಳಿಗೆ ಅನುಸಾರವಾಗಿ ಸಂವಿಧಾನವನ್ನು ತಯಾರಿಸುವ ಕೆಲಸವನ್ನು ಕರಡು ರಚನಾ ಸಮಿತಿಗೆ ಒಪ್ಪಿಸಲಾಗಿತ್ತು. ಭಾರತ ಸರ್ಕಾರದ ಅಧಿನಿಯಮ, 1935ರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಕೆಲವು ವಿಷಯಗಳ ಸಂಬಂಧದಲ್ಲಿ ಅನುಸರಿಸಬೇಕೆಂದು ಸಂವಿಧಾನ ಸಭೆಯು ನಿರ್ದೇಶಿಸಿತ್ತು. ನಾನು 1948 ಫೆಬ್ರವರಿ 28ರಂದು ಬರೆದ ಪತ್ರದಲ್ಲಿ ಸ್ಥಾಯೀ ಸಮಿತಿಯು ಕೆಲವು ವಿಚಾರಗಳಿಂದ ದೂರಸರಿದಿರುವುದು ಮತ್ತು ಪರ್ಯಾಯ ಸಲಹೆಗಳನ್ನು ನೀಡಿರುವುದನ್ನು ಪ್ರಸ್ತಾಪಿಸಿದ್ದೆ. ನಾನು ಪತ್ರದಲ್ಲಿ ಪ್ರಸ್ತಾಪಿಸಿದ ಆ ಅಂಶಗಳನ್ನು ಹೊರತುಪಡಿಸಿದರೆ ಉಳಿದಂತೆ ಕರಡು ರಚನಾ ಸಮಿತಿಯು, ಅದಕ್ಕೆ ವಹಿಸಿಕೊಟ್ಟ ನಿರ್ದೇಶನಗಳನ್ನು ನಿಷ್ಠೆಯಿಂದ ಪಾಲಿಸಿದೆ ಎಂಬ ಭರವಸೆ ನನಗಿದೆ.

ಕರಡು ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಸಂವಿಧಾನವು ಒಂದು ಬೃಹತ್ ದಾಖಲೆಯಾಗಿದೆ. ಅದು 315 ಅನುಚ್ಛೇದಗಳನ್ನು ಮತ್ತು 8 ಅನುಸೂಚಿಗಳನ್ನು ಒಳಗೊಂಡಿದೆ. ಯಾವುದೇ ದೇಶದ ಸಂವಿಧಾನವೂ ಈ ನಮ್ಮ ಕರಡು ಸಂವಿಧಾನದಷ್ಟು ಬೃಹತ್ ಗಾತ್ರದಲ್ಲಿ ಇಲ್ಲ. ಈ ಕರಡು ಸಂವಿಧಾನವನ್ನು ಓದದೇ ಅದರ ಮುಖ್ಯ ಮತ್ತು ವಿಶೇಷ ಲಕ್ಷಣ, ಸ್ವರೂಪಗಳನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ಕರಡು ಸಂವಿಧಾನವು 8 ತಿಂಗಳಿಂದ ಸಾರ್ವಜನಿಕರ ಮುಂದಿದೆ. ಈ ದೀರ್ಘಾವಧಿಯಲ್ಲಿ ಮಿತ್ರರು, ಟೀಕಾಕಾರರು,

ಪ್ರತಿಪಕ್ಷಗಳು ಅದರಲ್ಲಿ ಒಳಗೊಂಡಿರುವ ಉಪಬಂಧಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಾಗೂ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಲು ಅವರಿಗೆ ಸಾಕಷ್ಟು ಕಾಲಾವಕಾಶವಿತ್ತು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವವರಲ್ಲಿ ಕೆಲವರು ಅನುಚ್ಛೇದಗಳನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ ಅಥವಾ ಅವುಗಳ ಬಗ್ಗೆ ಸಮರ್ಪಕವಾಗಿ ಅರ್ಥಮಾಡಿಕೊಂಡಿಲ್ಲ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಈ ಬಗ್ಗೆ ಮಾಡಲಾಗಿರುವ ಟೀಕೆಗಳಿಗೆ ಉತ್ತರ ಕೊಡಬೇಕಾಗಿದೆ.

ಈ ಎರಡು ಕಾರಣಗಳಿಂದಾಗಿ, ಈಗ ಪರಿಶೀಲನೆಗೆ ಒಪ್ಪಿಸಿರುವ ಕರಡು ಸಂವಿಧಾನದ ಮುಖ್ಯ ಮತ್ತು ವಿಶೇಷ ಲಕ್ಷಣಗಳ ಬಗ್ಗೆ ಮತ್ತು ಆ ಬಗ್ಗೆ ಮಾಡಿರುವ ಟೀಕೆಗಳ ಬಗ್ಗೆ ನಿಮ್ಮ ಗಮನ ಸೆಳೆಯುವುದು ಆವಶ್ಯಕವಾಗಿದೆ.

ಸಂವಿಧಾನದ ಪ್ರತಿಯೊಂದನ್ನು ಸಂವಿಧಾನ ಕಾನೂನಿನ ವಿದ್ಯಾರ್ಥಿಯೊಬ್ಬನ ಕೈಗೆ ಕೊಟ್ಟರೆ, ಅವನು ಖಂಡಿತಾ ಎರಡು ಪ್ರಶ್ನೆಗಳನ್ನು ಕೇಳುತ್ತಾನೆ. ಅವನು ಕೇಳುವ ಮೊದಲನೇ ಪ್ರಶ್ನೆ - ಸಂವಿಧಾನದಲ್ಲಿ ನಿರೂಪಿಸಿರುವ ಸರ್ಕಾರ ಯಾವ ರೀತಿಯದು? ಮತ್ತು ಎರಡನೇ ಪ್ರಶ್ನೆ - ಸಂವಿಧಾನ ಯಾವ ರೀತಿಯದು? ಯಾವುದೇ ಸಂವಿಧಾನವು ಈ ಎರಡು ಮುಖ್ಯ ಸಂಗತಿಗಳನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಮೇಲಿನ ಎರಡು ಪ್ರಶ್ನೆಗಳಲ್ಲಿ ಮೊದಲನೆಯ ಪ್ರಶ್ನೆಗೆ ಉತ್ತರಿಸಲು ನಾನು ಪ್ರಾರಂಭಿಸುತ್ತೇನೆ.

ಕರಡು ಸಂವಿಧಾನದಲ್ಲಿ ಒಕ್ಕೂಟದ ಅಧ್ಯಕ್ಷ (ರಾಷ್ಟ್ರಪತಿ) ಎಂದು ಕರೆಯಲಾಗುವ ಕಾರ್ಯನಿರ್ವಾಹಕನಿದ್ದು, ಅವನು ಭಾರತ ಒಕ್ಕೂಟದ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುತ್ತಾನೆ. ಈ ಕಾರ್ಯನಿರ್ವಾಹಕ ಪದದ ಹೆಸರು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷನ ಪದದ ಹೆಸರಿಗೆ ಹೋಲುತ್ತದೆ. ಆದರೆ, ಹೆಸರಿನ ಹೋಲಿಕೆಯೊಂದನ್ನು ಬಿಟ್ಟರೆ, ಅಮೇರಿಕಾದಲ್ಲಿರುವ ಸರ್ಕಾರದ ರೀತಿಗೂ ಕರಡು ಸಂವಿಧಾನದಲ್ಲಿ ಉದ್ದೇಶಿಸಿರುವ ಸರ್ಕಾರದ ರೀತಿಗೂ ಯಾವುದೇ ಸಾಮ್ಯವಾಗಲೀ, ಸಂಬಂಧವಾಗಲೀ ಇಲ್ಲ. ಅಮೆರಿಕಾ ಸರ್ಕಾರವು ಅಧ್ಯಕ್ಷೀಯ ಪದ್ಧತಿಯ ಸರ್ಕಾರವಾಗಿದೆ. ಆದರೆ, ಕರಡು ಸಂವಿಧಾನದಲ್ಲಿ ಉದ್ದೇಶಿಸಿರುವುದು ಸಂಸದೀಯ ಪದ್ಧತಿಯ ಸರ್ಕಾರವನ್ನು. ಈ ಎರಡೂ ಪದ್ಧತಿಗಳು ಮೂಲತಃ ಭಿನ್ನವಾಗಿರುತ್ತವೆ. ಅಮೇರಿಕಾದ ಅಧ್ಯಕ್ಷೀಯ ಪದ್ಧತಿಯಲ್ಲಿ ಅಧ್ಯಕ್ಷನು ಕಾರ್ಯಾಂಗದ ಮುಖ್ಯಸ್ಥನಾಗಿರುತ್ತಾನೆ. ಆಡಳಿತದ ಎಲ್ಲಾ ವ್ಯವಹಾರವೂ ಅವನದೇ ಆಗಿರುತ್ತದೆ. ಕರಡು ಸಂವಿಧಾನದಲ್ಲಿ ರಾಷ್ಟ್ರಪತಿಯು ಇಂಗ್ಲಿಷ್ ಸಂವಿಧಾನದಲ್ಲಿನ ರಾಜನ ಸ್ಥಾನ-ಮಾನವನ್ನು ಹೊಂದಿರುತ್ತಾನೆ. ರಾಷ್ಟ್ರಪತಿಯು ರಾಷ್ಟ್ರದ

ಮುಖ್ಯಸ್ಥನಾಗಿರುತ್ತಾನೆಯೇ ಹೊರತು ಕಾರ್ಯಾಂಗದ ಮುಖ್ಯಸ್ಥನಲ್ಲ. ಅವನು ರಾಷ್ಟ್ರವನ್ನು ಪ್ರತಿನಿಧಿಸುತ್ತಾನೆಯೇ ಹೊರತು, ರಾಷ್ಟ್ರವನ್ನು ಆಳುವುದಿಲ್ಲ. ಅವನು ರಾಷ್ಟ್ರದ ಸಂಕೇತವಾಗಿರುತ್ತಾನೆ. ರಾಷ್ಟ್ರದ ಎಲ್ಲಾ ತೀರ್ಮಾನಗಳನ್ನು ತನ್ನ ಮೊಹರಿನ ಮೂಲಕ ಸಾರ್ವಜನಿಕರಿಗೆ ತಿಳಿಸುವ ಶಿಷ್ಟಾಚಾರದ ಪ್ರಕ್ರಿಯೆಯೇ ಅವನು ಆಡಳಿತದಲ್ಲಿ ಹೊಂದಿರುವ ಸ್ಥಾನಮಾನ. ಅಮೇರಿಕಾ ಸಂವಿಧಾನದಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಕಾರ್ಯದರ್ಶಿಗಳು ಇದ್ದು, ಅವರೆಲ್ಲಾ ಅಧ್ಯಕ್ಷನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಾರೆ. ಅದೇ ರೀತಿ, ಭಾರತದ ರಾಷ್ಟ್ರಪತಿಯು, ಆಡಳಿತ ವಿವಿಧ ಇಲಾಖೆಗಳನ್ನು ಮಂತ್ರಿಗಳಿಗೆ ವಹಿಸುತ್ತಾನೆ. ಇಲ್ಲಿ, ನಾವು ಮುಖ್ಯವಾದ ವ್ಯತ್ಯಾಸವನ್ನು ಗಮನಿಸಬೇಕಾಗುತ್ತದೆ. ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷನು ತನ್ನ ಯಾರೇ ಕಾರ್ಯದರ್ಶಿಗಳು ಕೊಟ್ಟಂತಹ ಸಲಹೆಗಳನ್ನು ಒಪ್ಪಿಕೊಳ್ಳಲೇಬೇಕಾಗಿಲ್ಲ. ಆದರೆ, ಭಾರತದ ರಾಷ್ಟ್ರಪತಿಯು ಮಂತ್ರಿಗಳ ಸಲಹೆಗಳನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಮಂತ್ರಿಗಳ ಸಲಹೆಗೆ ವಿರುದ್ಧವಾಗಿ ಅವನೇನೂ ಮಾಡುವಂತಿಲ್ಲ.

ಅಮೇರಿಕಾದ ರಾಷ್ಟ್ರಪತಿಯು, ಯಾವುದೇ ಸಮಯದಲ್ಲಿ, ಯಾವನೇ ಕಾರ್ಯದರ್ಶಿಯನ್ನು ವಜಾ ಮಾಡಬಹುದು. ಆದರೆ, ಭಾರತದ ರಾಷ್ಟ್ರಪತಿಯು ತನ್ನ ಮಂತ್ರಿಗಳು ಸಂಸತ್ತಿನಲ್ಲಿ ಬಹುಮತವನ್ನು ಹೊಂದಿರುವವರೆಗೆ ಅವರನ್ನು ವಜಾ ಮಾಡುವಂತಿಲ್ಲ. ಅಮೇರಿಕಾದ್ದು ಕಾರ್ಯಾಂಗ ಮತ್ತು ಶಾಸಕಾಂಗ ಪ್ರತ್ಯೇಕವಾಗಿರುವ ಅಧ್ಯಕ್ಷೀಯ ಪದ್ಧತಿಯ ಸರ್ಕಾರ. ಹೀಗಾಗಿ, ಅವರ ಅಧ್ಯಕ್ಷನಾಗಲೀ ಮತ್ತು ಅವನ ಕಾರ್ಯದರ್ಶಿಯಾಗಲೀ ಅಲ್ಲಿನ ಕಾಂಗ್ರೆಸ್ಸಿನ ಸದಸ್ಯರಾಗಬೇಕಾಗಿಲ್ಲ. ನಮ್ಮ ಕರಡು ಸಂವಿಧಾನವು ಈ ಸಿದ್ಧಾಂತವನ್ನು ಮಾನ್ಯ ಮಾಡುವುದಿಲ್ಲ, ಭಾರತ ಒಕ್ಕೂಟದ ಮಂತ್ರಿಗಳು ಸಂಸತ್ತಿನ ಸದಸ್ಯರಾಗಿರುತ್ತಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮಂತ್ರಿಗಳಾಗಬೇಕಾದರೆ ಅವರು ಸಂಸತ್ತಿನ ಸದಸ್ಯರಾಗಿರಲೇಬೇಕು. ಮಂತ್ರಿಗಳು ಸಂಸತ್ತಿನ ಸದಸ್ಯರು ಹೊಂದಿರುವಂಥವೇ ಅಧಿಕಾರಗಳನ್ನು ಹೊಂದಿರುತ್ತಾರೆ. ಅವರು ಸಂಸತ್ತಿನಲ್ಲಿ ಕುಳಿತುಕೊಳ್ಳಬಹುದು, ಚರ್ಚೆಗಳಲ್ಲಿ ಭಾಗವಹಿಸಬಹುದು ಮತ್ತು ಬೇಡಿಕೆಗಳ ಮೇಲೆ ಮತ ನೀಡಬಹುದು. ಈ ಎರಡೂ ಬಗೆಯ ಸರ್ಕಾರಗಳು ಪ್ರಜಾಸತ್ತಾತ್ಮಕ ಸರ್ಕಾರಗಳೇ. ಆದರೆ, ಇವೆರಡರ ನಡುವೆ ಯಾವುದು ಉತ್ತಮ ಎಂದು ಪರಿಗಣಿಸುವುದು ಸುಲಭವಲ್ಲ. ಪ್ರಜಾಸತ್ತಾತ್ಮಕ ಕಾರ್ಯಾಂಗವು, ಈ ಮುಂದಿನ ಎರಡು ಅಗತ್ಯತೆಗಳನ್ನು ಪೂರೈಸಬೇಕಾಗುತ್ತದೆ. - (1) ಅದು ಸ್ಥಿರವಾದ ಕಾರ್ಯಾಂಗವಾಗಿರಬೇಕು; (2) ಅದು ಜವಾಬ್ದಾರಿಯುತ ಕಾರ್ಯಾಂಗವಾಗಿರಬೇಕು;

9627-8

ದುರದೃಷ್ಟವಶಾತ್ ಈ ಎರಡನ್ನೂ ಸಾಧಿಸುವ ವ್ಯವಸ್ಥೆಯನ್ನು ಕಂಡುಕೊಳ್ಳುವುದು ಈವರೆಗೆ ಸಾಧ್ಯವಾಗಿಲ್ಲ. ಹೆಚ್ಚು ಸ್ಥಿರತೆಯನ್ನು ಕೊಡುವ ಆದರೆ, ಕಡಿಮೆ ಜವಾಬ್ದಾರಿಯನ್ನು ಕೊಡುವಂತಹ ಪದ್ಧತಿಯನ್ನು ನೀವು ಹೊಂದಬಹುದು ಅಥವಾ ಹೆಚ್ಚು ಜವಾಬ್ದಾರಿಯನ್ನು ಆದರೆ, ಕಡಿಮೆ ಸ್ಥಿರತೆಯನ್ನು ಕೊಡುವಂತಹ ಪದ್ಧತಿಯನ್ನು ಹೊಂದಬಹುದು. ಅಮೇರಿಕಾ ಮತ್ತು ಸ್ವಿಸ್ ಪದ್ಧತಿಗಳು ಹೆಚ್ಚು ಸ್ಥಿರತೆಯನ್ನು ಆದರೆ, ಕಡಿಮೆ ಜವಾಬ್ದಾರಿಯನ್ನು ಕೊಡುತ್ತವೆ. ಆದರೆ, ಬ್ರಿಟಿಷ್ ಪದ್ಧತಿಯಲ್ಲಿ ಜವಾಬ್ದಾರಿ ಹೆಚ್ಚು, ಸ್ಥಿರತೆ ಕಡಿಮೆ. ಇದಕ್ಕೆ ಕಾರಣ ಸ್ಪಷ್ಟ. ಅಮೇರಿಕಾದ ಕಾರ್ಯಾಂಗವು ಸಂಸದೀಯವಲ್ಲದ ಕಾರ್ಯಾಂಗವಾಗಿದೆ. ಇದು, ತನ್ನ ಅಸ್ತಿತ್ವಕ್ಕೆ ಕಾಂಗ್ರೆಸ್ಸಿನ ಬಹುಮತವನ್ನು ಅವಲಂಭಿಸಿರುವುದಿಲ್ಲ. ಆದರೆ, ಬ್ರಿಟಿಷ್ ಪದ್ಧತಿಯು, ಸಂಸತ್ತಿನ ಬಹುಮತವನ್ನು ಅವಲಂಭಿಸಿರುತ್ತದೆ. ಸಂಸದೀಯವಲ್ಲದ ಕಾರ್ಯಾಂಗವಾಗಿರುವುದರಿಂದ, ಅಮೇರಿಕಾದ ಕಾಂಗ್ರೆಸ್ಸು ಅಲ್ಲಿನ ಕಾರ್ಯಾಂಗವನ್ನು ವಜಾ ಮಾಡುವಂತಿಲ್ಲ. ಸಂಸದೀಯ ಪದ್ಧತಿಯ ಸರ್ಕಾರದಲ್ಲಿ, ಸಂಸತ್ತಿನ ಸದಸ್ಯರ ಬಹುಮತವನ್ನು ಕಳೆದುಕೊಂಡ ಕೂಡಲೇ ಆ ಸರ್ಕಾರ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಜವಾಬ್ದಾರಿಯ ದೃಷ್ಟಿಯಿಂದ ನೋಡುವುದಾದರೆ, ಸಂಸದೀಯವಲ್ಲದ ಕಾರ್ಯಾಂಗವು ಸಂಸತ್ತಿನಿಂದ ಸ್ವತಂತ್ರವಾಗಿರುವುದರಿಂದ ಅದು ಶಾಸಕಾಂಗಕ್ಕೆ ಅಷ್ಟೊಂದು ಜವಾಬ್ದಾರವಾಗಬೇಕಾಗಿಲ್ಲ. ಆದರೆ, ಸಂಸದೀಯ ಕಾರ್ಯಾಂಗವು ಸಂಸತ್ತಿನ ಬಹುಮತವನ್ನೇ ಆದರಿಸಿರುವುದರಿಂದ ಅದು ಸಂಸತ್ತಿಗೆ ಹೆಚ್ಚು ಜವಾಬ್ದಾರಿಯುತವಾಗಿರಬೇಕಾಗುತ್ತದೆ.

ಸಂಸದೀಯ ಪದ್ಧತಿಯು ಸಂಸದೀಯವಲ್ಲದ ಪದ್ಧತಿಗಿಂತ ಬೇರೆಯಾಗಿರುತ್ತದೆ. ಮೊದಲನೆಯದು ಎರಡನೆಯದಕ್ಕಿಂತ ಹೆಚ್ಚು ಜವಾಬ್ದಾರಿಯುತವಾಗಿರುತ್ತದೆ. ಆದರೆ, ಅವುಗಳ ಜವಾಬ್ದಾರಿಯನ್ನು ನಿರ್ಧರಿಸುವ ಕಾಲ ಮತ್ತು ಏಜೆನ್ಸಿಯ ವಿಚಾರಗಳಲ್ಲಿ ಅವು ಬೇರೆಯಾಗುತ್ತವೆ. ಸಂಸದೀಯವಲ್ಲದ ಪದ್ಧತಿಯಲ್ಲಿ ಎಂದರೆ, ಅಮೇರಿಕಾದಲ್ಲಿರುವ ಪದ್ಧತಿಯಲ್ಲಿ ಕಾರ್ಯಾಂಗದ ಜವಾಬ್ದಾರಿಯನ್ನು ಎರಡು ವರ್ಷಗಳಿಗೊಮ್ಮೆ ಮತದಾರರು ನಿರ್ಧರಿಸುತ್ತಾರೆ. ಸಂಸದೀಯ ಪದ್ಧತಿಯನ್ನು ಹೊಂದಿರುವ ಇಂಗ್ಲೆಂಡಿನಲ್ಲಿ ಕಾರ್ಯಾಂಗದ ಜವಾಬ್ದಾರಿಯ ನಿರ್ಧರಣೆಯು, ದಿನನಿತ್ಯವೂ ಮತ್ತು ನಿಯತಕಾಲಿಕವೂ ನಡೆಯುತ್ತವೆ. ಸಂಸತ್ತಿನಲ್ಲಿ ಸದಸ್ಯರು ಪ್ರಶ್ನೆಗಳನ್ನು ಕೇಳುವ ಮೂಲಕ, ನಿರ್ಣಯಗಳನ್ನು ಮಂಡಿಸುವ ಮೂಲಕ, ಅವಿಶ್ವಾಸ ನಿರ್ಣಯಗಳ ಮೂಲಕ, ಪ್ರಸ್ತಾಪಗಳನ್ನು ಮುಂದೂಡುವ ಮೂಲಕ, ಭಾಷಣಗಳ ಮೇಲಣ ಚರ್ಚೆಗಳ

ಮೂಲಕ ದಿನನಿತ್ಯವೂ ಕಾರ್ಯಾಂಗದ ಜವಾಬ್ದಾರಿಯ ನಿರ್ಣಯವಾಗುತ್ತಿರುತ್ತದೆ. ಪ್ರತಿ ಐದು ವರ್ಷಗಳಿಗೊಮ್ಮೆ ಅಥವಾ ಅದಕ್ಕಿಂತ ಮುಂಚಿತವಾಗಿ ನಡೆಯುವ ಚುನಾವಣೆಗಳಲ್ಲಿ ಮತದಾರರು ಭಾಗವಹಿಸುವ ಮೂಲಕ ಕಾರ್ಯಾಂಗದ ಮೌಲ್ಯ ನಿರ್ಧರಣೆಯನ್ನು ಮಾಡುತ್ತಾರೆ. ಕಾರ್ಯಾಂಗದ ಜವಾಬ್ದಾರಿಯ ದೈನಿಕ ನಿರ್ಧರಣೆಯು ನಿಯತಕಾಲಿಕ ನಿರ್ಧರಣೆಗಿಂತ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಅಮೆರಿಕಾ ಪದ್ಧತಿಯಲ್ಲಿ ದೈನಿಕ ನಿರ್ಧರಣೆ ಕಾಣುವುದಿಲ್ಲ, ಭಾರತದಂಥ ದೇಶದಲ್ಲಿ ನಿಯತಕಾಲಿಕ ನಿರ್ಧರಣೆಗಿಂತ ದೈನಂದಿನ ನಿರ್ಧರಣೆಯು ಪರಿಣಾಮಕಾರಿಯೂ, ತೀರಾ ಅಗತ್ಯವೂ ಆಗಿದೆ. ಕರಡು ಸಂವಿಧಾನವು ಸಂಸದೀಯ ಪದ್ಧತಿಯ ಕಾರ್ಯಾಂಗದ ಬಗ್ಗೆ ಶಿಫಾರಸ್ಸು ಮಾಡುತ್ತಾ, ಹೆಚ್ಚು ಸ್ಥಿರತೆಗಿಂತ ಹೆಚ್ಚು ಜವಾಬ್ದಾರಿಗೆ ಆದ್ಯತೆ ನೀಡಿದೆ.

ಕರಡು ಸಂವಿಧಾನದಲ್ಲಿ, ಪ್ರಸ್ತಾಪಿಸಿರುವ ಸರ್ಕಾರದ ರೀತಿ ಕುರಿತು ನಾನು ಈವರೆಗೆ ವಿವರಿಸಿದ್ದೇನೆ. ನಾನೀಗ ಎರಡನೆಯ ಪ್ರಶ್ನೆಗೆ ಎಂದರೆ, ಸಂವಿಧಾನ ಯಾವ ರೀತಿಯದು ಎಂಬ ಪ್ರಶ್ನೆಗೆ ಉತ್ತರಿಸಬಯಸುತ್ತೇನೆ.

ಇತಿಹಾಸದಲ್ಲಿ ಪ್ರಧಾನವಾಗಿ ಎರಡು ರೀತಿಯ ಸಂವಿಧಾನಗಳು ಕಂಡು ಬರುತ್ತವೆ. ಮೊದಲನೆಯದು, ಒಕ್ಕೂಟ ಸಂವಿಧಾನ. ಎರಡನೆಯದು, ಫೆಡರಲ್ ಸಂವಿಧಾನ. ಒಕ್ಕೂಟ ಸಂವಿಧಾನದ ಎರಡು ಮುಖ್ಯ ಲಕ್ಷಣಗಳು ಎಂದರೆ,

(1) ಕೇಂದ್ರೀಯ ಆಡಳಿತ ವ್ಯವಸ್ಥೆಯ ಸಾರ್ವಭೌಮತ್ವ;

(2) ಅಧೀನ ಸಾರ್ವಭೌಮತ್ವದ ಆಡಳಿತ ಇಲ್ಲದಿರುವುದು;

*ಫೆಡರಲ್ ಸಂವಿಧಾನದ ಎರಡು ಮುಖ್ಯ ಲಕ್ಷಣಗಳು ಹೀಗಿವೆ:*

(1) ಕೇಂದ್ರೀಯ ಆಡಳಿತ ವ್ಯವಸ್ಥೆ ಮತ್ತು ಅಧೀನ ಆಡಳಿತ ವ್ಯವಸ್ಥೆಗಳು ಜೊತೆಜೊತೆಯಲ್ಲಿಯೇ ಇರುತ್ತವೆ.

(2) ಎರಡೂ ತಮಗೆ ವಹಿಸಿರುವ ಕ್ಷೇತ್ರಗಳಲ್ಲಿ ತಮ್ಮ ಸಾರ್ವಭೌಮತೆಯನ್ನು ಪಡೆದುಕೊಂಡಿರುತ್ತವೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಫೆಡರೇಷನ್ ಎಂದರೆ - ಎರಡು ಆಡಳಿತ ವ್ಯವಸ್ಥೆಗಳ ಸ್ಥಾಪನೆ ಎಂದರ್ಥ. ಕರಡು ಸಂವಿಧಾನವು ಇಂಥ ಎರಡು ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಿರುವುದರಿಂದ, ಇದು ಫೆಡರಲ್

ಸಂವಿಧಾನವಾಗಿದೆ. ಉದ್ದೇಶಿತ ಸಂವಿಧಾನದಲ್ಲಿನ ಎರಡು ಆಡಳಿತ ವ್ಯವಸ್ಥೆಗಳು ಇದ್ದು, ಕೇಂದ್ರದಲ್ಲಿ ಒಕ್ಕೂಟ ವ್ಯವಸ್ಥೆಯು ಅದರ ಪರಿಧಿಯಲ್ಲಿ ರಾಜ್ಯಗಳ ಆಡಳಿತ ವ್ಯವಸ್ಥೆಯು ಇದೆ. ಒಕ್ಕೂಟ ಮತ್ತು ರಾಜ್ಯಗಳು ಸಂವಿಧಾನದಿಂದ ಅವುಗಳಿಗೆ ಪ್ರದತ್ತವಾದ ಸಾರ್ವಭೌಮ ಅಧಿಕಾರಗಳನ್ನು ಸ್ವತಂತ್ರವಾಗಿ ಚಲಾಯಿಸಬಹುದಾಗಿದೆ. ಈ ಎರಡು ಆಡಳಿತ ವ್ಯವಸ್ಥೆಗಳು ಅಮೇರಿಕಾದ ಸಂವಿಧಾನಕ್ಕೆ ಸಂವಾದಿಯಾಗಿ ಕಾಣುತ್ತವೆ. ಅಮೇರಿಕಾ ಆಡಳಿತ ವ್ಯವಸ್ಥೆಯಲ್ಲಿ ಇದೇ ತರಹದ ವ್ಯವಸ್ಥೆಯಿದ್ದು, ಮೊದಲನೇ ವ್ಯವಸ್ಥೆಯನ್ನು ಫೆಡರಲ್ ಸರ್ಕಾರವೆಂತಲೂ, ಎರಡನೆಯ ವ್ಯವಸ್ಥೆಯನ್ನು ರಾಜ್ಯ ಸರ್ಕಾರವೆಂತಲೂ ಕರೆಯಲಾಗುತ್ತದೆ.

ಈ ವ್ಯವಸ್ಥೆಯು ನಮ್ಮ ಕರಡು ಸಂವಿಧಾನದ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸಂವಾದಿಯಾಗಿದೆ. ಅಮೇರಿಕಾ ಸಂವಿಧಾನದಲ್ಲಿ ಫೆಡರಲ್ ಸರ್ಕಾರವು ಕೇವಲ ರಾಜ್ಯಗಳ ಒಂದು ಒಕ್ಕೂಟವಾಗಿಲ್ಲ ಮತ್ತು ರಾಜ್ಯಗಳು ಫೆಡರಲ್ ಸರ್ಕಾರದ ಆಡಳಿತ ಘಟಕಗಳಾಗಲೀ ಅಥವಾ ಏಜೆನ್ಸಿಗಳಾಗಲೀ ಅಲ್ಲ. ಅದೇ ರೀತಿ, ಕರಡು ಸಂವಿಧಾನದಲ್ಲಿ ಪ್ರಸ್ತಾಪಿಸಿರುವ ಕೇಂದ್ರ ಸರ್ಕಾರವು, ರಾಜ್ಯಗಳ ಒಕ್ಕೂಟವಲ್ಲ ಅಥವಾ ರಾಜ್ಯಗಳು ಒಕ್ಕೂಟ ಸರ್ಕಾರದ ಆಡಳಿತ ಘಟಕಗಳಲ್ಲ ಅಥವಾ ಏಜೆನ್ಸಿಗಳಲ್ಲ. ಇಲ್ಲಿಗೆ ಅಮೇರಿಕಾ ಸಂವಿಧಾನ ಮತ್ತು ಭಾರತ ಸಂವಿಧಾನಗಳ ನಡುವಣ ಹೋಲಿಕೆ ಮುಗಿಯಿತು. ಈ ಎರಡೂ ದೇಶಗಳ ಸಂವಿಧಾನಗಳ ನಡುವಣ ವ್ಯತ್ಯಾಸಗಳು ಹೆಚ್ಚು ಮೂಲಭೂತವಾಗಿವೆ ಮತ್ತು ಹೋಲಿಕೆಗಳಿಗಿಂತ ವ್ಯತ್ಯಾಸಗಳೇ ಕಣ್ಣಿಗೆ ಕಟ್ಟುವಂತಿವೆ.

ಅಮೇರಿಕಾ ಫೆಡರೇಷನ್ ಮತ್ತು ಭಾರತ ಫೆಡರೇಷನ್‌ಗಳ ನಡುವೆ ಮುಖ್ಯವಾಗಿ ಎರಡು ರೀತಿಯ ವ್ಯತ್ಯಾಸಗಳು ಇವೆ. ಅಮೇರಿಕಾದಲ್ಲಿ ಎರಡು ರಾಜ್ಯ ವ್ಯವಸ್ಥೆ ಮತ್ತು ಎರಡು ಪೌರತ್ವಗಳು (ನಾಗರಿಕತ್ವ) ಇವೆ. ಅಮೇರಿಕಾದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪೌರತ್ವದ ಜೊತೆಗೆ ರಾಜ್ಯಗಳ ಪೌರತ್ವವೂ ಇರುತ್ತದೆ. ಈ ದ್ವಿಪೌರತ್ವದ ತೊಂದರೆಗಳನ್ನು ಸಂಯುಕ್ತ ಸಂಸ್ಥಾನಗಳ ಸಂವಿಧಾನದ 14ನೇ ತಿದ್ದುಪಡಿಯ ಮೂಲಕ ನಿವಾರಿಸಲಾಯಿತು. ಈ ಮೂಲಕ ಸಂಯುಕ್ತ ಸಂಸ್ಥಾನಗಳ ಪೌರರ ಹಕ್ಕುಗಳು, ವಿಶೇಷಾಧಿಕಾರಿಗಳು ಮತ್ತು ಉನ್ಮುಕ್ತಿಗಳನ್ನು ರಾಜ್ಯಗಳು ಕಸಿದುಕೊಳ್ಳುವುದನ್ನು ನಿಷೇಧಿಸಲಾಗಿದೆ. ಅದೇ ಸಮಯದಲ್ಲಿ, ವಿಲಿಯಂ ಆಂಡರ್ಸನ್ ಹೇಳಿರುವಂತೆ, ಮತದಾನದ ಹಕ್ಕು ಮತ್ತು ಸರ್ಕಾರಿ ಹುದ್ದೆಗಳನ್ನು ಧಾರಣ ಮಾಡುವ ಹಕ್ಕುಗಳೂ ಸೇರಿದಂತೆ ಕೆಲವು ರಾಜಕೀಯ

ವಿಚಾರಗಳಲ್ಲಿ ತನ್ನ ಸ್ವಂತ ಪೌರರ ವಿಚಾರದಲ್ಲಿ, ರಾಜ್ಯಗಳು ತಾರತಮ್ಯವನ್ನು ಮಾಡಬಹುದಾಗಿದೆ ಮತ್ತು ಮಾಡಿಯೇ ಮಾಡುತ್ತವೆ. ಈ ಪಕ್ಷಪಾತವು ಕೆಲವು ಪ್ರಕರಣಗಳಲ್ಲಿ ಮತ್ತಷ್ಟೂ ಎದ್ದು ಕಾಣುತ್ತದೆ. ಹೀಗಾಗಿ, ರಾಜ್ಯದ ಅಥವಾ ಒಂದು ಸ್ಥಳೀಯ ಸರ್ಕಾರದ ಸೇವೆಗಳಲ್ಲಿ ನೌಕರಿ ಪಡೆಯಬೇಕಾದರೆ, ವ್ಯಕ್ತಿಯು, ಸ್ಥಳೀಯ ನಿವಾಸಿಯಾಗಿರಬೇಕು ಇಲ್ಲವೇ ನಾಗರಿಕನಾಗಿರಬೇಕು. ಹಾಗೆಯೇ, ಕಾನೂನು ಮತ್ತು ವೈದ್ಯಕೀಯ ವೃತ್ತಿಗಳನ್ನು ನಡೆಸುವುದಕ್ಕೆ ವ್ಯಕ್ತಿಗಳಿಗೆ ಲೈಸೆನ್ಸು ಕೊಡಲು ಆ ವ್ಯಕ್ತಿಗಳು, ರಾಜ್ಯದ ನಿವಾಸಿಗಳಾಗಿರಲೇಬೇಕು ಅಥವಾ ಅದರ ನಾಗರಿಕನಾಗಿರಲೇಬೇಕು. ಸಾರ್ವಜನಿಕ ನಿಯಂತ್ರಣವು ಅತ್ಯಗತ್ಯವಾಗಿರುವಂಥ ಮದ್ಯದ ಮಾರಾಟ ಮತ್ತು ಸ್ಟಾಕುಗಳು ಮತ್ತು ಬಾಂಡುಗಳ ವ್ಯವಹಾರ ಮುಂತಾದವುಗಳಲ್ಲಿ ಮೇಲ್ಕಂಡ ನಿರ್ಬಂಧಗಳನ್ನು ವಿಧಿಸಲಾಗಿದೆ. ಪ್ರತಿಯೊಂದು ರಾಜ್ಯವೂ ತನ್ನ ಆಧಿಪತ್ಯದಲ್ಲಿ ಕೆಲವೊಂದು ಹಕ್ಕುಗಳನ್ನು ಹೊಂದಿರುತ್ತದೆ. ತನ್ನ ನಾಗರಿಕರ ವಿಶೇಷಾನುಕೂಲಕ್ಕಾಗಿ ಈ ಹಕ್ಕುಗಳನ್ನು ಹೊಂದಲಾಗಿದೆ. ಹೀಗಾಗಿ, ವನ್ಯಮೃಗ ಬೇಟೆ ಮತ್ತು ಮೀನು ಹಿಡಿಯುವುದು - ಇವು ರಾಜ್ಯಕ್ಕೆ ಸೇರುತ್ತವೆ. ರಾಜ್ಯಗಳು ಇಂತಹ ಬೇಟೆಗಾಗಿ ಮತ್ತು ಮೀನು ಹಿಡಿಯುವುದಕ್ಕಾಗಿ ಇತರರಿಗೆ ಹೆಚ್ಚು ಶುಲ್ಕವನ್ನು ವಿಧಿಸುವುದು ರಾಜ್ಯಗಳಿಗೆ ವಿಧಿಬದ್ಧವಾಗಿದೆ. ಅಷ್ಟೇ ಅಲ್ಲ, ರಾಜ್ಯಗಳು ತನ್ನ ನಿವಾಸಿಗಳಲ್ಲದ ಇತರರಿಗೆ ರಾಜ್ಯದ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚು ಬೋಧನಾ ಶುಲ್ಕವನ್ನು ವಿಧಿಸುತ್ತವೆ ಮತ್ತು ತುರ್ತು ಪರಿಸ್ಥಿತಿಗಳನ್ನು ಹೊರತುಪಡಿಸಿ, ಉಳಿದ ಸಂದರ್ಭಗಳಲ್ಲಿ ರಾಜ್ಯದ ಆಸ್ಪತ್ರೆಗಳು ಮತ್ತು ಆಶ್ರಯಧಾಮಗಳಿಗೆ ಸೇರಲು ತನ್ನ ನಾಗರಿಕರಿಗೆ ಮಾತ್ರ ಹಕ್ಕು ಇರುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಜ್ಯವು ತನ್ನ ನಾಗರಿಕರಿಗೆ ಅಥವಾ ಆ ರಾಜ್ಯದ ನಿವಾಸಿಗಳಿಗೆ ನೀಡುವ ಎಷ್ಟೋ ಹಕ್ಕುಗಳನ್ನು ಆ ರಾಜ್ಯದ ನಿವಾಸಿಗಳಲ್ಲದವರ ಸಂದರ್ಭದಲ್ಲಿ ಕಾನೂನುಬದ್ಧವಾಗಿ ನಿರಾಕರಿಸಬಹುದಾಗಿದೆ ಮತ್ತು ಹಾಗೆಯೇ ನಿರಾಕರಿಸುತ್ತಿದೆ ಅಥವಾ ತನ್ನ ರಾಜ್ಯದ ನಿವಾಸಿಗಳಿಗೆ ವಿಧಿಸುವುದಕ್ಕಿಂತ ಹೆಚ್ಚು ನಿರ್ಬಂಧಗಳನ್ನು ವಿಧಿಸಿ, ಅಂತಹ ಹಕ್ಕುಗಳನ್ನು ರಾಜ್ಯದ ನಿವಾಸಿಗಳಲ್ಲದವರಿಗೆ ನೀಡಬಹುದಾಗಿದೆ. ರಾಜ್ಯ ನಾಗರೀಕರಿಗೆ ನೀಡಿರುವ ಈ ಅನುಕೂಲಗಳು, ರಾಜ್ಯ ಪೌರತ್ವದ ವಿಶೇಷ ಹಕ್ಕುಗಳಾಗುತ್ತವೆ. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿದಾಗ, ಒಂದು ರಾಜ್ಯದಲ್ಲಿ ಆ ರಾಜ್ಯದ ನಾಗರೀಕರು ಮತ್ತು ನಾಗರೀಕರಲ್ಲದವರ ಹಕ್ಕುಗಳ ನಡುವೆ ಗಮನಾರ್ಹ ವ್ಯತ್ಯಾಸಗಳಿವೆ. ವಿಶೇಷ ನಿರ್ಬಂಧಗಳಿಗೊಳಪಟ್ಟು ತಾತ್ಕಾಲಿಕವಾಗಿ ವಾಸಿಸುತ್ತಿರುವ ಜನರು ಎಲ್ಲೆಲ್ಲೂ ಕಂಡು ಬರುತ್ತಾರೆ.

ಉದ್ದೇಶಿತ ಭಾರತ ಸಂವಿಧಾನದಲ್ಲಿ ಕೇಂದ್ರ ಮತ್ತು ರಾಜ್ಯ ಆಡಳಿತ ವ್ಯವಸ್ಥೆಯಿದ್ದರೂ ಸಮಗ್ರ ಭಾರತಕ್ಕೆ ಒಂದೇ ಆದ ನಾಗರೀಕತ್ವ ಇದೆ. ಇದು ಭಾರತದ ನಾಗರಿಕತ್ವ. ಇಲ್ಲಿ ರಾಜ್ಯ ನಾಗರೀಕತ್ವ ಎಂಬ ಬೇರೆ ನಾಗರೀಕತ್ವ ಇಲ್ಲ. ದೇಶದ ಯಾವುದೇ ಭಾಗದಲ್ಲಿ ನೆಲೆಸಿದ್ದರೂ ದೇಶದ ನಾಗರೀಕರಿಗೆ ಸಮಾನ ಹಕ್ಕುಗಳು ಇಲ್ಲಿವೆ. ಉದ್ದೇಶಿತ ಭಾರತ ಸಂವಿಧಾನದಲ್ಲಿನ ದ್ವಿವ್ಯವಸ್ಥೆಯು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ದ್ವಿವ್ಯವಸ್ಥೆಗಿಂತ ಇನ್ನೊಂದು ಅಂಶದಲ್ಲಿ ಭಿನ್ನವಾಗಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಫೆಡರಲ್ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವಣ ಸಂಬಂಧಗಳನ್ನು ವಿವರಿಸುವಾಗ ಅವುಗಳನ್ನು ಸಡಿಲವಾಗಿ ಸಂಬಂಧ ಕಲ್ಪಿಸಿ ವಿವರಿಸಲಾಗಿದೆ. ಈ ಕುರಿತು ಬ್ರೈಸಿ ಹೀಗೆ ಹೇಳಿದ್ದಾರೆ. "ಕೇಂದ್ರ ಅಥವಾ ರಾಷ್ಟ್ರೀಯ ಸರ್ಕಾರ ಮತ್ತು ರಾಜ್ಯ ಸರ್ಕಾರಗಳನ್ನು ಒಂದು ದೊಡ್ಡ ಕಟ್ಟಡಕ್ಕೆ ಹೋಲಿಸಬಹುದು. ಈ ಪ್ರಾಂಗಣದಲ್ಲಿ ಹಲವು ಸಣ್ಣ ಕಟ್ಟಡಗಳು ನಿಂತಿದ್ದರೂ, ಪ್ರತಿಯೊಂದರ ನಡುವೆ ವ್ಯತ್ಯಾಸಗಳಿವೆ.

ಅಮೇರಿಕಾದಲ್ಲಿ ಫೆಡರಲ್ ಮತ್ತು ರಾಜ್ಯ ಸರ್ಕಾರಗಳ ನಡುವೆ ವ್ಯತ್ಯಾಸಗಳಿವೆ ಎಂದು ಹೇಳಿದ್ದಾಯಿತು. ಅವುಗಳ ನಡುವೆ ಇರುವ ವ್ಯತ್ಯಾಸವನ್ನು ಕೆಳಕಂಡ ಸಂಗತಿಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

(1) ರಿಪಬ್ಲಿಕ್‌ನ್ ಮಾದರಿಯ ಸರ್ಕಾರದ ನಿರ್ವಹಣೆಗೊಳಪಟ್ಟು, ಅಮೇರಿಕಾದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಂವಿಧಾನವನ್ನು ರಚಿಸಿಕೊಳ್ಳಬಹುದು.

(2) ಒಂದು ರಾಜ್ಯದ ಜನತೆಯು ರಾಷ್ಟ್ರೀಯ ಸರ್ಕಾರದಿಂದ ತಾವು ಪ್ರತ್ಯೇಕವಾಗಿರುವುದನ್ನು, ತಮ್ಮ ಸಂವಿಧಾನವನ್ನು ಬದಲಿಸಿಕೊಳ್ಳುವ ಅಧಿಕಾರವನ್ನು ತಮ್ಮ ಕೈಯಲ್ಲೇ ಉಳಿಸಿಕೊಂಡಿರುತ್ತಾರೆ.

ಮತ್ತೆ ಬ್ರೈಸಿ ಮಾತುಗಳಲ್ಲೇ ಹೇಳುವುದಾದರೆ,

"ಒಂದು ರಾಜ್ಯವು • (ಅಮೇರಿಕಾದಲ್ಲಿ) ತನ್ನ ಸ್ವಂತ ಸಂವಿಧಾನದ ಬಲದಿಂದಾಗಿ ಒಂದು ಕಾಮನ್‌ವೆಲ್ತ್ ಆಗಿರುತ್ತದೆ. ರಾಜ್ಯದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಎಲ್ಲ ಪ್ರಾಧಿಕಾರಗಳು ಸಂವಿಧಾನದಿಂದ ಸೃಷ್ಟಿಯಾಗಿದ್ದು ಅವು ಸಂವಿಧಾನಕ್ಕೆ ಒಳಪಟ್ಟಿದೆ.

ಉದ್ದೇಶಿತ ಭಾರತ ಸಂವಿಧಾನ ವಿಚಾರದಲ್ಲಿ ಮೇಲ್ಕಂಡ ಮಾತುಗಳು ಅನ್ವಯವಾಗುವುದಿಲ್ಲ. ಸಂವಿಧಾನದ ಒಂದನೆಯ ಭಾಗದಲ್ಲಿ ನಮೂದಿಸಲಾಗಿರುವ ಯಾವುದೇ ರಾಜ್ಯವು ಯಾವುದೇ ಕಾರಣಕ್ಕೂ, ತನ್ನದೇ ಆದ ಸಂವಿಧಾನವನ್ನು ರಚಿಸಿಕೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲ. ಒಕ್ಕೂಟ ಮತ್ತು ರಾಜ್ಯಗಳಿಗೆಲ್ಲಾ ಒಂದೇ ಸಂವಿಧಾನವಿದ್ದು, ಈ ಸಂವಿಧಾನದ ಚೌಕಟ್ಟಿನಲ್ಲಿ ಅವೆರಡೂ ಕೆಲಸ ಮಾಡಬೇಕಾಗುತ್ತದೆ.

ನಾನು ಈವರೆಗೆ ಅಮೇರಿಕ ಫೆಡರೇಷನ್ ಮತ್ತು ಉದ್ದೇಶಿತ ಭಾರತ ಫೆಡರೇಷನ್ ನಡುವಣ ವ್ಯತ್ಯಾಸಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅಮೇರಿಕಾ ಫೆಡರೇಷನ್ನಿಂದ ಮಾತ್ರವಲ್ಲ ಇತರ ಫೆಡರೇಷನ್‌ಗಳಿಗಿಂತ ಭಿನ್ನವಾದ ಕೆಲವೊಂದು ವಿಶೇಷ ರಕ್ಷಣೆಗಳನ್ನು ಭಾರತ ಸಂವಿಧಾನವು ಹೊಂದಿದೆ. ಅಮೇರಿಕವೂ ಸೇರಿ ಎಲ್ಲ ಫೆಡರಲ್ ಪದ್ಧತಿಗಳು ಫೆಡರಲಿಸಮ್‌ನ ಬಿಗಿಯಾದ ಚೌಕಟ್ಟಿನಲ್ಲಿ ರೂಪುಗೊಂಡಿವೆ. ಯಾವುದೇ ಸನ್ನಿವೇಶದಲ್ಲಿ ಅದು ತನ್ನ ಸ್ವರೂಪವನ್ನು ಬದಲಿಸಿಕೊಳ್ಳುವಂತಿಲ್ಲ. ಅದು ಎಂದೂ ಒಕ್ಕೂಟವಾಗಲು ಸಾಧ್ಯವಿಲ್ಲ. ಆದರೆ, ನಮ್ಮ ಕರಡು ಸಂವಿಧಾನವು ಕಾಲ ಮತ್ತು ಸನ್ನಿವೇಶಗಳ ಅಗತ್ಯತೆಗಳಿಗನುಸಾರವಾಗಿ ಒಕ್ಕೂಟ ಮತ್ತು ಫೆಡರಲ್ ಎರಡೂ ಆಗಿರುತ್ತವೆ. ಸಾಮಾನ್ಯ ಸಂದರ್ಭಗಳಲ್ಲಿ ಫೆಡರಲ್ ಪದ್ಧತಿಯಂತೆ ಕಾರ್ಯ ನಿರ್ವಹಿಸಲು ರೂಪಿತವಾಗಿದ್ದು, ಯುದ್ಧ ಸಂದರ್ಭಗಳಲ್ಲಿ ಒಕ್ಕೂಟ ಪದ್ಧತಿಯಂತೆ ಕಾರ್ಯನಿರ್ವಹಿಸಲು ಅದನ್ನು ರೂಪಿಸಲಾಗಿದೆ. 275ನೇ ಅನುಚ್ಛೇದದ ಉಪಬಂಧಗಳ ಮೇರೆಗೆ ಉದ್ಘೋಷಿಸಲು ಅಧಿಕೃತನಾದ ರಾಷ್ಟ್ರಪತಿಯು ಅಂಥ ಉದ್ಘೋಷಣೆಯನ್ನು ಹೊರಡಿಸಿದರೆ, ಇಡೀ ಪದ್ಧತಿಯು ಬದಲಾವಣೆಗೊಂಡು, ರಾಜ್ಯವು ಒಕ್ಕೂಟ ರಾಜ್ಯವಾಗಿ ಪರಿಣಮಿಸುತ್ತದೆ. ಈ ಉದ್ಘೋಷಣೆಯ ಆಧಾರದ ಮೇಲೆ ಒಕ್ಕೂಟವು ಅಪೇಕ್ಷೆ ಪಟ್ಟರೆ, ರಾಜ್ಯಪಟ್ಟಿಯಲ್ಲಿರುವ ವಿಷಯಗಳೂ ಸೇರಿದಂತೆ ಯಾವುದೇ ವಿಷಯದ ಬಗ್ಗೆ ಕಾನೂನು ರಚಿಸಬಹುದು. ರಾಜ್ಯ ಸರ್ಕಾರಗಳು ತಮ್ಮ ವ್ಯಾಪ್ತಿಯಲ್ಲಿರುವ ವಿಷಯಗಳ ಬಗ್ಗೆ ಅಧಿಕಾರವನ್ನು ಹೀಗೆ ಚಲಾಯಿಸಬೇಕು ಎಂಬ ನಿರ್ದೇಶನಗಳನ್ನು ಒಕ್ಕೂಟವು ರಾಜ್ಯಗಳಿಗೆ ನೀಡಬಹುದು. (3) ಒಕ್ಕೂಟವು ಯಾವುದೇ ಉದ್ದೇಶಕ್ಕಾಗಿ, ಯಾವುದೇ ಅಧಿಕಾರಿಯಲ್ಲಿ ತನ್ನ ಅಧಿಕಾರಗಳನ್ನು ನಿಹಿತಗೊಳಿಸಬಹುದು. (4) ಒಕ್ಕೂಟವು ಸಂವಿಧಾನದ ಹಣಕಾಸಿನ ಉಪಬಂಧಗಳನ್ನು ಅಮಾನತುಗೊಳಿಸುವ ಅಧಿಕಾರಗಳನ್ನು ಹೊಂದಿರಬಹುದು. ಹೀಗೆ ಇಡೀ ದೇಶವು ಒಂದು ಒಕ್ಕೂಟ ರಾಜ್ಯವಾಗಿ ಪರಿವರ್ತನೆಗೊಳ್ಳುವ ಅಧಿಕಾರವನ್ನು ಬೇರಾವುದೇ ಫೆಡರೇಷನ್ ಹೊಂದಿಲ್ಲ. ಉದ್ದೇಶಿತ ಕರಡು

ಸಂವಿಧಾನದಲ್ಲಿ ನಾವು ಉದ್ದೇಶಿಸಿರುವಂತಹ ಫೆಡರೇಷನ್ ಮತ್ತು ನಮಗೆ ಗೊತ್ತಿರುವಂತಹ ಇತರ ಫೆಡರೇಷನ್‌ಗಳ ನಡುವೆ ಇರುವ ಒಂದು ಮುಖ್ಯ ವ್ಯತ್ಯಾಸವನ್ನು ತಿಳಿದುಕೊಂಡಂತಾಯಿತು.

ಉದ್ದೇಶಿತ ಭಾರತದ ಫೆಡರೇಷನ್ ಮತ್ತು ಇತರ ಫೆಡರೇಷನ್‌ಗಳ ನಡುವೆ ಇರುವ ವ್ಯತ್ಯಾಸ ಇದು ಒಂದೇ ಅಲ್ಲ. ಫೆಡರಲಿಸಮ್ ಅನ್ನು "ಬಲಹೀನ ಸರ್ಕಾರವಲ್ಲದಿದ್ದರೂ, ಅದೊಂದು ದುರ್ಬಲ ಸರ್ಕಾರ" ಎಂದು ವರ್ಣಿಸಲಾಗಿದೆ. ಫೆಡರಲಿಸಂನಲ್ಲಿ ಎರಡು ದೌರ್ಬಲ್ಯಗಳಿವೆಯೆಂದು ಹೇಳಲಾಗುತ್ತದೆ. ಒಂದನೆಯದು - ಕಾಠಿಣ್ಯತೆ, ಎರಡನೆಯದು - ಅತಿಯಾದ ಕಟ್ಟಳೆ. ಇವೆರಡೂ ಅಂಶಗಳು ಫೆಡರಲಿಸಂನಲ್ಲಿ ಒಳಗೊಂಡಿವೆ ಎಂಬುದರಲ್ಲಿ ಯಾವುದೇ ವಿವಾದವೂ ಇಲ್ಲ. ಫೆಡರಲ್ ಸಂವಿಧಾನವು ಲಿಖಿತ ರೂಪದಲ್ಲಿರುವ ಸಂವಿಧಾನವಾಗಿರುತ್ತದೆ. ಲಿಖಿತ ಸಂವಿಧಾನವು ಸಹಜವಾಗಿಯೇ ಕಠಿಣತೆಗೊಳಪಟ್ಟಿರುತ್ತದೆ.

ಫೆಡರಲ್ ಸಂವಿಧಾನ ಎಂದರೆ, ಸಾರ್ವಭೌಮತ್ವ ಅಧಿಕಾರಗಳ ವಿಭಜನೆ. ಫೆಡರಲ್ ಸರ್ಕಾರ ಮತ್ತು ರಾಜ್ಯಗಳ ನಡುವೆ ಸಾರ್ವಭೌಮತ್ವ ಅಧಿಕಾರಗಳ ಹಂಚಿಕೆಯನ್ನು ಸಂವಿಧಾನದ ಕಾನೂನಿನ ಮೂಲಕ ಮಾಡಲಾಗಿದೆ. ಇಲ್ಲಿ ಮುಖ್ಯವಾಗಿ ಎರಡು ಲಕ್ಷಣಗಳಿವೆ. ಎಂದರೆ :-

(1) ರಾಜ್ಯಗಳಿಗೆ ವಹಿಸಿರುವ ಕ್ಷೇತ್ರಗಳಲ್ಲಿ ಫೆಡರಲ್ ಸರ್ಕಾರ ಕೈ ಹಾಕಬಾರದು. ಹೀಗೆ ಮಾಡುವುದು ಸಂವಿಧಾನದ ಉಲ್ಲಂಘನೆಯಾಗುತ್ತದೆ.

(2) ಉಲ್ಲಂಘನೆಯು ಸಮರ್ಥನೀಯವೇ ಹೇಗೆಂಬುದು ನ್ಯಾಯಾಂಗದ ಮೂಲಕ ನಿರ್ಧರಿಸಲ್ಪಡಬೇಕಾಗುತ್ತದೆ.

ಇವೆರಡೂ ಫೆಡರಲಿಸಂನ ಲಕ್ಷಣವಾಗಿರುವುದರಿಂದ, ಫೆಡರಲ್ ಸಂವಿಧಾನದ ಕಾನೂನು ಕಟ್ಟಳೆಗಳಿಂದ ತಪ್ಪಿಸಿಕೊಳ್ಳಲಾಗದು. ಫೆಡರಲ್ ಸಂವಿಧಾನದ ಈ ದೋಷಗಳು ಉದ್ಘೋಷಣಾ ರೂಪದಲ್ಲಿರುವುದು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನದಲ್ಲಿ ಕಂಡುಬರುತ್ತದೆ.

ಫೆಡರಲಿಸಂ ಅನ್ನು ನಂತರ ಅಂಗೀಕರಿಸಿದ ದೇಶಗಳು, ಫೆಡರಲಿಸಂನಲ್ಲಿ ಅಂತರ್ಗತವಾಗಿರುವ ಕಾಠಿಣ್ಯ ಮತ್ತು ಕಾನೂನು ಕಟ್ಟಳೆಗಳಿಂದ ಸಂಭವಿಸುವ

ಅನಾನುಕೂಲತೆಗಳನ್ನು ತಗ್ಗಿಸಲು ಪ್ರಯತ್ನ ಮಾಡಿವೆ. ಹೀಗೆ ಪ್ರಯತ್ನ ಮಾಡಿದ ದೇಶಗಳಲ್ಲಿ ಆಸ್ಟ್ರೇಲಿಯಾವನ್ನು ಹೆಸರಿಸಬಹುದು. ಆಸ್ಟ್ರೇಲಿಯಾ ಸಂವಿಧಾನವು ಅತಿಯಾದ ಕಾನೂನು ಕಟ್ಟಳೆಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಎರಡು ಮಾರ್ಗಗಳನ್ನು ಅಂಗೀಕರಿಸಿದೆ. ಅವುಗಳೆಂದರೆ,

(1) ಸಮವರ್ತಿ ಶಾಸನಗಳನ್ನು ರಚಿಸುವ ಹೆಚ್ಚು ಅಧಿಕಾರಗಳನ್ನು ಹಾಗೂ ಸಮಗ್ರ ಶಾಸನ ರಚನೆಯ ಕಡಿಮೆ ಅಧಿಕಾರಗಳನ್ನು ಕಾಮನ್‌ವೆಲ್ತ್ ಸಂಸತ್ತಿಗೆ ಪ್ರದಾನ ಮಾಡುವುದು.

(2) "ಸಂಸತ್ತು ಅನ್ಯಥಾ ಉಪಬಂಧಿಸುವವರೆಗೆ ಮಾತ್ರ ಜಾರಿಯಲ್ಲಿರಲು ತಾತ್ಕಾಲಿಕ ಅವಧಿಯ ಸಂವಿಧಾನದ ಅನುಚ್ಛೇದಗಳನ್ನು ರಚಿಸುವುದು."

ಯಾವುದನ್ನು ಮಾಡಲು ಅಮೇರಿಕಾ ಕಾಂಗ್ರೆಸ್ಸಿಗೆ ಅಧಿಕಾರವಿಲ್ಲವೋ ಮತ್ತು ಯಾವುದನ್ನು ಮಾಡಲು ಅದು ಸರ್ವೋನ್ನತ ನ್ಯಾಯಾಲಯದ ಮೊರೆ ಹೋಗಬೇಕೋ, ತಾನು ಮಾಡಿದ್ದನ್ನು ಪ್ರಾಧಿಕಾರದ ಚಲಾವಣೆಯೆಂದು ಸಮರ್ಥಿಸಲು ಒಂದು ಸಿದ್ಧಾಂತವನ್ನು ಕಂಡುಕೊಳ್ಳುವುದು ಅದರ ಸಾಮರ್ಥ್ಯ, ಕೌಶಲ್ಯ ಹಾಗೂ ಒಪ್ಪಿಗೆಯನ್ನು ಅವಲಂಬಿಸಿದೆಯೋ, ಅಂಥ ಎಷ್ಟೋ ವಿಚಾರಗಳ ಬಗ್ಗೆ ಆಸ್ಟ್ರೇಲಿಯಾ ಸಂಸತ್ತು ಕಾನೂನುಗಳನ್ನು ಮಾಡಬಹುದೆಂದು ಇದರಿಂದ ಸ್ಪಷ್ಟವಾಗುತ್ತದೆ.

ಅತಿಯಾದ ಕಾಠಿಣ್ಯ ಮತ್ತು ಕಾನೂನು ಕಟ್ಟಳೆಯನ್ನು ನಿವಾರಿಸಿಕೊಳ್ಳಲು ಕರಡು ಸಂವಿಧಾನವು ಆಸ್ಟ್ರೇಲಿಯಾದ ಮಾದರಿಯನ್ನು ಅನುಸರಿಸಿದೆ. ಅಷ್ಟೇ ಅಲ್ಲ, ಈ ವಿಚಾರದಲ್ಲಿ ಆಸ್ಟ್ರೇಲಿಯಾದ ಮಾದರಿಗಿಂತ ಹೆಚ್ಚು ಮುಂದೆ ಹೋಗಿದ್ದೇವೆ. ಆಸ್ಟ್ರೇಲಿಯಾ ಸಂವಿಧಾನದಲ್ಲಿರುವಂತೆ, ಶಾಸನ ರಚನೆ ಮಾಡುವ ಸಮವರ್ತಿಪಟ್ಟಿ ನಮ್ಮ ಸಂವಿಧಾನದಲ್ಲಿ ದೊಡ್ಡದೇ ಇದೆ.

ಆಸ್ಟ್ರೇಲಿಯಾ ಸಂವಿಧಾನದಲ್ಲಿ ಸಮವರ್ತಿ ಪಟ್ಟಿಯಲ್ಲಿ 39 ವಿಷಯಗಳಿದ್ದರೆ, ನಮ್ಮ ಕರಡು ಸಂವಿಧಾನದಲ್ಲಿ 37 ವಿಷಯಗಳಿವೆ. ಆಸ್ಟ್ರೇಲಿಯಾ ಸಂವಿಧಾನದಲ್ಲಿ ಉಪಬಂಧಿಸಿರುವಂತೆ ತಾತ್ಕಾಲಿಕ ಅವಧಿಯವರೆಗೆ ಉಪಬಂಧಗಳಂತೆ, ನಮ್ಮ ಕರಡು ಸಂವಿಧಾನದಲ್ಲಿ ಅಂಥ ಆರು ಅನುಚ್ಛೇದಗಳಿವೆ. ಇವು ತಾತ್ಕಾಲಿಕ ಅವಧಿಯವುಗಳಾಗಿದ್ದು, ಸಂಸತ್ತು ಯಾವುದೇ ಸಮಯದಲ್ಲಿ ಸಂದರ್ಭಕ್ಕೆ ಸೂಕ್ತವಾದ ಉಪಬಂಧಗಳ ಮೂಲಕ ಇವನ್ನು ಬದಲಿಸಬಹುದು. ಆಸ್ಟ್ರೇಲಿಯಾ ಸಂವಿಧಾನಕ್ಕಿಂತ ಕರಡು ಸಂವಿಧಾನವು ಹೆಚ್ಚು ಮುಂದಿರುವ ಅಂಶವೆಂದರೆ - ಸಮಗ್ರ ಶಾಸನ ರಚನಾಧಿಕಾರವನ್ನು ಸಂಸತ್ತಿನಲ್ಲಿ ನಿಹಿತಗೊಳಿಸಿರುವುದು.

ಆಸ್ಟ್ರೇಲಿಯಾ ಸಂವಿಧಾನದ ಪ್ರಕಾರ ಅಲ್ಲಿನ ಸಂಸತ್ತು ಮೂರು ವಿಷಯಗಳ ಬಗ್ಗೆ ಶಾಸನ ರಚನೆ ಮಾಡುವ ಸಮಗ್ರ ಅಧಿಕಾರವನ್ನು ಹೊಂದಿದ್ದರೆ, ನಮ್ಮ ಕರಡು ಸಂವಿಧಾನದಲ್ಲಿ ನಮ್ಮ ಸಂಸತ್ತು 91 ವಿಷಯಗಳ ಬಗ್ಗೆ ಶಾಸನ ರಚನೆಯ ಸಂಪೂರ್ಣ ಅಧಿಕಾರವನ್ನು ಪಡೆದಿವೆ. ಹೀಗಾಗಿ ಫೆಡರಲಿಸಂನ ಕಾಠಿಣ್ಯವನ್ನು ಸಡಿಲಿಸಿಕೊಳ್ಳುವ ಬಹುದೊಡ್ಡ ಪ್ರಯತ್ನವನ್ನು ನಮ್ಮ ಕರಡು ಸಂವಿಧಾನವು ಮಾಡಿದೆ.

ಕರಡು ಸಂವಿಧಾನವು ಆಸ್ಟ್ರೇಲಿಯಾ ಸಂವಿಧಾನವನ್ನು ಅನುಸರಿಸಿದೆಯೆಂದು ಅಥವಾ ಹೆಚ್ಚು ವ್ಯಾಪಕ ಪ್ರಮಾಣದಲ್ಲಿ ಅನುಸರಿಸಿದೆಯೆಂದು ಹೇಳಿದರೆ ಸಾಲದು. ಫೆಡರಲಿಸಂನ ಮುಖ್ಯ ಹಾಗೂ ವಿಶೇಷ ಲಕ್ಷಣಗಳಾಗಿ ಅದರಲ್ಲಿ ಅಂತರ್ಗತವಾಗಿರುವ ಅತಿಯಾದ ಕಟ್ಟಳೆಗಳಿಂದ ಹೊರ ಬರಲು ನಮ್ಮ ಕರಡು ಸಂವಿಧಾನವು ಪ್ರಯತ್ನಿಸಿದೆ ಎಂಬ ಅಂಶವನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಇಂಥ ಪ್ರಯತ್ನ ಇನ್ನೆಲ್ಲೂ ಕಾಣಲಾಗದು.

ಮೊದಲನೆಯದು - ಸಂಪೂರ್ಣವಾಗಿ ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಸಾಮಾನ್ಯ ಸಮಯದಲ್ಲಿ ಶಾಸನ ರಚಿಸುವ ಅಧಿಕಾರವನ್ನು ಸಂಸತ್ತಿಗೆ ಕೊಡಲಾಗಿದೆ. ಈ ಸಂದರ್ಭದಲ್ಲಿ ನಾನು 226, 227 ಮತ್ತು 229ನೇ ಅನುಚ್ಛೇದಗಳನ್ನು ಉಲ್ಲೇಖಿಸಬಯಸುತ್ತೇನೆ. 226ನೇ ಅನುಚ್ಛೇದದ ಮೇರೆಗೆ ಸಂಸತ್ತು ರಾಷ್ಟ್ರೀಯ ಹಿತಾಸಕ್ತಿಯ ಆದರೆ ಪೂರ್ಣವಾಗಿ ಪ್ರಾಂತೀಯ ಹಿತಾಸಕ್ತಿಗಿಂತ ಬೇರೆಯಾದ ಯಾವುದೇ ವಿಷಯದ ಬಗ್ಗೆ, ಅಂಥ ವಿಷಯವು ರಾಜ್ಯ ಪಟ್ಟಿಯಲ್ಲಿದ್ದಾಗ್ಯೂ, ಕಾನೂನು ಮಾಡಬಹುದು. ಆದರೆ, ಕೇಂದ್ರವು ಹೀಗೆ ಅಧಿಕಾರ ಚಲಾಯಿಸಬೇಕಾದರೆ, ಸಂಸತ್ತಿನ ಮೇಲ್ಮನೆಯ ಮೂರನೇ ಎರಡರಷ್ಟು ಸದಸ್ಯರು ಹೀಗೆ ಮಾಡುವ ನಿರ್ಣಯವನ್ನು ಬೆಂಬಲಿಸಬೇಕು. ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಂದರ್ಭದಲ್ಲೂ ಹೀಗೆ ಶಾಸನ ರಚಿಸುವ ಅಧಿಕಾರವನ್ನು 227ನೇ ಅನುಚ್ಛೇದವು ಸಂಸತ್ತಿಗೆ ನೀಡುತ್ತದೆ. 229ನೇ ಅನುಚ್ಛೇದದ ಪ್ರಕಾರ, ಕೇಂದ್ರವು ಶಾಸನ ರಚನಾ ಅಧಿಕಾರವನ್ನು ಚಲಾಯಿಸಲು ಪ್ರಾಂತ್ಯಗಳು ಸಮ್ಮತಿಸಿದರೆ, ಸಂಸತ್ತು ಹಾಗೆ ಮಾಡಬಹುದು. ಈ ಕೊನೆಯ ಉಪಬಂಧವು ಆಸ್ಟ್ರೇಲಿಯಾ ಸಂವಿಧಾನದಲ್ಲಿದೆಯಾದರೂ, ಮೊದಲಿನ ಎರಡು ಉಪಬಂಧಗಳು ಕರಡು ಸಂವಿಧಾನದ ವಿಶೇಷ ಲಕ್ಷಣಗಳಾಗಿವೆ.

ಎರಡನೆಯದು - ಅತಿಯಾದ ಕಾನೂನು ಕಟ್ಟಳೆಗಳನ್ನು ನಿವಾರಿಸಲು ಸಂವಿಧಾನವನ್ನು ತಿದ್ದುಪಡಿ ಮಾಡುವ ಸೌಲಭ್ಯದ ಉಪಬಂಧವನ್ನು ಕರಡು ಸಂವಿಧಾನದಲ್ಲಿ ಕಲ್ಪಿಸಲಾಗಿದೆ. ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೆ ಸಂಬಂಧಪಟ್ಟ ಸಂವಿಧಾನದ ಉಪಬಂಧಗಳು, ಸಂವಿಧಾನದ ಅನುಚ್ಛೇದಗಳನ್ನು

ಎರಡು ಗುಂಪುಗಳಾಗಿ ವಿಭಜಿಸುತ್ತವೆ. ಮೊದಲನೆಯ ಗುಂಪಿನಲ್ಲಿ (ಎ) ಕೇಂದ್ರ ಮತ್ತು ರಾಜ್ಯಗಳ ನಡುವೆ ಕಾನೂನುಗಳ ರಚನಾಧಿಕಾರಿಗಳ ಹಂಚಿಕೆ (2) ಸಂಸತ್ತಿನಲ್ಲಿ ರಾಜ್ಯಗಳ ಪ್ರಾತಿನಿಧ್ಯ; ಮತ್ತು (3) ನ್ಯಾಯಾಲಯಗಳ ಅಧಿಕಾರಗಳು - ಇವುಗಳಿಗೆ ಸಂಬಂಧಿಸಿದ ಅನುಚ್ಛೇದಗಳಿದ್ದರೆ, ಎರಡನೆಯ ಗುಂಪಿನಲ್ಲಿ ಉಳಿದೆಲ್ಲ ಅನುಚ್ಛೇದಗಳಿವೆ. ಎರಡನೆಯ ಗುಂಪಿನಲ್ಲಿನ ಅನುಚ್ಛೇದಗಳು ಸಂವಿಧಾನದ ಬಹುಭಾಗವನ್ನು ಒಳಗೊಂಡಿದ್ದು, ಸಂಸತ್ತಿನ ಉಭಯ ಸದನಗಳಲ್ಲಿ ಹಾಜರಿದ್ದು, ಮತ ನೀಡುವ ಮೂರನೇ ಎರಡರಷ್ಟು ಸದಸ್ಯರ ಬಹುಮತದ ಮೂಲಕ ಈ ಅನುಚ್ಛೇದಗಳನ್ನು ತಿದ್ದುಪಡಿ ಮಾಡಬಹುದು. ಈ ಅನುಚ್ಛೇದಗಳ ತಿದ್ದುಪಡಿಗಳಿಗೆ ರಾಜ್ಯದ ಅನುಮೋದನೆಯ ಅಗತ್ಯವಿಲ್ಲ. ಆದರೆ, ಹೆಚ್ಚುವರಿ ರಕ್ಷಣೆಯ ದೃಷ್ಟಿಯಿಂದ, ಮೊದಲನೆಯ ಗುಂಪಿನಲ್ಲಿನ ಅನುಚ್ಛೇದಗಳ ತಿದ್ದುಪಡಿಗೆ, ರಾಜ್ಯಗಳ ಅನುಮೋದನೆಯಿರಬೇಕೆಂದು ಸೂಚಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದರೆ, ಭಾರತದ ಫೆಡರೇಷನ್ ಅತಿಯಾದ ಕಾನೂನು ಕಟ್ಟಳೆಗಳಿಗೆ ಗುರಿಯಾಗುವುದಿಲ್ಲ ಎಂದು ಯಾರಾದರೂ ಹೇಳಬಹುದಾಗಿದೆ.

ಇತರ ಫೆಡರೇಷನ್‌ಗಳಿಗಿಂತ ಭಾರತದ ಫೆಡರೇಷನನ್ನು ಭಿನ್ನವಾಗಿಸುವ ಇನ್ನೊಂದು ವಿಶೇಷ ಲಕ್ಷಣ ಹೀಗಿದೆ - ಫೆಡರೇಷನ್ ಪ್ರತ್ಯೇಕ ಪ್ರಾಧಿಕಾರವನ್ನು ಆಧರಿಸಿದ ದ್ವಿ-ರಾಜ್ಯ ವ್ಯವಸ್ಥೆಯನ್ನು ಹೊಂದಿ ಪ್ರತಿ ವ್ಯವಸ್ಥೆಯೂ ಪ್ರತ್ಯೇಕ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಅಧಿಕಾರಗಳನ್ನು ಹೊಂದಿರುವುದರಿಂದ, ಅದು ಆಡಳಿತ ಹಾಗೂ ನ್ಯಾಯಿಕ ರಕ್ಷಣೆಯಲ್ಲಿ ವಿಭಿನ್ನ ಕಾನೂನುಗಳನ್ನು ರಚಿಸಬೇಕಾಗುತ್ತದೆ. ಕೆಲಮಟ್ಟಿಗೆ ಈ ವಿಭಿನ್ನತೆಯು ಅಷ್ಟೊಂದು ಮುಖ್ಯ ವಿಷಯವಲ್ಲ. ಸ್ಥಳೀಯ ಅಗತ್ಯಗಳು ಮತ್ತು ಸ್ಥಳೀಯ ಸನ್ನಿವೇಶಗಳಿಗೆ ಅನುಗುಣವಾಗಿ ಸರ್ಕಾರದ ಅಧಿಕಾರಗಳನ್ನು ಒದಗಿಸುವ ದೃಷ್ಟಿಯಿಂದ ಇದು ಸ್ವಾಗತಾರ್ಹ. ಈ ವಿಭಿನ್ನತೆಯು ಒಂದು ಹಂತ ಮೀರಿ ಮುಂದೆ ಹೋದಾಗ ಅವ್ಯವಸ್ಥೆ ಗೊಂದಲಗಳುಂಟಾಗುತ್ತದೆ. ಕೆಲವು ಫೆಡರಲ್ ರಾಷ್ಟ್ರಗಳಲ್ಲಿ ಹೀಗೆ ಆಗಿಯೂ ಇದೆ. ಒಕ್ಕೂಟದಲ್ಲಿ ಇಪ್ಪತ್ತು ರಾಜ್ಯಗಳಿದ್ದು ಆ ಒಂದೊಂದು ರಾಜ್ಯವೂ, ವಿವಾಹ ವಿಚ್ಛೇದನ, ಸ್ವತ್ತಿನ ವಾರಸು, ಕುಟುಂಬ ಸಂಬಂಧಗಳು, ಕರಾರುಗಳು, ಅಪಕೃತ್ಯಗಳು, ಅಪರಾಧಗಳು, ತೂಕ-ಅಳತೆ, ಬಿಲ್ಲು-ಚೆಕ್ಕುಗಳು, ಬ್ಯಾಂಕಿಂಗ್ ಮತ್ತು ವಾಣಿಜ್ಯ, ನ್ಯಾಯ ಪಡೆಯುವ ಕಾರ್ಯವಿಧಾನ, ಆಡಳಿತದ ಮಟ್ಟ ಮತ್ತು ರೀತಿ - ಈ ವಿಷಯಗಳನ್ನು ಕುರಿತು ತಮ್ಮವೇ ಆದ ಕಾನೂನುಗಳನ್ನು ರಚಿಸಿಕೊಳ್ಳುತ್ತಾ ಹೋದರೆ ರಾಜ್ಯವನ್ನು

ದುರ್ಬಲಗೊಳಿಸುತ್ತದೆಯಷ್ಟೇ ಅಲ್ಲ, ನಾಗರಿಕರು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗಿ ಬರಲು ಕಷ್ಟವಾಗುತ್ತದೆ. ಯಾಕೆಂದರೆ, ಒಂದು ರಾಜ್ಯದಲ್ಲಿ ಕಾನೂನುಬದ್ಧವಾಗಿರುವುದು ಇನ್ನೊಂದು ರಾಜ್ಯದಲ್ಲಿ ಹಾಗಿರದೆ ಹೋಗಬಹುದು. ಕರಡು ಸಂವಿಧಾನವು, ಭಾರತವನ್ನು ಒಂದು ಫೆಡರೇಷನ್ನಾಗಿಸಲು ಮತ್ತು ದೇಶದ ಐಕ್ಯತೆಯನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ಎಲ್ಲ ಮೂಲಭೂತ ವಿಚಾರಗಳಲ್ಲಿ ಏಕರೂಪತೆಯನ್ನು ಉಳಿಸಿಕೊಂಡು ಹೋಗಲು ಬಯಸಿದೆ. ಕರಡು ಸಂವಿಧಾನವು ಅಂಗೀಕರಿಸಿರುವ ಮೂರು ಮುಖ್ಯ ಸಂಗತಿಗಳೆಂದರೆ:-

1. ಏಕ ನ್ಯಾಯಾಂಗ

2. ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳಂಥ ಮೂಲಭೂತ ಕಾನೂನುಗಳಲ್ಲಿ ಏಕರೂಪತೆ;

3. ಆಯಕಟ್ಟಿನ ಹುದ್ದೆಗಳನ್ನು ನಿರ್ವಹಿಸಲು ಒಂದು ಸಮಾನ ಅಖಿಲ ಭಾರತ ಸಿವಿಲ್ ಸೇವೆ;

ನ್ಯಾಯಾಂಗದ ದ್ವಿ-ವ್ಯವಸ್ಥೆ, ಎರಡು ರೀತಿಯ ಕಾನೂನು ಸಂಹಿತೆ, ಸಿವಿಲ್ ಸೇವೆಗಳಲ್ಲಿ ದ್ವಿಮುಖತೆ - ಇವೆಲ್ಲ ನಾನು ಈಗಾಗಲೇ ಹೇಳಿರುವಂತೆ ಫೆಡರೇಷನ್ನಿನಲ್ಲಿ ಅಂತರ್ಗತವಾಗಿರುವ ದ್ವಿ-ರಾಜ್ಯ ವ್ಯವಸ್ಥೆಯ ಪರಿಣಾಮವಾಗಿರುತ್ತವೆ. ಅಮೇರಿಕಾದಲ್ಲಿ ಫೆಡರಲ್ ನ್ಯಾಯಾಂಗ ಮತ್ತು ರಾಜ್ಯ ನ್ಯಾಯಾಂಗಗಳು ಪ್ರತ್ಯೇಕವೂ ಹಾಗೂ ಸ್ವತಂತ್ರವೂ ಆಗಿವೆ. ಭಾರತ ಫೆಡರೇಷನ್ನಲ್ಲಿ ದ್ವಿ-ರಾಜ್ಯ ವ್ಯವಸ್ಥೆಯಿದ್ದು ನ್ಯಾಯಾಂಗದಲ್ಲಿ ದ್ವಿವ್ಯವಸ್ಥೆಯಿಲ್ಲ. ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳು ಒಂದು ಸಮಗ್ರ ನ್ಯಾಯಾಂಗ ವ್ಯವಸ್ಥೆಯಾಗಿದ್ದು ತಮ್ಮ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಸಂವಿಧಾನ ಕಾನೂನಿನಿಂದ, ಸಿವಿಲ್ ಮತ್ತು ಕ್ರಿಮಿನಲ್ ಕಾನೂನಿನಿಂದ ಉದ್ಭವಿಸುವ ಎಲ್ಲ ಪ್ರಕರಣಗಳನ್ನು ಪರಿಶೀಲಿಸಿ ಪರಿಹಾರವನ್ನು ಒದಗಿಸುತ್ತವೆ. ಪರಿಹಾರ ಪ್ರಕ್ರಿಯೆಗಳಲ್ಲಿನ ಎಲ್ಲ ತೊಂದರೆಗಳನ್ನು ಕಿತ್ತು ಹಾಕಲು ಹೀಗೆ ಮಾಡಲಾಗಿದೆ. ಈ ವ್ಯವಸ್ಥೆಯನ್ನು ಬಹಳವಾಗಿ ಹೋಲುವ ದೇಶ ಕೆನಡಾ ಒಂದೇ. ಆದರೆ, ಆಸ್ಟ್ರೇಲಿಯಾದ ವ್ಯವಸ್ಥೆ ನಮ್ಮ ವ್ಯವಸ್ಥೆಗೆ ಸರಿಸುಮಾರು ಹತ್ತಿರವಾಗಿದೆ.

ನಾಗರಿಕ ಮತ್ತು ಕಾರ್ಪೋರೇಟ್ ಜೀವನಕ್ಕೆ ಸಂಬಂಧಪಡುವ ಕಾನೂನುಗಳಲ್ಲಿರುವ ಎಲ್ಲ ತೊಂದರೆಗಳನ್ನು ನಿವಾರಿಸುತ್ತ ಗಮನಹರಿಸಲಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, ಸಾಕ್ಷ್ಯ ಅಧಿನಿಯಮ,

ಸ್ವತ್ತು ವರ್ಗಾವಣೆ ಅಧಿನಿಯಮ, ವಿವಾಹ ವಿಚ್ಛೇದನ ಮತ್ತು ವಾರಸುದಾರಿಕೆಯ ಕಾನೂನುಗಳಂಥ ಮಹತ್ವದ ಮೂಲಭೂತ ಕಾನೂನುಗಳನ್ನು ಸಮವರ್ತಿ ಪಟ್ಟಿಯಲ್ಲೂ ಸೂಚಿಸಲಾಗಿದೆ. ಫೆಡರಲ್ ಪದ್ಧತಿಗೆ ಹಾನಿ ಮಾಡದ ಹಾಗೆ ಆವಶ್ಯಕ ಏಕರೂಪತೆಯನ್ನು ರಕ್ಷಿಸಿಕೊಂಡು ಬರುವುದೇ ಇದರ ಉದ್ದೇಶ.

ನಾನು ಈಗಾಗಲೇ ಹೇಳಿರುವ ಹಾಗೆ ಫೆಡರಲ್ ಪದ್ಧತಿಯಲ್ಲಿ ಅಂತರ್ಗತವಾಗಿರುವ ದ್ವಿ-ರಾಜ್ಯ ವ್ಯವಸ್ಥೆಗೆ ತಕ್ಕಂತೆ ಎಲ್ಲ ಫೆಡರೇಷನ್‌ಗಳಲ್ಲಿ ದ್ವಿ-ಸಿವಿಲ್ ಸೇವಾ ವ್ಯವಸ್ಥೆ ಉಂಟು. ಅವೇಂದರೆ:- (1) ಫೆಡರಲ್ ಸಿವಿಲ್ ಸೇವೆ; (2) ರಾಜ್ಯ ಸಿವಿಲ್ ಸೇವೆ : ದ್ವಿರಾಜ್ಯ ವ್ಯವಸ್ಥೆಯ ಭಾರತ ಫೆಡರೇಷನ್ ಎರಡು ರೀತಿಯ ಸಿವಿಲ್ ಸೇವೆಗಳನ್ನು ಹೊಂದಿರುತ್ತಾದರೂ,ಅದಕ್ಕೆ ಒಂದು ವಿನಾಯಿತಿಯೂ ಇದೆ. ಪ್ರತಿಯೊಂದು ದೇಶವೂ ತನ್ನ ಆಡಳಿತದ ಗುಣಮಟ್ಟವನ್ನು ಪಾಲಿಸಿಕೊಂಡು ಬರುವ ದೃಷ್ಟಿಯಿಂದ ತನ್ನ ಆಡಳಿತದಲ್ಲಿ ಕೆಲವೊಂದು ಹುದ್ದೆಗಳನ್ನು, ಆಯಕಟ್ಟಿನ ಹುದ್ದೆಗಳನ್ನು ಗುರ್ತಿಸಿದೆ. ಬಹುದೊಡ್ಡ ಹಾಗೂ ಸರಳವಲ್ಲದ ಆಡಳಿತ ಯಂತ್ರಗಳಲ್ಲಿ ಅಂಥ ಹುದ್ದೆಗಳನ್ನು ನಿರ್ದಿಷ್ಟವಾಗಿ ಗುರ್ತಿಸುವುದು ಸುಲಭವವೇನೂ ಅಲ್ಲ. ಆಡಳಿತದ ಗುಣಮಟ್ಟವು, ಮುಖ್ಯವಾದ ಸಿವಿಲ್ ಹುದ್ದೆಗಳಿಗೆ ನೇಮಕಗೊಳ್ಳುವ ಸಿವಿಲ್ ನೌಕರರ ಪ್ರತಿಭೆ ಮತ್ತು ಯೋಗ್ಯತೆಗಳನ್ನು ಆಧರಿಸಿದೆ. ಅದೃಷ್ಟವಶಾತ್ ನಮ್ಮ ದೇಶದಲ್ಲಿ ನಾವು ಹಿಂದಿನಿಂದಲೂ ನಮ್ಮ ಇದೀ ದೇಶಕ್ಕೆ ಒಂದೇ ಆದ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡು ಬಂದಿದ್ದೇವೆ. ಹೀಗಾಗಿ, ಆಡಳಿತದಲ್ಲಿ ಇಂಥ ಆಯಕಟ್ಟಿನ ಹುದ್ದೆಗಳ್ಯಾವುವು ಎಂಬುದು ನಮಗೆ ಗೊತ್ತಿದೆ. ರಾಜ್ಯಗಳು ತನ್ನದೇ ಆದ ಸಿವಿಲ್ ಸೇವೆಯನ್ನು ರೂಪಿಸಿಕೊಳ್ಳುವ, ಅವುಗಳ ಹಕ್ಕನ್ನು ಕಸಿದುಕೊಳ್ಳದೆ ಅಖಿಲ ಭಾರತ ಸಿವಿಲ್ ಸೇವೆಯ ಬಗ್ಗೆ ಸಂವಿಧಾನವು ಅವಕಾಶ ಕಲ್ಪಿಸಿಕೊಟ್ಟಿದೆ. ಇದರ ಪ್ರಕಾರ, ಈ ಸೇವೆಗಳಿಗೆ ಅಖಿಲ ಭಾರತ ಆಧಾರದ ಮೇಲೆ ನೇಮಕಾತಿ ನಡೆಯುವುದು. ಸಮಾನ ಅರ್ಹತೆ ಹಾಗೂ ಸಮಾನ ವೇತನ ಶ್ರೇಣಿಗಳನ್ನು ಹೊಂದಿರುವ ಈ ಆಯಕಟ್ಟಿನ ಹುದ್ದೆಗಳಿಗೆ ನೌಕರರನ್ನು ಒಕ್ಕೂಟದಾದ್ಯಂತ ನೇಮಕ ಮಾಡಿಕೊಳ್ಳಲಾಗುವುದು.

ಇದು ಉದ್ದೇಶಿತ ಫೆಡರೇಷನ್ನಿನ ವಿಶೇಷ ಲಕ್ಷಣವಾಗಿದೆ. ಈ ಕುರಿತು ಟೀಕಾಕಾರರು ಏನು ಹೇಳಿದ್ದಾರೆಂಬುದರತ್ತ ಗಮನಹರಿಸುತ್ತೇನೆ.

ಅಖಿಲ ಭಾರತ ಸೇವಾ ವ್ಯವಸ್ಥೆಯ ಬಗ್ಗೆ ಕರಡು ಸಂವಿಧಾನದಲ್ಲಿ ಹೊಸದಾಗಿ ಏನೂ ಹೇಳಿಲ್ಲವೆಂದೂ, ಈ ಬಗ್ಗೆ ಹೇಳಿರುವುದನ್ನೆಲ್ಲ 1935ನೇ

ಇಸವಿಯ ಭಾರತ ಸರ್ಕಾರದ ಅಧಿನಿಯಮದಿಂದ ನಕಲು ಮಾಡಲಾಗಿದೆಯೆಂದೂ, ಉಳಿದುದನ್ನೆಲ್ಲ ಬೇರೆ ಬೇರೆ ದೇಶಗಳ ಸಂವಿಧಾನಗಳಿಂದ ಎತ್ತಿಕೊಂಡು ನಮ್ಮ ಕರಡು ಸಂವಿಧಾನದಲ್ಲಿ ಸೇರಿಸಲಾಗಿದೆಯೆಂದೂ, ಈ ಕರಡು ಸಂವಿಧಾನದಲ್ಲಿ ಹೊಸದಾಗಿ ಹೇಳಿರುವುದೇನೂ ಇಲ್ಲವೆಂದು ಟೀಕಿಸಲಾಗಿದೆ.

ಪ್ರಪಂಚದ ಇತಿಹಾಸದಲ್ಲಿ, ಈಗ ರಚಿಸಿರುವ ಸಂವಿಧಾನದಲ್ಲಿ ಏನಾದರೂ ಹೊಸದಿರಲು ಸಾಧ್ಯವೇ ಎಂದು ಕೇಳಲು ಯಾರಾದರೂ ಇಚ್ಛಿಸುತ್ತಾರೆ. ಪ್ರಪಂಚದಲ್ಲಿ ಲಿಖಿತ ಸಂವಿಧಾನವನ್ನು ರಚಿಸಿ ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲವಾಗಿ ಹೋಗಿದೆ. ಅಲ್ಲಿಂದೀಚೆಗೆ ಹಲವು ದೇಶಗಳು ತಮ್ಮ ಸಂವಿಧಾನವನ್ನು ಲಿಖಿತ ರೂಪಕ್ಕಿಳಿಸಿದ್ದಾರೆ. ಸಂವಿಧಾನದ ಗುರಿ ಏನಾಗಿರಬೇಕೆಂಬುದನ್ನು ಬಹಳ ಹಿಂದೆಯೇ ತೀರ್ಮಾನಿಸಲಾಗಿದೆ. ಹೀಗಾಗಿ ಎಲ್ಲ ಸಂವಿಧಾನಗಳ ಮುಖ್ಯ ಉಪಬಂಧಗಳು ಒಂದೇ ರೀತಿಯಾಗಿರುವಂತೆ ಕಾಣುತ್ತವೆ. ಇಷ್ಟು ವಿಳಂಬವಾಗಿ ರಚಿಸಿರುವ ಸಂವಿಧಾನದಲ್ಲಿ ಹೊಸದೇನಾದರೂ ಇರಬಹುದಾದರೆ, ಅದು ತಪ್ಪುಗಳನ್ನು ನಿವಾರಿಸಲು ಹಾಗೂ ಈ ದೇಶದ ಆವಶ್ಯಕತೆಗಳನ್ನು ಪೂರೈಸಲು ಬದಲಾವಣೆಗಳನ್ನು ಮಾಡಿಕೊಂಡಿರುವುದೇ ಆಗಿದೆ. ಸಂವಿಧಾನವನ್ನು ಸರಿಯಾಗಿ ಓದದೇ ಇರುವವರು ಮಾತ್ರ, ಈ ಸಂವಿಧಾನವು ಬೇರೆ ದೇಶಗಳ ಸಂವಿಧಾನವನ್ನು ಕುರುಡಾಗಿ ಅನುಸರಿಸಿದೆ ಎಂದು ಹೇಳಿದ್ದಾರೆಂದು ನಾನು ಭಾವಿಸಿದ್ದೇನೆ. ಸಂವಿಧಾನದಲ್ಲಿ ಹೊಸತನವೇನು ಎಂಬುದನ್ನು ನಾನು ತೋರಿಸಿದ್ದೇನೆ. ಬೇರೆ ಬೇರೆ ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿರುವವರು ಮತ್ತು ಯಾವುದೇ ಉದ್ರೇಕಕ್ಕೊಳಗಾಗದೆ ಈ ವಿಷಯವನ್ನು ಪರಿಶೀಲಿಸಬಯಸುವವರು, ಕರಡು ಸಂವಿಧಾನ ರಚನಾ ಸಮಿತಿಯು ತನ್ನ ಕಾರ್ಯ ನಿರ್ವಹಣೆಯಲ್ಲಿ ಕುರುಡಾಗಿ ನಕಲು ಮಾಡಿಲ್ಲ ಮತ್ತು ಅನುಕರಿಸಿಲ್ಲ ಎಂದು ಖಂಡಿತ ಒಪ್ಪುತ್ತಾರೆಂಬ ವಿಶ್ವಾಸ ನನಗಿದೆ.

1935ರ ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳನ್ನು ಎತ್ತಿಕೊಂಡು ಸಂವಿಧಾನವನ್ನು ರಚಿಸಲಾಗಿದೆ ಎಂಬ ಆರೋಪಕ್ಕೆ ನಾನು ಕ್ಷಮೆ ಯಾಚಿಸುವುದಿಲ್ಲ. ಒಳ್ಳೆಯ ಅಂಶಗಳನ್ನು ಬೇರೆಡೆಯಿಂದ ತೆಗೆದುಕೊಳ್ಳಲು ನಾಚಿಕೆ ಪಡಬೇಕಿಲ್ಲ. ಖಂಡಿತಾ ಇದು ಕೃತಿಚೌರ್ಯವಲ್ಲ. ಸಂವಿಧಾನದ ಮೂಲಭೂತ ಆದರ್ಶಗಳ ವಿಚಾರದಲ್ಲಿ ಯಾರೂ ತಮ್ಮ ಸ್ವಂತ ಸ್ವಾಮ್ಯದ ಹಕ್ಕುಗಳನ್ನೇನೂ ಹೊಂದಿಲ್ಲ. ನಾವು 1935ರ ಭಾರತ ಸರ್ಕಾರದ ಅಧಿನಿಯಮದಿಂದ ತೆಗೆದುಕೊಂಡಿರುವ ಉಪಬಂಧಗಳು ಆಡಳಿತ ವಿಚಾರಕ್ಕೆ ಸಂಬಂಧಪಟ್ಟವುಗಳಾಗಿವೆ. ಸಂವಿಧಾನವು ಆಡಳಿತ ವಿವರಗಳನ್ನು ಹೊಂದಿರಬಾರದೆಂಬುದನ್ನು ನಾನು

ಒಪ್ಪುತ್ತೇನೆ. ಕರಡು ರಚನಾ ಸಮಿತಿಯು, ಆ ವಿವರಗಳು ಸಂವಿಧಾನದಲ್ಲಿ ಸೇರುವುದನ್ನು ತಪ್ಪಿಸಲು ತನ್ನದೇ ಮಾರ್ಗವನ್ನು ಅನುಸರಿಸಿದ್ದರೆ ಚೆನ್ನಾಗಿತ್ತು ಎಂದು ನನಗನಿಸುತ್ತದೆ. ಅವಶ್ಯಕತೆಗಳಿಂದ ಸೇರ್ಪಡೆಯು ಅನಿವಾರ್ಯವಾಗಿತ್ತೆಂದು ಹೇಳಬಹುದಾಗಿದೆ. ಇತಿಹಾಸಕಾರ ಗ್ರೀಸ್ ಹೀಗೆಂದಿದ್ದಾನೆ;

ಸಂವಿಧಾನಾತ್ಮಕ ನೈತಿಕತೆಯು ಯಾವುದೇ ನಿರ್ದಿಷ್ಟ ಸಮುದಾಯದ ಬಹುಭಾಗದ ಜನರಲ್ಲಿದ್ದರಷ್ಟೇ ಸಾಲದು. ಅದು ಇಡೀ ಸಮಾಜದಲ್ಲಿ ಸರ್ವ ವ್ಯಾಪ್ತಿಯಾಗಿ ವ್ಯಾಪಿಸಿಕೊಂಡಿರಬೇಕು. ಸ್ವತಂತ್ರ ಹಾಗೂ ಶಾಂತಿಯುತ ಸರ್ಕಾರಕ್ಕೆ ನೈತಿಕತೆ ಬಹಳ ಮುಖ್ಯ. ನೈತಿಕತೆ ಎಲ್ಲರಲ್ಲಿ ಇಲ್ಲದೆ ಹೋದಾಗ ಬಲಿಷ್ಠ ಹಾಗೂ ಹಠಮಾರಿತನದ ಅಲ್ಪ ಸಂಖ್ಯಾತರು ಅಧಿಕಾರ ಗ್ರಹಣ ಮಾಡಲು ಶಕ್ತಿ ಸಂಪನ್ನರಲ್ಲದೆ ಹೋದರೂ, ಸರ್ಕಾರದ ಕಾರ್ಯ ನಿರ್ವಹಣೆಗೆ ಧಕ್ಕೆಯುಂಟು ಮಾಡಲೂಬಹುದು.”

ಗ್ರೋಟನ ಪ್ರಕಾರ, ‘ನೈತಿಕತೆ’ ಎಂದರೆ ಸಂವಿಧಾನದ ಮೂಲಕ ಅಧಿಕಾರದಲ್ಲಿರುವ ಸರ್ಕಾರದ ಬಗೆಗಿನ ಪರಮೋಚ್ಛ ಗೌರವ ನೈತಿಕತೆಯ ಭಾವನೆಯಲ್ಲಿ ವಾಕ್ ಸ್ವಾತಂತ್ರ್ಯಕ್ಕೆ ಅವಕಾಶವುಂಟು. ಹಾಗೆಯೇ ಅದರ ಮೇಲೆ ಮಿತಿಯೂ ಉಂಟು. ಎಷ್ಟೋ ಉನ್ನತ ಅಧಿಕಾರ ಸ್ಥಾನದಲ್ಲಿದ್ದರೂ ಸಹ, ಅವರ ಸಾರ್ವಜನಿಕ ಕಾರ್ಯಗಳನ್ನು ಬಹಿರಂಗ ಟೀಕೆಗೊಳಪಡಿಸಬಹುದು. ಪಕ್ಷ ರಾಜಕಾರಣದಲ್ಲಿ ಪೈಪೋಟಿ, ಈರ್ಷೆಗಳಿರುವಾಗಲೂ ಸಹ ಪ್ರತಿಯೊಬ್ಬ ನಾಗರಿಕನಲ್ಲಿ ಸರ್ಕಾರದ ಕಾರ್ಯಾಚರಣೆಯ ವಿಚಾರದಲ್ಲಿ ಪೂರ್ಣ ವಿಶ್ವಾಸವಿರಬೇಕು. ಆಗ ಪ್ರತಿ ಪಕ್ಷದವರು ಆಡಳಿತ ಪಕ್ಷದವರನ್ನು ಗೌರವದಿಂದ ಕಾಣುತ್ತಾರೆ.

ಪ್ರಜಾಸತ್ತಾತ್ಮಕ ಸಂವಿಧಾನವು ಸಮರ್ಪಕವಾಗಿ ಕೆಲಸ ಮಾಡಬೇಕಾದರೆ, ಸಂವಿಧಾನಾತ್ಮಕ ನೈತಿಕತೆಯು ವ್ಯಾಪಿಸಿರಬೇಕೆಂದು ಪ್ರತಿಯೊಬ್ಬರೂ ಒಪ್ಪುತ್ತಾರೆ. ಆದರೆ, ಅದಕ್ಕೆ ಸಂಬಂಧಪಟ್ಟ ಎರಡು ಸಂಗತಿಗಳಿದ್ದು, ದುರದೃಷ್ಟವಶಾತ್ ಇವುಗಳನ್ನು ಸಾಮಾನ್ಯವಾಗಿ ಯಾರೂ ಗುರುತಿಸಿಲ್ಲ. ಮೊದಲನೆಯದು - ಆಡಳಿತ ರೀತಿಯು ಸಂವಿಧಾನದ ರೀತಿಯೊಂದಿಗೆ ನಿಕಟ ಸಂಪರ್ಕ ಹೊಂದಿದೆ. ಸಂವಿಧಾನದ ರೀತಿ ನೀತಿಗಳಿಗನುಗುಣವಾಗಿ ಆಡಳಿತ ನಡೆಯಬೇಕು. ಇನ್ನೊಂದು ಸಂಗತಿಯೇನೆಂದರೆ - ಸಂವಿಧಾನದ ರೀತಿಯನ್ನು ಬದಲಿಸದೆ ಕೇವಲ ಆಡಳಿತ ರೀತಿಯನ್ನು ಬದಲಿಸಿ, ಸಂವಿಧಾನದ ಮೂಲ ಆಶಯಗಳಿಗೆ ಅಸಂಗತವಾಗುವಂತೆ ಮತ್ತು ವಿರುದ್ಧವಾಗುವಂತೆ ಮಾಡಿದರೆ, ಅದು ಸಂವಿಧಾನವನ್ನು ತಡೆಗಟ್ಟುವ

ಸಾಧ್ಯತೆಯುಂಟು. ಆದ್ದರಿಂದ, ಇತಿಹಾಸಕಾರ ಗ್ರೋಟ್‌ನು ವಿವರಿಸಿರುವಂತೆ, ಜನಸಮುದಾಯದಲ್ಲಿ ಸಂವಿಧಾನ ಸಂಬಂಧವಾದ ನೈತಿಕತೆ ವ್ಯಾಪಿಸಿರುವಾಗ, ಆಡಳಿತದ ವಿವರಗಳನ್ನು ಸಂವಿಧಾನದಿಂದ ಲೋಪಿಸಿ, ಅವುಗಳನ್ನು ನಿಯಮಿಸುವ ಅಧಿಕಾರವನ್ನು ಶಾಸಕಾಂಗಕ್ಕೆ ಬಿಟ್ಟುಕೊಡಬಹುದಾಗಿದೆಯಷ್ಟೇ. ಸಂವಿಧಾನಾತ್ಮಕ ನೈತಿಕತೆಯು ಎಲ್ಲೆಡೆಗಳಲ್ಲಿ ವ್ಯಾಪಿಸಿದೆಯೆಂದು ನಾವು ಭಾವಿಸಬಹುದೇ? ನೈತಿಕತೆ ಎಂಬುದು ಸಹಜವಾಗಿ ಬರುವಂಥದ್ದಲ್ಲ ಅದನ್ನು ಬೆಳೆಸಿಕೊಳ್ಳಬೇಕು. ನಮ್ಮ ಜನತೆ ಇನ್ನೂ ಅವನ್ನು ಕಲಿತುಕೊಳ್ಳಬೇಕಾಗಿದೆಯೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಪ್ರಜಾಸತ್ತಾತ್ಮಕವಲ್ಲದ ಭಾರತದ ನೆಲದ ಮೇಲೆ ಕೇವಲ ಸಿಂಗಾರವಾಗಿ ನಾವು ಪ್ರಜಾಸತ್ತೆಯನ್ನು ಏರ್ಪಡಿಸಿದ್ದೇವೆ.

ಸನ್ನಿವೇಶಗಳು ಹೀಗಿರುವಾಗ, ಆಡಳಿತದ ರೀತಿಯನ್ನು ನಿಯಮಿಸುವಲ್ಲಿ ನಾವು ಶಾಸಕಾಂಗವನ್ನು ನಂಬದಿರುವುದು ಉತ್ತಮ. ಸಂವಿಧಾನದಲ್ಲಿ ಆಡಳಿತದ ವಿವರಗಳ ಸೇರ್ಪಡೆಗೆ ಇದು ಸಮರ್ಥನೆಯನ್ನು ಒದಗಿಸುತ್ತದೆ.

ಕರಡು ಸಂವಿಧಾನದ ಬಗ್ಗೆ ಕೇಳಿ ಬರುವ ಇನ್ನೊಂದು ಟೀಕೆಯೆಂದರೆ - ಅದರ ಭಾಗವು ಭಾರತದ ಪ್ರಾಚೀನ ರಾಜ್ಯ ವ್ಯವಸ್ಥೆಯನ್ನು ಪ್ರತಿನಿಧಿಸುವಂತಿಲ್ಲವೆಂದೂ, ಸಂವಿಧಾನವನ್ನು ಪ್ರಾಚೀನ ಹಿಂದೂ ಮಾದರಿಯಲ್ಲಿ ರಚಿಸಬೇಕಾಗಿತ್ತೆಂದೂ. ಪಾಶ್ಚಿಮಾತ್ಯ ಸಿದ್ಧಾಂತಗಳನ್ನು ಅಳವಡಿಸುವುದಕ್ಕೆ ಬದಲಾಗಿ, ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಆಧಾರದ ಮೇಲೆ ನಮ್ಮ ಸಂವಿಧಾನವು ನಿಂತಿರಬೇಕಾಗಿತ್ತೆಂದೂ ಹೇಳಲಾಗಿದೆ. ಇನ್ನೂ ಕೆಲವರು ಮತ್ತಷ್ಟು ಅತಿರೇಕದ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಅವರಿಗೆ ಕೇಂದ್ರೀಯ ಅಥವಾ ಪ್ರಾಂತೀಯ ಸರ್ಕಾರಗಳು ಬೇಕಿಲ್ಲ. ಭಾರತದಲ್ಲಿ ಹಲವಾರು ಗ್ರಾಮ ಸರ್ಕಾರಗಳಿರಬೇಕೆಂಬುದು ಅವರ ಬಯಕೆ.

ಗ್ರಾಮಾಂತರ ಜನತೆಯ ಬಗ್ಗೆ ನಮ್ಮ ಭಾರತೀಯ ಬುದ್ಧಿಜೀವಿಗಳಿಗಿರುವ ಪ್ರೀತಿ ಬಹು ದೊಡ್ಡದು. ಗ್ರಾಮಗಳ ಬಗ್ಗೆ ಹಾಗೂ ಆ ಜನಗಳ ಬಗ್ಗೆ ಮೆಟಕಾಫ್ ಅವರು ವ್ಯಕ್ತ ಮಾಡಿದ ಪ್ರಶಂಸೆಯು ಇದಕ್ಕೆ ಕಾರಣವಿರಬಹುದು. ಮೆಟಕಾಫ್ ಅವರು ಗ್ರಾಮ ಸಮುದಾಯವನ್ನು ಗಣರಾಜ್ಯಗಳೆಂದು ವರ್ಣಿಸಿದರು. ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ, ಎಲ್ಲವನ್ನೂ ತಾವೇ ಒಳಗೊಂಡಿರುವ ಗ್ರಾಮ ಸಮುದಾಯವು, ವಿದೇಶೀ ಸಂಬಂಧಗಳಿಂದ ಬಹುತೇಕ ಸ್ವತಂತ್ರರು ಎಂದು ವರ್ಣಿಸಿದ್ದಾರೆ. ಮುಂದುವರಿದ ಮೆಟಕಾಫ್ ಅವರು ಈ ಪ್ರತಿಯೊಂದು ಗ್ರಾಮ ಸಮುದಾಯವು ಒಂದು ಪ್ರತ್ಯೇಕ ರಾಜ್ಯವಿದ್ದಂತೆ. ಎಷ್ಟೋ ಕ್ರಾಂತಿಗಳು

ಹಾಗೂ ಬದಲಾವಣೆಗಳನ್ನು ಅವು ಅನುಭವಿಸಿದರೂ ಭಾರತದ ಗ್ರಾಮಸ್ಥರನ್ನು ರಕ್ಷಿಸಿರುವುದು ಈ ರಾಜ್ಯ ವ್ಯವಸ್ಥೆಯೇ. ಭಾರತದ ಗ್ರಾಮಗಳಲ್ಲಿನ ಜನ ಸ್ವಾತಂತ್ರ್ಯದ ಸಂತೋಷವನ್ನು ಹಂಚಿಕೊಳ್ಳುತ್ತಾರೆ ಎಂಬುದು ಆತನ ಅಭಿಪ್ರಾಯ. ಗ್ರಾಮಾಂತರ ಜನತೆ ಹಾಗೂ ಸಮುದಾಯದ ಬಗ್ಗೆ ಏನೇ ಹೇಳಿದರೂ, ಗ್ರಾಮಾಂತರ ಪ್ರದೇಶದ ಜನತೆಯ ಬಗ್ಗೆ ಅಭಿಮಾನ ಪಡುವಂಥವರು, ಆ ಜನ ಈ ದೇಶದ ವ್ಯವಹಾರಗಳಲ್ಲಿ ಮತ್ತು ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಅವರು ವಹಿಸಿದ ಪಾತ್ರದ ಬಗ್ಗೆ ಮತ್ತು ಆ ಕುರಿತ ಕಾರಣದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಈ ದೇಶದ ಭವಿಷ್ಯ ನಿರ್ಮಾಣದಲ್ಲಿ, ಗ್ರಾಮ ಸಮುದಾಯವು ವಹಿಸಿದ ಪಾತ್ರ ಕುರಿತು ಮೆಟಕಾಫ್ ಹೀಗೆ ವರ್ಣಿಸಿದ್ದಾನೆ-

"ರಾಜ ವಂಶಗಳು ಒಂದಾದ ಮೇಲೊಂದರಂತೆ ಮೇಲೇಳುತ್ತವೆ, ಕೆಳಗೆ ಬೀಳುತ್ತವೆ. ಒಂದು ಕ್ರಾಂತಿಯ ನಂತರ ಇನ್ನೊಂದು ಕ್ರಾಂತಿ ಸಂಭವಿಸುತ್ತದೆ. ಹಿಂದೂ, ಪಠಾಣ, ಮೊಗಲ್, ಮರಾಠ, ಸಿಕ್, ಇಂಗ್ಲಿಷ್ ಇವರೆಲ್ಲ ಒಬ್ಬರಾದ ಮೇಲೊಬ್ಬರಂತೆ ಆಳುತ್ತಾರೆ. ಆದರೆ, ಹಳ್ಳಿಯ ಜನ ಏನೂ ಆಗದೆ ಮೊದಲಿನಂತೆಯೇ ಉಳಿಯುತ್ತಾರೆ. ತೊಂದರೆಗಳುಂಟಾದಾಗ ಆ ಜನ, ಆಯುಧಗಳನ್ನು ಕೈಗೆತ್ತಿಕೊಂಡು ತಮ್ಮ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ಶತ್ರು ಸೈನ್ಯವು ದೇಶದ ಮೂಲಕ ಹಾದೂ ಹೋದಾಗ, ಹಳ್ಳಿಗಳ ಜನರು ತಮ್ಮ ದನಕರುಗಳನ್ನು ಕೂಡಿಹಾಕಿ ಕಾಪಾಡುತ್ತಾರೆ. ಉದ್ರಿಕ್ತರಾಗದ ಸೈನ್ಯವು ಮುಂದೆ ನಡೆಯುತ್ತದೆ."

ಇದು ಗ್ರಾಮ ಸಮುದಾಯವು ತಮ್ಮ ದೇಶದ ಇತಿಹಾಸದಲ್ಲಿ ವಹಿಸಿದ ಪಾತ್ರ. ಇದೆಲ್ಲಾ ಗೊತ್ತಿದ್ದೂ, ಆ ಜನಗಳ ಬಗ್ಗೆ ಏನೆಂದು ಅಭಿಮಾನ ಪಡುವುದು? ಏರಿಳಿತಗಳ ಮಧ್ಯೆ ಅವರು ಬದುಕಿದ್ದಾರೆ ನಿಜ. ಕೇವಲ ಬದುಕುಳಿಯುವುದಷ್ಟೇ ಮುಖ್ಯವಲ್ಲ. ಅವರು ಹೇಗೆ ಬದುಕಿದ್ದಾರೆ ಎಂಬುದು ಮುಖ್ಯ. ಅವರು ತೀರಾ ಕೆಳಮಟ್ಟದಲ್ಲಿ, ಸ್ವಾರ್ಥಪರರಾಗಿ ಬದುಕಿದ್ದರು. ಭಾರತದಲ್ಲಿನ ಗ್ರಾಮ ಗಣರಾಜ್ಯಗಳು ಈ ದೇಶವನ್ನು ನಾಶ ಮಾಡಿವೆಯೆಂದು ನನ್ನ ಅಭಿಪ್ರಾಯ.

ಪ್ರಾಂತೀಯ ಭಾವನೆಯನ್ನು ಹಾಗೂ ಜಾತೀಯತೆಯನ್ನು ಖಂಡಿಸುವ ಜನ, ಅದಕ್ಕಿಂತಲೂ ಸಂಕುಚಿತ ಮನೋಭಾವವುಳ್ಳ ಗ್ರಾಮ ಗಣರಾಜ್ಯಗಳ ಉದ್ಧಾರಕ್ಕೆ ಮುಂದೆ ನಿಂತಿರುವುದು ನನಗೆ ಆಶ್ಚರ್ಯವುಂಟುಮಾಡಿದೆ. ಗ್ರಾಮವೆಂಬುದು ಸ್ಥಳೀಯ ಭಾವನೆಗಳನ್ನಷ್ಟೇ ತುಂಬಿಕೊಂಡಿರುವ ಒಂದು ಹೊಂಡ. ಅಜ್ಞಾನದ ಆಗರ. ಸಂಕುಚಿತತೆ ಹಾಗೂ ಜಾತೀಯತೆಯಿಂದ ತುಂಬಿತುಳುಕುವ ಗುಂಡಿ. ಆದ್ದರಿಂದ, ಕರಡು ಸಂವಿಧಾನವು ಗ್ರಾಮಗಳನ್ನು ಒಂದು ಘಟಕ

ಎಂದು ಭಾವಿಸುವುದಕ್ಕಿಂತ ಪ್ರತಿಯೊಬ್ಬ ವ್ಯಕ್ತಿಯನ್ನು ಒಂದು ಘಟಕವೆಂದು ಪರಿಗಣಿಸಿರುವುದು ನನಗೆ ಸಂತೋಷವನ್ನುಂಟುಮಾಡಿದೆ.

ಅಲ್ಪಸಂಖ್ಯಾತರಿಗೆ ವಿಶೇಷ ರಕ್ಷಣೆ ಒದಗಿಸಿದೆಯೆಂಬ ಕಾರಣದಿಂದಲೂ ಕರಡು ಸಂವಿಧಾನವನ್ನು ಟೀಕಿಸಲಾಗಿದೆ. ಹೀಗೆ ಮಾಡಿರುವುದಕ್ಕೆ ಕರಡು ಸಮಿತಿಯು ಜವಾಬ್ದಾರಿಯಲ್ಲ, ಸಮಿತಿಯು ಸಂವಿಧಾನ ರಚನಾ ಸಭೆಯ ತೀರ್ಮಾನಗಳಿಗನುಸಾರ ಕೆಲಸ ಮಾಡಿದೆಯಷ್ಟೇ. ನನ್ನ ಮಟ್ಟಿಗೆ ಹೇಳುವುದಾದರೆ, ಸಂವಿಧಾನ ಸಭೆಯು ಅಲ್ಪಸಂಖ್ಯಾತರಿಗೆ ವಿಶೇಷ ರಕ್ಷಣೆಯನ್ನು ಒದಗಿಸುವ ಮೂಲಕ ಒಳ್ಳೆಯ ಕೆಲಸವನ್ನೇ ಮಾಡಿದೆ. ಆದರೆ, ಈ ದೇಶದಲ್ಲಿ ಬಹುಸಂಖ್ಯಾತರು ಹಾಗೂ ಅಲ್ಪಸಂಖ್ಯಾತರಿಬ್ಬರೂ ತಪ್ಪು ದಾರಿಯಲ್ಲಿ ಹೋಗುತ್ತಿದ್ದಾರೆ. ಅಲ್ಪ ಸಂಖ್ಯಾತರ ಅಸ್ತಿತ್ವವನ್ನು ಅಲ್ಲಗಳೆಯುವುದು ಬಹುಸಂಖ್ಯಾತರು ಮಾಡುತ್ತಿರುವ ತಪ್ಪು. ಹಾಗೆಯೇ ಸದಾಕಾಲವೂ ಅಲ್ಪಸಂಖ್ಯಾತರಾಗಿಯೇ ಉಳಿಯಲು ಬಯಸುವುದರಲ್ಲಿ ಅಲ್ಪಸಂಖ್ಯಾತರದೂ ಅಷ್ಟೇ ತಪ್ಪಿದೆ. ಈ ಎರಡೂ ಉದ್ದೇಶಗಳಿಗೆ ಒಂದು ಸೂಕ್ತ ಪರಿಹಾರ ಸೂತ್ರವನ್ನು ಕಂಡುಕೊಳ್ಳಬೇಕಾಗಿದೆ. ಮೊದಲಿಗೆ ಅಲ್ಪ ಸಂಖ್ಯಾತರ ಅಸ್ತಿತ್ವವನ್ನು ಒಪ್ಪಿಕೊಳ್ಳಬೇಕು ಮತ್ತು ಕಾಲಾನುಕ್ರಮದಲ್ಲಿ ಮುಂದೊಂದು ದಿನ ಬಹುಸಂಖ್ಯಾತರು ಮತ್ತು ಅಲ್ಪ ಸಂಖ್ಯಾತರೂ ಒಂದೇ ಆಗಿ ಬಾಳುವಂತಾಗಬೇಕು. ಸಂವಿಧಾನ ರಚನಾ ಸಭೆಯ ನಿರ್ಣಯವು ಮೇಲಿನ ಎರಡೂ ಉದ್ದೇಶಗಳಿಗೆ ಪರಿಹಾರವನ್ನು ಒದಗಿಸುವಂತಹುದ್ದಾಗಿದೆ. ಹೀಗಾಗಿ, ಸಭೆಯು ಉದ್ದೇಶಿಸಿರುವ ಪರಿಹಾರ ಸೂತ್ರವು ಸ್ವಾಗತಾರ್ಹವಾಗಿದೆ. ಅಲ್ಪ ಸಂಖ್ಯಾತರ ವಿಷಯದಲ್ಲಿ ಅಸಹನೆಯನ್ನು ಬೆಳೆಸಿಕೊಂಡಿರುವ ಕೆಲವರಿಗೆ ನಾನು ಎರಡು ವಿಷಯಗಳನ್ನು ತಿಳಿಸಲು ಇಚ್ಛಿಸುತ್ತೇನೆ. (1) ಅಲ್ಪ ಸಂಖ್ಯಾತರು ಸ್ಫೋಟಕ ಶಕ್ತಿಯಂತಿದ್ದು, ಒಂದು ವೇಳೆ ಅವರು ಸಿಡಿದದ್ದೇ ಆದರೆ, ರಾಷ್ಟ್ರದ ಒಟ್ಟು ಹಂದರವೇ ಅದರ ಸಿಡಿತಕ್ಕೆ ಗುರಿಯಾಗಬೇಕಾಗುತ್ತದೆ. ಯೂರೋಪಿನ ಇತಿಹಾಸವು ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಒದಗಿಸಿದೆ. (2) ಭಾರತದಲ್ಲಿನ ಅಲ್ಪಸಂಖ್ಯಾತರು, ತಮ್ಮ ಅಸ್ತಿತ್ವದ ಪ್ರಶ್ನೆಯನ್ನು ಬಹುಸಂಖ್ಯಾತರ ಕೈಯಲ್ಲಿರಿಸಲು ಒಪ್ಪಿಕೊಂಡಿದ್ದಾರೆ. ಐರ್ಲೆಂಡಿನ ವಿಭಜನೆಯನ್ನು ತಡೆಯುವ ಸಂಧಾನದ ಇತಿಹಾಸದಲ್ಲಿ, ರೆಡ್ಮಾಂಡ್, ಕಾರ್ಸನ್ಗೆ ಹೀಗೆ ಹೇಳುತ್ತಾನೆ - "ಪ್ರೊಟೆಸ್ಟಂಟ್ ಅಲ್ಪಸಂಖ್ಯಾತರಿಗೆ ಬೇಕೆಂದು ಬಯಸುವ ರಕ್ಷಣೆಯನ್ನು ನೀನು ಬೇಕಾದರೆ ಕೇಳಿಕೋ. ಆದರೆ, ನಾವೆಲ್ಲ ಸಂಯುಕ್ತ ಐರ್ಲೆಂಡ್ ದೇಶದಲ್ಲಿರೋಣ". ಇದಕ್ಕೆ ಕಾರ್ಸನ್ ಉತ್ತರ ಹೀಗಿದೆ - "ವಿಶೇಷ ರಕ್ಷಣೆಗೆ ಧಿಕ್ಕಾರ. ನಿಮ್ಮಿಂದ ಆಳಿಸಿಕೊಳ್ಳಲು ನಾವು ಇಚ್ಛಿಸುವುದಿಲ್ಲ".

ಆದರೆ, ಭಾರತದಲ್ಲಿನ ಯಾವೊಬ್ಬ ಅಲ್ಪಸಂಖ್ಯಾತ ಸಮುದಾಯವೂ ಇಂಥ ನಿಲುವನ್ನು ತೆಗೆದುಕೊಂಡಿಲ್ಲ. ಅವರು ರಾಜಕೀಯ ಬಹು ಸಂಖ್ಯಾತರಲ್ಲದ ಆದರೆ, ಕೋಮುವಾದಿ ಬಹು ಸಂಖ್ಯಾತರಿಂದ ಆಳಿಸಿಕೊಳ್ಳಲು ನಿಷ್ಠೆಯಿಂದ ಒಪ್ಪಿಕೊಂಡಿದ್ದಾರೆ. ಹೀಗಿರುವುದರಿಂದ, ಬಹುಸಂಖ್ಯಾತರು ಅಲ್ಪಸಂಖ್ಯಾತರ ವಿರುದ್ಧ ಯಾವುದೇ ತಾರತಮ್ಯ ಮಾಡಬಾರದೆಂಬ ತಮ್ಮ ಕರ್ತವ್ಯಗಳನ್ನು ಅರಿತುಕೊಳ್ಳಬೇಕು. ಅಲ್ಪಸಂಖ್ಯಾತರು, ಅಲ್ಪಸಂಖ್ಯಾತರಾಗಿಯೇ ಇರುತ್ತಾರೆಯೇ, ಇಲ್ಲವೇ ಎಂಬ ಪ್ರಶ್ನೆಯು ಬಹುಸಂಖ್ಯಾತರು ಅವರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದರ ಮೇಲೆ ನಿಂತಿದೆ. ನಿಜವಾಗಿಯೂ ಬಹುಸಂಖ್ಯಾತರು, ಅಲ್ಪಸಂಖ್ಯಾತರ ವಿಷಯದಲ್ಲಿ ತಾರತಮ್ಯ ಮಾಡುವುದು ನಿಂತುಹೋದ ಕ್ಷಣವೇ ಖಂಡಿತವಾಗಿಯೂ ಇಲ್ಲಿನ ಅಲ್ಪಸಂಖ್ಯಾತರು ತಮ್ಮ ಅಸ್ತಿತ್ವವನ್ನು ಮುಂದುವರಿಸುವುದಕ್ಕೆ ಯಾವುದೇ ಆಧಾರವಿರುವುದಿಲ್ಲ.

ಸಂವಿಧಾನದಲ್ಲಿ ಹೆಚ್ಚು ಟೀಕೆಗೆ ಒಳಗಾಗಿರುವ ಭಾಗವೆಂದರೆ, ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿರುವ ಭಾಗವಾಗಿದೆ. ಮೂಲಭೂತ ಹಕ್ಕುಗಳನ್ನು ಪರಿಭಾಷಿಸುವ 13ನೇ ಅನುಚ್ಛೇದವು ಹಲವಾರು ವಿನಾಯಿತಿಗಳಿಂದ ಕೂಡಿದ್ದು, ಆ ವಿನಾಯಿತಿಗಳು ಹಕ್ಕುಗಳನ್ನು ತಿಂದು ಹಾಕುತ್ತವೆ. ಇದನ್ನು ಒಂದು ಬಗೆಯ ಮೋಸ ಎಂದು ಖಂಡಿಸಲಾಗಿದೆ. ಟೀಕಾಕಾರರ ಅಭಿಪ್ರಾಯದಲ್ಲಿ ಮೂಲಭೂತ ಹಕ್ಕುಗಳು ನಿರುಪಾಧಿಕ ಹಕ್ಕುಗಳಾಗಿರದಿದ್ದಲ್ಲಿ ಅವು ಮೂಲಭೂತ ಹಕ್ಕುಗಳೇ ಅಲ್ಲ. ಟೀಕಾಕಾರರು ತಮ್ಮವಾದಕ್ಕೆ ಸಮರ್ಥನೆಯಾಗಿ ಅಮೇರಿಕಾದ ಸಂವಿಧಾನವನ್ನು ಮತ್ತು ಆ ಸಂವಿಧಾನದ ಮೊದಲ ಹತ್ತು ತಿದ್ದುಪಡಿಗಳಲ್ಲಿರುವ ಹಕ್ಕುಗಳ ಮಸೂದೆಯನ್ನು ಮುಂದಿಡುತ್ತಾರೆ. ಹಕ್ಕುಗಳ ಮಸೂದೆಯಲ್ಲಿನ ಮೂಲಭೂತ ಹಕ್ಕುಗಳು ನಿಜವಾದವು ಎನ್ನಲಾಗಿದೆ. ಏಕೆಂದರೆ, ಅವು ಮಿತಿಗಳಿಗೆ ಮತ್ತು ವಿನಾಯಿತಿಗಳಿಗೆ ಒಳಪಡುವುದಿಲ್ಲ.

ಮೂಲಭೂತ ಹಕ್ಕುಗಳ ಬಗೆಗೆ ಮಾಡಲಾಗಿರುವ ಎಲ್ಲಾ ಟೀಕೆಗಳು ತಪ್ಪು ತಿಳುವಳಿಕೆಯಿಂದ ಕೂಡಿದವುಗಳಾಗಿವೆ ಎಂದು ಹೇಳಲು ನನಗೆ ವಿಷಾದವಾಗುತ್ತದೆ. ಮೊದಲನೆಯದಾಗಿ, ಮೂಲಭೂತ ಹಕ್ಕುಗಳನ್ನು ಮೂಲಭೂತವಲ್ಲದ ಹಕ್ಕುಗಳಿಂದ ಬೇರ್ಪಡಿಸಿ ನೋಡುವಷ್ಟರ ಮಟ್ಟಿಗೆ ಈ ಟೀಕೆಯು ಸಮರ್ಪಕವೆನಿಸದು. ಮೂಲಭೂತ ಹಕ್ಕುಗಳು ನಿರುಪಾಧಿಕವಾದವುಗಳೆಂದು ಮತ್ತು ಮೂಲಭೂತವಲ್ಲದ ಹಕ್ಕುಗಳು ನಿರುಪಾಧಿಕವಲ್ಲದವುಗಳೆಂದೂ ಹೇಳುವುದು ಸರಿಯಲ್ಲ. ಇವೆರಡರ ನಡುವಣ

ನಿಜವಾದ ವ್ಯತ್ಯಾಸವೆಂದರೆ, ಮೂಲಭೂತವಲ್ಲದ ಹಕ್ಕುಗಳು ಪಕ್ಷಕಾರರ ನಡುವಿನ ಒಪ್ಪಂದದಿಂದ ಸೃಷ್ಟಿಸಲ್ಪಡುತ್ತವೆ. ಆದರೆ, ಮೂಲಭೂತ ಹಕ್ಕುಗಳು ಕಾನೂನಿನ ಮೂಲಕ ಕೊಟ್ಟ ಹಕ್ಕುಗಳಾಗಿರುತ್ತವೆ. ಮೂಲಭೂತ ಹಕ್ಕುಗಳು ರಾಜ್ಯವು ಕೊಟ್ಟವುಗಳಾಗಿರುವ ಕಾರಣ, ರಾಜ್ಯವು ಅವನ್ನು ಪರಿಮಿತಗೊಳಿಸಲಾಗದು ಎಂದು ತಿಳಿಯುವಂತಿಲ್ಲ.

ಎರಡನೆಯದಾಗಿ, ಅಮೇರಿಕಾದಲ್ಲಿ ಮೂಲಭೂತ ಹಕ್ಕುಗಳು ನಿರುಪಾಧಿಕವಾಗಿವೆಯೆಂಬುದು ತಿಳಿಯುವುದು ಸರಿಯಲ್ಲ. ಅಮೇರಿಕಾ ಸಂವಿಧಾನ ಮತ್ತು ನಮ್ಮ ಕರಡು ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ವ್ಯತ್ಯಾಸವು ರೂಪದಲ್ಲಿ ಮಾತ್ರವೇ ಹೊರತು ವಸ್ತುವಿನಲ್ಲಲ್ಲ. ಅಮೇರಿಕಾದಲ್ಲಿನ ಮೂಲಭೂತ ಹಕ್ಕುಗಳು ನಿರುಪಾಧಿಕವಲ್ಲವೆಂಬುದು ವಿವಾದಾತೀತ. ಕರಡು ಸಂವಿಧಾನದಲ್ಲಿ ನಿರೂಪಿತವಾಗಿರುವ ಮೂಲಭೂತ ಹಕ್ಕುಗಳ ಸಂಬಂಧದಲ್ಲಿ ನೀಡಿರುವ ಪ್ರತಿಯೊಂದು ವಿನಾಯಿತಿಗೆ, ಸಮರ್ಥನೆಯೊದಗಿಸಲು ಅಮೇರಿಕಾದ ಸರ್ವೋಚ್ಚ ನ್ಯಾಯಾಲಯದ ಒಂದು ತೀರ್ಪನ್ನಾದರೂ ಇಲ್ಲಿ ಯಾರಾದರೂ ಗಮನಿಸಬೇಕು. ಕರಡು ಸಂವಿಧಾನದ 13ನೇ ಅನುಚ್ಛೇದದಲ್ಲಿ ಒಳಗೊಂಡಿರುವ ವಾಕ್ ಸ್ವಾತಂತ್ರ್ಯದ ಹಕ್ಕಿನ ಮೇಲೆ ಮಿತಿಯನ್ನು ಸಮರ್ಥಿಸುವ ಆ ಸರ್ವೋಚ್ಚ ನ್ಯಾಯಾಲಯದ ಅಂಥ ಒಂದು ತೀರ್ಪನ್ನು ಉದ್ಧರಿಸಿದರೆ ಸಾಕಾಗುತ್ತದೆ. 'ಗಿಟ್ಲೋ v/s ನ್ಯೂಯಾರ್ಕ್' ಮೊಕ್ಕದ್ದಮೆಯಲ್ಲಿ ಹಿಂಸಾತ್ಮಕ ಬದಲಾವಣೆಯನ್ನು ತರುವಂತೆ ಉದ್ರೇಕಿಸುವ ಹೇಳಿಕೆಗಳು, ದಂಡಿಸುವ ಉದ್ದೇಶವಿರುವ ನ್ಯೂಯಾರ್ಕ್‌ನ "ಅಪರಾಧಿಕ ಅರಾಜಕತೆ" - ಕಾನೂನು ಸಂವಿಧಾನಬದ್ಧವಾಗಿದೆಯೇ ಇಲ್ಲವೇ ಎಂಬ ಬಗ್ಗೆ ಆ ನ್ಯಾಯಾಲಯವು ಹೀಗೆ ಹೇಳಿದೆ:

"ಸಂವಿಧಾನವು ಖಾತರಿಗೊಳಿಸಿರುವ ವಾಕ್ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯವು ಮನಸ್ಸಿಗೆ ಬಂದ ಹಾಗೆ ಯಾವುದೇ ಜವಾಬ್ದಾರಿಯಿಲ್ಲದೆ ಏನನ್ನಾದರೂ ಹೇಳುವ ಅಥವಾ ಬರೆಯುವ ನಿರುಪಾಧಿಕ ಹಕ್ಕನ್ನು ಪ್ರಧಾನ ಮಾಡುವುದಿಲ್ಲ ಮತ್ತು ಭಾಷೆಯನ್ನು ಬೇಕಾದಂತೆ ಬಳಸುವ ಅನಿರ್ಬಂಧಿತ ಹಾಗೂ ಅನಿಯಂತ್ರಿತ ಪರವಾನಗಿಯನ್ನು ಕೊಡುವುದಿಲ್ಲ. ಅಷ್ಟೇ ಅಲ್ಲ, ಈ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳುವವರನ್ನು ದಂಡಿಸುವುದನ್ನು ತಡೆಯುವುದಿಲ್ಲ"- ಇದು ಬಹಳ ಕಾಲದಿಂದ ಸುಸ್ಥಾಪಿತವಾಗಿ ಬಂದಿರತಕ್ಕ ಮೂಲಭೂತ ತತ್ವ.

ಆದ್ದರಿಂದ, ಅಮೇರಿಕಾದ ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳು ನಿರುಪಾಧಿಕವೆಂದೂ, ಕರಡು ಸಂವಿದಾನದಲ್ಲಿನವುಗಳು ನಿರುಪಾಧಿಕವಾಗಿಲ್ಲವೆಂದೂ ಹೇಳುವುದು ತಪ್ಪು.

ಯಾವುದೇ ಮೂಲಭೂತ ಹಕ್ಕು, ಪರಿಮಿತಿಯನ್ನು ಅಗತ್ಯಪಡಿಸಿದರೆ, ಅಮೇರಿಕಾದ ಸಂವಿಧಾನದಲ್ಲಿ ಮಾಡಿರುವಂತೆ, ಸಂವಿಧಾನವು ತಾನೇ ಅಂಥ ಪರಿಮಿತಿಯನ್ನು ವಿಧಿಸಬೇಕೆಂದೂ, ಹಾಗೆ ಮಾಡದೇ ಹೋದಾಗ ಸುಸಂಬದ್ಧ ಸಂಗತಿಗಳನ್ನು ನ್ಯಾಯಾಂಗವು ನಿರ್ಧರಿಸಿ ತೀರ್ಮಾನಿಸಲು ನ್ಯಾಯಾಂಗಕ್ಕೇ ಬಿಡಬೇಕು ಎಂದು ವಾದಿಸಲಾಗಿದೆ. ಅಮೇರಿಕಾ ಸಂವಿಧಾನದ ಬಗ್ಗೆ ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿದೆಯೆಂದು ಹೇಳಲಾರೆನಾದರೂ, ಆ ಬಗ್ಗೆ ತಪ್ಪಾಗಿ ನಿರೂಪಿಸಲಾಗಿದೆಯೆಂದು ಹೇಳಲು ನನಗೆ ಖೇದವಾಗುತ್ತದೆ. ಅಮೇರಿಕಾದಲ್ಲಿ ಅಂಥ ವ್ಯವಸ್ಥೆಯೇನೂ ಇಲ್ಲ. ಅಮೇರಿಕಾದ ಸಂವಿಧಾನವು ಅಮೇರಿಕಾದ ಜನರಿಗೆ ಖಾತರಿಪಡಿಸಲಾದ ಮೂಲಭೂತ ಹಕ್ಕುಗಳ ಪೈಕಿ, ಸಭೆ ಸೇರುವ ಹಕ್ಕಿನ ವಿಚಾರವೊಂದನ್ನುಳಿದು ಇನ್ನಾವುದೇ ಹಕ್ಕಿನ ಮೇಲೆ ಯಾವುದೇ ಮಿತಿಯನ್ನು ಹೇರುವುದಿಲ್ಲವೆಂದೂ, ಅಮೇರಿಕಾದ ಸಂವಿಧಾನವು ಮೂಲಭೂತ ಹಕ್ಕುಗಳ ಮೇಲೆ ಮಿತಿ ಹೇರುವುದನ್ನು ನ್ಯಾಯಾಂಗಕ್ಕೆ ಬಿಡುತ್ತದೆ ಎಂದೂ ತಿಳಿಯುವುದು ಸರಿಯಲ್ಲ. ಪರಿಮಿತಿ ಕಲ್ಪಿಸುವ ಹಕ್ಕು ಕಾಂಗ್ರೆಸ್ಸಿಗೆ ಸೇರಿದೆ. ವಾಸ್ತವ ಸಂಗತಿ ಟೀಕಾಕಾರರು ಭಾವಿಸಿರುವುದಕ್ಕಿಂತ ಭಿನ್ನವಾಗಿದೆ. ಅಮೇರಿಕಾದ ಸಂವಿಧಾನದಲ್ಲಿ ಅಧಿನಿಯಮಿಸಿರುವ ಮೂಲಭೂತ ಹಕ್ಕುಗಳು ನಿಸ್ಸಂದೇಹವಾಗಿ ನಿರುಪಾಧಿಕವಾಗಿದ್ದವು. ಆದರೆ, ಈ ಮೂಲಭೂತ ಹಕ್ಕುಗಳ ಮೇಲೆ ಮಿತಿಗಳನ್ನು ವಿಧಿಸುವುದು ಅತ್ಯಾವಶ್ಯಕ ಎಂಬುದನ್ನು ಕಾಂಗ್ರೆಸ್ ಬೇಗನೆ ಕಂಡುಕೊಂಡಿತು. ಸರ್ವೋಚ್ಚ ನ್ಯಾಯಾಲಯದ ಮುಂದೆ ಈ ಮಿತಿಗಳ ಸಂವಿಧಾನಾತ್ಮಕತೆಯ ಪ್ರಶ್ನೆ ಬಂದಾಗ, ಸಂವಿಧಾನವು ಅಂಥ ಮಿತಿಗಳನ್ನು ವಿಧಿಸಲು ಅಮೇರಿಕಾ ಕಾಂಗ್ರೆಸ್ಗೆ ಅಧಿಕಾರಗಳನ್ನು ಕೊಟ್ಟಿಲ್ಲವೆಂದು ವಾದಿಸಲಾಯಿತು. ಸರ್ವೋಚ್ಚ ನ್ಯಾಯಾಲಯ ಪೊಲೀಸ್ ಅಧಿಕಾರದ ಸಿದ್ಧಾಂತವನ್ನು ಸೃಷ್ಟಿಸಿತು. ಸಂವಿಧಾನದಲ್ಲಿ ವ್ಯಕ್ತವಾಗಿ ನೀಡಲಾಗದಿದ್ದರೂ, ಪ್ರತಿ ರಾಜ್ಯವೂ ಪೊಲೀಸ್ ಅಧಿಕಾರವನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿರುತ್ತದೆ ಎಂದು ಹೇಳುವ ಮೂಲಕ, ಮೂಲಭೂತ ಹಕ್ಕುಗಳು ನಿರುಪಾಧಿಕವೆಂದು ವಾದಿಸುವವರಿಗೆ ವಾಸ್ತವ ಸ್ಥಿತಿ ಹಾಗಲ್ಲವೆಂದು ತಿಳಿಸಿತು. ನಾನೀಗಾಗಲೇ ಪ್ರಸ್ತಾಪಿಸಿರುವ ಸರ್ವೋಚ್ಚ ನ್ಯಾಯಾಲಯದ ಭಾಷೆಯಲ್ಲೇ ಹೇಳುವುದಾದರೆ: "ಒಂದು ರಾಜ್ಯವು ತನ್ನ ಪೊಲೀಸ್ ಅಧಿಕಾರವನ್ನು ಚಲಾಯಿಸಿ, ಸಾರ್ವಜನಿಕ ಹಿತಕ್ಕೆ ವಿರುದ್ಧವಾದ,

ಸಾರ್ವಜನಿಕ ನೈತಿಕತೆಯನ್ನು ಭ್ರಷ್ಟಗೊಳಿಸುವ, ಅಪರಾಧವನ್ನು ಪ್ರೇರೇಪಿಸುವ ಅಥವಾ ಸಾರ್ವಜನಿಕ ಶಾಂತಿಯನ್ನು ಕದಡುವ ಹೇಳಿಕೆಗಳ ಮೂಲಕ ಈ ಸ್ವಾತಂತ್ರ್ಯವನ್ನು ಅವಹೇಳನ ಮಾಡುವವರನ್ನು ಶಿಕ್ಷಿಸಬಹುದು. ಇದನ್ನು ಪ್ರಶ್ನಿಸುವಂತಿಲ್ಲ".

ಕರಡು ಸಂವಿಧಾನವು, ಮೂಲಭೂತ ಹಕ್ಕುಗಳನ್ನು ನಿರುಪಾಧಿಕ ರೀತಿಯಲ್ಲಿ ರೂಪಿಸಿ, ಪೊಲೀಸ್ ಅಧಿಕಾರದ ಸಿದ್ಧಾಂತದ ಮೂಲಕ ಪಾರ್ಲಿಮೆಂಟ್ ರಕ್ಷಣೆಗೆ ಸರ್ವೋಚ್ಛ ನ್ಯಾಯಾಲಯವನ್ನು ಅವಲಂಭಿಸಿರುವುದಕ್ಕೆ ಬದಲು, ರಾಜ್ಯವೇ ನೇರವಾಗಿ ಮೂಲಭೂತ ಹಕ್ಕುಗಳ ಮೇಲೆ ಪರಿಮಿತಿಗಳನ್ನು ವಿಧಿಸುವ ವ್ಯವಸ್ಥೆಯನ್ನು ಕಲ್ಪಿಸಿದೆ. ಒಟ್ಟು ಪರಿಣಾಮದಲ್ಲಿ ನಿಜವಾಗಿ ಏನೂ ವ್ಯತ್ಯಾಸವಿಲ್ಲ. ಒಬ್ಬರು ನೇರವಾಗಿ ಮಾಡಿದ್ದನ್ನು ಉಳಿದವರು ಪರೋಕ್ಷವಾಗಿ ಮಾಡುತ್ತಾರೆ. ಎರಡೂ ಸಂದರ್ಭಗಳಲ್ಲೂ ಮೂಲಭೂತ ಹಕ್ಕುಗಳು ನಿರುಪಾಧಿಕವಲ್ಲ.

ಕರಡು ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ನಂತರ ನಿರ್ದೇಶಕ ತತ್ವಗಳು ಬರುತ್ತವೆ. ಸಂಸದೀಯ ಪ್ರಜಾತಂತ್ರ ರಚಿಸಿದ ಸಂವಿಧಾನದಲ್ಲಿ ಅದು ಒಂದು ಅಪೂರ್ವ ಲಕ್ಷಣ. ಅಂಥ ತತ್ವಗಳನ್ನು ಒಳಗೊಂಡ ಇನ್ನೊಂದು ಸಂವಿಧಾನವೆಂದರೆ ಐರಿಷ್ ಸ್ವತಂತ್ರ ರಾಜ್ಯದ ಸಂವಿಧಾನ. ಈ ನಿರ್ದೇಶಕ ತತ್ವಗಳೂ ಕೂಡ ಟೀಕೆಗೆ ಒಳಗಾದವು. ಅವು ಕೇವಲ ಅಲಂಕಾರಿಕ ಘೋಷಣೆಗಳೇ ಹೊರತು ಅವುಗಳಿಗೆ ಕಾನೂನಿನ ಬಂಧಕ ಶಕ್ತಿಯಿಲ್ಲ ಎಂದು ಟೀಕಿಸಲಾಗಿದೆ. ಈ ಟೀಕೆಯಲ್ಲಿ ಯಾವ ಹುರುಳೂ ಇಲ್ಲ. ಹಾಗೆಂದು ಸಂವಿಧಾನದಲ್ಲಿ ಅನೇಕ ಕಡೆಗಳಲ್ಲಿ ಹೇಳಲಾಗಿದೆ.

ನಿರ್ದೇಶಕ ತತ್ವಗಳಿಗೆ ಕಾನೂನಿನ ಬಲವಿಲ್ಲವೆಂದು ಹೇಳಲಾಗಿದೆ. ಅದನ್ನು ನಾನು ಒಪ್ಪಿಸಲು ಸಿದ್ಧನಿದ್ದೇನೆ. ಆದರೆ, ಅವುಗಳಲ್ಲಿ ಯಾವುದೇ ಶಕ್ತಿಯಿಲ್ಲ ಎಂಬ ಮಾತನ್ನು ಒಪ್ಪಲಾರೆ. ಹಾಗೆಯೇ, ಅವುಗಳಿಗೆ ಕಾನೂನಿನಲ್ಲಿ ಬಂಧಕ ಶಕ್ತಿಯಿಲ್ಲದಿರುವುದರಿಂದ ಅವು ನಿರುಪಯುಕ್ತವೆಂಬ ಮಾತನ್ನೂ ನಾನು ಒಪ್ಪಲು ಸಿದ್ಧನಿಲ್ಲ.

ನಿರ್ದೇಶಕ ತತ್ವಗಳು, 1935ರ ಅಧಿನಿಯಮದಲ್ಲಿ, ಗವರ್ನರ್ ಜನರಲ್‌ಗೆ ಮತ್ತು ವಸಾಹತುಗಳ ಗವರ್ನರುಗಳಿಗೆ ಹಾಗೂ ಭಾರತದಲ್ಲಿನ ಗವರ್ನರುಗಳಿಗೆ ಬ್ರಿಟಿಷ್ ಸರ್ಕಾರವು ನೀಡಿದ ಆಜ್ಞೆಗಳ ಲಿಖಿತಗಳಂತೆ ಇವೆ. ಸಂವಿಧಾನದ ಕರಡಿನಲ್ಲಿ, ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಅಂಥ ಲಿಖಿತಗಳನ್ನು ನೀಡಲು ಪ್ರಸ್ತಾಪಿಸಲಾಗಿದೆ. ಸಂವಿಧಾನದ IVನೇ ಅನುಚ್ಛೇದದಲ್ಲಿ ಈ ಆಜ್ಞೆಗಳ ಲಿಖಿತಗಳ

ಪಾಠವನ್ನು ಕಾಣಬಹುದು. ನಿರ್ದೇಶಕ ತತ್ವಗಳೆಂದರೆ, ಆಜ್ಞೆಗಳ ಲಿಖಿತಕ್ಕೆ ಇನ್ನೊಂದು ಹೆಸರು ಅಷ್ಟೇ. ಒಂದೇ ಒಂದು ವ್ಯತ್ಯಾಸವೆಂದರೆ, ಅವು ವಿಧಾನಮಂಡಲ ಮತ್ತು ಕಾರ್ಯಾಂಗಗಳಿಗೆ ನೀಡಲಾದ ಆಜ್ಞೆಗಳಾಗಿರುತ್ತವೆ. ಆದ್ದರಿಂದ, ಅವನ್ನು ಸ್ವಾಗತಿಸಬಹುದೆಂದು ನನಗನ್ನಿಸುತ್ತದೆ. ಎಲ್ಲೆಲ್ಲಿ ಶಾಂತಿ, ಶಿಸ್ತು ಮತ್ತು ಒಳ್ಳೆಯ ಸರ್ಕಾರದ ಸಲುವಾಗಿ ಅಧಿಕಾರ ನೀಡಲಾಗಿದೆಯೋ ಅಲ್ಲೆಲ್ಲಾ ಅದರ ಪ್ರಯೋಗಗಳನ್ನು ನಿಯಂತ್ರಿಸತಕ್ಕ ಆಜ್ಞೆಗಳನ್ನು ನೀಡುವುದು ಅಗತ್ಯವಾಗಿದೆ.

ಕರಡಿನಲ್ಲಿ ಸೂಚಿಸಿರುವಂತೆ ಸಂವಿಧಾನದಲ್ಲಿ ಅಂಥ ಆಜ್ಞೆಗಳ ಸೇರ್ಪಡೆ ಸಮರ್ಥನೀಯವಾಗಲು ಇನ್ನೊಂದು ಕಾರಣವಿದೆ. ರಚನೆಗೊಂಡಿರುವ ಕರಡು ಸಂವಿಧಾನವು ದೇಶದ ಸರ್ಕಾರಕ್ಕೆ ಒಂದು ಆಡಳಿತ ಯಂತ್ರವನ್ನು ಒದಗಿಸುತ್ತದೆ. ಇದು ಬೇರೆ ದೇಶಗಳಲ್ಲಿರುವಂತೆ ಯಾವುದೇ ಒಂದು ನಿರ್ದಿಷ್ಟ ಪಕ್ಷವನ್ನು ಅಧಿಕಾರಕ್ಕೆ ತರುವ ತಂತ್ರವಲ್ಲ. ಯಾರು ಅಧಿಕಾರದಲ್ಲಿರಬೇಕು ಎಂಬ ವಿಚಾರವನ್ನು ನಿರ್ಣಯಿಸುವುದು ಜನರಿಗೆ ಬಿಟ್ಟದ್ದು. ಪ್ರಜಾತಂತ್ರದ ತತ್ವವನ್ನು ಪಾಲಿಸುವ ದೃಷ್ಟಿಯಿಂದ ಇದೊಂದು ಉತ್ತಮ ಪದ್ಧತಿ. ಅಧಿಕಾರಕ್ಕೆ ಬಂದವರು ತಮಗೆ ಇಷ್ಟವಾದದ್ದನ್ನು ಮಾಡಲು ಸ್ವತಂತ್ರರಾಗಿರುವುದಿಲ್ಲ. ಅವರು ಅಧಿಕಾರವನ್ನು ನಡೆಸುವಾಗ ನಿರ್ದೇಶಕ ತತ್ವಗಳೆಂದು ಕರೆಯತಕ್ಕ ಈ ಆಜ್ಞೆಗಳ ಲಿಖಿತಗಳನ್ನು ಗೌರವಿಸಬೇಕಾಗುತ್ತದೆ. ಅವುಗಳನ್ನು ಕಡೆಗಣಿಸಲಾಗದು. ಅವನ್ನು ಉಲ್ಲಂಘಿಸಿದರೆ ಯಾರೂ ನ್ಯಾಯಾಲಯದಲ್ಲಿ ಉತ್ತರ ಹೇಳಬೇಕಾಗದಿರಬಹುದು. ಆದರೆ, ಚುನಾವಣೆಯ ಸಮಯದಲ್ಲಿ, ಮತದಾರರ ಸಮುದಾಯದ ಎದುರು ನಿಜವಾಗಿ ಉತ್ತರ ಹೇಳಬೇಕಾಗುತ್ತದೆ. ಅಧಿಕಾರದ ಶಕ್ತಿಗಳು ಅಧಿಕಾರಗ್ರಹಣಕ್ಕಾಗಿ ಪ್ರಯತ್ನಿಸುವಾಗ ಈ ನಿರ್ದೇಶಕ ತತ್ವಗಳು ಎಂಥ ಬೆಲೆಯನ್ನು ಹೊಂದಿವೆ ಎಂಬುದು ಮನದಟ್ಟಾಗುತ್ತದೆ.

ನಿರ್ದೇಶಕ ತತ್ವಗಳಿಗೆ ಬಂಧಕ ಶಕ್ತಿಯಿಲ್ಲವೆಂಬ ಕಾರಣಕ್ಕಾಗಿ ಅವುಗಳನ್ನು ಸಂವಿಧಾನದಲ್ಲಿ ಸೇರಿಸಬಾರದೆಂಬ ವಾದ ಸರಿಯಲ್ಲ. ಸಂವಿಧಾನದಲ್ಲಿ ಅವಕ್ಕೆ ಯಾವ ನಿರ್ದಿಷ್ಟ ಸ್ಥಾನವನ್ನು ಕೊಡಬೇಕೆಂಬ ಬಗ್ಗೆ ಅಭಿಪ್ರಾಯ ಭೇದವಿರಬಹುದು. ಸಕಾರಾತ್ಮಕ ಹೊಣೆಗಾರಿಕೆಗಳನ್ನು ಹೊಂದಿಲ್ಲದ ಉಪಬಂಧಗಳನ್ನು ಸಕಾರಾತ್ಮಕ ಹೊಣೆಗಾರಿಕೆಗಳನ್ನು ಹೊಂದಿರತಕ್ಕ ಉಪಬಂಧಗಳ ಜೊತೆ 'ಸೇರಿಸುವುದು ಒಂದು ರೀತಿಯ ವಿಲಕ್ಷಣ ಎಂಬುದನ್ನು ನಾನು ಒಪ್ಪುತ್ತೇನೆ. ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಸಂಬಂಧಿಸಿದ ಆಜ್ಞೆಗಳ ಲಿಖಿತಗಳನ್ನು ಒಳಗೊಂಡ ಅನುಸೂಚಿ IIIಎ ಮತ್ತು ಅನುಸೂಚಿ IVಗಳೇ ಅವುಗಳ ಸರಿಯಾದ ಜಾಗ ಎಂಬುದು

ನನ್ನ ತೀರ್ಮಾನ. ಏಕೆಂದರೆ, ನಾನು ಈಗಾಗಲೇ ಹೇಳಿರುವಂತೆ ನಿಜವಾಗಿ ಅವು ಕಾರ್ಯಾಂಗ ಮತ್ತು ವಿಧಾನ ಮಂಡಲಗಳಿಗೆ ತಮ್ಮ ಅಧಿಕಾರಗಳನ್ನು ಹೇಗೆ ಕಾರ್ಯರೂಪಕ್ಕೆ ತರಬೇಕೆಂಬ ಬಗ್ಗೆ ನೀಡಿದ ಆಜ್ಞೆಗಳ ಲಿಖಿತಗಳಾಗಿರುತ್ತವೆ. ಇವೆಲ್ಲ ವ್ಯವಸ್ಥೆಗೊಳಿಸುವುದಕ್ಕೆ ಸಂಬಂಧಿಸಿದ ವಿಚಾರವಷ್ಟೇ.

ಕೇಂದ್ರವು ಅತ್ಯಧಿಕ ಅಧಿಕಾರವನ್ನು ಹೊಂದಿದೆಯೆಂದು ಕೆಲವು ಟೀಕಾಕಾರರು ಹೇಳಿದ್ದಾರೆ. ಮತ್ತೆ ಕೆಲವರು ಅದನ್ನು ಇನ್ನಷ್ಟು ಬಲಗೊಳಿಸಬೇಕೆಂದೂ ಅಭಿಪ್ರಾಯಪಟ್ಟಿದ್ದಾರೆ. ಕರಡು ರಚನಾ ಸಮಿತಿಯು ಇವೆರಡರ ಸಮತೋಲನವನ್ನು ಕಾಪಾಡಿಕೊಂಡಿದೆ. ಕೇಂದ್ರಕ್ಕೆ ಅಧಿಕಾರ ನೀಡುವುದನ್ನು ಎಷ್ಟೇ ನಿರಾಕರಿಸಿದರೂ ಅದು ಬಲಗೊಳ್ಳುವುದನ್ನು ತಪ್ಪಿಸಲಾಗದು. ಆಧುನಿಕ ಪ್ರಪಂಚದ ಸ್ಥಿತಿ ಹೇಗಿದೆಯೆಂದರೆ, ಅಧಿಕಾರದ ಕೇಂದ್ರೀಕರಣ ಅನಿವಾರ್ಯವಾಗಿಬಿಟ್ಟಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಸಂಯುಕ್ತ ಸರ್ಕಾರದ ಬೆಳವಣಿಗೆಯನ್ನು ನಾವು ಗಮನಿಸಬೇಕು. ಸಂವಿಧಾನವು ಅದಕ್ಕೆ ಬಹಳ ಮಿತವಾದ ಅಧಿಕಾರಗಳನ್ನು ನೀಡಿದ್ದರೂ, ಅದು ಎಷ್ಟು ಬೆಳೆಯಿತೆಂದರೆ, ಅದರ ಮುಂದೆ ರಾಜ್ಯ ಸರ್ಕಾರಗಳು ಮಂಕಾದವು; ಗ್ರಹಣ ಹಿಡಿದಂತಾದವು. ಆಧುನಿಕ ವಿದ್ಯಮಾನಗಳೇ ಇದಕ್ಕೆ ಕಾರಣ. ನಿಜವಾಗಿ ಈ ವಿದ್ಯಾಮಾನಗಳೇ ಭಾರತ ಸರ್ಕಾರದ ಮೇಲೆ ಪ್ರಭಾವ ಬೀರುತ್ತಿವೆ. ಹೀಗಾಗಿ, ಅದು ಬಲಯುತಗೊಳ್ಳುತ್ತಲೇ ಹೋಗುವುದನ್ನು ಯಾರೂ ತಪ್ಪಿಸಲಾಗದು. ಮತ್ತೊಂದು ರೀತಿಯಲ್ಲಿ ಯೋಚಿಸಿದರೆ, ಅದನ್ನು ಬಲಗೊಳಿಸುವ ಪ್ರವೃತ್ತಿಯನ್ನು ತಡೆಯಬೇಕೆಂದೆನಿಸುತ್ತದೆ. ಏಕೆಂದರೆ, ಅದು ಅರಗಿಸಿಕೊಳ್ಳಲಾಗದಷ್ಟನ್ನು ತಿನ್ನಬಾರದು. ಅದರ ಶಕ್ತಿಯು ಅದರ ಭಾರಕ್ಕೆ ತಕ್ಕಂತಿರಬೇಕು. ತನ್ನ ಭಾರಕ್ಕೆ ತಾನೇ ಕುಸಿದು ಬೀಳುವಷ್ಟರಮಟ್ಟಿಗೆ ಅದನ್ನು ಬಲಗೊಳಿಸುವುದು ಸರಿಯಲ್ಲ.

ಕರಡು ಸಂವಿಧಾನದಲ್ಲಿ ಕೇಂದ್ರ ಮತ್ತು ಪ್ರಾಂತ್ಯಗಳ ನಡುವಿನ ಸಂವಿಧಾನಾತ್ಮಕ ಸಂಬಂಧಗಳು ಒಂದು ತೆರನಾಗಿವೆಯೆಂದೂ ಮತ್ತು ಕೇಂದ್ರ ಮತ್ತು ದೇಶೀಯ ಸಂಸ್ಥಾನಗಳ ನಡುವೆಯಿರುವ ಸಂವಿಧಾನಾತ್ಮಕ ಸಂಬಂಧಗಳು ಇನ್ನೊಂದು ತೆರನಾಗಿವೆಯೆಂದೂ ಟೀಕೆ ಮಾಡಲಾಗಿದೆ. ರಕ್ಷಣಾ ಇಲಾಖೆ, ವಿದೇಶೀ ವ್ಯವಹಾರಗಳು ಮತ್ತು ಸಂಪರ್ಕ ಇಲಾಖೆಗಳಲ್ಲಿ ಬರುವ ವಿಷಯಗಳನ್ನು ಬಿಟ್ಟು ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳನ್ನೆಲ್ಲಾ ದೇಶೀಯ ಸಂಸ್ಥಾನಗಳು ಒಪ್ಪಿಕೊಳ್ಳಲೇಬೇಕಾಗಿಲ್ಲ, ಸಮವರ್ತಿ ಪಟ್ಟಿಯಲ್ಲಿನ ವಿಷಯಗಳನ್ನು ಒಪ್ಪಲೇಬೇಕೆಂದಿಲ್ಲ, ಕರಡು ಸಂವಿಧಾನ ಒಳಗೊಂಡಿರುವ ರಾಜ್ಯ ಪಟ್ಟಿಯನ್ನು ಒಪ್ಪಬೇಕಾಗಿಲ್ಲ, ತನ್ನದೇ ಆದ ಚುನಾಯಿತ ಸಭೆಗಳನ್ನು ರೂಪಿಸಿಕೊಳ್ಳಲು

ಮತ್ತು ತಮ್ಮವೇ ಸಂವಿಧಾನಗಳನ್ನು ರಚಿಸಿಕೊಳ್ಳಲು ಅವು ಸ್ವತಂತ್ರವಾಗಿರುತ್ತವೆ. ಇದು ದುರದೃಷ್ಟಕರ; ನಿಜ ಮತ್ತು ಅವು ಖಂಡಿತವಾಗಿ ಸಮರ್ಥನೀಯವಲ್ಲವುಗಳೆಂದು ನಾನು ನಿವೇದಿಸಬಯಸುತ್ತೇನೆ. ಈ ವಿಷಮತೆ ರಾಜ್ಯದ ಕಾರ್ಯ ಸಮರ್ಥನೆಗೆ ಅಪಾಯಕಾರಿಯಾಗಬಹುದು. ಈ ವಿಷಮತೆ ಇರುವವರೆಗೂ ಸಮಸ್ತ ಭಾರತಕ್ಕೆ ಸಂಬಂಧಿಸಿದ ವಿಷಯಗಳ ಮೇಲಿನ ಕೇಂದ್ರದ ಅಧಿಕಾರವು ಅಷ್ಟೊಂದು ಪರಿಣಾಮಕಾರಿಯಾಗುವುದಿಲ್ಲ, ಎಲ್ಲಾ ಸಂದರ್ಭಗಳಲ್ಲಿ, ಎಲ್ಲಾ ಸ್ಥಳಗಳಲ್ಲಿ ಚಲಾಯಿಸಲಾಗದ ಅಧಿಕಾರವು ಅಧಿಕಾರವೇ ಅಲ್ಲ. ಯುದ್ಧದಿಂದ ಸಂಭವಿಸಬಹುದಾದ ಸನ್ನಿವೇಶಗಳಲ್ಲಿ ಕೆಲವು ಪ್ರದೇಶಗಳಲ್ಲಿನ ಮುಖ್ಯ ಅಧಿಕಾರಗಳ ಚಲಾವಣೆಯ ಮೇಲಿನ ಮಿತಿಗಳ ಪರಿಣಾಮವಾಗಿ ರಾಜ್ಯದ ಇಡೀ ಜೀವನಕ್ಕೆ ಗಂಡಾಂತರ ಒದಗಬಹುದು. ಇದಕ್ಕಿಂತ ಮಿಗಿಲಾದ ಕೆಟ್ಟ ಸಂಗತಿಯೆಂದರೆ, ಕರಡು ಸಂವಿಧಾನದಲ್ಲಿ ದೇಶೀಯ ಸಂಸ್ಥಾನಗಳು ತಮ್ಮವೇ ಆದ ಸೈನ್ಯಗಳನ್ನು ವ್ಯವಸ್ಥೆಗೊಳಿಸಿಕೊಳ್ಳಲು ಅನುಮತಿಸಿರುವುದು. ನಾನು ಇದನ್ನು ಪ್ರತಿಗಾಮಿಯೂ ಹಾಗೂ ಅಪಾಯಕಾರಿಯೂ ಆದ ಉಪಬಂಧವೆಂದು ಪರಿಗಣಿಸುತ್ತೇನೆ. ಆ ಮೂಲಕ ಭಾರತದ ಏಕತೆಗೆ, ಭಂಗವುಂಟಾಗಿ, ಕೇಂದ್ರ ಸರ್ಕಾರವನ್ನು ಬುಡಮೇಲು ಮಾಡಲು ಅವಕಾಶವುಂಟಾಗಬಹುದು. ನಾನು ಕರಡು ಸಂವಿಧಾನ ಸಮಿತಿಯ ಅಭಿಪ್ರಾಯವನ್ನು ತಪ್ಪಾಗಿ ನಿರೂಪಿಸಿಲ್ಲವೆಂದು ಹೇಳುವುದಾದರೆ, ಆ ಸಮಿತಿಗೆ ಈ ವಿಷಯದಲ್ಲಿ ಎಳ್ಳಷ್ಟೂ ಸಂತೋಷವಾಗಲಿಲ್ಲ. ಪ್ರಾಂತ್ಯಗಳು ಮತ್ತು ದೇಶೀಯ ಸಂಸ್ಥಾನಗಳು ಕೇಂದ್ರದೊಡನೆ ಹೊಂದಿರುವ ಸಂವಿಧಾನಾತ್ಮಕ ಸಂಬಂಧದಲ್ಲಿ ಸಮಾನತೆಯಿರಬೇಕೆಂದು ಬಹುವಾಗಿ ಅಪೇಕ್ಷಿಸಲಾಗಿತ್ತು. ದುರದೃಷ್ಟವಶಾತ್ ಈ ಬಗ್ಗೆ ಸುಧಾರಣೆ ಉಂಟುಮಾಡಲು ಸಮಿತಿಗೆ ಸಾಧ್ಯವಾಗಲಿಲ್ಲ. ಸಮಿತಿಯು ಸಂವಿಧಾನ ರಚನಾ ಸಭೆಯ ತೀರ್ಮಾನಗಳಿಗೆ ಬದ್ಧವಾಗಿತ್ತು ಮತ್ತು ಸಂವಿಧಾನ ರಚನಾ ಸಭೆಯಾದರೋ ಎರಡು ಸಂಧಾನಗಳ ಸಮಿತಿಗಳ ನಡುವೆ ಏರ್ಪಟ್ಟ ಒಪ್ಪಂದಕ್ಕೆ ಬದ್ಧವಾಗಿತ್ತು.

ಜರ್ಮನಿಯಲ್ಲಿ ನಡೆದ ಘಟನೆಯಿಂದ ನಾವು ಧೈರ್ಯ ತಂದುಕೊಳ್ಳಬೇಕು. ಬಿಸ್ಮಾರ್ಕನು 1870ರಲ್ಲಿ ಸ್ಥಾಪಿಸಿದ ಜರ್ಮನ್ ಸಾಮ್ರಾಜ್ಯವು 25 ವಿಭಾಗಗಳ ಒಂದು ಸಂಘಟಿತ ರಾಜ್ಯವಾಗಿತ್ತು. ಈ 25 ಘಟಕಗಳಲ್ಲಿ 22 ಘಟಕಗಳು ರಾಜಪ್ರಭುತ್ವವುಳ್ಳ ಘಟಕಗಳಾಗಿದ್ದರೆ, ಉಳಿದ 3 ಘಟಕಗಳು ಪ್ರಜಾಪ್ರಭುತ್ವದ ನಗರ ರಾಜ್ಯಗಳಾಗಿದ್ದವು. ನಮಗೆಲ್ಲಾ ತಿಳಿದಿರುವರೀತಿ ಅಲ್ಲಿ ಈ ತಾರತಮ್ಯವು ಕ್ರಮೇಣ ಕಾಣೆಯಾಯಿತು. ಜರ್ಮನಿಯು ಏಕ ಸಂವಿಧಾನದ ಅಡಿಯಲ್ಲಿ ವಾಸವಾಗಿರತಕ್ಕ ಏಕಜನ ಸಮುದಾಯದ ಏಕ ರಾಷ್ಟ್ರವಾಯಿತು. ನಮ್ಮಲ್ಲಿ

ದೇಶೀಯ ಸಂಸ್ಥಾನಗಳು ವಿಲೀನಗೊಳ್ಳುವ ಪ್ರಕ್ರಿಯೆ ಜರ್ಮನಿಯ ಪ್ರಕ್ರಿಯೆಗಿಂತ ಹೆಚ್ಚು ಶೀಘ್ರವಾಗಬಹುದು. 1947ರ ಆಗಸ್ಟ್ 15 ರಂದು ನಮ್ಮಲ್ಲಿ ಆರು ನೂರು ದೇಶೀಯ ಸಂಸ್ಥಾನಗಳಿದ್ದವು. ದೇಶೀಯ ಸಂಸ್ಥಾನಗಳು ಭಾರತ ಪ್ರಾಂತ್ಯದಲ್ಲಿ ವಿಲೀನವಾಗಿ ಅಥವಾ ತಮ್ಮ ತಮ್ಮಲ್ಲಿ ವಿಲೀನವಾಗಿ, ಕೇಂದ್ರವು ಅವುಗಳನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ರೂಪಿಸಿ - ಹೀಗೆ 20-30 ರಾಜ್ಯಗಳು ಉಳಿದಿವೆ. ಇದು ಬಹಳ ಶೀಘ್ರವಾದ ಪ್ರಕ್ರಿಯೆ ಮತ್ತು ತ್ವರಿತ ಪ್ರಗತಿ. ಉಳಿದ ರಾಜ್ಯಗಳೂ ಕೂಡ ಭಾರತದ ಒಕ್ಕೂಟದಲ್ಲಿ ಭಾರತೀಯ ಪ್ರಾಂತ್ಯಗಳಿಗಿರುವ ನಿಬಂಧನೆಗಳ ಮೇಲೆ ಒಗ್ಗೂಡಬೇಕೆಂದು ಕೋರುತ್ತೇನೆ. ಆ ಮೂಲಕ ಅವರು ಭಾರತ ಒಕ್ಕೂಟಕ್ಕೆ ಅವಶ್ಯವಾದ ಬಲವನ್ನು ನೀಡಿದಂತಾಗುತ್ತದೆ. ತಮ್ಮದೇ ಆದ ಸಂವಿಧಾನ ರಚನಾ ಸಭೆಗಳನ್ನು ರಚಿಸಿ, ತಮ್ಮದೇ ಸಂವಿಧಾನವನ್ನು ರಚಿಸುವಂಥ ತೊಂದರೆಯಿಂದ ಅವರು ಪಾರಾಗಬಹುದು. ಇದರಿಂದ ಅವರು ಏನನ್ನೂ ಕಳೆದುಕೊಳ್ಳುವುದಿಲ್ಲ, ಬದಲು ಗಳಿಸಿಕೊಳ್ಳುತ್ತಾರೆ. ನನ್ನ ಮನವಿ ನಿರರ್ಥಕವಾಗಲಿಕ್ಕಿಲ್ಲವೆಂಬ ಭರವಸೆ ನನಗಿದೆ.

ಸಂವಿಧಾನವು ಅಂಗೀಕಾರವಾಗುವುದಕ್ಕೆ ಮುಂಚೆಯೇ ಪ್ರಾಂತ್ಯಗಳ ಮತ್ತು ದೇಶೀಯ ಸಂಸ್ಥಾನಗಳ ನಡುವಣ ವ್ಯತ್ಯಾಸವನ್ನು ತೊಡೆದು ಹಾಕಲು ನಮಗೆ ಸಾಧ್ಯವಾಗಬಹುದೆಂದು ನಾನು ಆಶಿಸುತ್ತೇನೆ.

ಕರಡು ಸಂವಿಧಾನದ 1ನೇ ಅನುಚ್ಛೇದದಲ್ಲಿ, ಭಾರತವನ್ನು ಕುರಿತು ಹೇಳುವಾಗ, 'ರಾಜ್ಯಗಳ ಒಕ್ಕೂಟ' ಎಂದಿರುವ ಬಗ್ಗೆ ಕೆಲವು ಟೀಕಾಕಾರರು ಆಕ್ಷೇಪವೆತ್ತಿ ಆ ಪದ "ರಾಜ್ಯಗಳ ಫೆಡರೇಷನ್" ಎಂದಿರಬೇಕೆಂದು ಹೇಳುತ್ತಾರೆ. ಏಕೀಕೃತ ರಾಜ್ಯವಾದ ದಕ್ಷಿಣ ಆಫ್ರಿಕಾವನ್ನು ಒಕ್ಕೂಟವೆಂದು ಕರೆಯಲಾಗಿದೆಯೆಂಬುದು ನಿಜ. ಆದರೆ ಸಂಯುಕ್ತ ರಾಜ್ಯವಾದ ಕೆನಡಾವನ್ನು ಕೂಡ ಒಕ್ಕೂಟವೆಂದು ಕರೆದಿದ್ದಾರೆ. ಆದ್ದರಿಂದ, ಭಾರತವನ್ನು, ಅದರ ರಚನೆ ಸಂಯುಕ್ತವಾದರೂ, ಒಕ್ಕೂಟವೆಂದು ಕರೆದಿರುವುದು ಬಳಕೆಗೆ ತೊಂದರೆಯಾಗದು. ಮುಖ್ಯವಾದ ಮಾತೆಂದರೆ, 'ಒಕ್ಕೂಟ'ದ ಬಳಕೆ ಬುದ್ಧಿಪೂರ್ವಕವಾದುದು. ಕೆನಡಾದ ಸಂವಿಧಾನದಲ್ಲಿ 'ಒಕ್ಕೂಟ' ಪದ ಏಕೆ ಬಳಕೆಯಾಯಿತೆಂಬುದು ನನಗೆ ತಿಳಿಯದು. ಆದರೆ, ಅದನ್ನು ಕರಡು ರಚನಾ ಸಮಿತಿ ಏಕೆ ಬಳಸಿತು ಎಂಬುದನ್ನು ನಾನು ಹೇಳುತ್ತೇನೆ. ಕರಡು ರಚನಾ ಸಮಿತಿಯು ಒಂದು ವಿಚಾರವನ್ನು ಸ್ಪಷ್ಟಪಡಿಸಬೇಕಾಗಿತ್ತು. ಭಾರತವು "ರಾಜ್ಯಗಳ ಫೆಡರೇಷನ್" ನಿಜ. ಆದರೆ 'ಫೆಡರೇಷನ್' ಅನ್ನು ಸೇರಲು ರಾಜ್ಯಗಳು ಮಾಡಿಕೊಂಡ ಒಪ್ಪಂದದ ಪರಿಣಾಮದಿಂದ ಸೃಷ್ಟಿಯಾದುದ್ದಲ್ಲ ಮತ್ತು ಆ ಫೆಡರೇಶನ್ ಒಪ್ಪಂದದ

ಪರಿಣಾಮವಾಗಿ ಆಗದ ಕಾರಣ ಯಾವ ರಾಜ್ಯವೂ ಆದರಿಂದ ಪ್ರತ್ಯೇಕವಾಗುವ ಹಕ್ಕನ್ನು ಹೊಂದಿಲ್ಲ. ಈ ಫೆಡರೇಷನ್ ಒಂದು ಒಕ್ಕೂಟ. ಏಕೆಂದರೆ, ಅದನ್ನು ಒಡೆಯುವಂತಿಲ್ಲ. ಆಡಳಿತದ ಅನುಕೂಲಕ್ಕೆ ತಕ್ಕಂತೆ ದೇಶ ಮತ್ತು ಜನ ಅನೇಕ ರಾಜ್ಯಗಳಾಗಿ ವಿಭಾಗವಾಗಬಹುದು. ಆದರೂ ದೇಶ ಒಂದೇ, ಅಖಂಡ ಜನರು ಒಂದೇ ಮೂಲದಿಂದ ಹುಟ್ಟಿ, ಒಂದೇ ಕೃಪಾಛತ್ರದಡಿ ಜೀವಿಸುವ ಒಂದು ಜನಾಂಗ. ರಾಜ್ಯಗಳು ಒಕ್ಕೂಟದಿಂದ ಹೊರಹೋಗುವ ಹಕ್ಕನ್ನು ಹೊಂದಿಲ್ಲ, 'ಫೆಡರೇಷನ್' ಒಡೆಯುವಂಥದಲ್ಲ ಎಂಬುದನ್ನು ಸ್ಥಾಪಿಸಲು ಅಮೇರಿಕಾದಲ್ಲಿ ಯಾದವೀ ಯುದ್ಧವೇ ನಡೆಯಿತು. ಕರಡು ಸಂವಿಧಾನ ರಚನಾ ಸಮಿತಿಯು ಈ ವಿಚಾರವನ್ನು ಊಹಾಪೋಹಕ್ಕೆ ಅಥವಾ ವಾದವಿವಾದಕ್ಕೆ ಎಡೆಕೊಡದೆ ಹಾಗೆ ಮೊದಲೇ ಸ್ಪಷ್ಟಪಡಿಸುವುದು ವಿಹಿತವೆಂದು ಭಾವಿಸಿತ್ತು.

ಸಂವಿಧಾನ ತಿದ್ದುಪಡಿಗಳಿಗೆ ಸಂಬಂಧಿಸಿದ ಉಪಬಂಧಗಳು, ಕರಡು ಸಂವಿಧಾನದ ವಿಮರ್ಶಕರಿಂದ ಉಗ್ರ ಟೀಕೆಗೊಳಗಾಗಿವೆ. ಸಂವಿಧಾನದಲ್ಲಿರುವ ಉಪಬಂಧಗಳು ತಿದ್ದುಪಡಿಗಳನ್ನು ಮಾಡಲು ತೊಂದರೆ ಉಂಟು ಮಾಡುತ್ತವೆ ಎನ್ನಲಾಗಿದೆ. ಕನಿಷ್ಠ ಕೆಲವು ವರ್ಷಗಳವರೆಗಾದರೂ ಸಂವಿಧಾನವು ಸರಳ ಬಹುಮತದಿಂದ ತಿದ್ದುಪಡಿಗೊಳಗಾಗಲಿ ಎಂದು ಪ್ರಸ್ತಾಪಿಸಲಾಗಿದೆ. ಈ ವಾದವು ಸೂಕ್ಷ್ಮವಾದ ಹಾಗೂ ಚಾಣಾಕ್ಷತನದಿಂದ ಕೂಡಿದೆ. ಈ ಸಂವಿಧಾನ ರಚನಾ ಸಭೆಯು ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ಚುನಾಯಿತವಾಗಲಿಲ್ಲ. ಮುಂಬರುವ ಸಂಸತ್ತು ವಯಸ್ಕ ಮತದಾನ ಪದ್ಧತಿಯ ಮೂಲಕ ಚುನಾಯಿಸಲ್ಪಡುತ್ತದೆ. ಆದಾಗ್ಯೂ, ಸಂವಿಧಾನ ರಚನಾ ಸಭೆಯು ಸರಳ ಬಹುಮತದಿಂದ ಸಂವಿಧಾನವನ್ನು ಅಂಗೀಕರಿಸುತ್ತದೆ. ಆದರೆ, ಸಂಸತ್ತಿಗೆ ಆ ಅಧಿಕಾರವನ್ನು ನಿರಾಕರಿಸಲಾಗಿದೆ. ಇದು ಕರಡು ಸಂವಿಧಾನದ ಅಸಂಗತಗಳಲ್ಲಿ ಒಂದು ಎಂದು ಎತ್ತಿ ತೋರಿಸಲಾಗುತ್ತದೆ. ನಾನು ಈ ಆರೋಪವನ್ನು ನಿರಾಕರಿಸುತ್ತೇನೆ. ಏಕೆಂದರೆ, ಅದು ಬುನಾದಿಯಿಲ್ಲದ ವಾದ. ಕರಡು ಸಂವಿಧಾನದಲ್ಲಿ ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದಂತೆ ಉಪಬಂಧಗಳು ಎಷ್ಟು ಸರಳವಾಗಿವೆ ಎಂದು ತಿಳಿಯಲು ಅಮೇರಿಕಾ ದೇಶದ ಮತ್ತು ಆಸ್ಟ್ರೇಲಿಯಾ ದೇಶದ ಸಂವಿಧಾನಗಳಲ್ಲಿ ತಿದ್ದುಪಡಿಗಿರುವ ಉಪಬಂಧವನ್ನು ಅಧ್ಯಯನ ಮಾಡಬೇಕು. ಅದಕ್ಕೆ ಹೋಲಿಸಿದರೆ ನಮ್ಮ ಕರಡು ಸಂವಿಧಾನದಲ್ಲಿರುವ ಉಪಬಂಧಗಳು ತೀರಾ ಸರಳ.ಪ್ರಜಾಭಿಪ್ರಾಯದ ಮೂಲಕ ಅಥವಾ ಜನಮತಗಣನೆಯ ಮೂಲಕ ನಿರ್ಣಯ ಕೈಗೊಳ್ಳಬೇಕಾದಂಥ ಸವಿಸ್ತಾರವಾದ ಹಾಗೂ ಕಷ್ಟಕರವಾದ ಪ್ರಕ್ರಿಯೆಗಳನ್ನು ಕರಡು ಸಂವಿಧಾನವು ಕೈಬಿಟ್ಟಿದೆ. ತಿದ್ದುಪಡಿ

ಮಾಡುವ ಅಧಿಕಾರವನ್ನು ಕೇಂದ್ರ ಮತ್ತು ಪ್ರಾಂತೀಯ ವಿಧಾನ ಮಂಡಲಗಳಿಗೆ ಕೊಟ್ಟಿದೆ. ಕೆಲವು ವಿಶೇಷ ವಿಷಯಗಳಿಗೆ ಸಂಬಂಧಪಟ್ಟ ತಿದ್ದುಪಡಿಗಳಿಗೆ ರಾಜ್ಯ ವಿಧಾನಮಂಡಳಗಳ ಅನುಮೋದನೆ ಬೇಕು. ಸಂವಿಧಾನದ ಇತರ ಎಲ್ಲಾ ಅನುಚ್ಛೇದಗಳನ್ನು ಸಂಸತ್ತು ತಿದ್ದುಪಡಿ ಮಾಡಬಹುದಾಗಿದೆ. ಆದರೆ ಹೀಗೆ ಮಾಡಲು ಸಂಸತ್ತಿಗೆ ಉಭಯ ಸದನಗಳ ಸದಸ್ಯರಲ್ಲಿ ಹಾಜರಿದ್ದು ಮತ ನೀಡುವ 2/3 ಭಾಗದಷ್ಟು ಸದಸ್ಯರ ಬಹುಮತವಿರಬೇಕು. ಹೀಗಾದಾಗ ತಿದ್ದುಪಡಿಯು ಅಂಗೀಕಾರವಾಗುತ್ತದೆ. ಸಂವಿಧಾನವನ್ನು ತಿದ್ದುಪಡಿ ಮಾಡಲು ಇದಕ್ಕಿಂತಲೂ ತೀರಾ ಸರಳವಾದ ವಿಧಾನವನ್ನು ರೂಪಿಸುವುದು ಕಷ್ಟ.

ತಿದ್ದುಪಡಿಯ ಉಪಬಂಧಗಳಲ್ಲಿ ಅಸಂಗತವೆಂದು ಹೇಳಲಾದ ವಿಷಯವು ಸಂವಿಧಾನದ ರಚನಾ ಸಭೆಯ ಮತ್ತು ಸಂವಿಧಾನದಡಿ ಚುನಾಯಿತವಾಗುವ ಮುಂದಿನ ಪಾರ್ಲಿಮೆಂಟಿನ ಸ್ಥಾನಮಾನದ ಬಗೆಗಿನ ತಪ್ಪು ತಿಳುವಳಿಕೆಯ ಮೇಲೆ ಆಧಾರಿತವಾಗಿದೆ. ಸಂವಿಧಾನ ರಚನಾ ಸಭೆಯು ಸಂವಿಧಾನವನ್ನು ರಚಿಸುವಲ್ಲಿ ಯಾವುದೇ ಸ್ವಾರ್ಥವನ್ನು ಹೊಂದಿಲ್ಲ. ಉತ್ತಮವಾದ ಹಾಗೂ ಕಾರ್ಯಸಾಧ್ಯವಾದ ಸಂವಿಧಾನವನ್ನು ರೂಪಿಸುವ ಉದ್ದೇಶವಲ್ಲದೆ ಬೇರಾವುದೇ ಉದ್ದೇಶ ನಮಗಿಲ್ಲ. ಸಂವಿಧಾನದ ಅನುಚ್ಛೇದಗಳನ್ನು ಪರಿಗಣಿಸುವಾಗ ಯಾವುದೇ ಒಂದು ನಿರ್ದಿಷ್ಟ ಕಾನೂನನ್ನು ಮನಸ್ಸಿನಲ್ಲಿಟ್ಟುಕೊಂಡಿಲ್ಲ. ಮುಂದಿನ ಸಂಸತ್ತು ಸಂವಿಧಾನ ರಚನಾ ಸಭೆಯಾಗಿ ಸೇರುವುದಾದರೆ, ಸಂಸತ್ತಿನ ಆ ಸದಸ್ಯರು ಪಕ್ಷಪಾತದಿಂದ ವರ್ತಿಸಿ ತಮ್ಮ ದಾರಿಗೆ ಅಡ್ಡಿಯಾಗುವಂಥ ಅನುಚ್ಛೇದಗಳನ್ನು ತಮಗೆ ಅನುಕೂಲವಾಗುವ ಹಾಗೆ ತಿದ್ದುಪಡಿ ಮಾಡಲು ಪ್ರಯತ್ನಿಸಲೂಬಹುದು. ಸಂಸತ್ತಿಗೆ ಸ್ವಾರ್ಥಸಾಧನೆಯ ಉದ್ದೇಶವಿರಬಹುದು. ಆದರೆ, ಸಂವಿಧಾನ ರಚನಾ ಸಭೆಗೆ ಅಂಥ ಯಾವುದೇ ಉದ್ದೇಶ ಇಲ್ಲ. ಇದು ಸಂವಿಧಾನ ರಚನಾ ಸಭೆಗೂ ಹಾಗೂ ಭವಿಷ್ಯತ್ ಸಂಸತ್ತಿಗೂ ಇರುವ ವ್ಯತ್ಯಾಸ. ಆದ್ದರಿಂದ, ಸಂವಿಧಾನ ರಚನಾ ಸಭೆಯು ಸೀಮಿತ ಮತದಾನದಿಂದ ಚುನಾಯಿತವಾಗಿದ್ದರೂ ಸರಳ ಬಹುಮತದ ಮೂಲಕ ಸಂವಿಧಾನವನ್ನು ಅಂಗೀಕರಿಸುವ ಅಧಿಕಾರವನ್ನು ಅದಕ್ಕೆ ಕೊಡಬಹುದಾಗಿದೆ. ಆದರೆ, ಸಂಸತ್ತು ವಯಸ್ಕ ಮತದಾನದ ಮೂಲಕ ಚುನಾಯಿತವಾಗಿದ್ದರೂ ಸಂವಿಧಾನವನ್ನು ಸರಳ ಬಹುಮತದ ಮೂಲಕ ತಿದ್ದುಪಡಿ ಮಾಡುವ ಅಧಿಕಾರವನ್ನು ಅದಕ್ಕೆ ವಹಿಸಿಕೊಡುವಂತಿಲ್ಲ.

ಕರಡು ಸಂವಿಧಾನ ರಚನಾ ಸಮಿತಿಯು ಸಿದ್ಧಪಡಿಸಿದ ಕರಡು ಸಂವಿಧಾನದ ವಿರುದ್ಧ ಬಂದ ಎಲ್ಲ ವ್ಯತಿರಿಕ್ತ ಟೀಕೆಗಳನ್ನು ಕುರಿತು ವಿವರಿಸಿದ್ದೇನೆಂದು ನಂಬಿದ್ದೇನೆ. ಸಂವಿಧಾನವನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಒಪ್ಪಿಸಿದ ಕಳೆದ ಎಂಟು ತಿಂಗಳ ಅವಧಿಯಲ್ಲಿ ಬಂದ ಮುಖ್ಯ ಟೀಕೆ ಅಥವಾ ವಿಮರ್ಶೆಗಳನ್ನೆಲ್ಲಾ

ಯಾವುದನ್ನೂ ಬಿಡದೆ ಚರ್ಚೆ ಮಾಡಿದ್ದೇನೆಂದು ತಿಳಿದಿದ್ದೇನೆ. ಕರಡು ರಚನಾ ಸಮಿತಿ ರೂಪಿಸಿದ ಸಂವಿಧಾನವನ್ನು ಅಂಗೀಕರಿಸುವುದು ಅಥವಾ ಅಂಗೀಕಾರಕ್ಕೆ ಮುಂಚೆ ಬದಲಾಯಿಸುವುದು ಸಂವಿಧಾನ ರಚನಾ ಸಭೆಯ ತೀರ್ಮಾನಕ್ಕೆ ಬಿಟ್ಟದ್ದು.

ನಾನು ಹೇಳಬಯಸಿದ್ದು ಇಷ್ಟೇ. ಭಾರತದ ಕೆಲವು ಪ್ರಾಂತೀಯ ವಿಧಾನಸಭೆಗಳಲ್ಲಿ ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಮದ್ರಾಸು ಮತ್ತು ಪೂರ್ವ ಪಂಜಾಬು ವಿಧಾನಸಭೆಗಳಲ್ಲಿ ಚರ್ಚೆಯಾಗಿದೆ. ಕೆಲವು ಪ್ರಾಂತೀಯ ವಿಧಾನಸಭೆಗಳು ಸಂವಿಧಾನದಲ್ಲಿನ ಹಣಕಾಸಿನ ಉಪಬಂಧಗಳ ಬಗ್ಗೆ ಮತ್ತು ಮದರಾಸಿನಲ್ಲಿ 226ನೇ ಅನುಚ್ಛೇದದ ಬಗ್ಗೆ ಗಂಭೀರ ಆಕ್ಷೇಪವನ್ನು ಮಾಡಿರುವುದೇನೋ ನಿಜ. ಇದನ್ನು ಬಿಟ್ಟರೆ ಯಾವುದೇ ಪ್ರಾಂತೀಯ ವಿಧಾನಸಭೆಯಲ್ಲಿ ಸಂವಿಧಾನದ ಯಾವುದೇ ಇತರ ಅನುಚ್ಛೇದಗಳ ಬಗ್ಗೆ ಆಕ್ಷೇಪ ಮಾಡಿಲ್ಲ. ಯಾವ ಸಂವಿಧಾನವೂ ಪರಿಪೂರ್ಣವಲ್ಲ. ಕರಡು ರಚನಾ ಸಮಿತಿಯೇ ಸಂವಿಧಾನದ ಸುಧಾರಣೆಗಾಗಿ ಕೆಲವು ತಿದ್ದುಪಡಿಗಳನ್ನು ಸಲಹೆ ಮಾಡಿದೆ. ಕರಡು ರಚನಾ ಸಮಿತಿ ಸಿದ್ಧಪಡಿಸಿರುವ ಸಂವಿಧಾನವು ಆರಂಭದ ದಿಸೆಯಲ್ಲಿ ಈ ದೇಶಕ್ಕೆ ಸಾಕಷ್ಟು ಉತ್ತಮವಾಗಿದೆ ಎಂದು ಹೇಳಲು ನನಗೆ ಪ್ರಾಂತೀಯ ವಿಧಾನಸಭೆಗಳಲ್ಲಿನ ಚರ್ಚೆಗಳು ಧೈರ್ಯ ತುಂಬಿವೆ. ಈ ಸಂವಿಧಾನವು ಕಾರ್ಯಸಾಧ್ಯವಾದ ಸಂವಿಧಾನ. ಇದನ್ನು ಪರಿಸ್ಥಿತಿಗೆ ತಕ್ಕಂತೆ ಬದಲಿಸಿಕೊಳ್ಳಬಹುದು ಮತ್ತು ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ ನಮ್ಮ ದೇಶವನ್ನು ಒಗ್ಗೂಡಿಸಿ ಸ್ಥಿರವಾಗಿಡಲು ಸಮರ್ಥವಾಗಿದೆ. ಈ ಹೊಸ ಸಂವಿಧಾನದ ಮೂಲಕ ಏನಾದರೂ ತಪ್ಪು ಉಂಟಾದರೆ, ಅದಕ್ಕೆ ನಾವು ಕೆಟ್ಟ ಸಂವಿಧಾನವನ್ನು ಹೊಂದಿದ್ದೇವೆಯೆಂದಲ್ಲ, ಮನುಷ್ಯ ದುಷ್ಟನಾಗಿದ್ದಾನೆ ಎಂದು ಹೇಳಬೇಕಾಗಿದೆ, ಅಷ್ಟೇ.

# ನಿರ್ದೇಶಕ ತತ್ವಗಳಿಗೆ ಸಂಬಂಧಪಟ್ಟಂತೆ ಆರ್ಥಿಕ ಪ್ರಜಾಪ್ರಭುತ್ವದ ಆದರ್ಶ ಕುರಿತು

ಮಾನ್ಯ ಉಪಾಧ್ಯಕ್ಷರೇ,

ಈ ಬಗೆಯ ನಿರ್ದೇಶಕ ತತ್ವಗಳಲ್ಲಿ ಹಿತಾಸಕ್ತಿಯುಳ್ಳ ಸದನದ ಕೆಲವು ಸದಸ್ಯರ ಮನಸ್ಸಿನಲ್ಲಿ ಸಂವಿಧಾನದ ನಿಜವಾದ ಉಪಬಂಧಗಳ ಬಗ್ಗೆ ಬಹಳಷ್ಟು ತಪ್ಪು ತಿಳುವಳಿಕೆಯುಂಟಾಗಿರುವಂತೆ ತೋರುತ್ತದೆ. ಈ ತಪ್ಪು ತಿಳುವಳಿಕೆ ಅಥವಾ ಸರಿಯಾಗಿ ಅರ್ಥಮಾಡಿಕೊಳ್ಳದಿರುವಿಕೆಗೆ ಕಾರಣವೆಂದರೆ, ಪ್ರಸ್ತಾವವನ್ನು ಸಮರ್ಥಿಸಿ ನಾನು ಮಾಡಿದ ಪ್ರಾರಂಭಿಕ ಭಾಷಣದಲ್ಲಿ, ನಾನು ವಿಷಯದ ಈ ಅಂಶವನ್ನು ಉಲ್ಲೇಖಿಸಿರಲಿಲ್ಲ. ಈ ವಿಷಯವನ್ನು ಸದನದ ಮುಂದೆ ಸ್ಪಷ್ಟವಾದ ರೀತಿಯಲ್ಲಿ ಇಡುವ ಅಪೇಕ್ಷೆ ನನಗಿರಲಿಲ್ಲವೆಂದಲ್ಲ, ನನ್ನ ಭಾಷಣ ದೀರ್ಘವಾಗಿದ್ದು, ಅದನ್ನು ಮತ್ತಷ್ಟು ಲಂಬಿಸಿ ಬೇಸರ ಉಂಟುಮಾಡುವ ಮನಸ್ಸು ನನಗಿರಲಿಲ್ಲ. ಈಗ ನಾನು ಈ ಸದನದ ಸ್ವಲ್ಪ ಸಮಯವನ್ನು ತೆಗೆದುಕೊಂಡು ಈ ಬಗ್ಗೆ ಸಂವಿಧಾನದಲ್ಲಿ ನೀಡಿರುವ ಸ್ಥಾನವೇನೆಂಬುದನ್ನು ವಿವರಿಸುತ್ತೇನೆ. ನಾನು ಈಗಾಗಲೇ ಹೇಳಿರುವಂತೆ ನಮ್ಮ ಈ ಸಂವಿಧಾನವು ಸಂಸದೀಯ ಪ್ರಜಾಪ್ರಭುತ್ವವೆಂದು ಕರೆಯತಕ್ಕ ಒಂದು ರಾಜಕೀಯ ವ್ಯವಸ್ಥೆಯನ್ನು ಗೊತ್ತುಪಡಿಸುವ ಒಂದು ಶಾಸನ. ಸಂಸದೀಯ ಪ್ರಜಾಪ್ರಭುತ್ವ ಎಂದರೆ, ಒಬ್ಬ ವ್ಯಕ್ತಿ, ಒಂದು ಮತ ಎಂದು ತಿಳಿಯುತ್ತೇವೆ. ಸರ್ಕಾರವು ತನ್ನ ದೈನಂದಿನ ವ್ಯವಹಾರಗಳಲ್ಲಿ ಮತ್ತು ಒಂದು ನಿರ್ದಿಷ್ಟ ಅವಧಿಯ ತರುವಾಯ, ಸರ್ಕಾರದ ಕಾರ್ಯಸಾಧನೆಯ ಮೌಲ್ಯಮಾಪನ ಮಾಡುವ ಅವಕಾಶವನ್ನು ಮತದಾರರಿಗೆ ಕೊಟ್ಟ ಸಂದರ್ಭದಲ್ಲಿ ಪ್ರತಿಯೊಂದು ಸರ್ಕಾರವೂ ಪರೀಕ್ಷೆಗೆ ಒಳಪಡುತ್ತದೆ ಎಂದೇ ಇದರ ಅರ್ಥ. ಈ ಸಂವಿಧಾನದಲ್ಲಿ ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಕಾರಣವೆಂದರೆ, ಯಾವುದೇ ನಿರ್ದಿಷ್ಟ ಜನ ಸಮುದಾಯದ ಶಾಶ್ವತ ಸರ್ವಾಧಿಕಾರವನ್ನು ಯಾವುದೇ ರೀತಿಯಲ್ಲಿ ಸ್ಥಾಪಿಸಲು ಅವಕಾಶ ಕೊಡಬಾರದೆಂಬುದೇ ನಮ್ಮ ಉದ್ದೇಶ. ನಾವು ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸುವಾಗ ನಮಗೆ ಆದರ್ಶವಾಗಿರತಕ್ಕ ಆರ್ಥಿಕ ಪ್ರಜಾಪ್ರಭುತ್ವವನ್ನು ಸಹ ಸ್ಥಾಪಿಸಬೇಕೆಂಬುದು ನಮ್ಮ ಬಯಕೆಯಾಗಿತ್ತು. ಜನಗಳಿಗೆ ರಾಜಕೀಯ ಅಧಿಕಾರವನ್ನು ಪಡೆಯತಕ್ಕ ಅನುಕೂಲಗಳನ್ನು ಒದಗಿಸುವುದಷ್ಟೇ ನಮ್ಮ ಉದ್ದೇಶವಾಗಿರಲಿಲ್ಲ, ಅಧಿಕಾರ ವಹಿಸಿಕೊಳ್ಳುವವರು ಅನುಸರಿಸಬೇಕಾದ ಆದರ್ಶವನ್ನು ಗೊತ್ತುಪಡಿಸುವುದೂ ಸಂವಿಧಾನದ ಉದ್ದೇಶವಾಗಿತ್ತು. ಆರ್ಥಿಕ ಪ್ರಜಾಪ್ರಭುತ್ವವೇ ಆ ಆದರ್ಶ. ಆರ್ಥಿಕ ಪ್ರಜಾಪ್ರಭುತ್ವವನ್ನು ಯಾವ ರೀತಿಯಲ್ಲಿ

ಸ್ಥಾಪಿಸಬಹುದೆಂಬ ಬಗ್ಗೆ ನಮ್ಮಲ್ಲಿ ನಿಶ್ಚಿತ ಕಲ್ಪನೆಗಳೇನಾದರೂ ಇವೆಯೇ ಎಂಬುದು ಮುಖ್ಯ ಪ್ರಶ್ನೆ. ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ವಿಚಾರದಲ್ಲಿ ಜನರಲ್ಲಿ ವಿಭಿನ್ನ ಅಭಿಪ್ರಾಯಗಳುಂಟು. ಕೆಲವರು ವ್ಯಕ್ತಿವಾದದಲ್ಲಿ ನಂಬಿಕೆಯಿಟ್ಟವರು, ಆರ್ಥಿಕ ಪ್ರಜಾಪ್ರಭುತ್ವಕ್ಕೆ ಅದೇ ಉತ್ತಮ ಹಾದಿಯೆಂದು ಹೇಳುತ್ತಾರೆ. ಇನ್ನು ಕೆಲವರು ಸಮಾಜವಾದಿ ವ್ಯವಸ್ಥೆಯು ಆರ್ಥಿಕ ಪ್ರಜಾಪ್ರಭುತ್ವದ ಅತ್ಯುತ್ತಮ ರೂಪವೆಂದು ಹೇಳುತ್ತಾರೆ; ಮತ್ತೆ ಕೆಲವರು ಕಮ್ಯುನಿಸ್ಟ್ ವ್ಯವಸ್ಥೆಯೇ ಆರ್ಥಿಕ ಪ್ರಜಾಪ್ರಭುತ್ವದ ಅತ್ಯುತ್ತಮ ರೂಪವೆಂದು ಹೇಳುತ್ತಾರೆ.

ಆರ್ಥಿಕ ಪ್ರಜಾಪ್ರಭುತ್ವವನ್ನು ಹಲವಾರು ಮಾರ್ಗಗಳ ಮೂಲಕ ತರಬಹುದೆಂಬ ವಾಸ್ತವ ಸಂಗತಿಯನ್ನು ಗಮನಿಸಿ, ನಿರ್ದೇಶಕ ತತ್ವಗಳಲ್ಲಿ ನಾವು ಉದ್ದೇಶಪೂರ್ವಕವಾಗಿಯೇ ಬಳಸಿದ ಭಾಷೆಯಲ್ಲಿ ಬದಲಾಯಿಸಲು ಸಾಧ್ಯವಿರುವಂಥ ಒಂದು ತತ್ವವನ್ನು ಸೇರಿಸಿದ್ದುಂಟು. ಭಿನ್ನ ರೀತಿಯಲ್ಲಿ ಆಲೋಚಿಸುವ ಜನರಿಗೆ ಆರ್ಥಿಕ ಪ್ರಜಾಪ್ರಭುತ್ವವನ್ನು ಸಾಧಿಸಲು ತಮ್ಮದ್ದೇ ಆದ ಮಾರ್ಗದಲ್ಲಿ ಶ್ರಮಿಸಲು ಸಾಕಷ್ಟು ಅವಕಾಶಗಳನ್ನು ಮಾಡಿಕೊಟ್ಟಿದ್ದೇವೆ. ಆರ್ಥಿಕ ಪ್ರಜಾಪ್ರಭುತ್ವವನ್ನು ಸಾಧಿಸಲು ಉತ್ತಮ ಮಾರ್ಗವೆಂದರೆ, ಮತದಾರರ ಮನವೊಲಿಸಿ ಅನುಸರಿಸತಕ್ಕ ಮಾರ್ಗ. ಇದು ಅವರದೇ ದಾರಿಯಲ್ಲಿ ಸಾಗಲು ಜನರಿಗೆ ಪೂರ್ಣಾವಕಾಶವಿರುವ ಮಾರ್ಗ.

ಮಾನ್ಯರೇ, ಈ ಕಾರಣಕ್ಕಾಗಿಯೇ IVನೇ ಭಾಗದಲ್ಲಿನ ಅನುಚ್ಛೇದಗಳ ಭಾಷೆಯು ಕರಡು ರಚನಾ ಸಮಿತಿಯು ಉತ್ಕೃಷ್ಟವೆಂದು ಭಾವಿಸುವ ರೀತಿಯಲ್ಲಿರುವುದು. ಯಾವುದು ನಿಶ್ಚಿತವಲ್ಲವೋ, ಕಠೋರವಲ್ಲವೋ, ಅದಕ್ಕಾಗಿ ನಿಶ್ಚಿತವಾದ ಹಾಗೂ ಕಠೋರವಾದ ರೂಪ ಕೊಡುವುದು ಸರಿಯಲ್ಲ. ನಮ್ಮ ಆದರ್ಶವು ಬದಲಾಗುತ್ತಿರುವ ಪರಿಸ್ಥಿತಿಗಳನ್ನು, ಸಮಯವನ್ನು ಅಲಕ್ಷಿಸಿ ಬದಲಾಗುತ್ತಿರಬೇಕು. ಆದ್ದರಿಂದ, ನಿರ್ದೇಶಕ ತತ್ವಗಳಿಗೆ ಬೆಲೆಯೇ ಇಲ್ಲವೆಂದು ಹೇಳುವುದು ಸರಿಯಲ್ಲ, ಆರ್ಥಿಕ ಪ್ರಜಾಪ್ರಭುತ್ವವೇ ನಮ್ಮ ಆದರ್ಶವೆಂದು ಗೊತ್ತುಪಡಿಸುವ ಕಾರಣ ನಿರ್ದೇಶಕ ತತ್ವಗಳು ಅಮೂಲ್ಯವಾಗಿವೆ ಎಂದು ನನ್ನ ಅಭಿಪ್ರಾಯ. ಹಾಗೆಂತಲೇ ನಮ್ಮ ಸಂವಿಧಾನವಲ್ಲಿ ಬುದ್ಧಿಪೂರ್ವಕವಾಗಿ ನಿರ್ದೇಶಕ ತತ್ವಗಳನ್ನು ಸೇರಿಸಿದ್ದೇವೆ. ಏಕೆಂದರೆ, ನಮ್ಮ ಆರ್ಥಿಕ ಆದರ್ಶವೇನು? ನಮ್ಮ ಸಾಮಾಜಿಕ ವ್ಯವಸ್ಥೆ ಹೇಗಿರಬೇಕು ಎಂಬ ನಿರ್ದೇಶನವಿಲ್ಲದೆ ಸಂವಿಧಾನ ಒದಗಿಸುವ ಅನೇಕ ಸಂಸದೀಯ ಸರ್ಕಾರವನ್ನು ಸ್ಥಾಪಿಸುವುದೊಂದೇ ನಮ್ಮ ಉದ್ದೇಶವಾಗಿರಲಿಲ್ಲ. ಈ ಪ್ರಶ್ನೆಯ ಬಗ್ಗೆ ಕಳವಳಗೊಳ್ಳುವ ನಮ್ಮ ಸ್ನೇಹಿತರು, ನಾನು ಈಗ ತಾನೇ ಹೇಳಿದ ಈ ವಿಚಾರವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಎಂದರೆ ನಮ್ಮ ಸಂವಿಧಾನ ರಚನೆಯಲ್ಲಿ ಎರಡು ಉದ್ದೇಶಗಳಿವೆ- (i)ರಾಜಕೀಯ ಪ್ರಜಾಪ್ರಭುತ್ವದ ಸ್ವರೂಪವನ್ನು ನಿರ್ಣಯಿಸುವುದು; ಮತ್ತು (ii) ನಮ್ಮ ಆದರ್ಶವು ಆರ್ಥಿಕ ಪ್ರಜಾಪ್ರಭುತ್ವವೆಂದು ಗೊತ್ತುಪಡಿಸುವುದು ಮತ್ತು ಅಧಿಕಾರದಲ್ಲಿರುವ ಯಾವುದೇ ಸರ್ಕಾರವೂ ಆರ್ಥಿಕ ಪ್ರಜಾಪ್ರಭುತ್ವವನ್ನು ತರಲು ಶ್ರಮಿಸಬೇಕೆಂದು ಗೊತ್ತುಪಡಿಸುವುದು - ಇವುಗಳನ್ನು ಜ್ಞಾಪಿಸಿಕೊಂಡರೆ ಬಹಳ ಸದಸ್ಯರ ಮನಸ್ಸಿನಲ್ಲಿನ ತಪ್ಪು ತಿಳುವಳಿಕೆ ದೂರವಾಗುತ್ತದೆ.

ನನ್ನ ಗೆಳೆಯ ಮಾನ್ಯ ತ್ಯಾಗಿಯವರು "ಪ್ರಯತ್ನಿಸತಕ್ಕುದು" ಮತ್ತು ಅಂಥ ಇತರ ಪದಗುಚ್ಛವನ್ನು ತೆಗೆಯಬೇಕೆಂದು ನನಗೆ ಮನವಿ ಮಾಡಿದ್ದಾರೆ. ನಾವು ಯಾವ ಕಾರಣಕ್ಕಾಗಿ "ಪ್ರಯತ್ನಿಸತಕ್ಕುದು" ಎಂಬುದನ್ನು ಸೇರಿಸಿದ್ದೇವೆಂಬ ಬಗ್ಗೆ ತಪ್ಪು ತಿಳುವಳಿಕೆಯುಂಟಾಗಿದೆಯೆಂದು ಭಾವಿಸಿದ್ದೇನೆ. ಕರಡು ಸಂವಿಧಾನದಲ್ಲಿ ಬರುವ "ಪ್ರಯತ್ನಿಸತಕ್ಕುದು" ಪದ ನನ್ನ ಪ್ರಕಾರ ಬಹಳ ಮುಖ್ಯವಾದದ್ದು. ನಾವು ಅದನ್ನು ಏತಕ್ಕೆ ಬಳಸಿದ್ದೇವೆಂದರೆ, ನಮ್ಮ ಉದ್ದೇಶ ನಿರ್ದೇಶಕ ತತ್ವಗಳನ್ನು ಜಾರಿಗೊಳಿಸಲು ಸರ್ಕಾರಕ್ಕೆ ತಡೆಯುಂಟುಮಾಡುವ ಸನ್ನಿವೇಶಗಳು ಬಂದಾಗ ಅಥವಾ ಸರ್ಕಾರದ ಪ್ರಯತ್ನದಲ್ಲಿ ಅಡ್ಡಿಯುಂಟಾದಾಗ, ಆ ಸರ್ಕಾರಗಳು ಕಠಿಣ ಸನ್ನಿವೇಶಗಳಲ್ಲೂ ಕೂಡ ಈ ನಿರ್ದೇಶನಗಳನ್ನು ಜಾರಿಗೆ ತರಲು ಪ್ರಯತ್ನ ಮಾಡಲಿ ಎಂಬುದೇ ನಮ್ಮ ಉದ್ದೇಶ. ಈ ಕಾರಣಕ್ಕಾಗಿಯೇ ನಾವು "ಪ್ರಯತ್ನಿಸತಕ್ಕುದು" ಎಂಬ ಪದ ಬಳಸಿದ್ದೇವೆ. ಇಲ್ಲದಿದ್ದರೆ ಯಾವುದೇ ಸರ್ಕಾರವು ಈಗ ಸನ್ನಿವೇಶ ಅನುಕೂಲವಾಗಿಲ್ಲ ಅಥವಾ ಹಣಕಾಸಿನ ಕೊರತೆಯಿದೆ. ಆದ್ದರಿಂದ, ಸಂವಿಧಾನ ಹೇಳುವ ಮಾರ್ಗದಲ್ಲಿ ಪ್ರಯತ್ನಶೀಲರಾಗಿ ಸಾಗಲು ಸಾಧ್ಯವಿಲ್ಲ ಎಂದು ಹೇಳಲು ಅವಕಾಶ ಒದಗುತ್ತದೆ. ಆದ್ದರಿಂದ, "ಪ್ರಯತ್ನಿಸತಕ್ಕುದು" ಎಂಬ ಪದ ಈ ಸಂದರ್ಭದಲ್ಲಿ ಬಹಳ ಮುಖ್ಯವಾದುದೆಂದೂ ಮತ್ತು ಅದನ್ನು ತೆಗೆಯುವುದು ಬಹಳ ತಪ್ಪಾಗುತ್ತದೆಂದೂ ನನ್ನ ಮಿತ್ರ ತ್ಯಾಗಿ ತಿಳಿಯುತ್ತಾರೆಂದೂ ನಾನು ಭಾವಿಸುತ್ತೇನೆ.

● ○ ●

# ಏಕರೂಪ ಸಿವಿಲ್ ಸಂಹಿತೆಯನ್ನು ಕುರಿತು

ನನ್ನ ಮಿತ್ರರಾದ ಶ್ರೀ ಹುಸೇನ್ ಇಮಾಮ್‌ರವರು, 35ನೇ ಅನುಚ್ಛೇದದ ತಿದ್ದುಪಡಿಗಳನ್ನು ಬೆಂಬಲಿಸುತ್ತಾ, ನಮ್ಮ ದೇಶದಂಥ ವಿಶಾಲ ದೇಶಕ್ಕೆ ಕಾನೂನುಗಳ ಒಂದು ಏಕರೂಪ ಸಂಹಿತೆಯನ್ನು ಹೊಂದುವುದು ಸಾಧ್ಯವೇ ಮತ್ತು ಅಪೇಕ್ಷಣೀಯವೇ ಎಂದು ಕೇಳಿದರು. ನಿಜ ಹೇಳಬೇಕೆಂದರೆ, ಮಾನವ ಸಂಬಂಧದ ಪ್ರತಿಯೊಂದು ವಿಷಯವನ್ನು ಒಳಗೊಂಡಿರುವಂತೆ ನಮ್ಮ ದೇಶದಲ್ಲಿ ಏಕರೂಪ ಸಂಹಿತೆಯಿರುವ ಕಾರಣದಿಂದಾಗಿ, ಆ ಹೇಳಿಕೆಯ ಬಗ್ಗೆ ನನಗೆ ಆಶ್ಚರ್ಯವಾಯಿತು. ದೇಶಾದ್ಯಂತ ಪ್ರಚಲಿತವಿರುವ ಏಕರೂಪದ ಹಾಗೂ ಸಂಪೂರ್ಣ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯು ನಮ್ಮಲ್ಲಿದ್ದು, ಅದು ದಂಡ ಸಂಹಿತೆ ಹಾಗೂ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯಲ್ಲಿ ಒಳಗೊಂಡಿದೆ. ಸ್ವತ್ತಿಗೆ ಸಂಬಂಧಿಸಿದ ಹಾಗೂ ದೇಶಾದ್ಯಂತ ಪ್ರಚಲಿತವಿರುವ ಸ್ವತ್ತಿನ ವರ್ಗಾವಣೆ ಕಾನೂನು ನಮ್ಮಲ್ಲಿದೆ. ಅಲ್ಲದೇ ವರ್ಗಾವಣೆಯ ಲಿಖಿತಗಳ ಅಧಿನಿಯಮಗಳೂ ಸಹ ಇವೆ. ಈ ರೀತಿಯಲ್ಲಿ ನಮ್ಮ ದೇಶದಲ್ಲಿ ಕಾರ್ಯತಃ ಸಿವಿಲ್ ಸಂಹಿತೆಯಿದ್ದು, ಅವು ಏಕರೂಪವಾಗಿದ್ದು ಇಡೀ ದೇಶಕ್ಕೆ ಅನ್ವಯಿಸಬಹುದಾದ ಅಸಂಖ್ಯಾತ ಕಾನೂನುಗಳ ಬಗ್ಗೆ ನಾನು ಉದಾಹರಣೆಗಳನ್ನು ಕೊಡಬಲ್ಲೆ. ವಿವಾಹ ಮತ್ತು ಉತ್ತರಾಧಿಕಾರದ ಬಗೆಗಿನ ಸಿವಿಲ್ ಕಾನೂನುಗಳಿಗೆ ಮಾತ್ರ ಏಕರೂಪತೆಯನ್ನು ತರಲು ಇನ್ನು ಸಾಧ್ಯವಾಗಿಲ್ಲ. ಈ ಒಂದು ಚಿಕ್ಕ ಕ್ಷೇತ್ರದಲ್ಲಿ ನಾವು ಬದಲಾವಣೆಯನ್ನು ಇನ್ನೂ ತರಲು ಸಾಧ್ಯವಾಗಿಲ್ಲ. 35ನೇ ಅನುಚ್ಛೇದವು ಸಂವಿಧಾನದ ಒಂದು ಭಾಗವಾಗಿರಬೇಕೆಂದು ಅಪೇಕ್ಷಿಸುವವರ ಆಶಯವು ಸಹ ಬದಲಾವಣೆ ತರಬೇಕೆಂಬುದೇ ಆಗಿದೆ. ಆದ್ದರಿಂದ, ಏಕರೂಪ ಸಂಹಿತೆಯನ್ನು ತರುವ ಪ್ರಯತ್ನ ಮಾಡಬೇಕೆ, ಬೇಡವೇ ಎಂಬ ವಾದವೇ ಅನುಚಿತವಾಗಿದೆ. ಏಕೆಂದರೆ ಈ ದೇಶದಲ್ಲಿ ಕಾನೂನಿನ ಪ್ರತಿಯೊಂದು ಕ್ಷೇತ್ರವು ಏಕ ರೂಪ ಸಿವಿಲ್ ಸಂಹಿತೆಯಿಂದ ಒಳಗೊಂಡಿದೆ. ಆದ್ದರಿಂದ ಏಕರೂಪ ಸಂಹಿತೆಯನ್ನು ತರಲು ಸಾಧ್ಯವೇ ಎಂದು ಪ್ರಶ್ನಿಸುವುದೇ ತೀರಾ ವಿಳಂಬವಾಗಿದೆ. ನನ್ನ ಪ್ರಕಾರ ನಾವು ಈಗಾಗಲೇ ಅದನ್ನು ಸಾಧಿಸಿದ್ದೇವೆ.

ತಿದ್ದುಪಡಿಗಳನ್ನು ಕುರಿತು ಹೇಳಬೇಕೆಂದರೆ, ನಾನು ಈ ವಿಷಯದಲ್ಲಿ ಕೇವಲ ಎರಡು ವಿಷಯಗಳ ಬಗ್ಗೆ ಗಮನ ಹರಿಸಿದ್ದೇನೆ. ನಾನು ಮೊದಲು ಗಮನಿಸಿದ ವಿಷಯವೆಂದರೆ, ತಿದ್ದುಪಡಿಗಳನ್ನು ತರಲು ಇಚ್ಛಿಸುವ ಸದಸ್ಯರ ಪ್ರಕಾರ, ಈ ದೇಶಕ್ಕೆ ಸಂಬಂಧಿಸಿದಷ್ಟರಮಟ್ಟಿಗೆ, ಮುಸ್ಲಿಂ ಮತೀಯ ಸಂಬಂಧಿ

ಕಾನೂನು ಇಡೀ ಭಾರತದಲ್ಲಿ ಬದಲಾಯಿಸಲಾರದಂಥವು ಮತ್ತು ಏಕರೂಪದವು. ಈ ಹೇಳಿಕೆಯನ್ನು ನಾನು ಆಕ್ಷೇಪಿಸುತ್ತೇನೆ. ಈ ತಿದ್ದುಪಡಿಯ ಬಗ್ಗೆ ಮಾತನಾಡಿರುವ ನನ್ನ ಬಹುತೇಕ ಮಿತ್ರರು, 1935ರ ತನಕ ವಾಯುವ್ಯ ಸರಹದ್ದು ಪ್ರಾಂತವು ಶರೀಯತ್ ಕಾನೂನಿಗೆ ಒಳಪಟ್ಟಿರಲಿಲ್ಲವೆಂಬ ವಿಷಯವನ್ನು ಮರೆತಂತೆ ಕಾಣುತ್ತದೆ. ಉತ್ತರಾಧಿಕಾರಕ್ಕೆ ಸಂಬಂಧಿಸಿದ ಕಾನೂನು ಹಾಗೂ ಇತರ ಕಾನೂನುಗಳಿಗೆ ಸಂಬಂಧಿಸಿದಂತೆ, ಅದು ಹಿಂದೂ ಕಾನೂನನ್ನು ಅನುಸರಿಸಿತು. 1939ರ ತನಕ ಅದು ಹೀಗೆ ನಡೆದುಬಂದು, ವಾಯುವ್ಯ ಸರಹದ್ದು ಪ್ರಾಂತದ ಮುಸ್ಲಿಂಮರು ಹಿಂದೂ ಕಾನೂನನ್ನು ಅನ್ವಯಿಸುವುದನ್ನು ರದ್ದುಗೊಳಿಸಿ, ಅವರಿಗೆ ಶರೀಯತ್ ಕಾನೂನು ಅನ್ವಯಿಸುವಂತೆ ಮಾಡಲು ಈ ವಿಷಯದಲ್ಲಿ ಕೇಂದ್ರ ವಿಧಾನ ಮಂಡಲವು ಮಧ್ಯೆ ಪ್ರವೇಶಿಸಬೇಕಾಯಿತು, ಅಷ್ಟೇ ಅಲ್ಲ,

ವಾಯುವ್ಯ ಸರಹದ್ದು ಪ್ರಾಂತವಲ್ಲದೇ, 1937ರ ತನಕ, ಭಾರತದ ಉಳಿದ ಭಾಗಗಳಲ್ಲಿ, ಬೇರೆ ಬೇರೆ ಕಡೆಗಳಲ್ಲಿ, ಅಂದರೆ ಸಂಯುಕ್ತ ಪ್ರಾಂತಗಳು, ಕೇಂದ್ರೀಯ ಪ್ರಾಂತಗಳು ಮತ್ತು ಬಾಂಬೆ- ಇವುಗಳಲ್ಲಿ ಹೆಚ್ಚಿನ ಸಂಖ್ಯೆಯ ಮುಸ್ಲಿಮರು, ಉತ್ತರಾಧಿಕಾರ ಕಾನೂನಿಗೆ ಸಂಬಂಧಿಸಿದಂತೆ ಹಿಂದೂ ಕಾನೂನೇ ಅವರಿಗೆ ಅನ್ವಯವಾಗುತ್ತಿತ್ತೆಂಬುದನ್ನು ನನ್ನ ಮಾನ್ಯ ಸ್ನೇಹಿತರುಗಳು ಮರೆತು ಬಿಟ್ಟಿದ್ದಾರೆ. ಶರೀಯತ್ ಕಾನೂನನ್ನು ಪಾಲಿಸುತ್ತಿದ್ದ ಇತರ ಮುಸ್ಲಿಂರಿಗೆ ಸಂಬಂಧಿಸಿದಂತೆ, ಅವರನ್ನು ಏಕರೂಪದ ತಳಹದಿಯಲ್ಲಿ ತರುವ ಸಲುವಾಗಿ, 1937ರಲ್ಲಿ ವಿಧಾನ ಮಂಡಲವು ಮಧ್ಯೆ ಪ್ರವೇಶಿಸಬೇಕಾಯಿತು ಮತ್ತು ಭಾರತದ ಉಳಿದ ಭಾಗದಲ್ಲಿ ಶರೀಯತ್ ಕಾನೂನನ್ನು ಅನ್ವಯಿಸಿ ಶಾಸನವನ್ನು ಅನುಮೋದಿಸಬೇಕಾಯಿತು.

ಉತ್ತರ ಮಲಬಾರಿನಲ್ಲಿ ಮರುಮಕ್ಕತ್ತಾಯಮ್ ಕಾನೂನು ಕೇವಲ ಹಿಂದೂಗಳಿಗಲ್ಲದೆ, ಮುಸ್ಲಿಮರಿಗೂ ಅನ್ವಯವಾಗುತ್ತಿತ್ತೆಂಬುದರ ಬಗ್ಗೆ ನನ್ನ ಮಿತ್ರರಾದ ಶ್ರೀ ಕರುಣಾಕರನ್ ಮೆನನ್‌ರವರಿಂದ ನನಗೆ ತಿಳಿದು ಬಂದಿದೆ. ಮರುಮಕ್ಕತ್ತಾಯಮ್ ಕಾನೂನು ಪಿತೃಪ್ರಧಾನ ರೂಪದ ಕಾನೂನಾಗಿರದೇ ಮಾತೃ ಪ್ರಧಾನ ರೂಪದ ಕಾನೂನಾಗಿತ್ತೆಂಬುದನ್ನು ನಾವು ಮರೆಯಬಾರದು.

ಹೀಗಾಗಿ, ಇಲ್ಲಿಯವರೆಗೂ ಉತ್ತರ ಮಲಬಾರಿನಲ್ಲಿ ಮುಸ್ಲಿಂಮರು ಮರು ಮಕ್ಕತ್ತಾಯಮ್ ಕಾನೂನನ್ನು ಅನುಸರಿಸುತ್ತಿದ್ದರು. ಆದ್ದರಿಂದ ಮುಸ್ಲಿಮ್ ಕಾನೂನು ಬದಲಾಯಿಸಲಾರದಂಥದಾಗಿದ್ದು, ಅದನ್ನು ಅವರು ಪ್ರಾಚೀನ ಕಾಲದಿಂದ

ಅನುಸರಿಸುತ್ತಾ ಬಂದಿದ್ದಾರೆಂದು ಒಂದು ನಿಸ್ಸಂದಿಗ್ಧ ಹೇಳಿಕೆ ನೀಡುವುದರಿಂದ ಏನೂ ಪ್ರಯೋಜನವಿಲ್ಲ. ಹಾಗೆ ನೋಡಿದರೆ ಆ ಕಾನೂನು ಕೆಲವು ಪ್ರದೇಶಗಳಿಗೆ ಅನ್ವಯಿಸುತ್ತಿರಲಿಲ್ಲ. ಕೇವಲ ಹತ್ತು ವರ್ಷಗಳಿಂದೀಚೆಗೆ, ಅದು ಆ ಭಾಗಗಳಿಗೆ ಅನ್ವಯಿಸುವಂತೆ ಮಾಡಲಾಗಿದೆ. ಆದ್ದರಿಂದ ಧರ್ಮವನ್ನು ಗಣನೆಗೆ ತಾರದೇ, ಎಲ್ಲಾ ನಾಗರೀಕರಿಗೂ ಅನ್ವಯವಾಗುವಂಥ ಒಂದು ಸಿವಿಲ್ ಸಂಹಿತೆಯನ್ನು ರೂಪಿಸುವ ಉದ್ದೇಶದಿಂದ, ಹಿಂದೂ ಕಾನೂನಿನ ಕೆಲವು ಭಾಗಗಳನ್ನು ಅವು ಹಿಂದೂ ಕಾನೂನಿನಲ್ಲಿ ಒಳಗೊಂಡಿದೆ ಎಂಬ ಕಾರಣಕ್ಕಾಗಿ ಮಾತ್ರವಲ್ಲದೇ, ಅವು ಅತ್ಯಂತ ಸೂಕ್ತವೆಂದು ಕಂಡುಬಂದುದರಿಂದ ಅವುಗಳನ್ನು 35ನೇ ಅನುಚ್ಛೇದದಿಂದ ಹೊರಹೊಮ್ಮಿರುವ ಹೊಸ ಸಿವಿಲ್ ಸಂಹಿತೆಯಲ್ಲಿ ಸೇರಿಸುವುದು ಅವಶ್ಯಕವೆಂದು ಕಂಡು ಬಂದಿತು. ಆದ್ದರಿಂದ ಮುಸ್ಲಿಂ ಸಮುದಾಯದ ಜನರ ಭಾವನೆಗಳಿಗೆ ಹಾನಿಯುಂಟು ಮಾಡಿರುವರೆಂದು ಯಾರೇ ಮುಸ್ಲಿಮ್‌ನು ಹೇಳಲು ಸಾಧ್ಯವಿಲ್ಲವೆಂದು ನಾನು ನಂಬಿದ್ದೇನೆ.

ನನ್ನ ಎರಡನೇ ಅಭಿಪ್ರಾಯವೆಂದರೆ, ಅವರಿಗೆ ಭರವಸೆ ನೀಡುವುದು. ಈ ವಿಷಯದಲ್ಲಿ ಅವರ ಭಾವನೆಗಳನ್ನು ನಾನು ಚೆನ್ನಾಗಿ ಅರಿತಿದ್ದೇನೆ. ಆದರೆ ಒಂದು ಸಿವಿಲ್ ಸಂಹಿತೆಯನ್ನು ಒದಗಿಸುವುದಕ್ಕೆ ರಾಜ್ಯವು ಪ್ರಯತ್ನಿಸಬೇಕೆಂಬುದನ್ನು ಮಾತ್ರ 35ನೇ ಅನುಚ್ಛೇದವು ಪ್ರಸ್ತಾಪಿಸುತ್ತದೆಯೆಂಬುದರ ಬಗ್ಗೆ ಅವರು ಅತಿ ರಂಜಿತ ಅರ್ಥ ಕಲ್ಪಿಸಿದ್ದಾರೆಂದು ನಾನು ಭಾವಿಸುತ್ತೇನೆ. ಸಂಹಿತೆಯನ್ನು ರಚಿಸಿದ ತರುವಾಯ, ರಾಜ್ಯವು, ಎಲ್ಲಾ ನಾಗರೀಕರ ಮೇಲೆ, ಅವರು ಕೇವಲ ನಾಗರಿಕತೆಯ ಕಾರಣಕ್ಕಾಗಿ ಮಾತ್ರ, ಅದನ್ನು ಅವರ ಮೇಲೆ ಹೇರಲಾಗುವುದೆಂದು ಅದರಲ್ಲಿ ಎಲ್ಲೂ ಹೇಳಿಲ್ಲ. ಭವಿಷ್ಯಸಂಸತ್, ಪ್ರಾರಂಭದ ಹಂತವೆಂಬಂತೆ, ತಾವು ಅದಕ್ಕೆ ಬದ್ಧರಾಗಲು ತಯಾರಿದ್ದೇವೆಂದು ಘೋಷಿಸುವಂಥ ವ್ಯಕ್ತಿಗಳಿಗೆ ಮಾತ್ರ ಸಂಹಿತೆಯು ಅನ್ವಯಿಸತಕ್ಕದ್ದೆಂದು ಒಂದು ಉಪಬಂಧ ಕಲ್ಪಿಸುವುದು ಸಹ ಸಾಧ್ಯವಿದೆ. ಹೀಗಾಗಿ ಪ್ರಾರಂಭಿಕ ಹಂತದಲ್ಲಿ ಸಂಹಿತೆಯ ಅನ್ವಯವು ಸ್ವೇಚ್ಛೆಯದಾಗಿರುತ್ತದೆ. ಸಂಸತ್ ಅಂಥ ಯಾವುದೇ ವಿಧಾನದಿಂದ ಇದನ್ನು ಬಗೆಹರಿಸಬಹುದು. ಇದೇನು ವಿನೂತನ ವಿಷಯವಲ್ಲ, 1937 ರಲ್ಲಿ ಶರೀಯತ್ ಕಾನೂನುಗಳು ವಾಯುವ್ಯ ಸರಹದ್ದು ಪ್ರಾಂತವನ್ನು ಹೊರತುಪಡಿಸಿ ಇತರ ಪ್ರದೇಶಗಳಿಗೆ ಅನ್ವಯಿಸುವಾಗ ಈ ಮಾರ್ಗವನ್ನು ಅನುಸರಿಸಲಾಗಿತ್ತು. ಮುಸ್ಲಿಮರಿಗೆ ಅನ್ವಯವಾಗುವ ಶರೀಯತ್ ಕಾನೂನು ಇದ್ದು, ಶರೀಯತ್ ಕಾನೂನಿನಿಂದ ಬದ್ಧರಾಗಲೂ ಇಚ್ಛಿಸುವ

ಮುಸ್ಲಿಮ್‌ರನ್ನು ರಾಜ್ಯದ ಒಂದು ಕಚೇರಿಗೆ ತೆರಳಿ ತಾನು ಶರೀಯತ್ ಕಾನೂನಿಗೆ ಬದ್ಧನಾಗಿರಲು ಇಚ್ಛಿಸುತ್ತೇನೆಂಬ ಒಂದು ಘೋಷಣೆಯನ್ನು ನೀಡಿದ ತರುವಾಯ, ಅವನು ಹಾಗೂ ಅವನ ಉತ್ತರಾಧಿಕಾರಿಗಳು ಈ ಕಾನೂನಿಗೆ ಬದ್ಧರಾಗುತ್ತಾರೆಂದು ಕಾನೂನು ಹೇಳಿದೆ. ಸಂಸತ್ತಿಗೆ ಆ ರೀತಿಯ ಒಂದು ಉಪಬಂಧವನ್ನು ಕಲ್ಪಿಸುವುದು ಖಂಡಿತ ಸಾಧ್ಯ. ಹೀಗಾಗಿ ನನ್ನ ಮಿತ್ರರು ಇಲ್ಲಿ ವ್ಯಕ್ತಪಡಿಸಿರುವ ಭಯವು ಸಂಪೂರ್ಣವಾಗಿ ನಿರಾಧಾರವಾಗಿದೆಂದು ನಾನು ಹೇಳಬಯಸುತ್ತೇನೆ.

● ○ ●

# ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದನ್ನು ಕುರಿತು

"39ನೇ ಅನುಚ್ಛೇದ' ದ ನಂತರ ಈ ಮುಂದಿನ ಅನುಚ್ಛೇದವನ್ನು ಸೇರಿಸತಕ್ಕದ್ದು, ಎಂದರೆ:

"39-ಎ ಈ ಸಂವಿಧಾನವು ಪ್ರಾರಂಭವಾದ ಮೂರು ವರ್ಷಗಳ ಅವಧಿಯೊಳಗೆ, ರಾಜ್ಯದ ಲೋಕ ಸೇವೆಗಳಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಲಾಗುವುದೆಂಬುದನ್ನು ಸುನಿಶ್ಚಯಗೊಳಿಸಲು ರಾಜ್ಯವು ಕ್ರಮ ಕೈಗೊಳ್ಳತಕ್ಕದ್ದು."

ನಾನು ಮಂಡಿಸಿದ ತಿದ್ದುಪಡಿಯನ್ನು ಬೆಂಬಲಿಸುತ್ತಾ ಯಾವುದೇ ಸುಧೀರ್ಘವಾದ ಹೇಳಿಕೆಯನ್ನು ನೀಡುವುದು ಅವಶ್ಯವೆಂದು ನನಗೆ ತೋರುವುದಿಲ್ಲ. ಬಹಳ ಹಿಂದಿನಿಂದಲೇ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಬೇಕೆಂಬ ಬೇಡಿಕೆಯು ದೇಶದ ಆಡಳಿತದಲ್ಲಿ ಕಾಂಗ್ರೆಸ್ ಸ್ಥಾಪನೆಯಾದ ಕಾಲದಿಂದಲೂ ಮುಂದುವರೆದುಕೊಂಡು ಬಂದಿದೆ. ದುರಾದೃಷ್ಟದಿಂದ ಬ್ರಿಟಿಷ್ ಸರ್ಕಾರವು ಈ ನಿರ್ದಿಷ್ಟ ತತ್ವವನ್ನು ದೇಶದ ಆಡಳಿತದೊಳಗೆ ಜಾರಿಗೊಳಿಸಬೇಕೆಂಬ ಒತ್ತಾಯಿಸುವ ಕಾಂಗ್ರೆಸ್ ಗೊತ್ತುವಳಿಯನ್ನು ಕಾರ್ಯಗತಗೊಳಿಸಲಿಲ್ಲ. ಈ ಸುಧಾರಣೆಯನ್ನು ಕಾರ್ಯರೂಪಕ್ಕೆ ತರುವ ಕಾಲಾವಕಾಶ ಒದಗಿದೆ ಎಂದು ನಾವು ಭಾವಿಸುತ್ತೇವೆ. ಈ ಸುಧಾರಣೆಗಳನ್ನು ಜಾರಿಗೊಳಿಸುವಾಗ ಕೆಲವು ತೊಂದರೆಗಳು ಎದುರಾಗಬಹುದೆಂದು ನಾವು ತಿಳಿದಿದ್ದೇವೆ. ಪರಿಣಾಮ ಸ್ವರೂಪವಾಗಿ, ತಿದ್ದುಪಡಿಯಲ್ಲಿ ಕಠಿಣವೆಂದು ಕಂಡು ಬರಬಹುದಾದಂಥ ಎರಡು ವಿಶಿಷ್ಟ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಂಡಿದೆ. ಒಂದನೆಯದಾಗಿ ಇದನ್ನು ಮೂಲಭೂತ ತತ್ವದ ಒಂದು ವಿಷಯವನ್ನಾಗಿ ಮಾಡಲಿಲ್ಲ, ಏಕೆಂದರೆ ಒಂದು ವೇಳೆ ಅದನ್ನು ಮೂಲಭೂತ ತತ್ವವನ್ನಾಗಿ ಮಾಡಿದ್ದರೆ, ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಲು ಸಂವಿಧಾನದಲ್ಲಿ ಅನುಮೋದನೆ ದೊರೆತ ತತ್ಕ್ಷಣವೇ ಹಾಗೆ ಮಾಡುವುದು ಸಂಪೂರ್ಣವಾಗಿ ಅನಿವಾರ್ಯವಾಗುತ್ತಿತ್ತು. ಆದ್ದರಿಂದ ನಾವು ಈ ವಿಷಯವನ್ನು ಉದ್ದೇಶಪೂರ್ವಕವಾಗಿ ನಿರ್ದೇಶಕ ತತ್ವಗಳನ್ನು ಕುರಿತಾದ ಅಧ್ಯಾಯದಲ್ಲಿ ತಂದಿದ್ದೇವೆ ಮತ್ತು ಅದರಲ್ಲೂ ಇಂಥ ವಿಷಯದಲ್ಲಿ ಕಾಲಹರಣವೆಂದು ಕರೆಯಬಹುದಾದುದಕ್ಕೆ ಆಸ್ಪದವಿರದಂತೆ ಈ ಸುಧಾರಣೆಯನ್ನು ಮೂರು ವರ್ಷಗಳ ಅವಧಿಯೊಳಗೆ ತರತಕ್ಕದ್ದೆಂದು ಉಪಬಂಧ ಕಲ್ಪಿಸಿದ್ದೇವೆ.

● ○ ●

# ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶವನ್ನು ಕುರಿತು

ಈ ಸದನದ ಅನೇಕ ವ್ಯಕ್ತಿಗಳ ಅಭಿಪ್ರಾಯದಲ್ಲಿ, ಪ್ರಾಂತಗಳ ಮತ್ತು ದೇಶಿಯ ಸಂಸ್ಥಾನಗಳ ಸ್ಥಳೀಯ ವ್ಯಾಪ್ತಿಯನ್ನು ಗಣನೆಗೆ ತೆಗೆದುಕೊಳ್ಳದೆ, ಭಾರತಾದ್ಯಂತ ನಾವು ಸಾಮಾನ್ಯ ನಾಗರೀಕತ್ವವನ್ನು ಹೊಂದಿರುವುದರಿಂದ, ಒಂದು ನಿರ್ದಿಷ್ಟ ರಾಜ್ಯದಲ್ಲಿ ಒಂದು ನಿರ್ದಿಷ್ಟ ಹುದ್ದೆಯನ್ನು ಹೊಂದಲು ನಿವಾಸದ ಅಗತ್ಯವಿರುವುದಿಲ್ಲವೆಂಬುದು ಅನುಷಂಗಿಕ ವಿಷಯವೆಂಬುದಾಗಿದೆ. ಏಕೆಂದರೆ ನಿವಾಸವು ಒಂದು ಅರ್ಹತೆಯನ್ನಾಗಿ ನೀವು ಪರಿಗಣಿಸುವಷ್ಟರಮಟ್ಟಿಗೆ, ನಾವು ಸಂವಿಧಾನದಿಂದ ಸ್ಥಾಪಿಸಿದ ಅಥವಾ ಈ ಸಂವಿಧಾನದಿಂದ ಸ್ಥಾಪಿಸಬೇಕೆಂದು ಪ್ರಸ್ತಾವಿಸಿರುವ ಸಾಮಾನ್ಯ ನಾಗರಿಕತ್ವದ ಮೌಲ್ಯವನ್ನು ಊನಗೊಳಿಸುತ್ತೇವೆ. ಆದ್ದರಿಂದ ರಾಜ್ಯಾಧೀನ ಸೇವೆಗಳಲ್ಲಿ ನೇಮಕಾತಿ ಹೊಂದಲು ನಿವಾಸವನ್ನು ಒಂದು ಅರ್ಹತೆಯನ್ನಾಗಿ ಮಾಡಬಾರದೆಂಬ ವಾದವು ನನ್ನ ವಿವೇಚನಾನುಸಾರ ಖಂಡಿತ ಸಿಂಧುವಾಗಿದೆ ಹಾಗೂ ಇದು ಖಂಡಿತವಾಗಿ ನ್ಯಾಯ ಸಮ್ಮತವಾದುದಾಗಿದೆ. ಅದೇ ಸಮಯದಲ್ಲಿ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಹಾರುವ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಯಾವುದೇ ನಿರ್ದಿಷ್ಟ ಗುರಿಯಿಲ್ಲದೆ ಹಾದುಹೋಗುವ ಹಕ್ಕಿಗಳಂತೆ, ನಿರ್ದಿಷ್ಟ ಪ್ರಾಂತದೊಂದಿಗೆ ಯಾವುದೇ ಸಂಬಂಧವಿಲ್ಲದೆ, ಸುಮ್ಮನೆ ಹಾಗೆ ಒಂದು ಹುದ್ದೆಗೆ ಅರ್ಜಿ ಸಲ್ಲಿಸಿ, ಉತ್ತಮವಾದ ಹುದ್ದೆಯನ್ನು ಬಗಲಿಗೆ ಹಾಕಿಕೊಂಡು ಹೊರಟುಹೋಗುವ ವ್ಯಕ್ತಿಗಳಿಗೆ ಅವಕಾಶ ನೀಡಬಾರದೆಂಬುದನ್ನು ನಾವು ಗ್ರಹಿಸಬೇಕು. ಆದ್ದರಿಂದ ಕೆಲವು ಪರಿಮಿತಿಗಳು ಅವಶ್ಯವಾಗುತ್ತವೆ. ಈ ವಿಷಯದ ಬಗ್ಗೆ ತನಿಖೆ ನಡೆಸಿದಾಗ, ಈಗಾಗಲೇ ಅನೇಕ ಪ್ರಾಂತಗಳಲ್ಲಿ ಪ್ರಾಂತೀಯ ಸರ್ಕಾರವು ಒಂದು ನಿರ್ದಿಷ್ಟ ಪ್ರಾಂತದಲ್ಲಿ ಹುದ್ದೆಗಾಗಿ, ನಿವಾಸದ ಸ್ವಲ್ಪ ಅವಧಿಯನ್ನು ಅರ್ಹತೆಯೆಂದು ಗೊತ್ತುಪಡಿಸಿ ನಿಯಮಗಳನ್ನು ರಚಿಸಿದೆ ಎಂದು ತಿಳಿದು ಬಂದಿದೆ. ಆದ್ದರಿಂದ, ಒಂದು ಸಾಮಾನ್ಯ ನಿಯಮದಂತೆ, ನಿವಾಸವನ್ನು ಒಂದು ಅರ್ಹತೆಯೆಂದು ಮಾಡಬಾರದೆಂದು ಇದ್ದರೂ, ಅದಕ್ಕೆ ಕೆಲವು ಅಪವಾದವಿರಬಹುದೆಂಬ ತಿದ್ದುಪಡಿಯಲ್ಲಿನ ಪ್ರಸ್ತಾವವು ಸಾಮಾನ್ಯ ರೂಢಿಗೆ ಹೊರತಾಗೇನು ಇಲ್ಲ ಈಗಾಗಲೇ ಅನೇಕ ಪ್ರಾಂತಗಳಲ್ಲಿ ಆಚರಣೆಗೆ ಬಂದಿರುವ ರೂಢಿಯನ್ನು ನಾವು ಅನುಸರಿಸುತ್ತಿದ್ದೇವೆ ಅಷ್ಟೆ. ಅದಾಗ್ಯೂ ವಿವಿಧ ಪ್ರಾಂತಗಳು ಹುದ್ದೆಗೆ ನಿವಾಸದ ಕೆಲವು ಅವಧಿಯು ಅರ್ಹತಾ ಅವಧಿಯೆಂದು ನಿಗದಿ ಪಡಿಸುತ್ತಿರುವಾಗ, ಈ

ಅವಧಿಯು ಸಾಕಷ್ಟು ವ್ಯತ್ಯಾಸಗೊಳ್ಳುತ್ತಿದ್ದವೆಂಬುದು ನಮಗೆ ಕಂಡುಬಂದಿದೆ. ಕೆಲವು ಪ್ರಾಂತಗಳು ವ್ಯಕ್ತಿಯು ವಾಸ್ತವವಾಗಿ ಅಧಿವಾಸಿಯಾಗಿರಬೇಕೆಂದು ಹೇಳಿದ್ದವು. ಇದರ ಅರ್ಥವೇನೊ ತಿಳಿಯಲಿಲ್ಲ, ಸ್ವಲ್ಪ ಪ್ರಾಂತಗಳು ಹತ್ತು ವರ್ಷಗಳೆಂದು ನಿಗದಿಪಡಿಸಿದರೆ ಮತ್ತೆ ಕೆಲವು ಏಳು ವರ್ಷವೆಂದು, ಮುಂತಾಗಿ ನಿಗದಿಪಡಿಸಿವೆ. ಆದ್ದರಿಂದ ಅರ್ಹತಾ ಪರೀಕ್ಷೆಯೊಂದು ಅವಧಿಯನ್ನು ನಿಗದಿಪಡಿಸುವುದು ಅಪೇಕ್ಷಣೀಯವಾಗಿರಬಹುದಾದರೂ, ಅರ್ಹತಾ ಷರತ್ತು, ಭಾರತಾದ್ಯಂತ ಏಕರೂಪವಾಗಿರಬೇಕೆಂದು ಭಾವಿಸಲಾಯಿತು. ಪರಿಣಾಮ ಸ್ವರೂಪವಾಗಿ, ಈ ಉದ್ದೇಶವು, ಅಂದರೆ, ಅರ್ಹತಾನಿವಾಸಾವಧಿಯು ಏಕರೂಪವಾಗಿರಬೇಕೆಂಬ ಉದ್ದೇಶವು ಈಡೇರಬೇಕಾದರೆ, ಸ್ಥಳೀಯ ನಿಕಾಯಗಳಿಗೆ, ಅವು ಪ್ರಾಂತಗಳಾಗಿರಲಿ ಅಥವಾ ಸಂಸ್ಥಾನಗಳಾಗಿರಲಿ, ಅಧಿಕಾರ ನೀಡದೆ, ಸಂಸತ್ತಿಗೆ ಅಧಿಕಾರವನ್ನು ನೀಡುವುದರಿಂದ ಮಾತ್ರ ಅದು ಈಡೇರುವುದು ಸಾಧ್ಯ. ನಿವಾಸವನ್ನು ಅರ್ಹತೆಯನ್ನಾಗಿ ಮಾಡಿರುವುದು ಈ ತಿದ್ದುಪಡಿಯ ಒಳಗಿನ ಉದ್ದೇಶವಾಗಿದೆ.

ಮಾನ್ಯ ಅಧ್ಯಕ್ಷರೇ, ಈ ಸದನದ ಸದಸ್ಯರನ್ನು ಕಳವಳಗೊಳಿಸುತ್ತಿರುವ ಇನ್ನೊಂದು ಪ್ರಶ್ನೆ ಅಂದರೆ, 10ನೇ ಅನುಚ್ಛೇದ (3)ನೇ ಖಂಡದಲ್ಲಿ 'ಹಿಂದುಳಿದ' ಎಂಬ ಶಬ್ದದ ಪ್ರಯೋಗ. ಈ ಪ್ರಶ್ನೆಯನ್ನು ಎತ್ತಿಕೊಂಡರೆ, ಈ ನಿರ್ದಿಷ್ಟ ಖಂಡದಲ್ಲಿ "ಹಿಂದುಳಿದ" ಶಬ್ದದ ಪ್ರಯೋಗದ ಯಥಾರ್ಥ ಅರ್ಥ, ಅದರ ಮಹತ್ವ ಹಾಗೂ ಆವಶ್ಯಕತೆಯನ್ನು ಸದಸ್ಯರು ಅರ್ಥಮಾಡಿಕೊಳ್ಳುವ ಸ್ಥಿತಿಗೆ ಬರಲು ನಾನು ಕೆಲವು ಸಾಧಾರಣ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ನನ್ನ ಭಾಷಣವನ್ನು ಪ್ರಾರಂಭಿಸಲು ಇಚ್ಛಿಸುತ್ತೇನೆ. ಈ ವಿಷಯದ ಮೇಲೆ ಸದಸ್ಯರು ಯೋಚಿಸಿ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರೆ, ಎಲ್ಲರೂ ಒಪ್ಪಿಕೊಳ್ಳಬಹುದಾದಂಥ ಒಂದು ಕಾರ್ಯಸಾಧ್ಯವಾದ ಪ್ರಸ್ತಾವವನ್ನು ರೂಪಿಸಬೇಕಾದರೆ, ಮೂರು ಅಂಶಗಳ ಮೇಲೆ ನಾವು ಹೊಂದಾಣಿಕೆ ಮಾಡಿಕೊಳ್ಳುವುದು ಅವಶ್ಯವೆಂದು ಅವರಿಗೆ ಕಂಡುಬರುತ್ತದೆ. ಈ ಮೂರು ಅಂಶಗಳಲ್ಲಿ ಮೊದಲ ಅಂಶವೆಂದರೆ, ಎಲ್ಲಾ ನಾಗರಿಕರಿಗೂ ಸಮಾನವಾದ ಅವಕಾಶವಿರಬೇಕು ಒಂದು ನಿರ್ದಿಷ್ಟ ಹುದ್ದೆಗೆ ಅರ್ಹನಾದ ವ್ಯಕ್ತಿಯು, ಆ ಹುದ್ದೆಗೆ ಅರ್ಜಿಸಲ್ಲಿಸಲು, ಪರೀಕ್ಷೆಗೆ ಕುಳಿತುಕೊಳ್ಳಲು ಹಾಗೂ • ಅವನ ಅರ್ಹತೆಯನ್ನು ಪರೀಕ್ಷೆಗೊಳಪಡಿಸಲು ಸ್ವತಂತ್ರವಾಗಿರಬೇಕು. ಇದರಿಂದಾಗಿ ಅವನು ಆ ಹುದ್ದೆಗೆ ಯೋಗ್ಯನೇ ಅಲ್ಲವೆ ಎಂಬುದು ನಿರ್ಧಾರವಾಗುತ್ತದೆ. ಇದಕ್ಕೆ

ಯಾವುದೇ ಪರಿಮಿತಿಗಳಿರಬಾರದು. ಅವಕಾಶದ ಸಮಾನತೆಯ ತತ್ವದ ಪ್ರವರ್ತನೆಯಲ್ಲಿ ಯಾವುದೇ ಅಡೆತಡೆಗಳಿರಬಾರದೆಂಬುದು ಈ ಸದನದ ಅನೇಕ ಸದಸ್ಯರ ಅಭಿಪ್ರಾಯವಾಗಿದೆ. ಈ ಸದನದ ಒಂದು ಭಾಗದ ಸದಸ್ಯರು ಹಂಚಿಕೊಂಡಿರುವ ಎರಡನೇ ಅಭಿಪ್ರಾಯ ಹೀಗಿದೆ. ಈ ತತ್ವವು ಕಾರ್ಯಗತಗೊಳ್ಳಬೇಕಾದರೆ - ಅವರ ವಿವೇಚನಾನುಸಾರ, ಇದು ಸಂಪೂರ್ಣವಾಗಿ ಕಾರ್ಯಗತಗೊಳ್ಳ ಬೇಕಾಗಿದೆ - ಯಾವುದೇ ವರ್ಗ ಅಥವಾ ಸಮುದಾಯಕ್ಕೆ ಯಾವುದೇ ಮೀಸಲಾತಿ ಇರಬಾರದು. ಎಲ್ಲಾ ನಾಗರಿಕರಿಗೂ, ಅವರು ಅರ್ಹರಾಗಿದ್ದರೆ, ಲೋಕ ಸೇವೆಗಳು ಸಂಬಂಧಿಸುವಷ್ಟರಮಟ್ಟಿಗೆ, ಅವರಿಗೆ ಸಮಾನತೆಯ ಅವಕಾಶವಿರಬೇಕು. ಅಲ್ಲದೇ ಅವಕಾಶದ ಸಮಾನತೆ ಇರತಕ್ಕದೆಂಬ ತತ್ವವನ್ನು ಹೊಂದಿರುವುದು ಸೈದ್ಧಾಂತಿಕವಾಗಿ ಒಳ್ಳೆಯದಾದರೂ, ಇದುವರೆಗೂ ಆಡಳಿತದಿಂದ ಹೊರಗುಳಿದಿರುವ ಕೆಲವು ಸಮುದಾಯಗಳಿಗೆ ಆಡಳಿತದಲ್ಲಿ ಪ್ರವೇಶಕ್ಕಾಗಿ ಉಪಬಂಧ ಕಲ್ಪಿಸಬೇಕೆಂಬುದು ಬಹು ಸಂಖ್ಯೆಯ ಸದಸ್ಯರ ಅಭಿಪ್ರಾಯವಾಗಿದೆ.

ನಾನು ಹೇಳಿದಂತೆ, ಕರಡು ಶಾಸನ ರಚನಾ ಸಮಿತಿಯು ಈ ಮೂರು ಅಭಿಪ್ರಾಯಗಳನ್ನು ಸಮನ್ವಯಗೊಳಿಸಲು ಒಂದು ಸೂತ್ರವನ್ನು ರೂಪಿಸಬೇಕಾಗಿದೆ. ಮೊದಲನೆಯದಾಗಿ ಅವಕಾಶದಲ್ಲಿ ಸಮಾನತೆ ಇರತಕ್ಕದ್ದು. ಎರಡನೆಯದಾಗಿ, ಆಡಳಿತ ವ್ಯವಸ್ಥೆಯ ಬಗ್ಗೆ ಏನೂ ಗೊತ್ತಿಲ್ಲದ ಕೆಲವು ಸಮುದಾಯಗಳ ಪರವಾಗಿ ಮೀಸಲಾತಿ ಇರತಕ್ಕದ್ದು. ನಾವು ಹೊಂದಾಣಿಕೆ ಮಾಡಿಕೊಳ್ಳಬೇಕಾದ ಈ ಮೂರು ತತ್ವಗಳನ್ನು ಮಾನ್ಯ ಸದಸ್ಯರು, ಮನಗಂಡರೆ, ಆಗ ಸಂವಿಧಾನದ 10ನೇ ಅನುಚ್ಛೇದ (3)ನೇ ಉಪ-ಖಂಡದಲ್ಲಿ ಒಳಗೊಂಡಿರುವ ಸೂತ್ರಕ್ಕಿಂತ ಬೇರೆ ಯಾವುದೇ ಹೆಚ್ಚಿನ ಸೂತ್ರವನ್ನು ರೂಪಿಸಲಾಗುವುದಿಲ್ಲವೆಂಬುದು ಅವರಿಗೆ ಕಂಡುಬರುತ್ತದೆ. ಇದು ಒಂದು ಸಾಮಾನ್ಯ ತತ್ವ. ಅದೇ ಸಮಯದಲ್ಲಿ, ನಾನು ಹಿಂದೆ ಹೇಳಿದಂತೆ, ಕೆಲವು ಸಮುದಾಯಗಳ ಬೇಡಿಕೆಯೊಂದಿಗೆ ಈ ಸೂತ್ರವನ್ನು ನಾವು ಸಮನ್ವಯಗೊಳಿಸಬೇಕಾಗಿದೆ. ಅಂದರೆ ಆಡಳಿತವು, ಯಾವುದೇ ಐತಿಹಾಸಿಕ ಕಾರಣಗಳಿಂದಾಗಿ, ಒಂದೇ ಅಥವಾ ಕೆಲವು ಸಮುದಾಯಗಳಿಂದ ಮಾತ್ರ ನಿಯಂತ್ರಿತಗೊಳ್ಳುತ್ತಿದ್ದ ಪರಿಸ್ಥಿತಿಯು ಮುಂದುವರೆಯಬಾರದು. ಮತ್ತು ಇತರ ಸಮುದಾಯಗಳಿಗೂ ಲೋಕ ಸೇವೆಗಳಲ್ಲಿ ಪ್ರವೇಶ ಪಡೆಯುವ ಅವಕಾಶವಿರಬೇಕು. ಉದಾಹರಣೆಗಾಗಿ, ಒಂದು ವೇಳೆ ಲೋಕಸೇವೆಗಳಲ್ಲಿ ಇದುವರೆಗೂ

ನಿಯೋಜಿತಗೊಂಡಿರದ ಅಂಥ ಸಮುದಾಯಗಳ ಬೇಡಿಕೆಯನ್ನು ಪೂರ್ಣಪ್ರಮಾಣದಲ್ಲಿ ಒಪ್ಪಿಕೊಂಡರೆ, ನಿಜವಾಗಿಯೂ ಆಗುವ ಪರಿಣಾಮವೇಂದರೆ, ನಾವು, ನಾವೆಲ್ಲರೂ ಒಪ್ಪಿಕೊಂಡ ಮೊದಲನೇ ಪ್ರಸ್ತಾವವನ್ನು ಅಂದರೆ, ಸಮಾನ ಅವಕಾಶವಿರಬೇಕೆಂಬ ಪ್ರಸ್ತಾವವನ್ನು ಪೂರ್ಣವಾಗಿ ನಾಶಗೊಳಿಸುತ್ತೇವೆ. ನಾನು ಒಂದು ದೃಷ್ಟಾಂತ ನೀಡಬಯಸುತ್ತೇನೆ. ಮೀಸಲಾತಿಯನ್ನು ಒಂದು ಸಮುದಾಯ ಅಥವಾ ಸಮುದಾಯಗಳ ಗುಂಪಿಗೆ ಮಾಡಿದರೆ, ರಾಜ್ಯದ ಅಧೀನದಲ್ಲಿರುವ ಒಟ್ಟು ಹುದ್ದೆಗಳಲ್ಲಿ ಶೇ. 70ರಷ್ಟನ್ನು ಅವರಿಗೆ ಮೀಸಲುಗೊಳಿಸಿದರೆ, ಕೇವಲ 30 ರಷ್ಟು ಹುದ್ದೆಗಳನ್ನು ಮೀಸಲಾತಿಯಲ್ಲದ ಹುದ್ದೆಗಳೆಂದು ಉಳಿಸಿಕೊಳ್ಳಬೇಕಾಗುತ್ತದೆ. ಸಾಮಾನ್ಯ ಹುದ್ದೆಗಳಿಗೆ ಸ್ಪರ್ಧೆಯಲ್ಲಿ ಶೇ. 30ರಷ್ಟರ ಮೀಸಲಾತಿಯು, ಸಮಾನ ಅವಕಾಶವಿರಬೇಕೆಂಬ ಮೊದಲನೇ ತತ್ವವನ್ನು ಜಾರಿಗೊಳಿಸುವ ದೃಷ್ಟಿಯಲ್ಲಿ, ಸಮಾಧಾನಕರವಾಗಿರುತ್ತದೆಯೆಂದು ಯಾರಾದರೂ ಹೇಳಬಹುದೆ? ನನ್ನ ವಿವೇಚನಾನುಸಾರ, ಅದು ತೃಪ್ತಿಕರವಾಗಿರುವುದಿಲ್ಲ. ಆದ್ದರಿಂದ 10ನೇ ಅನುಚ್ಛೇದ (1)ನೇ ಉಪ-ಖಂಡದೊಂದಿಗೆ ಮೀಸಲಾತಿಯು ಸುಸಂಗತವಾಗಬೇಕಾದರೆ, ಸ್ಥಾನಗಳ ಮೀಸಲಾತಿಯನ್ನು, ಸ್ಥಾನಗಳ ಮಿತಸಂಖ್ಯೆಗೆ ಸೀಮಿತಗೊಳಿಸಬೇಕಾಗುತ್ತದೆ. ಹಾಗಾದರೆ ಮಾತ್ರ ಮೊದಲನೇ ತತ್ವವು ಸಂವಿಧಾನದಲ್ಲಿ ಒಂದು ಸ್ಥಾನವನ್ನು ದೊರಕಿಸಿಕೊಳ್ಳಬಹುದು ಮತ್ತು ಅದು ಕಾರ್ಯಾಚರಣೆಯಲ್ಲಿ ಪರಿಣಾಮಕಾರಿಯಾಗಬಹುದು.

ಸನ್ಮಾನ್ಯ ಸದಸ್ಯರು ನಾವು ಎರಡು ವಿಷಯಗಳಿಗೆ, ಅಂದರೆ, ಸಮಾನ ಅವಕಾಶಗಳ ತತ್ವ ಹಾಗೂ ರಾಜ್ಯದಲ್ಲಿ ಇದುವರೆಗೂ ಪ್ರಾತಿನಿಧ್ಯ ಪಡೆಯದ ಸಮುದಾಯಗಳ ಬೇಡಿಕೆಯನ್ನು ತೃಪ್ತಿಗೊಳಿಸುವುದು - ಇವುಗಳಿಗೆ ರಕ್ಷಣೆ ನೀಡಬೇಕಾಗುತ್ತದೆ ಎಂದು ಅರ್ಥಮಾಡಿಕೊಂಡರೆ, ಆಗ ಅವರು "ಹಿಂದುಳಿದ" ಎಂಬ ಮಿತಿಗೊಳಿಸುವ ಪದಪ್ರಯೋಗವನ್ನು ಉಪಯೋಗಿಸಿದ ಹೊರತು ಮೀಸಲಾತಿಯ ಪರವಾಗಿ ನಿಯಮದಲ್ಲಿ ಮಾಡಿದ ಅಪವಾದವೇ ಅಂತಿಮವಾಗಿ ಪೂರಾ ನಿಯಮವನ್ನು ನುಂಗಿಹಾಕುತ್ತದೆಯೆಂಬುದನ್ನು ಒಪ್ಪುತ್ತಾರೆಂದು ನಾನು ತಿಳಿಯುತ್ತೇನೆ. ಆಗ ನಿಯಮದ ಲವಲೇಶವೂ ಉಳಿಯುವುದಿಲ್ಲ. ಅದರಿಂದಾಗಿಯೇ ಕರಡು ಶಾಸನ ರಚನಾ ಸಮಿತಿಯು "ಹಿಂದುಳಿದ" ಎಂಬ ಶಬ್ದವನ್ನು ಸೇರಿಸುವ ಹೊಣೆಯನ್ನು ತಾನೇ ಹೊತ್ತಿಕೊಂಡಿತು ಎಂಬುದಕ್ಕೆ ಸಮರ್ಥನೆ ದೊರೆಯುತ್ತದೆ. "ಹಿಂದುಳಿದ" ಶಬ್ದವು ಪ್ರಾರಂಭದಲ್ಲಿ ಸಭೆಯಲ್ಲಿ ಅನುಮೋದನೆಗೊಂಡ

ರೀತಿಯಲ್ಲಿ ಮೂಲಭೂತ ಹಕ್ಕುಗಳಲ್ಲಿ ಯಾವ ಸ್ಥಾನವನ್ನು ಪಡೆಯಲಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕರಡು ಶಾಸನರಚನಾ ಸಮಿತಿಯು ಅನೇಕ ಸಲ ಸಡಿಲ ಕರಡನ್ನು ರಚಿಸಿದುದಕ್ಕಾಗಿ, ಅನೇಕ ಸಲ ಸೂಚಿತ ಕರಡನ್ನು ರಚಿಸದಿದ್ದುದಕ್ಕಾಗಿ, ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ಹಾಸ್ಯಕ್ಕೆ ಗುರಿಯಾಗಿತ್ತೆಂಬುದರ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿದಿರಬಹುದೆಂದು ನಾನು ಭಾವಿಸುತ್ತೇನೆ. ಆದರೆ ಈಗ ಕರಡು ಶಾಸನ ರಚನಾ ಸಮಿತಿಯು, ನಿಯಮದಲ್ಲಿ "ಅಪವಾದಕ್ಕೇ" ಹೆಚ್ಚು ಮಹತ್ವ ನೀಡಿ ನಿಯಮವನ್ನು ಕಾರ್ಯರೂಪಕ್ಕೆ ತರಲು ಆಸ್ಪದವಿಲ್ಲದ ಹಾಗೆ ಕರಡು ಸಂವಿಧಾನವನ್ನು ರಚಿಸಿ ಮತ್ತಷ್ಟು ಹಾಸ್ಯಕ್ಕೆ ತಾನೇ ಒಳಗಾಗುವ ಹಾಗೆ ಮಾಡಿಕೊಳ್ಳಬಹುದಾಗಿತ್ತು. ಆದ್ದರಿಂದ "ಹಿಂದುಳಿದ" ಎಂಬ ಪದ ಪ್ರಯೋಗಕ್ಕೆ ಸಾಕಷ್ಟು ಆಧಾರವಿಲ್ಲವೆಂದು ನಾನು ಭಾವಿಸಿದ್ದೇನೆ.

ಅಲ್ಪಸಂಖ್ಯಾತರ ಸಂಬಂಧದಲ್ಲಿ ಹೇಳುವುದಾದರೆ, 296ನೇ ಅನುಚ್ಛೇದದಲ್ಲಿ ಅದರ ಬಗ್ಗೆ ಒಂದು ವಿಶೇಷ ಉಲ್ಲೇಖವಿದೆ. ಅದರಲ್ಲಿ ಅಲ್ಪಸಂಖ್ಯಾತರ ಸಲುವಾಗಿ ಕೆಲವು ಉಪಬಂಧಗಳನ್ನು ಕಲ್ಪಿಸಲಾಗಿದೆ. ನಾವು ಅದಕ್ಕಾಗಿ ಯಾವುದೇ ಪ್ರಮಾಣವನ್ನು ನಿಗದಿ ಪಡಿಸಲಿಲ್ಲವೆಂಬುದು ನಿಜ. ಇದು ಪ್ರಕರಣಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ನಾವು ಅಲ್ಪಸಂಖ್ಯಾತರನ್ನು ಪರಿಗಣನೆಯಿಂದ ಪೂರ್ಣವಾಗಿ ಬಿಟ್ಟುಬಿಡಲಿಲ್ಲ. ಕೆಲವರು ನನ್ನನ್ನು "ಹಿಂದುಳಿದ ಸಮುದಾಯ" ಎಂದರೆ ಏನೆಂದು ಕೇಳಿದರು. ಕರಡು ಶಾಸನದ ಭಾಷೆಯನ್ನು ಓದುವ ಯಾರಾದರೂ ಅದರ ಬಗ್ಗೆ ನಿರ್ಧರಿಸಲು ಸ್ಥಳೀಯ ಸರ್ಕಾರಕ್ಕೆ ಬಿಟ್ಟಿದ್ದೇವೆಂದು ತಿಳಿಯಬಹುದು. ಹಿಂದುಳಿದ ಸಮುದಾಯವೆಂದರೆ, ಸರ್ಕಾರದ ಅಭಿಪ್ರಾಯದಲ್ಲಿ ಹಿಂದುಳಿದಿರುವ ಒಂದು ಸಮುದಾಯ. ನನ್ನ ಮಿತ್ರರಾದ ಸನ್ಮಾನ್ಯ ಟಿ.ಟಿ. ಕೃಷ್ಣಮಾಚಾರಿಯವರು ಇದು ನ್ಯಾಯಾಲಯದಲ್ಲಿ ವಿಚಾರಣೆಗೆ ಯೋಗ್ಯವಿಷಯ ಎಂದು ಕೇಳಿದರು. ಇದಕ್ಕೆ ಒಂದು ಅಧಿಕಾರಯುಕ್ತ ಉತ್ತರವನ್ನು ನೀಡುವುದು ಸ್ವಲ್ಪ ಕಷ್ಟವೇ ಆದರೂ, ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ, ಹೌದು ಇದು ನ್ಯಾಯಾಲಯ ವಿಚಾರಣಾ ಯೋಗ್ಯ ವಿಷಯವಾಗುತ್ತದೆ. ಈ ಮೀಸಲಾತಿ ವರ್ಗಗಳಲ್ಲಿ ಸ್ಥಳೀಯ ಸರ್ಕಾರವು ಅತಿ ಹೆಚ್ಚಿನ ಸಂಖ್ಯೆಯ ಸ್ಥಾನವನ್ನು ಸೇರಿಸಿದರೆ, ಯಾರೊಬ್ಬರೂ, ಫೆಡರಲ್ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಬಹುದು. ಮೀಸಲಾತಿಯು ಎಷ್ಟು ಭಾರಿ ಪ್ರಮಾಣದ್ದಾಗಿವೆಯೆಂದರೆ ಅದರಿಂದ ಸಮಾನ ಅವಕಾಶಗಳಿಗೆ ಸಂಬಂಧಿಸಿದ ನಿಯಮವೇ ನಾಶವಾಗಿದೆ.

ಆಗ ನ್ಯಾಯಾಲಯವು ಸ್ಥಳೀಯ ಸರ್ಕಾರ ಅಥವಾ ರಾಜ್ಯ ಸರ್ಕಾರ ಯುಕ್ತ ಹಾಗೂ ವಿವೇಕದಿಂದ ವರ್ತಿಸಿದೆಯೆ ಇಲ್ಲವೇ ಎಂಬ ನಿರ್ಧಾರಕ್ಕೆ ಬರುತ್ತದೆ. ಶ್ರೀ ಕೃಷ್ಣಮಾಚಾರಿಯವರು ವಿಚಾರವಂತ ಹಾಗೂ ವಿವೇಕಶಾಲಿ ಮನುಷ್ಯರು ಎಂದರೆ ಯಾರು? ಇವು ವ್ಯಾಜ್ಯ ತರುವಂಥ ವಿಷಯವೇ? ಎಂದು ಕೇಳಿದರು. ಹೌದು ಅವು ವ್ಯಾಜ್ಯ ಯೋಗ್ಯವಾದ ವಿಷಯವೇ. ವಿಚಾರವಂತ ಹಾಗೂ ವಿವೇಕವಂತ ವ್ಯಕ್ತಿಗಳು ಎಂಬುದನ್ನು ಬಹಳಷ್ಟು ಕಾನೂನುಗಳಲ್ಲಿ ಉಪಯೋಗಿಸಲಾಗಿದೆ. ನನ್ನ ಸನ್ಮಾನ್ಯ ಮಿತ್ರರಾದ ಟಿ.ಟಿ. ಕೃಷ್ಣಮಾಚಾರಿಯವರಿಗೆ, ಸ್ವತ್ತಿನ ವರ್ಗಾವಣೆ ಅಧಿನಿಯಮವನ್ನು ಅವರು ನೋಡಿದರೆ "ವಿಚಾರವಂತ ವ್ಯಕ್ತಿ" ಹಾಗೂ 'ವಿವೇಕವಂತ ವ್ಯಕ್ತಿ' ಎಂಬುದನ್ನು ಬಹಳ ಚೆನ್ನಾಗಿ ಪರಿಭಾಷಿಸಿರುವುದು ಕಂಡುಬರಬಹುದು. ನ್ಯಾಯಾಲಯಕ್ಕೆ ಅದನ್ನು ಪರಿಭಾಷಿಸಲು ಯಾವುದೇ ತೊಂದರೆಯಾಗಲಿಕ್ಕಿಲ್ಲ.

# ಸಂವೈಧಾನಿಕ ಪರಿಹಾರಗಳನ್ನು ಕುರಿತು

ಸರ್ವೋಚ್ಚ ನ್ಯಾಯಾಲಯಕ್ಕೆ ಆದೇಶಗಳನ್ನು ಹಾಗೂ ನಿರ್ದೇಶಗಳನ್ನು ನೀಡುವ ಅಧಿಕಾರವಿದ್ದರೂ, ಕರಡು ಸಂವಿಧಾನದಲ್ಲಿ ಕೆಲವು ರಿಟ್‌ಗಳ ಬಗ್ಗೆ ಹೇಳುವುದು ಅಪೇಕ್ಷಣೀಯವೆಂದು ಭಾವಿಸಲಾಗಿದೆ. ಕೆಲವು ನಿರ್ದಿಷ್ಟ ರಿಟ್‌ಗಳ ಬಗ್ಗೆ ಹೇಳುವ ಹಾಗೂ ಅವುಗಳ ಬಗ್ಗೆ ಉಲ್ಲೇಖ ಮಾಡುವ ಅವಶ್ಯಕತೆಯು ಈಗ ಸ್ಪಷ್ಟವಾಗಿ ಕಂಡು ಬಂದಿದೆ. ಈ ರಿಟ್‌ಗಳು ಗ್ರೇಟ್ ಬ್ರಿಟನ್‌ನಲ್ಲಿ ಬಹಳ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಅವುಗಳ ಸ್ವರೂಪ ಹಾಗೂ ಅವುಗಳಿಂದ ಸಿಕ್ಕುವ ಪರಿಹಾರಗಳ ಬಗ್ಗ ಪ್ರತಿಯೊಬ್ಬ ವಕೀಲನಿಗೂ ತಿಳಿದಿದೆ. ಎಷ್ಟೇ ಆಗಾಧ ಕಲ್ಪನಾಶಕ್ತಿಯುಳ್ಳ ವ್ಯಕ್ತಿಗೂ ಯಾವುದೇ ಹೊಸನಾದ ಒಂದು ವಿಷಯವನ್ನು ಆವಿಷ್ಕಾರ ಮಾಡುವುದು ಅಸಾಧ್ಯವಾಗಿರುವುದರಿಂದ, ಪ್ರಾಯಶಃ ಸಾವಿರಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ, ಹಾಗೂ ಪ್ರತಿಯೊಬ್ಬ ಇಂಗ್ಲೀಷ್ ವ್ಯಕ್ತಿಗೂ ಅವನ ಸ್ವಾತಂತ್ರ್ಯದ ರಕ್ಷಣೆಗೆ ಸಂಬಂಧಿಸಿದಂತೆ ಪೂರ್ತಿ ತೃಪ್ತಿ ನೀಡುವ ರಿಟ್‌ಗಳನ್ನು ಸುಧಾರಣೆ ಮಾಡುವುದು ಸಾಧ್ಯವೇ ಇಲ್ಲ. ಆದ್ದರಿಂದ, ನಾವು, ಸರ್ವೋಚ್ಚ ನ್ಯಾಯಾಲಯವು ನ್ಯಾಯವನ್ನು ಬೇರೆ ರೀತಿಯಲ್ಲಿ ದೊರಕಿಸಿಕೊಡಬೇಕೆಂದು ಅಪೇಕ್ಷಿಸಿದರೆ, ಸರ್ವೋಚ್ಚ ನ್ಯಾಯಾಲಯದ ಆ ಹಕ್ಕಿಗೆ ಬಾಧಕವಾಗದಂತೆ, ತಪ್ಪು ಮಾಡಲು ಸಾಧ್ಯವಿಲ್ಲದ ಹಾಗೂ ಮೋಸಕ್ಕೆ ಅವಕಾಶವಿಲ್ಲದ ರಿಟ್‌ಗಳನ್ನು ಒಳಗೊಂಡಿರುವ ಇಂಗ್ಲೀಷ್ ನ್ಯಾಯ ಶಾಸ್ತ್ರದಲ್ಲಿ ಇದ್ದ ಪರಿಸ್ಥಿತಿಯನ್ನು ಸಂವಿಧಾನದಲ್ಲಿ ಅವುಗಳ ಹೆಸರಿನಿಂದಲೇ ಕರೆಯಬೇಕು. ಆದ್ದರಿಂದ ಶ್ರೀ ಕಾಮತ್‌ರವರು ಈ ಬಗ್ಗೆ ಸಲ್ಲಿಸಿದ ಆಕ್ಷೇಪಣೆಗೆ ಯಾವುದೇ ಆಧಾರವಿಲ್ಲವೆಂದು ಹೇಳಬಯಸುತ್ತೇನೆ.

ಈ ಅನುಚ್ಛೇದ ಮೇರೆಗೆ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ನ್ಯಾಯಾಲಯವು ಮೊಕದ್ದಮೆಯ ಸಂಗತಿಗಳ ಬಗ್ಗೆ ತಿಳಿದುಕೊಳ್ಳುವ ಸ್ವಾತಂತ್ರ್ಯ ಹೊಂದಿರಬೇಕೆಂದು ನನ್ನ ಮಿತ್ರರಾದ ಶ್ರೀ ಸೌರವತೆ ಅವರು ಹೇಳಿದರು. ಶ್ರೀ ಸೌರವತೆ ಅವರು ಈ ರಿಟ್‌ಗಳ ವ್ಯಾಪ್ತಿ ಹಾಗೂ ಅವುಗಳ ಸ್ವರೂಪದ ಬಗ್ಗೆ ತಪ್ಪು ಗ್ರಹಿಕೆ ಹೊಂದಿರುವುದರಲ್ಲಿ ನನಗೆ ಸಂಶಯವೇ ಇಲ್ಲ, ಆದ್ದರಿಂದ ನಾನು ಯಾರ ಕ್ಷಮೆಯನ್ನು ಕೇಳಿ ಈ ರಿಟ್‌ಗಳ ಸ್ವರೂಪವನ್ನು ವಿವರಿಸಬೇಕಾಗಿಲ್ಲ, ಇಂಗ್ಲೀಷ್ ಕಾನೂನಿನ ಬಗ್ಗೆ ಏನನ್ನಾದರೂ ಬಲ್ಲ ಯಾರೇ ವ್ಯಕ್ತಿಯು ಅನುಚ್ಛೇದದಲ್ಲಿ ಹೇಳಿರುವ ರಿಟ್‌ಗಳು ಎರಡು ವರ್ಗಗಳಲ್ಲಿ ಬರುತ್ತದೆಯೆಂಬುದನ್ನು ಗ್ರಹಿಸಬಲ್ಲರು. ಹಾಗೂ ಅರ್ಥ ಮಾಡಿಕೊಳ್ಳಬಲ್ಲರು. ಅವುಗಳನ್ನು ಒಂದು

ಅರ್ಥದಲ್ಲಿ "ವಿಶಿಷ್ಟಾಧಿಕಾರದ ರಿಟ್" ಗಳೆಂದು ಮತ್ತೊಂದು ಅರ್ಥದಲ್ಲಿ "ಕ್ರಿಯಾಶೀಲ ರಿಟ್" ಗಳೆಂದು ಕರೆಯಲಾಗಿದೆ. 'ಮ್ಯಾಂಡಮಸ್ ರಿಟ್' 'ಸರ್ಶಿಯಾರ್ ರಿಟ್' ಹಾಗೂ 'ಪ್ರಾಹಿಬಿಷನ್ ರಿಟ್'- ಇವುಗಳನ್ನು ಎರಡೂ ಅರ್ಥದಲ್ಲಿ ಬಳಸಬಹುದು ಅಥವಾ ಅನ್ವಯಿಸಬಹುದು. ಅವುಗಳನ್ನು 'ವಿಶಿಷ್ಟಾಧಿಕಾರದ ರಿಟ್' ಆಗಿ ಬಳಸಬಹುದು ಅಥವಾ ಒಬ್ಬ ವ್ಯಾಜ್ಯಕಾರನು ವ್ಯವಹರಣೆಗಳು ಅಥವಾ ಒಂದು ದಾವೆ ನಡೆಯುತ್ತಿರುವ ಸಮಯದಲ್ಲಿ ಅನ್ವಯಿಸಬಹುದು. ಈ ಅನುಚ್ಛೇದದಿಂದ ಕೊಡಲಾದ ಈ ರಿಟ್‌ಗಳ ಮಹತ್ವವು ಅವು ವಿಶಿಷ್ಟಾಧಿಕಾರದ ರಿಟ್‌ಗಳಾಗಿರುವುದಾಗಿದೆ. ಅವುಗಳಿಗೆ, ಒಂದು ಬಾಧಿತ ಪಕ್ಷವು ಯಾವುದೇ ದಾವೆ ಅಥವಾ ವ್ಯವಹರಣೆಗಳನ್ನು ಹೂಡದೇ ಮೊರೆ ಹೋಗಬಹುದು.

ಸಾಮಾನ್ಯವಾಗಿ, ನ್ಯಾಯಾಲಯದಿಂದ ಯಾವುದೇ ರೀತಿಯ ಆದೇಶವು ದೊರಕಬೇಕಾದರೆ, ನೀವು ಒಂದು ದಾವೆಯನ್ನು ಹೂಡಬೇಕು. ಆದೇಶವು ಮ್ಯಾಂಡಮಸ್ ಸ್ವರೂಪದ್ದಾಗಿರಬಹುದು, ಸರ್ಶಿಯೋರ್ ಆಗಿರಬಹುದು, ಪ್ರಾಹಿಬಿಷನ್ ಅಥವಾ ಅದೇ ರೀತಿಯ ಯಾವುದೇ ಆದೇಶವಾಗಿರಬಹುದು. ಆದರೆ ಇಲ್ಲಿ ಈ ಅನುಚ್ಛೇದವು ಸಂಬಂಧಿಸುವಷ್ಟರ ಮಟ್ಟಿಗೆ ಯಾವುದೇ ವ್ಯವಹರಣೆಗಳನ್ನು ಹೂಡದೇ ನೀವು ನೇರವಾಗಿ ನ್ಯಾಯಾಲಯಕ್ಕೆ ಹೋಗಿ ರಿಟ್‌ಗೆ ಅರ್ಜಿ ಸಲ್ಲಿಸಬಹುದು. ರಿಟ್‌ನ ಉದ್ದೇಶವೆಂದರೆ ವಾಸ್ತವವಾಗಿ ಮಧ್ಯಂತರ ಪರಿಹಾರ ನೀಡುವುದಾಗಿದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಿದರೆ, ಅವನು ತನ್ನನ್ನು ದಸ್ತಗಿರಿ ಮಾಡಿದ ಅಧಿಕಾರಿಯ ವಿರುದ್ಧ ಯಾವುದೇ ವ್ಯವಹರಣೆ ಅಥವಾ ದಾವೆಯನ್ನು ಹೂಡದೇ, ತನ್ನನ್ನು ಮುಕ್ತಗೊಳಿಸಬೇಕೆಂದು ನ್ಯಾಯಾಲಯಕ್ಕೆ ಒಂದು ಅರ್ಜಿಯನ್ನು ಸಲ್ಲಿಸಬಹುದು. ಅವನು ಆ ಅಧಿಕಾರಿಯ ವಿರುದ್ಧ ಒಂದು ದಾವೆ ಅಥವಾ ವ್ಯವಹರಣೆಯನ್ನು ದಾಖಲಿಸುವುದು ಅವಶ್ಯವಿರುವುದಿಲ್ಲ. ಈ ರೀತಿಯ ವ್ಯವಹರಣೆಯಲ್ಲಿ ಅರ್ಜಿಯನ್ನು ವಿಶಿಷ್ಟಾಧಿಕಾರದ ರಿಟ್‌ಗಾಗಿ ಸಲ್ಲಿಸಿರುವಲ್ಲಿ, ನ್ಯಾಯಾಲಯವು ದಸ್ತಗಿರಿಯು ಕಾನೂನಿಗನುಸಾರ ಆಗಿದೆಯೆಂಬುದರ ಬಗ್ಗೆ ಮಾತ್ರ ದಸ್ತಗಿರಿಯು ಕಾನೂನಿನಗನುಸಾರ ಆಗಿದೆಯೆಂಬುದರ ಬಗ್ಗೆ ಮಾತ್ರ ಖಚಿತಪಡಿಸಿಕೊಳ್ಳಬಹುದು. ನ್ಯಾಯಾಲಯವು ಈ ಹಂತದಲ್ಲಿ ಯಾವ ಕಾನೂನಿನ ಅಡಿಯಲ್ಲಿ ವ್ಯಕ್ತಿಯನ್ನು ದಸ್ತಗಿರಿ ಮಾಡಲಾಯಿತೋ, ಆ ಕಾನೂನು ಸರಿಯಾದ ಕಾನೂನೇ ಅಥವಾ ಸರಿಯಲ್ಲದ ಕಾನೂನೇ, ಸಂವಿಧಾನದ ಯಾವುದಾದರೂ ಉಪಬಂಧಗಳಿಗೆ ಅದು ವಿರೋಧವಾಗಿದೆಯೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಪ್ರಶ್ನಿಸುವುದಿಲ್ಲ.

ಹೇಬಿಯಸ್ ಕಾರ್ಪಸ್ ವ್ಯವಹರಣೆಗಳಲ್ಲಿ, ನ್ಯಾಯಾಲಯವು ದಸ್ತಗಿರಿಯನ್ನು ಕಾನೂನು ಸಮ್ಮತವಾಗಿ ಮಾಡಲಾಗಿದೆಯೆ ಇಲ್ಲವೇ ಎಂಬುದನ್ನು ಮಾತ್ರ ವಿಚಾರಿಸಬಹುದು. ಅದು ಕಾನೂನಿನ ಗುಣಾವಗುಣಗಳ ಬಗ್ಗೆ ಪ್ರಶ್ನಿಸುವುದಿಲ್ಲ. ಇದು ನ್ಯಾಯಾಲಯದ ರೂಢಿಯಾಗಿದೆ. ಒಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಿ ಅವನ ವಿಚಾರಣೆ ಪ್ರಾರಂಭವಾದಾಗ, ಈ ವ್ಯವಹರಣೆಗಳು ನಡೆಯುತ್ತಿರುವಾಗ, ನ್ಯಾಯಾಲಯವು ಸಂಗತಿಗಳ ಬಗ್ಗೆ ತಿಳಿಮಕೊಳ್ಳಲು ಹಕ್ಕುಳ್ಳದ್ದಾಗಿರುತ್ತದೆ ಮತ್ತು ಯಾವ ಕಾನೂನಿನಡಿಯಲ್ಲಿ ವ್ಯಕ್ತಿಯನ್ನು ದಸ್ತಗಿರಿ ಮಾಡಲಾಯಿತೋ ಅದು ಸರಿಯಾದ ಕಾನೂನೇ ಅಲ್ಲವೆ ಎಂಬುದರ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತದೆ. ನಂತರ ನ್ಯಾಯಾಲಯವು ಅದು ಸಂವಿಧಾನದ ಉಪಬಂಧಗಳಿಗೆ ವಿರೋಧವಾಗಿದೆಯೋ ಇಲ್ಲವೆ ಎಂಬ ಪ್ರಶ್ನೆಗೆ ಬರುತ್ತದೆ. ಪರಿಣಾಮ ಸ್ವರೂಪವಾಗಿ ನನ್ನ ಮಿತ್ರರಾದ ಶ್ರೀ ಪಿ.ಎಸ್. ಸೌರವತೆಯವರು ಮಂಡಿಸಿದ ತಿದ್ದುಪಡಿಯು ಇಲ್ಲಿ ಸರಿಹೊಂದುವುದಿಲ್ಲ. ಇಲ್ಲಿ ಅಂಥ ಉಪಬಂಧವನ್ನು ಮಾಡಲಾಗುವುದಿಲ್ಲ ಅವರು 115ನೇ ಅನುಚ್ಛೇದವನ್ನು ನೋಡಿದರೆ, ಅಲ್ಲಿ ಇದೇ ರೀತಿಯ ರಿಟ್‌ಗಳಿಗೆ ಉಪಬಂಧವನ್ನು ಕಲ್ಪಿಸಬಹುದಾಗಿದೆ ಎಂಬುದನ್ನು ತಿಳಿಯಬಹುದು. ಆದರೆ ಆ ರಿಟ್‌ಗಳನ್ನು ವಿಷಯದ ಸಂಗತಿ ಹಾಗೂ ಕಾನೂನಿಗೆ ಸಂಬಂಧಿಸಿದ ಪ್ರಶ್ನೆಗಳ ಸಂಬಂಧದಲ್ಲಿ ಹೊರಡಿಸಬಹುದು. ಮತ್ತು ಅವುಗಳನ್ನು ಖಂಡಿತವಾಗಿ ನ್ಯಾಯಾಲಯದಿಂದ ತನಿಖೆ ಮಾಡಿಸಬಹುದು.

ನನ್ನ ಅಪೇಕ್ಷೆಗೆ, ಈ ಅನುಚ್ಛೇದದ ಬಗ್ಗೆ ಮಾತನಾಡಿದ ಬಹುಸಂಖ್ಯಾತ ಸದಸ್ಯರು ಈ ಅನುಚ್ಛೇದದ ಮಹತ್ವ ಹಾಗೂ ಪ್ರಾಮುಖ್ಯತೆಯ ಬಗ್ಗೆ ಗ್ರಹಿಸಿರುವುದಕ್ಕಾಗಿ ನನಗೆ ಬಹಳ ಸಂತೋಷವಾಗುತ್ತದೆ. ಈ ಸಂವಿಧಾನದಲ್ಲಿ ಅತಿ ಹೆಚ್ಚು ಮುಖ್ಯವಾದ ಅನುಚ್ಛೇದ ಯಾವುದು ಹಾಗೂ ಯಾವುದು ಇಲ್ಲದಿದ್ದರೆ ಸಂವಿಧಾನವೇ ಶೂನ್ಯಗೊಳ್ಳುತ್ತದೆ, ಎಂಬುದರ ಬಗ್ಗೆ ಯಾವುದೇ ಒಂದು ನಿರ್ದಿಷ್ಟ ಅನುಚ್ಛೇದವನ್ನು ಹೆಸರಿಸಬೇಕೆಂದು ಯಾರಾದರೂ ನನ್ನನ್ನು ಕೇಳಿದರೆ. ಈ ಅನುಚ್ಛೇದವಲ್ಲದೆ ಬೇರೆ ಯಾವ ಅನುಚ್ಛೇದದ ಬಗ್ಗೆ ನಾನು ಉಲ್ಲೇಖಿಸುವುದಿಲ್ಲ. ಇದು ಸಂವಿಧಾನದ ಅಂತರಾತ್ಮವಾಗಿದೆ. ಸದನಕ್ಕೆ ಈ ಅನುಚ್ಛೇದದ ಮಹತ್ವವು ಅರಿವಾಗಿರುವುದರ ಬಗ್ಗೆ ನನಗೆ ಬಹಳ ಸಂತೋಷವಾಗಿದೆ.

ಆದಾಗ್ಯೂ, ಈ ಅನುಚ್ಛೇದದ ಬಗ್ಗೆ ಮಾತನಾಡಿದ ಸದಸ್ಯರು ಇದರ ಮಹತ್ವದ ಬಗ್ಗೆ ಸಾಕಷ್ಟು ಅರಿತಿಲ್ಲವೆಂದು ನನಗೆ ತೋರುತ್ತದೆ. ನಾನು ಕುಳಿತುಕೊಳ್ಳುವ ಮೊದಲು ಈ ವಿಷಯದ ಬಗ್ಗೆ ಗಮನ ಸೆಳೆಯಲು ಇಚ್ಛಿಸುತ್ತೇನೆ.

ಈ ಅನುಚ್ಛೇದದಲ್ಲಿ ಉಲ್ಲೇಖಿಸಲಾಗಿರುವ ಈ ರಿಟ್‌ಗಳು ಹೊಸವೇನೂ ಅಲ್ಲ. 'ಹೇಬಿಯಸ್ ಕಾರ್ಪಸ್' ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯಲ್ಲಿ ಬರುತ್ತದೆ. 'ಮ್ಯಾಂಡಮಸ್ ರಿಟ್' ನಿರ್ದಿಷ್ಟ ಪರಿಹಾರ ಅಧಿನಿಯಮದಲ್ಲಿ ಜಾಗ ಪಡೆದಿದೆ ಮತ್ತು ಇಲ್ಲಿ ಹೇಳಲಾದ ಕೆಲವು ಇತರ ರಿಟ್‌ಗಳ ಬಗ್ಗೆ ನಮ್ಮ ಅನೇಕ ಕಾನೂನುಗಳಲ್ಲಿ ಹೇಳಲಾಗಿದೆ. ಆದರೆ ಈ ರಿಟ್‌ಗಳಿಗೆ ಸಂಬಂಧಿಸಿದಂತೆ ಈಗಿರುವ ಪರಿಸ್ಥಿತಿ ಹಾಗೂ ಸಂವಿಧಾನವನ್ನು ಅನುಮೋದಿಸಿದ ಮೇಲೆ ಉದ್ಭವಿಸಿರುವ ಪರಿಸ್ಥಿತಿಯ ನಡುವೆ ಈ ವ್ಯತ್ಯಾಸವಿದೆ. ನಮ್ಮ ಅನೇಕ ಕಾನೂನುಗಳಲ್ಲಿ ಈಗ ಇರುವ ರಿಟ್‌ಗಳು ವಿಧಾನ ಮಂಡಲದ ಮೇಲೆ ಅವಲಂಬಿಸಿರುತ್ತವೆ. ಹೇಬಿಯಸ್ ಕಾರ್ಪಸ್‌ಗೆ ಸಂಬಂಧಿಸಿದಂತೆ ಒಂದು ಉಪಬಂಧವನ್ನು ಒಳಗೊಂಡಿರುವ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯನ್ನು ವಿಧಾನ ಮಂಡಲವು ತಿದ್ದುಪಡಿ ಮಾಡಬಹುದು. ನಮ್ಮ ನಿರ್ದಿಷ್ಟ ಪರಿಹಾರದ ಅಧಿನಿಯಮವನ್ನು ಸಹ ತಿದ್ದುಪಡಿ ಮಾಡಬಹುದು. ಹೇಬಿಯಸ್ ಕಾರ್ಪಸ್ ರಿಟ್‌ನಾಗಲಿ ಅಥವಾ ಮ್ಯಾಂಡಮಸ್ ಹಕ್ಕುಗಳಾಗಲಿ ಬಹುಮತಾಭಿಪ್ರಾಯ ಇರುವ ಒಂದು ಸಂಖ್ಯೆಯ ಸದಸ್ಯರುಗಳನ್ನು ಹೊಂದಿರುವ ವಿಧಾನ ಮಂಡಲದಿಂದ ಯಾವುದೇ ತೊಂದರೆಯಿಲ್ಲದೆ ಕಿತ್ತುಹಾಕಬಹುದು. ಆದರೆ ನಾನು ಮುಂದೆ ಈ ಅನುಚ್ಛೇದದಲ್ಲಿ ಹೇಳಲಾಗಿರುವ ರಿಟ್‌ಗಳನ್ನು ತೆಗೆದುಹಾಕಲು ವಿಧಾನ ಮಂಡಲಕ್ಕೆ ಸಾಧ್ಯವಾಗುವುದಿಲ್ಲ. ವಿಧಾನ ಮಂಡಲವು ತನ್ನ ಮನಸೋಇಚ್ಛೆ ಮಾಡುವಂಥ ಒಂದು ಕಾನೂನಿನ ಮೂಲಕ ಈ ರಿಟ್‌ಗಳನ್ನು ಹೊರಡಿಸುವ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ನಿಹಿತಗೊಳಿಸಬೇಕೆಂಬುದು ಸಂವಿಧಾನದ ಆಶಯವಲ್ಲ. ಸಂವಿಧಾನವು ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಹಕ್ಕುಗಳನ್ನು ನಿಹಿತಗೊಳಿಸಿದೆ ಮತ್ತು ವಿಧಾನ ಮಂಡಲವು ತನಗೆ ತಿಳಿದಿರುವ ರೀತಿಯಲ್ಲಿ ಈ ಸಂವಿಧಾನವನ್ನು ತಿದ್ದುಪಡಿ ಮಾಡುವವರೆಗೆ ಮತ್ತು ಮಾಡದೆ ಹೋದರೂ ಈ ರಿಟ್‌ಗಳನ್ನು ತೆಗೆದುಹಾಕುವಂತಿಲ್ಲ. ನನ್ನ ವಿವೇಚನೆಯಲ್ಲಿ, ಇದು ವ್ಯಕ್ತಿಗಳ ಸುರಕ್ಷತೆ ಹಾಗೂ ಭದ್ರತೆಯನ್ನು ಒದಗಿಸುವಲ್ಲಿ ಅತಿ ಹೆಚ್ಚಿನ ಸುರಕ್ಷತಾ ಕ್ರಮಗಳಲ್ಲಿ ಒಂದಾಗಿದೆ. ಆದ್ದರಿಂದ ವಿಧಾನ ಮಂಡಲಕ್ಕೆ ಬಹುಮತವಿದೆಯೆಂಬ ಮಾತ್ರಕ್ಕೆ ಸಂವಿಧಾನದಲ್ಲಿ ಒದಗಿಸಲಾಗಿರುವ ಸ್ವಾತಂತ್ರ್ಯವನ್ನು ಅದು ಕಿತ್ತುಕೊಳ್ಳಬಹುದೆಂದು ನಾವು ಕಳವಳ ಪಡಬೇಕಾಗಿಲ್ಲ.

ಮಾನ್ಯ ಅಧ್ಯಕ್ಷರೇ, ನಾನು ಮತ್ತೊಂದು ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಇಚ್ಛಿಸುತ್ತೇನೆ. ಈ ಸದನದಲ್ಲಿ ನಿರ್ದೇಶಕ ತತ್ವ ಹಾಗೂ ಮೂಲಭೂತ ಹಕ್ಕುಗಳು - ಇವುಗಳ ಬಗ್ಗೆ ಚರ್ಚೆ ನಡೆದ ಸಮಯದಲ್ಲಿ, ಅನೇಕ ಸದಸ್ಯರು ತಮ್ಮ ಭಾಷಣಗಳಲ್ಲಿ, ನಮ್ಮ ಮೂಲಭೂತ ಹಕ್ಕುಗಳು ಅಥವಾ ನಿರ್ದೇಶಕ

ತತ್ವದಲ್ಲಿ ಕೆಲವು ಹಕ್ಕು ಅಥವಾ ಕಾರ್ಯನೀತಿಯನ್ನು ನಿರೂಪಿಸಿಲ್ಲವೆಂದು ದೂರಿದ ಬಗ್ಗೆ ನಾನು ಕೇಳಿದೆ. ಇಲ್ಲಿ ರಷ್ಯಾ ಹಾಗೂ ಇತರ ದೇಶಗಳ ಸಂವಿಧಾನದ ಬಗ್ಗೆ ಉಲ್ಲೇಖಿಸಲಾಯಿತು. ಆ ಸಂವಿಧಾನಗಳಲ್ಲಿ ಸದಸ್ಯರು, ತಿದ್ದುಪಡಿಯ ಮೂಲಕ ಮಂಡಿಸಬೇಕೆಂದು ಕೋರಲಾದ ಘೋಷಣೆಗೆ ಮನ್ನಣೆ ದೊರಕಿದೆ. ಈ ತಿದ್ದುಪಡಿಯನ್ನು ತಂದಿರುವ ಯಾರೊಬ್ಬರಿಗೂ ನೋವನ್ನುಂಟು ಮಾಡದೆ ನಾನು ಹೇಳಬಹುದಾದುದೇನೆಂದರೆ, ಹಕ್ಕುಗಳ ಬಗ್ಗೆ ವ್ಯವಹರಿಸುವ ಬ್ರಿಟಿಷ್ ಪದ್ಧತಿಯನ್ನು ನಾನು ಹೆಚ್ಚು ಒಪ್ಪುತ್ತೇನೆ. ಬ್ರಿಟಿಷ್ ಪದ್ಧತಿಯು ಒಂದು ವಿಶಿಷ್ಟ ಪದ್ಧತಿಯಾಗಿದ್ದು ಅದು ನಿಜವಾದ ಹಾಗೂ ದೃಢವಾದ ಪದ್ಧತಿಯಾಗಿದೆ. ಬ್ರಿಟಿಷ್ ನ್ಯಾಯಶಾಸ್ತ್ರವು, ಸಂವಿಧಾನವು ಹಕ್ಕುಗಳ ಪರಿಹಾರಕ್ಕೆ ಅವಕಾಶವಿರದ ಹೊರತು, ಯಾವುದೇ ಹಕ್ಕುಗಳು ಇರಲು ಸಾಧ್ಯವಿಲ್ಲವೆಂಬುದರ ಬಗ್ಗೆ ಒತ್ತಿ ಹೇಳುತ್ತದೆ. ಪರಿಹಾರವು ಮಾತ್ರ ಹಕ್ಕನ್ನು ನಿಜವಾಗಿಸುತ್ತದೆ. ಪರಿಹಾರವಿಲ್ಲದಿದ್ದರೆ ಯಾವ ಹಕ್ಕೂ ಇರುವುದಿಲ್ಲ, ಆದ್ದರಿಂದ ಸಾಮಾನನ್ವಯಕ್ಕೆ ಹತ್ತಿರವಾಗಿದೆಯೆಂದು ತೋರುವ, ಆದರೆ ಯಾವುದೇ ಪರಿಹಾರಕ್ಕೆ ಉಪಬಂಧ ಕಲ್ಪಿಸಿದ ಸಾಧು ಘೋಷಣೆಗಳನ್ನು ಸಂವಿಧಾನದಲ್ಲಿ ಸೇರಿಸಲು ನಾನು ತಯಾರಿಲ್ಲ, ನಮ್ಮ ಹಕ್ಕುಗಳ ವ್ಯಾಪ್ತಿಯು ಸೀಮಿತವಾಗಿದ್ದು ಮತ್ತು ಅವುಗಳಿಗೆ ಪರಿಹಾರವನ್ನು ಸೂಚಿಸಿ ಅವುಗಳನ್ನು ನಿಜವಾದ ಹಕ್ಕುಗಳನ್ನಾಗಿ ಮಾಡುವುದು, ಸಂವಿಧಾನದಲ್ಲಿ ಅನೇಕ ಸಾಧು ಘೋಷಣೆಗಳನ್ನು ಸೇರಿಸುವುದಕ್ಕಿಂತ ಉತ್ತಮ. ನಾವು ಒದಗಿಸಿರುವ ಪರಿಹಾರಗಳು ಈ ಸಂವಿಧಾನದ ಮೂಲಭೂತ ಭಾಗವಾಗಬೇಕೆಂಬುದು ಸದನಕ್ಕೆ ಮನವರಿಕೆಯಾಗಿರುವ ಬಗ್ಗೆ ನನಗೆ ಬಹಳ ಸಂತೋಷವಾಗುತ್ತದೆ.

# ಕಾರ್ಯಾಂಗವನ್ನು ಶಾಸಕಾಂಗ ಹಾಗೂ ನ್ಯಾಯಾಂಗದಿಂದ ಬೇರ್ಪಡಿಸುವುದನ್ನು ಕುರಿತು

ನನ್ನ ಪ್ರೇರಣೆಯ ಮೇರೆಗೆ ಕಾರ್ಯಾಂಗವನ್ನು ನ್ಯಾಯಾಂಗದಿಂದ ಪ್ರತ್ಯೇಕಿಸುವುದಕ್ಕೆ ಸಂಬಂಧಿಸಿದ ಒಂದು ವಿಷಯವು ನಿರ್ದೇಶಕ ತತ್ವಗಳಲ್ಲಿ ಸೇರಿಸಲು ಕೋರಲಾಯಿತು. ಮೂಲತಃ ಈ ಪ್ರಸ್ತಾವವು ಮೂರು ವರ್ಷಗಳ ಅವಧಿಯನ್ನು ಒಳಗೊಂಡಿತ್ತು. ತದನಂತರ ಚರ್ಚೆಯ ಪರಿಣಾಮವಾಗಿ ಹಾಗೂ ಆ ತತ್ವವನ್ನು ಜಾರಿಗೊಳಿಸಲು ಇರುವ ಎಲ್ಲಾ ಕಠಿಣತೆಗಳನ್ನು ಎತ್ತಿ ತೋರಿಸಿದ ಪರಿಣಾಮವಾಗಿ, ಸದನವು ಕಾಲಾವಧಿಯನ್ನು ಬಿಡಲು ಮತ್ತು ಕಾರ್ಯಾಂಗವನ್ನು ನ್ಯಾಯಾಂಗದಿಂದ ಪ್ರತ್ಯೇಕಿಸಲು ಕ್ರಮ ಕೈಗೊಳ್ಳಲು ಪ್ರಾಂತೀಯ ಸರ್ಕಾರಗಳ ಮೇಲೆ ಒಂದು ರೀತಿಯ ಖಚಿತ ಕೋರಿಕೆಯನ್ನು ಹೇರಲು ನಿರ್ಧರಿಸಿತು. ಆ ಸಂದರ್ಭದಲ್ಲಿ ಈ ಎಲ್ಲಾ ವಿಷಯಗಳ ಮೇಲೆ ಚರ್ಚಿಸಲಾಯಿತು. ಅಲ್ಲಿ ಹೇಳಿದ ವಿಷಯವನ್ನು ಪುನರುಚ್ಚರಿಸುವ ಆವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸುವ ಬಗ್ಗೆ ಯಾವ ರೀತಿಯ ವಿವಾದವೂ ಇಲ್ಲ.

ಕಾರ್ಯಾಂಗವನ್ನು ಶಾಸಕಾಂಗದಿಂದ ಬೇರ್ಪಡಿಸುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅಮೇರಿಕಾ ಸಂವಿಧಾನದಲ್ಲಿ ಅಂಥ ಪ್ರತ್ಯೇಕಕರಣವು ಅಸ್ತಿತ್ವದಲ್ಲಿದೆ. ಆದರೆ ನನ್ನ ಮಿತ್ರರಾದ ಪ್ರೊ. ಶಾಹರವರು ಅಮೇರಿಕಾದ ಸಂವಿಧಾನದ ವಿಶಿಷ್ಟ ಉಪಬಂಧಗಳ ಬಗ್ಗೆ ಇತ್ತೀಚಿನ ಕೆಲವು ಟೀಕೆಗಳನ್ನು ಓದಿದ್ದರೆ, ಅವರಿಗೆ ಕಾರ್ಯಾಂಗ ಮತ್ತು ಶಾಸಕಾಂಗಗಳ ನಡುವೆ ಅಮೇರಿಕಾ ಸಂವಿಧಾನದಲ್ಲಿ ಒಳಗೊಂಡಿರುವ ಕಠಿಣ ಪ್ರತ್ಯೇಕಿಕರಣದ ಬಗ್ಗೆ ಕೆಲವು ಅಮೇರಿಕಾದವರೆ ಅತೃಪ್ತಿಗೊಂಡಿದ್ದಾರೆಂಬುದು ಕಂಡು ಬರುತ್ತಿತ್ತು. ಅಮೇರಿಕಾ ಸಂವಿಧಾನವನ್ನು ಅಧ್ಯಯನ ಮಾಡಿದ ಕೆಲವು ವಿದ್ಯಾರ್ಥಿಗಳು ಮಂಡಿಸಿದ ಪ್ರಸ್ತಾವಗಳಲ್ಲಿ ಒಂದು, ಅಮೇರಿಕಾದಲ್ಲಿನ ಸ್ಥಿತಿಯನ್ನು ಇಂಗ್ಲೆಂಡಿನಲ್ಲಿರುವ ಸ್ಥಿತಿಯ ಅದೇ ಮಟ್ಟಕ್ಕೆ ತರಲು ಕಾರ್ಯಾಂಗವನ್ನು ಶಾಸಕಾಂಗದಿಂದ ಪ್ರತ್ಯೇಕಿಸುವ ವಿಷಯವನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂಬುದಾಗಿತ್ತು. ಇಂಗ್ಲೆಂಡಿನಲ್ಲಿ ಕಾರ್ಯಾಂಗ ಹಾಗೂ ಶಾಸಕಾಂಗಗಳ ನಡುವೆ ಯಾವುದೇ ವ್ಯತ್ಯಾಸವಾಗಲಿ ಅಥವಾ ಪ್ರತ್ಯೇಕಕರಣವಾಗಲಿ ಇಲ್ಲ. ವಿಧಾನ ಮಂಡಲದಲ್ಲಿ ಮತ ನೀಡಲು ಭಾಗವಹಿಸುವಂಥ ಎಲ್ಲಾ ಉದ್ದೇಶಗಳಿಗಲ್ಲದಿದ್ದರೂ, ಕೊನೆಪಕ್ಷ ಅಲ್ಲಿ ಕುಳಿತು ಪ್ರಶ್ನೆಗಳಿಗೆ ಉತ್ತರಿಸಿ, ಸದನವು ಮುಂದೆ ಬರಬಹುದಾದ ಯಾವುದೇ ವಿಶಿಷ್ಟ

ರೀತಿಯ ವಾದವಿವಾದ ಹಾಗೂ ಚರ್ಚೆಯ ಕಾನೂನು ಸಮ್ಮತ್ರ ವ್ಯವಹರಣೆಗಳಲ್ಲಿ ಭಾಗವಹಿಸಲು, ಅಮೇರಿಕಾ ಸಂವಿಧಾನದಲ್ಲಿ ಕಾರ್ಯಾಂಗದ ಸದಸ್ಯರು ಪ್ರತಿನಿಧಿಗಳ ಸದನದಲ್ಲಾಗಲಿ ಅಥವಾ ಸೆನೆಟ್‌ನಲ್ಲಾಗಲಿ ಕುಳಿತುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆಂದು ಸಂವಿಧಾನದಲ್ಲಿ ಒಂದು ಉಪಬಂಧವನ್ನು ಕಲ್ಪಿಸಬೇಕೆಂದು ವಾದಿಸಲಾಯಿತು. ಈ ದೃಷ್ಟಿಯಿಂದ ಅಮೇರಿಕನ್ನರೇ ಕಾರ್ಯಾಂಗವನ್ನು ಶಾಸಕಾಂಗದಿಂದ ಪೂರ್ತಿ ಬೇರ್ಪಡಿಸುವ ಅನುಕೂಲತೆಗೆ ಸಂಬಂಧಿಸಿದಂತೆ ಬಹಳ ಶಂಕೆಯನ್ನು ಹೊಂದಿದ್ದಾರೆಂದು ತಿಳಿಯ ಬರುತ್ತದೆ. ನನ್ನ ಮನಸ್ಸಿನಲ್ಲೂ ಹಾಗೂ ರಾಜ್ಯಶಾಸ್ತ್ರದ ಅನೇಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ, ಸಂಸತ್ ಕಾರ್ಯವು ಎಷ್ಟು ಜಟಿಲ ಹಾಗೂ ವಿಸ್ತೃತವಾಗಿದೆಯೆಂದರೆ ವಿಧಾನ ಮಂಡಲದ ಸದಸ್ಯರು ಸಂಸತ್ತಿನಲ್ಲಿ ಕುಳಿತಿರುವ ಕಾರ್ಯಾಂಗದ ಸದಸ್ಯರಿಂದ ನೇರ ಮಾರ್ಗದರ್ಶನ ಹಾಗೂ ಪ್ರೇರಣೆಯನ್ನು ಪಡೆಯದ ಹೊರತು ಮತ್ತು ಪಡೆಯುವವರೆಗೆ, ವಿಧಾನ ಮಂಡಲದ ಕೆಲಸವನ್ನು ನೆರವೇರಿಸಲು ಸಂಸತ್ ಸದಸ್ಯರಿಗೆ ಬಹಳ ತೊಂದರೆಯಾಗುತ್ತೆಂಬುದರ ಬಗ್ಗೆ ಕಿಂಚಿತ್ ಸಂಶಯವಿಲ್ಲವೆಂಬುದಾಗಿದೆ. ವಿಧಾಯಿ ಕ್ರಮಗಳ ಮೇಲಿನ ಒಂದು ಚರ್ಚೆಯಲ್ಲಿ ಸಂಸತ್ ಸದಸ್ಯರೊಡನೆ ಕಾರ್ಯಾಂಗ ಸದಸ್ಯರು ಭಾಗವಹಿಸಿದರೆ ವಿಧಾನ ಮಂಡಲದ ಸದಸ್ಯರಿಗೆ ಜಟಿಲ ವಿಷಯಗಳ ಮೇಲೆ ಅವಶ್ಯಕ ಮಾರ್ಗದರ್ಶನ ಸಿಗುವುದು ನಿಸ್ಸಂದೇಹ. ಕಾರ್ಯಾಂಗವನ್ನು ಶಾಸಕಾಂಗದಿಂದ ಪ್ರತ್ಯೇಕಿಕರಿಸುವ ಅಮೇರಿಕಾ ಪದ್ಧತಿಯನ್ನು ನಾವು ಅಳವಡಿಸಿಕೊಳ್ಳದಿದ್ದರೆ ಅಂಥ ಭಾರಿ ನಷ್ಟವೇನೂ ಆಗಲಾರದೆಂಬುದು ನನ್ನ ವೈಯಕ್ತಿಕ ಅನಿಸಿಕೆ.

ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸುವುದಕ್ಕೆ ಸಂಬಂಧಿಸಿದಂತೆ, ಈಗಾಗಲೇ ನಾ[illegible] ಹೇಳಿರುವಂತೆ, ಯಾವುದೇ ಅಭಿಪ್ರಾಯ ಭೇದವಿಲ್ಲ ಹಾಗೂ ಆ ಪ್ರಸ್ತಾವವು, [illegible] ವಿವೇಚನಾನುಸಾರ, ನಾವು ಅಧ್ಯಕ್ಷೀಯ ಮಾದರಿಯ ಸರ್ಕಾರವನ್ನು ಹೊಂ[illegible]ವೆಯೆ ಅಥವಾ ಸಂಸತ್ ರೀತಿಯ ಸರ್ಕಾರವನ್ನು ಹೊಂದಿದ್ದೇವೆಯೆ ಎಂ[illegible] ಪ್ರಶ್ನೆಯನ್ನು ಅವಲಂಬಿಸುವುದೇ ಇಲ್ಲ, ಏಕೆಂದರೆ ಸಂಸದೀಯ ಮಾದರಿಯ ಸ[illegible]ರದಲ್ಲಿ ಸಹ ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸಬೇಕೆಂಬುದು ಒಂದು [illegible]ಗೀಕೃತ ತತ್ವವಾಗಿದ್ದು, ನಿರ್ದೇಶಕ ತತ್ವಗಳ ಭಾಗವಾಗಿ ರೂಪುಗೊಳ್ಳುತ್ತಿರುವ [illegible]ಮ್ಮತದಿಂದಲೇ ಅನುಮೋದಿತಗೊಂಡ ಅನುಚ್ಛೇದಕ್ಕೆ ಈಗ ನಾವು ಬದ್ಧರಾಗಿದ್ದೇವೆ.

● ○ ●

# ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು ಕುರಿತು

ಮಾನ್ಯ ಅಧ್ಯಕ್ಷರೆ,

ಕೇಂದ್ರವು ನಿರ್ದೇಶನಗಳನ್ನು ಹೊರಡಿಸಲು ಅಧಿಕಾರಗಳನ್ನು ಹೊಂದಿರದ ಸ್ಥಿತಿಗೆ ತರಲು ಬಯಸುವ ಪ್ರಮುಖ ತಿದ್ದುಪಡಿಯ ಬಗ್ಗೆ ಹೇಳಲು ಇಚ್ಛಿಸುತ್ತೇನೆ. ಮತ್ತು ಆ ಉದ್ದೇಶಕ್ಕಾಗಿ ಆ ನಿರ್ದಿಷ್ಟ ವಿಷಯದ ಇತಿಹಾಸದ ಬಗ್ಗೆ ಹೇಳುವುದು ನನಗೆ ಅವಶ್ಯವಾಗಿದೆ. ಇಲ್ಲಿ ನೀವು ಗಮನಿಸಿರಬಹುದು - ಸುಮ್ಮನೇ ಹೇಳುತ್ತಿದ್ದೇನೆ ಹೊರತು ಅದರಲ್ಲಿ ಯಾವುದೇ ವ್ಯಂಗ್ಯವಿಲ್ಲ- ಮೊದಲನೇ ತಿದ್ದುಪಡಿಯ [illegible]ಗವಾಗಿ ಮಾತನಾಡಿದ ಬಹುತೇಕ ಸದಸ್ಯರು ಮುಸ್ಲಿಮರಾಗಿದ್ದಾರೆ. ಮಾನ್ಯರೆ, [illegible] ಸದಸ್ಯರ ಈ ವಿಶಿಷ್ಟ ಪರಂತುಕದೊಂದಿಗೆ ಸಂಬಂಧಿಸಿರುವುದರ [illegible] ಒಂದು ಇತಿಹಾಸವಿದೆ. ಈ ವಿಷಯವು 1930 ರಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿಗೆ ಸಂಬಂಧಿಸಿದ್ದಾಗಿದೆ. 1930ರಲ್ಲಿ ನಡೆದ ಈ ದುಂಡು [illegible] ಪರಿಷತ್ತಿನಲ್ಲಿ ಜರುಗಿದ ಘಟನೆ[illegible] ಬಗ್ಗೆ ಪರಿಚಯವಿರುವ ಪ್ರತಿಯೊಬ್ಬರೂ, ಆ ಪರಿಷತ್ತನ್ನು ಪ್ರತಿನಿಧಿಸಿದ ಎರಡು ಪ್ರಮುಖ [illegible]ಗಳು ಎಂದರೆ, ಮುಸ್ಲಿಮ್ ಲೀಗ್ ಹಾಗೂ [illegible]ಡಿಯನ್ ನ್ಯಾಷನಲ್ ಕಾಂಗ್ರೆಸ್ - ಈ ಪಕ್ಷ[illegible] ಸಂವಿಧಾನ ಮಹತ್ವವಿರುವ ಅನೇ[illegible] ಅಂಶಗಳ ಬಗ್ಗೆ ಪರಸ್ಪರ ಕಲಹ ಮಾಡಿದರೆಂಬುದನ್ನು ಜ್ಞಾಪಿಸಿಕೊಳ್ಳಬಹುದು. [illegible]ವರು ಪರಸ್ಪರ ಕಲಹಕ್ಕೆ ಕಾರಣವಾದ ಒಂದು ಅಂಶವೆಂದರೆ - ಪ್ರಾಂತೀ[illegible] ಸ್ವಾಯತ್ತತೆಯ ಪ್ರಶ್ನೆಯ ಬಗ್ಗೆ ಶಾಸಕಾಂಗ ಹಾಗೂ ಆಡಳಿತ - ಈ ಎ[illegible] ವಿಷಯಗಳಲ್ಲೂ ಭಾರತದ ಐಕ್ಯತೆಯನ್ನು ಕಾಪಾಡುವ ಆಶಯವನ್ನು ಹೊಂದಿರು[illegible] ಸಂವಿಧಾನದಲ್ಲಿ ಸಂಪೂರ್ಣ ಪ್ರಾಂತೀಯ ಸ್ವಾಯತ್ತತೆ ಇರುವುದು ಅಸಾಧ್ಯವೆಂದು [illegible]ರು ಕೊನೆಗೆ ಮನಗಂಡರು. ಆದರೆ, ಮುಸ್ಲಿಮ್ ಲೀಗ್ ಈ ಅಂಶದ ಮೇಲೆ [illegible]ಷ್ಟು ಹಟವಾದಿಯಾಗಿತ್ತೆಂದರೆ, ಸೆಕ್ರೆಟರಿ ಆಫ್ ಸ್ಟೇಟ್‌ರವರು ಕೇಂದ್ರದಲ್ಲಿ ಒಂದು ರೀತಿಯ ಜವಾಬ್ದಾರಿಯುತ ಸರ್ಕಾರವನ್ನು ಹೊಂದುವ ಬಗ್ಗೆ ಮುಸ್ಲಿಂ ಲೀಗ್‌ನ್ನು ಒಪ್ಪಿಸುವ ಸಲುವಾಗಿ ಕೆಲವು ರಿಯಾಯತಿಗಳನ್ನು ಮಾಡಬೇಕಾಯಿತು. ಅಂದಿನ ಸೆಕ್ರೆಟರಿ ಆಫ್ ಸ್ಟೇಟ್‌ರವರು ಮಾಡಿದ ಒಂದು ಪ್ರಮುಖ ಕಾರ್ಯವೆಂದರೆ, ಕೇಂದ್ರ ಶಾಸನದ ಪ್ರಾಧಿಕಾರವು ಸಮವರ್ತಿ• ಕ್ಷೇತ್ರದಲ್ಲಿ ಶಾಸಕಾಂಗವು ಸಂಬಂಧಿಸಿರುವಷ್ಟರ ಮಟ್ಟಿಗೆ ಅದು ನಿರ್ದೇಶನವನ್ನು ನೀಡಲು ತನ್ನನ್ನು ಸೀಮಿತಗೊಳಿಸಿಕೊಳ್ಳಬೇಕ ಹೊರತು ವಾಸ್ತವ ಆಡಳಿತ ವಿಷಯಕ್ಕೆ ತನ್ನ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಬಾರದೆಂಬ, ಭಾರತ ಸರ್ಕಾರ ಅಧಿನಿಯಮದ 126ನೇ ಪ್ರಕರಣದಲ್ಲಿ ಒಳಗೊಂಡಿರುವ ಈ

ಖಂಡವನ್ನು ಜಾರಿಗೊಳಿಸುವುದಾಗಿದೆ. ಮುಸ್ಲಿಂ ಲೀಗ್‌ಗೆ ಸಮವರ್ತಿ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಕಾನೂನನ್ನು ಕೇಂದ್ರವು ಜಾರಿಗೊಳಿಸಲು ಯಾವುದೇ ಆಕ್ಷೇಪಣೆ ಇಲ್ಲ, ಆದರೆ, ಕೇಂದ್ರ ಸರ್ಕಾರವು ಹಿಂದೂಗಳಿಂದಲೇ ಪ್ರಭಾವಿತರಾಗಿರಬಾರದೆಂಬುದು ಅವರ ವಾದವಾಗಿತ್ತು. ಇದನ್ನು ಸ್ಪಷ್ಟವಾಗಿ ಅವರು ವ್ಯಕ್ತಪಡಿಸಿದರು ಸಹ. ದುಂಡು ಮೇಜಿನ ಪರಿಷತ್ತಿನ ಚರ್ಚೆಯ ಅವಧಿಯಲ್ಲಿ ಮುಸ್ಲಿಂ ಜನರೇ ಬಹು ಸಂಖ್ಯೆಯಲ್ಲಿದ್ದ ಪ್ರಾಂತ್ಯಗಳಲ್ಲಿ ಅಸ್ತಿತ್ವಕ್ಕೆ ಬಂದ ಮುಸ್ಲಿಂ ಲೀಗ್ ಸರ್ಕಾರವು ತಮ್ಮ ಬಹುಸಂಖ್ಯೆಯ ಕಾರಣದಿಂದಾಗಿ ಅವರಿಗೆ ಸೇರಿತ್ತೆಂಬ ಪ್ರದೇಶಗಳಲ್ಲಿ ಎಂದರೆ, ವಾಯುವ್ಯ ಸರಹದ್ದು ಪ್ರಾಂತ್ಯ, ಪಂಜಾಬ್, ಬಂಗಾಳ ಮತ್ತು ಸ್ವಲ್ಪ ಮಟ್ಟಿಗೆ ಅಸ್ಸಾಂ ಪ್ರಾಂತ್ಯ - ಈ ಪ್ರದೇಶಗಳಲ್ಲಿ ನಿರ್ದಿಷ್ಟ ಕಾನೂನು ಇರಬಾರದೆಂದು ಅಪೇಕ್ಷಿಸಿದುದರಿಂದ ಸೆಕ್ರೆಟರಿ ಆಫ್ ಸ್ಟೇಟ್‌ರವರು ಈ ರಿಯಾಯತಿ ಮಾಡಬೇಕಾಯಿತು. ಇದು ರಿಯಾಯತಿ ಎಂಬುದರ ಬಗ್ಗೆ ನನಗೆ ಯಾವ ರೀತಿಯ ಸಂದೇಹವೂ ಇಲ್ಲ. ಸಮವರ್ತಿ ಕ್ಷೇತ್ರದಲ್ಲಿ ಅಂಗೀಕರಿಸಿದ ಒಂದು ಕಾನೂನನ್ನು ಜಾರಿಗೆ ತರಲು ಕೇಂದ್ರಕ್ಕೆ ಯಾವುದೇ ಅಧಿಕಾರವಿರಬಾರದೆಂಬುದು ತತ್ವದ ಅಂಗೀಕಾರವಾಗಿರಲಿಲ್ಲ, ಆದ್ದರಿಂದ ಭಾರತ ಸರ್ಕಾರ ಅಧಿನಿಯಮ, 1935ರ 126ನೇ ಪ್ರಕರಣದಲ್ಲಿ ಹೇಳಿರುವ ಸ್ಥಿತಿಯು ತತ್ವದ ಮೇಲೆ ಸಮರ್ಥನೀಯವಾಗಿ ಇರುವುದಿಲ್ಲ, ಮುಸ್ಲಿಂ ಜನರಿಗೆ ಒಂದು ರಿಯಾಯಿತಿಯನ್ನೂ ಮಾಡಿದುದರಿಂದಾಗಿ ಅದು ಸಮರ್ಥನೆಗೊಂಡಿದೆ ಎಂದು ನಾನು ಹೇಳಬಯಸುತ್ತೇನೆ.

ಆದ್ದರಿಂದ ಈ ತಿದ್ದುಪಡಿಯ ಪರವಾಗಿ ಒತ್ತಾಯಿಸಿದ ವಾದಗಳಿಗೆ ಯಾವುದೇ ಬೆಂಬಲವನ್ನು ಪಡೆಯಲು 126ನೇ ಪ್ರಕರಣವನ್ನು ಅವಲಂಬಿಸುವುದು ಸರಿಯಲ್ಲ.

ಮಾನ್ಯ ಅಧ್ಯಕ್ಷರೆ, ಮಹಾಯುದ್ಧವನ್ನು ಘೋಷಿಸುವುದಕ್ಕೆ ನಿಕಟ ಪೂರ್ವದಲ್ಲಿ ಸಂಸತ್ ಅಧಿನಿಯಮ ಮಿತಿಗೊಳಿಸಿದ ತರುವಾಯದ ಶಾಸನದಲ್ಲಿ ಭಾರತ ಸರ್ಕಾರ ಅಧಿನಿಯಮದ 126ನೇ ಪ್ರಕರಣದಲ್ಲಿ ಹೇಳಲಾದ ಸ್ಥಿತಿಯು ಮೂಲಭೂತವಾಗಿ ತಪ್ಪಾಗಿತ್ತೆಂದು ಸೆಕ್ರೆಟರಿ ಆಫ್ ಸ್ಟೇಟ್‌ರವರು ಒಪ್ಪಿಕೊಂಡಿದ್ದರು. ಮಹಾಯುದ್ಧವನ್ನು ಘೋಷಿಸುವುದಕ್ಕೆ ಸ್ವಲ್ಪ ಮುಂಚೆ ಸಂಸತ್ತಿನಿಂದ ರಚಿಸಲಾದ ಒಂದು ಕಾನೂನಿನಿಂದ 126-ಎ ಪ್ರಕರಣವನ್ನು 126ನೇ ಪ್ರಕರಣಕ್ಕೆ ಪೂರಕವಾಗಿ ಮಾಡಲಾಯಿತೆಂಬುದನ್ನು ಮಾನ್ಯ ಸದಸ್ಯರು ಮರೆತಿರಲಾರರು. ಸಂಸತ್ತಿಗೆ 126-ಎ ಪ್ರಕರಣವನ್ನು ಅಧಿನಿಯಮಿಸುವುದು ಅವಶ್ಯವೆಂದು ಏಕೆ ಕಂಡು ಬಂದೀತು? ಸಮವರ್ತಿ ಶಾಸನವು ಸಂಬಂಧಿಸಿರುವಷ್ಟರ ಮಟ್ಟಿಗೆ 126-ಎ ಪ್ರಕರಣವು

ಭಾರತ ಸರ್ಕಾರದ ಅಧಿನಿಯಮದ ಪ್ರಕರಣಗಳಲ್ಲಿ ತೀವ್ರ ಪರಿಣಾಮವುಳ್ಳ ಪ್ರಕರಣವಾಗಿದೆ. ಅದು ಕೇಂದ್ರ ಸರ್ಕಾರವನ್ನು ಪ್ರಾಂತೀಯ ವಿಷಯಗಳಲ್ಲಿ ಮಾತ್ರ ಶಾಸನ ರಚಿಸುವುದಕ್ಕೆ ಅನುಮತಿಸುವುದೇ ಅಲ್ಲದೆ, ಅದು, ಕೇಂದ್ರ ಸರ್ಕಾರವನ್ನು ಪ್ರಾಂತೀಯ ಹಾಗೂ ಸಮವರ್ತಿ ವಿಷಯಗಳ ಮೇಲಿನ ಆಡಳಿತ ನಡೆಸುವುದಕ್ಕೂ ಅನುಮತಿಸುತ್ತದೆ. ಸೆಕ್ರೆಟರಿ ಆಫ್ ಸ್ಟೇಟ್‌ರವರು ಮಹಾಯುದ್ಧದ ಸಮಯದಲ್ಲಿ 126ನೇ ಪ್ರಕರಣವು ರಾಜ್ಯದ ಆಡಳಿತಕ್ಕೆ ತೀರಾ ಪೂರಕವಾಗಿ ಪರಿಣಮಿಸಬಹುದೆಂದು ಭಾವಿಸಿದುದರಿಂದ 126-ಎ ಪ್ರಕರಣವನ್ನು ರಚಿಸಲಾಯಿತು. ಆದ್ದರಿಂದ ತುರ್ತು ಉದ್ದೇಶಕ್ಕಾಗಿ ರಚಿಸಲಾದ 126-ಎ ಪ್ರಕರಣವು ತುರ್ತು ಪರಿಸ್ಥಿತಿಗಳಿಗೆ ಮಾತ್ರವಲ್ಲದೇ ಸಾಮಾನ್ಯ ಸಮಯಗಳಿಗೂ ಅನ್ವಯಿಸಬಹುದೆಂದು ನನ್ನ ಅಭಿಪ್ರಾಯವಾಗಿದೆ. ಆದ್ದರಿಂದ ಸದನದಲ್ಲಿ ನನ್ನ ಮೊದಲ ಅನಿಸಿಕೆ ಎಂದರೆ- ನಾನು ಈಗಾಗಲೇ ಹೇಳಿರುವ ಸನ್ನಿವೇಶಗಳಿಗೆ ಈ ದಿನಗಳಲ್ಲಿ 126-ಎ ಪ್ರಕರಣದ ತತ್ವದ ಮೇಲೆ ಯಾವ ವಾದವೂ ನಿಲ್ಲಲಾರದು.

........... ಚರ್ಚೆಗೆ ತಡೆ* ...........

ಇದು ಸಂಗತಿಯ [illegible] ಹೇಳಿಕೆಯಾದರೂ, (ಹಾಗೆ ನಾನು ಒಪ್ಪುತ್ತೇನೆ) ಮುಸ್ಲಿಂ ಸದಸ್ಯರು ಮುಸ್ಲಿಂ ಲೀಗ್‌ನ ತತ್ವವನ್ನು ಇನ್ನೂ ಬಿಟ್ಟಿಲ್ಲ. ಅದನ್ನು ಅವರು ಬಿಡಬೇಕಾಗಿತ್ತು. ಅವರು ಮುಸ್ಲಿಂ ಲೀಗ್ ಅಸ್ತಿತ್ವದಲ್ಲಿದ್ದಾಗ ಹಾಗೂ ಮುಸ್ಲಿಂ ಪ್ರಾಂತಗಳಿದ್ದಾಗ ಕಾನೂನು ಮಾನ್ಯವಾಗಿದ್ದ ವಾದಗಳನ್ನೇ ಪುನರುಚ್ಚರಿಸುತ್ತಿದ್ದಾರೆ. ಅದಕ್ಕೆ ಈಗ ಯಾವುದೇ ಕಾನೂನು ಮಾನ್ಯತೆ ಇಲ್ಲ. ಮುಸ್ಲಿಂ ಸದಸ್ಯರು ಅದನ್ನೇ ಏಕೆ ಪುನರುಚ್ಚರಿಸುತ್ತಾರೆಂದು ನನಗೆ ತಿಳಿಯುವುದಿಲ್ಲ ಎಂಬ ವಿಷಯದ ಬಗ್ಗೆ ನಾನು ಹೇಳುತ್ತಿದ್ದೆನು.

ನಾವು ಭಾರತ ಸರ್ಕಾರ ಅಧಿನಿಯಮದ 126ನೇ ಪ್ರಕರಣದಲ್ಲಿ ಒಳಗೊಂಡಿರುವ ಪರಂತುಕದಿಂದ ದೂರ ಸರಿಯುತ್ತಿದ್ದೇವೆಂಬ ವಾದದಲ್ಲಿ

* ಶ್ರೀ ಬಿ. ಪೋಕರ್ ಬಹದ್ದೂರ್ : ಮಾನ್ಯ ಅಧ್ಯಕ್ಷರೆ, ನಿಮ್ಮ ಅನುಮತಿಯನ್ನು ಕೋರಿ ನನ್ನ ವಿದ್ವಾಂಸ ಮಿತ್ರರ ಅಭಿಪ್ರಾಯವನ್ನು ಸರಿಪಡಿಸಲು ಇಚ್ಛಿಸುತ್ತೇನೆ. ಈ ಸಂವಿಧಾನವು ಪ್ರಸ್ತುತ ಭಾರತೀಯ ಯೂನಿಯನ್‌ಗಾಗಿ ರಚಿಸಲಾಗಿದ್ದು ಮುಸ್ಲಿಂರು ಬಹು ಸಂಖ್ಯೆಯಲ್ಲಿಲ್ಲದಿರುವ ಒಂದು ಪ್ರಾಂತ್ಯವೂ ಇಲ್ಲದಿರುವುದರಿಂದ, ಮುಸ್ಲಿಂ ಲೀಗ್‌ನ ಹಿತಾಸಕ್ತಿಯಲ್ಲಿ ಮುಸ್ಲಿಂ ಸದಸ್ಯರು ತಿದ್ದುಪಡಿಯನ್ನು ಮಂಡಿಸುತ್ತಿದ್ದಾರೆಂದು ಹೇಳುವುದರಲ್ಲಿ ಯಾವುದೇ ಸತ್ಯವೂ ಇಲ್ಲ, ಈ ವಾದವು ಸಂಗತಿಯ ತಪ್ಪು ಗ್ರಹಿಕೆಯಿಂದಾಗಿದ್ದು ತಪ್ಪು ದಾರಿಗೆ ಎಳೆಯುವಂತಾಗಿದೆ. ಮಾನ್ಯ ಕಾನೂನು ಮಂತ್ರಿಯವರು, ಪ್ರಸ್ತುತ ಭಾರತೀಯ ಯೂನಿಯನ್‌ನಲ್ಲಿ ಮುಸ್ಲಿಂರಿಗೆ ಈ ತಿದ್ದುಪಡಿಯಿಂದಾಗಿ ಯಾವುದೇ ಪ್ರಯೋಜನ ದೊರಕುವುದಿಲ್ಲವೆಂಬ ಸಂಗತಿಯನ್ನು ಮರೆತಿರುವಂತೆ ಕಾಣುತ್ತದೆ.

ಯಾವುದೇ ತಿರುಳಿಲ್ಲವೆಂದು ನಾನು ಹೇಳುತ್ತಿದ್ದೆ. ನಾನು ಹೇಳಿರುವಂತೆ 126ನೇ ಪ್ರಕರಣವು ಯಾವುದೇ ತತ್ವದ ಮೇಲೆ ಆಧಾರಿತವಾಗಿರಲಿಲ್ಲ.

ಪರಂತುಕವನ್ನು ಬೆಂಬಲಿಸುತ್ತಾ ನಾನು ಎರಡು ವಿಷಯಗಳ ಬಗ್ಗೆ ಹೇಳಬಯಸುತ್ತೇನೆ. ಈ ಉಪಬಂಧದಲ್ಲಿ ಒಳಗೊಂಡಿರುವ ಪ್ರಸ್ತಾವಕ್ಕೆ ಸಾಕಷ್ಟು ಪೂರ್ವ ನಿದರ್ಶನವಿದೆ. ನನ್ನ ಸನ್ಮಾನ್ಯ ಮಿತ್ರರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು, ಫೆಡರಲ್ ಸಂವಿಧಾನವಿರುವ ವಿವಿಧ ದೇಶಗಳಲ್ಲಿ ಕಂಡು ಬರುವ ಸ್ಥಿತಿಗತಿಗಳ ಬಗ್ಗೆ ಸುದೀರ್ಘವಾಗಿ ಭಾಷಣ ಮಾಡಿದ್ದಾರೆ. ಆದರೆ, ನಾನು ಆಸ್ಟ್ರೇಲಿಯಾ ಸಂವಿಧಾನದ ಬಗ್ಗೆ ಒಂದು ಉಲ್ಲೇಖ ಮಾಡಲು ಇಚ್ಛಿಸುತ್ತೇನೆ. ಆಸ್ಟ್ರೇಲಿಯಾದ ಸಂವಿಧಾನದಲ್ಲೂ ಸಹ ಶಾಸನದ ಸಮವರ್ತಿ ಕ್ಷೇತ್ರವೆಂದು ಕರೆಯುವ ಕ್ಷೇತ್ರವಿದೆ. ಆಸ್ಟ್ರೇಲಿಯಾ ಸಂವಿಧಾನದ ಅಡಿಯಲ್ಲಿ, ಕಾಮನ್‌ವೆಲ್ತ್ ಸಂಸತ್ತು, ಉಪಳಿತ ಪ್ರಾಧಿಕಾರವನ್ನು ತಾನು ವಹಿಸಲು ಸಮವರ್ತಿ ಕ್ಷೇತ್ರದಲ್ಲಿ ಯಾವುದೇ ಕಾನೂನನ್ನು ರಚಿಸಲು ಅವಕಾಶವಿದೆ. ಹೆಸರಾಂತ ವಕೀಲರಾದ ಶ್ರೀ ವೈನ್ಸ್ ರವರ "ಆಸ್ಟ್ರೇಲಿಯಾದಲ್ಲಿ ವಿಧಾಯಿ ಹಾಗೂ ಕಾರ್ಯಾಂಗ ಅಧಿಕಾರಗಳು" ಎಂಬ ಪ್ರಸಿದ್ಧ ಪುಸ್ತಕದಿಂದ ಒಂದು ಪ್ಯಾರಾವನ್ನು ಉದ್ಧರಿಸುತ್ತೇನೆ. ಅದರಲ್ಲಿ ಅದು ಹೀಗಿದೆ. ಅವರೂ ಸಹ ಇದೇ ರೀತಿಯಲ್ಲಿ ಹೇಳಿದ್ದಾರೆ.

ಕೊನೆಯದಾಗಿ, ಕಾಮನ್‌ವೆಲ್ತ್ ನಿಯಮಗಳಿವೆ. ಲೆಫ್ರಾಯ್ ಹೇಳುವಂತೆ ನಿರ್ಬಂಧಿಸುವ ಯಾವುದೇ ಶಾಸನದ ಇದ್ದ ಹೊರತು, ಕಾರ್ಯಾಂಗ ಅಧಿಕಾರವನ್ನು ಶಾಸಕಾಂಗ ಅಧಿಕಾರದಿಂದ ಪಡೆಯಲಾಗಿದೆ. ಕೆನಡಾದಲ್ಲಿ, ದ್ವಿಮತ ಗಣನೆಯಿಂದಾಗಿ ಪ್ರತಿಯೊಂದು ಸರ್ಕಾರವು ಅನನ್ಯ ಶಾಸನ ಅಧಿಕಾರಗಳಿಂದ ಬದ್ಧವಾಗಿರುವುದರಿಂದ ಈ ಪ್ರಸ್ತಾವವು ಅಲ್ಲಿ ನಿಜವೆಂದು ತೋರುತ್ತದೆ. ಆದರೆ, ಇದನ್ನು ಆಸ್ಟ್ರೇಲಿಯಾಕ್ಕೆ ಅನ್ವಯಿಸುವ ಹಾಗಿಲ್ಲ. ಅಲ್ಲಿ ಕಾಮನ್‌ವೆಲ್ತ್‌ನ ವಿಧಾಯಿ ಅಧಿಕಾರವು ಅನನ್ಯವಾಗಿದೆ. ಉದಾಹರಣೆಗೆ, ರಕ್ಷಣೆಗೆ ಸಂಬಂಧಿಸಿದಂತೆ - ಅನುದಾನ ವಿಷಯಕ್ಕೆ ಸಂಬಂಧಿಸಿದ ಕಾರ್ಯಾಂಗ ಅಧಿಕಾರವು ಕಾಮನ್‌ವೆಲ್ತ್‌ನಲ್ಲಿ ಅಂತರ್ನಿಹಿತವಾಗಿದೆ. ಆದರೆ, ಸಮವರ್ತಿ ಅಧಿಕಾರಗಳ ಸಂಬಂಧದಲ್ಲಿ, ಕಾರ್ಯಾಂಗ ಪ್ರಕಾರ್ಯವು ಕಾಮನ್‌ವೆಲ್ತ್‌ನ ವಿದಾಯೀ ಅಧಿಕಾರವು ಚಲಾಯಿಸುವವರೆಗೆ ರಾಜ್ಯಗಳಲ್ಲೇ ಉಳಿಯುತ್ತದೆ. ಅಂದರೆ ಸಮವರ್ತಿ ಕ್ಷೇತ್ರದಲ್ಲಿ ಕಾಮನ್‌ವೆಲ್ತ್ ಶಾಸನಗಳನ್ನು ರಚಿಸುವ ತನಗೆ ಇದ್ದ ಅಧಿಕಾರಗಳನ್ನು ಚಲಾಯಿಸುವವರೆಗೆ ಕಾರ್ಯಾಂಗ ಪ್ರಾಧಿಕಾರವು ರಾಜ್ಯಾಂಗದಲ್ಲೇ ಇರುತ್ತದೆ. ಕಾಮನ್‌ವೆಲ್ತ್ ಅಧಿಕಾರ ಚಲಾಯಿಸಿದ ಕೂಡಲೇ, ಕಾನೂನಿನ ಕಾರ್ಯಾಂಗ

ಪ್ರಕಾರ್ಯವು ತಾನೇತಾನಾಗಿ ಕಾಮನ್‌ವೆಲ್ತ್‌ಗೆ ವರ್ಗಾಯಿತವಾಗುತ್ತದೆ. ಆದ್ದರಿಂದ ಆಸ್ಟ್ರೇಲಿಯಾದಲ್ಲಿ ಕಂಡುಬರುವ ಸ್ಥಿತಿಯಂತೆ ಪರಂತುಕದಲ್ಲಿ ನಿರೂಪಿಸಿರುವ ಸ್ಥಿತಿಯನ್ನು ಹೋಲಿಸಿದರೆ, ಯಾರೇ ಒಬ್ಬರು ಉದ್ಧರಿಸಬಹುದಾದಂತೆ, ನಾನು ಫೆಡರಲ್ ತತ್ವದಿಂದ ಯಾವುದೇ ಗಣನೀಯ ಪ್ರಮಾಣದಲ್ಲಿ ದೂರ ಸರಿಯುತ್ತಿಲ್ಲವೆಂದು ನಿವೇದಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಈಗ ನನ್ನ ಎರಡನೇ ನಿವೇದನೆ ಎಂದರೆ, ಯಾವುದೇ ವಿಶೇಷ ಸಂದರ್ಭದಲ್ಲಿ ಕೇಂದ್ರವನ್ನು ಸಮವರ್ತಿ ಪಟ್ಟಿಯಲ್ಲಿ ಕೆಲವು ಕಾನೂನುಗಳ ಆಡಳಿತವನ್ನು ತಾನೇ ವಹಿಸಿಕೊಳ್ಳಲು ಅನುಮತಿಸುವ ರೀತಿಯ ಪರಂತುಕಕ್ಕೆ ಸಾಕಷ್ಟು ಸಮರ್ಥನೆಗಳಿವೆ. ನಾನು ಒಂದೆರಡು ದೃಷ್ಟಾಂತಗಳನ್ನು ನೀಡಲು ಬಯಸುತ್ತೇನೆ. ಸಂವಿಧಾನ ಸಭೆಯು ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸುವ 11ನೇ ಅನುಚ್ಛೇದವನ್ನು ಅಂಗೀಕರಿಸಿದೆ. ಅದು ಸಂಸತ್ತಿಗೂ ಸಹ ಅಸ್ಪೃಶ್ಯತಾ ನಿರ್ಮೂಲನವು ಒಂದು ಸತ್ಯವಾಗಿ ಪರಿಣಮಿಸುವ ಸಲುವಾಗಿ ಸಮುಚಿತ ಕಾನೂನನ್ನು ರಚಿಸುವುದಕ್ಕೆ ಅನುಮತಿಸುತ್ತದೆ. ಕೇಂದ್ರವು ಕೆಲವು ದಂಡಗಳನ್ನು ನಿಯಮಿಸಿ ಒಂದು ಕಾನೂನನ್ನು ರಚಿಸಿತ್ತೆಂದು ಇಟ್ಟುಕೊಳ್ಳೋಣ. ಅಸ್ಪೃಶ್ಯರು ಅವರ ನಾಗರಿಕ ಹಕ್ಕುಗಳನ್ನು ಚಲಾಯಿಸುವುದರಿಂದ ಉಂಟಾದ ಅಡೆತಡೆಗಳಿಗೆ ಕೆಲವು ಅಭಿಯೋಗವನ್ನು ಹೂಡಿತೆಂದು ಈ ರೀತಿಯ ಒಂದು ಶಾಸನವನ್ನು ಮಾಡಿದರೆ ಮತ್ತು ಯಾವುದೇ ಒಂದು ನಿರ್ದಿಷ್ಟ ಪ್ರಾಂತ್ಯದಲ್ಲಿ ಅಸ್ಪೃಶ್ಯತಾ ನಿವಾರಣೆಯ ಪರವಾಗಿನ ಭಾವನೆಗಳು ನಿಜವಾಗಿರದಿದ್ದರೆ ಹಾಗೂ ಅಷ್ಟು ತೀವ್ರವಾಗಿರದಿದ್ದರೆ ಮತ್ತು ಸಂವಿಧಾನವು ಖಾತ್ರಿಪಡಿಸುವ ಎಲ್ಲಾ ನಾಗರಿಕ ಹಕ್ಕುಗಳೂ ಅಸ್ಪೃಶ್ಯರಿಗೆ ಸಿಗಲೇಬೇಕೆಂದು ಸರ್ಕಾರವು ಯಾವುದೇ ಆಸಕ್ತಿ ಹೊಂದಿರದಿದ್ದರೆ, ಅಸ್ಪೃಶ್ಯತೆಯ ವಿಷಯದಲ್ಲಿ ಸಂವಿಧಾನದಿಂದ ಸಾಕಷ್ಟು ಜವಾಬ್ದಾರಿಯನ್ನು ಹೊಂದಿರುವ ಕೇಂದ್ರವು, ಕೇವಲ ಕಾನೂನನ್ನು ಅನುಮೋದಿಸಿ ಎಲ್ಲಾ ನಿರ್ದಿಷ್ಟ ಕಾನೂನುಗಳನ್ನು ನಿರ್ವಹಿಸುವ ವಿಷಯದಲ್ಲಿ ಪ್ರಾಂತೀಯ ಸರ್ಕಾರವು ಅನುಸರಿಸುತ್ತಿರುವ ನೀತಿಯನ್ನು ಸುಮ್ಮನೆ ಕೈಕಟ್ಟಿಕೊಂಡು ಕುಳಿತು ನೋಡುತ್ತಿರುವುದರಲ್ಲಿ ಯಾವುದೇ ತರ್ಕವಿದೆಯೇ ಹಾಗೂ ಅದು ಸರಿಯೇ? ಎಲ್ಲರಿಗೂ ನೆನಪಿರುವಂತೆ, ಅಂಥ ಕಾನೂನನ್ನು ಜಾರಿಗೊಳಿಸಲು ಹೆಚ್ಚಿನ ಪೋಲೀಸ್ ಸಿಬ್ಬಂದಿಯ ಅಗತ್ಯವಿರುತ್ತದೆ. ಅಪರಾಧವು ಸಂಜ್ಞೇಯವಾಗಿದ್ದಲ್ಲಿ ಅಭಿಯೋಗ ಹೂಡಲು ಹಾಗೂ ಆಡಳಿತದ ವಿಷಯದಲ್ಲಿನ ಎಲ್ಲಾ ಖರ್ಚುಗಳನ್ನು ಭರಿಸಲು, ವಿಶೇಷ ಆಡಳಿತ ಯಂತ್ರದ ಅವಶ್ಯಕತೆ ಇರುತ್ತದೆ. ಅದು ಇಲ್ಲದಿದ್ದರೆ, ಈ ಕಾನೂನನ್ನು ಜಾರಿಗೊಳಿಸುವುದರಿಂದ ಯಾವುದೇ ಉಪಯೋಗವಿರುವುದಿಲ್ಲ, ಇಂಥ ಒಂದು ರೀತಿಯ ಕಾನೂನನ್ನು ರಚಿಸುವ ಕೇಂದ್ರಕ್ಕೆ ಅದನ್ನು ಜಾರಿಗೊಳಿಸುವ ಅಧಿಕಾರವಿರಬಾರದೆ? ಇಂಥ ವಿಶೇಷ ಮಹತ್ವದ ವಿಷಯದ ಮೇಲೆ ಕೇಂದ್ರವು

ಕಾನೂನನ್ನು ರಚಿಸುವುದರ ಹೊರತು ಬೇರೇನೂ ಮಾಡಬಾರದೆಂದು ಹೇಳುವಂಥವರು ಯಾರಾದರೂ ಇರುವರೇ ಎಂಬುದನ್ನು ತಿಳಿಯಬೇಕಾಗಿದೆ.

ನಾನು ಇನ್ನೊಂದು ದೃಷ್ಟಾಂತವನ್ನು ನೀಡಬಯಸುತ್ತೇನೆ. ನಮ್ಮ ದೇಶದಲ್ಲಿ ಬಾಲ್ಯ ವಿವಾಹ ಪದ್ಧತಿಯು ರೂಢಿಯಲ್ಲಿದ್ದು ಅದರ ವಿರುದ್ಧವಾಗಿ ಬಹಳಷ್ಟು ಭಾವಾವೇಶ, ಸಹಾನುಭೂತಿ ಹಾಗೂ ಕಲಹಗಳಿದ್ದವು. ಕೇಂದ್ರವು ಇದರ ಬಗ್ಗೆ ಕಾನೂನುಗಳನ್ನು ಸಹ ರಚಿಸಿತು. ಅವುಗಳು ಪ್ರಾಂತ್ಯದಿಂದ ಅನುಮೋದನೆಗೊಳ್ಳಲು ಉಳಿದವು. ಸರ್ಕಾರದಲ್ಲಿ ಶಾಸಕೀಯ ಅಧಿಕಾರಗಳು ನಿಹಿತಗೊಂಡು ಅವನ್ನು ನಿರ್ವಹಿಸುವ ಅಧಿಕಾರಗಳು ಬೇರೆಲ್ಲೂ ನಿಹಿತವಾಗಿರುವ ಈ ದ್ವಂದ್ವ ನೀತಿಯಿಂದಾಗಿ ಉಂಟಾದ ಪರಿಣಾಮವು ಎಲ್ಲರಿಗೂ ತಿಳಿದೇ ಇದೆ. ಬಾಲ್ಯ ವಿವಾಹದ ಮೇಲೆ ಶಾಸನವಿದ್ದಾಗ್ಯೂ, ಬಾಲ್ಯ ವಿವಾಹವು ಅವುಗಳು ಹಿಂದಿನಷ್ಟೇ ವಿಫಲವಾಗಿ ರೂಢಿಯಲ್ಲಿದೆ ಎಂದು ನನಗೆ ತಿಳಿದು ಬಂದಿದೆ. ಈ ಕೆಡುಕನ್ನು ನಿವಾರಿಸಲು ಬಹಳಷ್ಟು ಆಸಕ್ತಿಯನ್ನು ಹೊಂದಿರುವ ಕೇಂದ್ರಕ್ಕೆ ಈ ರೀತಿಯ ಕಾನೂನನ್ನು ಜಾರಿಗೊಳಿಸಲು ಸ್ವಲ್ಪವಾದರೂ ಅಧಿಕಾರವಿರುವುದು ಅಪೇಕ್ಷಣೀಯವಲ್ಲವೇ? ಭಾವನೆಯ ತೀವ್ರತೆಯಿಂದ ಹಾಗೂ ಅದನ್ನು ಜಾರಿಗೆ ತರುವ ನಿರ್ಧಾರದಿಂದ ಸಂಸತ್ತಿನಿಂದ ರಚಿತಗೊಂಡ ಶಾಸನವನ್ನು ಪ್ರಾಂತ್ಯಗಳು ತಮಗಿಷ್ಟಬಂದ ಹಾಗೆ ಅನ್ವಯಿಸಿಕೊಳ್ಳಲು ಅನುಮತಿಸಬೇಕೆ? ಇನ್ನೊಂದು ಉದಾಹರಣೆಯನ್ನು ಅಂದರೆ, ಕಾರ್ಖಾನೆಗೆ ಸಂಬಂಧಿಸಿದ ಶಾಸನವನ್ನು ತೆಗೆದುಕೊಳ್ಳೋಣ. ನನಗೆ ಚೆನ್ನಾಗಿ ಜ್ಞಾಪಕವಿದೆ ನಾನು ಭಾರತ ಸರ್ಕಾರದ ಕಾರ್ಮಿಕ ಇಲಾಖೆಯ ಮಂತ್ರಿಯಾಗಿದ್ದಾಗ ಯಾವುದೇ ಪ್ರಾಂತೀಯ ಸರ್ಕಾರ ಅಥವಾ ಅವುಗಳಲ್ಲಿ ಬಹಳಷ್ಟು, ಕಾರ್ಖಾನೆಯನ್ನು ಸ್ಥಾಪಿಸಿ, ಕಾರ್ಖಾನೆ ಕಾನೂನುಗಳು ಸರಿಯಾಗಿ ನಿರ್ವಹಿಸಲಾಗುತ್ತಿದೆಯೆಂದು ಗಮನಿಸುವ ಸಲುವಾಗಿ ಕಾರ್ಖಾನೆ ತಪಾಸಣಾಧಿಕಾರಿಗಳನ್ನು ನೇಮಿಸಲು ತಯಾರಿರಲಿಲ್ಲ. ಕಾರ್ಮಿಕರಿಗೆ ಸಂಬಂಧಿಸಿದ ಶಾಸನಗಳು ಕೇವಲ ಕಾಗದದಲ್ಲಿದ್ದು ಅದನ್ನು ಪರಿಣಾಮಕಾರಿಯಾಗಿಸಲು ಯಾವುದೇ ಕ್ರಮವನ್ನು ಕೈಗೊಳ್ಳದಿರುವುದು ಅಪೇಕ್ಷಣೀಯವೇ? ಕೇಂದ್ರಕ್ಕೆ ತಾನು ರಚಿಸಿದ ಕಾನೂನಿನ ಆಡಳಿತವನ್ನು ಜಾರಿಗೆ ತರಲು ಸ್ವಲ್ಪವಾದರೂ ಅಧಿಕಾರವಿದ್ದ ಹೊರತು ಅದು ಅವುಗಳನ್ನು ಹೇಗೆ ಪರಿಣಾಮಕಾರಿಯಾಗಿ ತರಬಲ್ಲದು? ಆದ್ದರಿಂದ ನಾನು ನಿವೇದಿಸುವುದೇನೆಂದರೆ, ಈಗಾಗಲೇ ನಾನು ಉದಾಹರಿಸಿರುವ ಸಂದರ್ಭಗಳಿಗೆ ಗಮನ ನೀಡಿ ಮಾನ್ಯ ಸದಸ್ಯರುಗಳು ತಮ್ಮ ಸ್ವಂತ ಅನುಭವದಿಂದ ಇಂಥ ಅನೇಕ ಸಂದರ್ಭಗಳನ್ನು ಜ್ಞಾಪಿಸಿಕೊಳ್ಳಬಹುದು. ಸಮವರ್ತಿ ಕ್ಷೇತ್ರದಲ್ಲಿ ಕೇಂದ್ರವು

ರಚಿಸುವ ಶಾಸನದ ಹೆಚ್ಚಿನಷ್ಟು ಭಾಗವು ಕೇವಲ ಕಾಗದದ ಶಾಸನಗಳಾಗಿಯೇ ಉಳಿಯುತ್ತವೆ. ಇದಕ್ಕೆ ಕಾರಣವೇನೆಂದರೆ, ಕೇಂದ್ರಕ್ಕೆ ತಾನು ರಚಿಸಿರುವ ಕಾನೂನುಗಳನ್ನು ತಾನೇ ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಇದು ಒಂದು ಗಮನಹರಿಸಬೇಕಾದ ಪರಿಸ್ಥಿತಿಯಾಗಿದ್ದು ಇದನ್ನು ಸರಿಪಡಿಸಬೇಕಾಗಿದೆ ಮತ್ತು ಅದು ಈ ಪರಂತುಕದಿಂದ ಮಾತ್ರ ಸಾಧ್ಯ.

ನಾನು ಇನ್ನೊಂದು [illegible] ಬಗ್ಗೆ [illegible]ತ್ತೇನೆ. ನಿಜ ಹೇಳುವುದಾದರೆ ಪ್ರಾಂತೀಯ ಸರ್ಕಾರವು ಈ ಪರಂತುಕವನ್ನು ಸ್ವಾಗತಿಸಬೇಕು ಏಕೆಂದರೆ, ಈಗಿರುವ ಸ್ಥಿತಿಯಲ್ಲಿ ಕೆಲವು ರೀತಿಯ ಆರ್ಥಿಕ ಅಸಂಗತಿಯಿದೆ. ಕೇಂದ್ರವು ಶಾಸನಗಳನ್ನು ರಚಿಸಿ, ಪ್ರಾಂತ್ಯಗಳಿಗೆ ಅವುಗಳನ್ನು ಜಾರಿಗೆ ತರಲು ಬಿಟ್ಟರೆ, ಈ ಕಾನೂನುಗಳನ್ನು ಜಾರಿಗೆ ತರಲು ಅವಶ್ಯವಾದ ಆಡಳಿತ ವ್ಯವಸ್ಥೆಯ ಆಳವಡಿಕೆಯಲ್ಲಿ ಒಳಗೊಂಡಿರುವ ಆರ್ಥಿಕ ಹೊರೆಯನ್ನು ಪ್ರಾಂತ್ಯಗಳಿಗೆ ಹೊರಿಸಿದಂತಾಗುತ್ತದೆ. ಈ ಕಾನೂನುಗಳನ್ನು ಜಾರಿಗೆ ತರಲು ಕೇಂದ್ರವು ತಾನೇ ಈ ಜವಾಬ್ದಾರಿಯನ್ನು ವಹಿಸಿಕೊಂಡರೆ, ಅಷ್ಟರಮಟ್ಟಿಗೆ ಪ್ರಾಂತ್ಯಗಳಿಗೆ ಯಾವುದೇ ಆರ್ಥಿಕ ಹೊರೆಯಿಂದ ಬಿಡುಗಡೆ ಸಿಗುತ್ತದೆ. ಆದ್ದರಿಂದ, ಈ ದೃಷ್ಟಿಯಿಂದ ಪ್ರಾಂತ್ಯಗಳಿಗೆ ಅತಿ ಜರೂರಾಗಿ ಬೇಕಾಗಿರುವ ಹೆಚ್ಚಿನ ಪರಿಹಾರಕ್ಕಾಗಿ ಈ ಪರಂತುಕವು ಸ್ವಾಗತಾರ್ಹವಾಗಿದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ, ಈಗಾಗಲೇ ನಾನು ತಿಳಿಸಿರುವ ಕಾರಣಗಳಿಂದಾಗಿ, ಈ ಪರಂತುಕವು ಒಂದು ತತ್ವವನ್ನು ಒಳಗೊಂಡಿದ್ದು, ಈ ಸದನವು ಅದಕ್ಕೆ ಒಪ್ಪಿಗೆ ನೀಡುತ್ತದೆ ಎಂದು ನಾನು ಭಾವಿಸುತ್ತೇನೆ.

● ○ ●

# ಮಂತ್ರಿಪದವಿಯ ಷರತ್ತುಗಳನ್ನು ಕುರಿತು

ಈ ತಿದ್ದುಪಡಿಗಳು ಮೂರು ಅಂಶಗಳ ಬಗ್ಗೆ ಹೇಳುತ್ತವೆ. ಮೊದಲನೇ ಅಂಶವು ಸಚಿವರ ಹುದ್ದೆಗೆ ಸಂಬಂಧಿಸಿದುದಾಗಿದೆ. ಎರಡನೆಯದು ಮಂತ್ರಿಗಳ ಅರ್ಹತೆಗೆ ಹಾಗೂ ಮೂರನೆಯದು ಸಚಿವ ಸಂಪುಟದ ಸದಸ್ಯತ್ವದ ಷರತ್ತಿಗೆ ಸಂ[illegible]ವಾಗಿದೆ. ಈಗ ನಾನು ಮೊದಲನೇ ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇನೆ, ಅಂದರೆ ಸಚಿವರ ಕಾರ್ಯಾವಧಿ. ಈ ವಿಷಯದ ಮೇಲೆ ಎರಡು ತಿದ್ದುಪಡಿಗಳನ್ನು ತರಲಾಗಿದೆ. ಒಂದು ಶ್ರೀ ಪೋಕರ್‌ರವರಿಂದ ಹಾಗೂ ಎರಡನೆಯದು ಶ್ರೀ ಕರಿಮುದ್ದೀನ್ ಅವರಿಂದ ಶ್ರೀ ಪೋಕರ್ ರವರ ತಿದ್ದುಪಡಿಯಂತೆ ಇತರ ಪರಿಗಣನೆಗಳನ್ನು ಗಣನೆಗೆ ತಾರದೆ, ಮಂತ್ರಿಯು ಸದನದ ವಿಶ್ವಾಸವನ್ನು ಗಳಿಸಿರುವವರೆಗೂ ತನ್ನ ಪದವಿಯಲ್ಲಿ ಮುಂದುವರೆಯತಕ್ಕದ್ದು. ಅವನು ಭ್ರಷ್ಟಮಂತ್ರಿಯಾಗಿರಬಹುದು, ಕೆಟ್ಟ ಮಂತ್ರಿಯಾಗಿರಬಹುದು ಅಥವಾ ಅದಕ್ಷನಾಗಿರಬಹುದು. ಆದರೆ ಅವನು ಸದನದ ವಿಶ್ವಾಸವನ್ನು ಗಳಿಸಿರುವವರೆಗೆ ಯಾರೂ ಅವನನ್ನು ಅವನ ಹುದ್ದೆಯಿಂದ ತೆಗೆದು ಹಾಕಲು ಸಾಧ್ಯವಿಲ್ಲ. ಶ್ರೀ ಕರಿಮುದ್ದೀನ್‌ರವರ ಪ್ರಕಾರ, ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆಂದು ಅಂದುಕೊಂಡರೆ, ಅವರ ನಿಲುವು ಇದಕ್ಕೆ ತೀರಾ ವ್ಯತಿರಿಕ್ತವಾಗಿದೆ. ಅವರ ಪ್ರಕಾರ ಮಂತ್ರಿಯು ಸದನದ ವಿಶ್ವಾಸ ಗಳಿಸಿರಲಿ, ಇಲ್ಲದಿರಲಿ, ಮಂತ್ರಿಯನ್ನು ಲಂಚಕೋರತನ, ಭ್ರಷ್ಟಚಾರ, ದೇಶದ್ರೋಹ ಇತ್ಯಾದಿ ಕೆಲವು ನಿರ್ದಿಷ್ಟ ಅಪರಾಧಗಳಿಗಾಗಿ, ವಿಚಾರಣೆಗೆ ಅವನನ್ನು ಗುರಿಪಡಿಸಿ ನಂತರ ತೆಗೆದುಹಾಕತಕ್ಕದ್ದು. ಒಬ್ಬ ಮಂತ್ರಿಯು ಸದನದ ವಿಶ್ವಾಸವನ್ನು ಕಳೆದುಕೊಂಡರೂ, ನಿರ್ದಿಷ್ಟಪಡಿಸಿದ ಕಾರಣಗಳ ಮೇಲೆ ಮಂತ್ರಿಯನ್ನು ವಿಚಾರಣೆಗೆ ಗುರಿಪಡಿಸುವವರೆಗೂ, ಪ್ರಧಾನ ಮಂತ್ರಿಯಾಗಲಿ, ರಾಷ್ಟ್ರಪತಿಯವರಾಗಲಿ ಅವನನ್ನು ಪದವಿಯಿಂದ ತೆಗೆದುಹಾಕುವಂತಿಲ್ಲ. ಮಾನ್ಯ ಸದನಕ್ಕೆ ಕಂಡುಬರುವಂತೆ ಈ ಎರಡೂ ತಿದ್ದುಪಡಿಗಳು ಕೆಲವು ಅರ್ಥದಲ್ಲಿ ವ್ಯತಿರಿಕ್ತವಲ್ಲದಿದ್ದರೂ ಅಸಂಗತವಾಗಿದೆ. ನಾನು ನಿವೇದಿಸುವುದೇನೆಂದರೆ, 62ನೇ ಅನುಚ್ಛೇದದ (2)ನೇ ಉಪ-ಖಂಡದಲ್ಲಿ ಒಳಗೊಂಡಿರುವ ಉಪಬಂಧವು ಇದಕ್ಕಿಂತ ಉತ್ತಮವಾಗಿದ್ದು, ಈ ಎರಡೂ ಅಂಶಗಳನ್ನು ಒಳಗೊಂಡಿದೆ. 62ನೇ ಅನುಚ್ಛೇದದ (2)ನೇ ಉಪ-ಖಂಡದಲ್ಲಿ ಮಂತ್ರಿಗಳು ರಾಷ್ಟ್ರಪತಿಯವರ ಇಷ್ಟ ಪರ್ಯಂತ ಹುದ್ದೆಯನ್ನು ಧಾರಣ ಮಾಡತಕ್ಕುದೆಂದು ಹೇಳಿದೆ. ಅಂದರೆ ಒಬ್ಬ ಮಂತ್ರಿಯು ಎರಡು ಕಾರಣಗಳ ಮೇಲೆ ತೆಗೆದು ಹಾಕಲ್ಪಡಲು ಗುರಿಯಾಗುತ್ತಾನೆ. 62ನೇ

ಅನುಚ್ಛೇದದ (2)ನೇ ಖಂಡದಲ್ಲಿ ಒಳಗೊಂಡಿರುವ ಪರಂತುಕಗಳ ಅಡಿಯಲ್ಲಿ ಅವನು ಸದನದ ವಿಶ್ವಾಸವನ್ನು ಕಳೆದುಕೊಂಡಾಗ ತನ್ನ ಹುದ್ದೆಯಿಂದ ಖಾಲಿ ಆಗಬಹುದು. ಎರಡನೆಯದಾಗಿ ಅವನ ಆಡಳಿತವು ಶುದ್ಧವಿಲ್ಲದಿದ್ದಲ್ಲಿ, ಏಕೆಂದರೆ ಇಲ್ಲಿ ಉಪಯೋಗಿಸಿರುವ ಶಬ್ಧವು "ಇಷ್ಟ" 62ನೇ ಅನುಚ್ಛೇದದ ನಿರ್ದಿಷ್ಟ ಖಂಡದ ಅಡಿಯಲ್ಲಿ ಹೇಳಿರುವಂತೆ ಮಂತ್ರಿಯು ಸದನದ ವಿಶ್ವಾಸವನ್ನುಗಳಿಸಿದ್ದರೂ, ಅವನನ್ನು ಭ್ರಷ್ಟಾಚಾರ, ಲಂಚಕೋರತನ ಅಥವಾ ದುರಾಡಳಿತದ ಅಪರಾಧ - ಇವುಗಳ ತಪ್ಪಿತಸ್ಥನೆಂಬ ಕಾರಣಗಳ ಮೇಲೆ, ರಾಷ್ಟ್ರಪತಿಯವರು ತೆಗೆದು ಹಾಕಲು ಆದೇಶ ನೀಡಬಹುದು. ಮಂತ್ರಿಯು ಪದವಿಯ ಅವಧಿಯು ಕೇವಲ ಒಂದು ಷರತ್ತಿಗೆ ಒಳಪಡದೆ ಎರಡು ಷರತ್ತುಗಳಿಗೆ ಒಳಪಡಬೇಕು, ಅಂದರೆ ಆಡಳಿತದಲ್ಲಿ ಸ್ವಚ್ಛತೆ ಹಾಗೂ ಸದನದ ವಿಶ್ವಾಸಗಳಿಸುವುದು - ಇವೆರಡರ ಮೇಲೆ ನಿರ್ಭರವಾಗಿರಬೇಕೆಂಬುದನ್ನು ಸನ್ಮಾನ್ಯ ಸದಸ್ಯರು ಗ್ರಹಿಸುವರೆಂದು ನಾನು ಭಾವಿಸುತ್ತೇನೆ. ಅನುಚ್ಛೇದದಲ್ಲಿ ಈ ಎರಡಕ್ಕೂ ಉಪಬಂಧ ಕಲ್ಪಿಸಲಾಗಿದೆ. ಆದ್ದರಿಂದ ನನ್ನ ಮಿತ್ರರಾದ ಶ್ರೀ ಪೋಕರ್ ಹಾಗೂ ಶ್ರೀ ಕರೀಮುದ್ದೀನ್ ಅವರು ಮಂಡಿಸಿರುವ ತಿದ್ದುಪಡಿಗಳು ತೀರಾ ಅನಾವಶ್ಯಕ.

ಎರಡನೇ ಅಂಶವೆಂದರೆ, ಅದು ಮಂತ್ರಿಗಳ ಅರ್ಹತೆಗಳಿಗೆ ಸಂಬಂಧಿಸಿದುದಾಗಿದ್ದು, ಅದರ ಕುರಿತು ಇಲ್ಲಿ ಮೂರು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಮೊದಲನೇ ತಿದ್ದುಪಡಿಯನ್ನು ಶ್ರೀ ಮೊಹಮದ್ ತಾಹೀರ ರವರು ಮಂಡಿಸಿದ್ದಾರೆ. ಅವರು ಸೂಚಿಸುವ ಪ್ರಕಾರ, ಯಾವನೇ ವ್ಯಕ್ತಿಯನ್ನು ಮಂತ್ರಿಯನ್ನಾಗಿ ನೇಮಿಸಿದ ಸಮಯದಲ್ಲಿ, ಅವನು ಸದನದ ಚುನಾಯಿತ ಸದಸ್ಯನಾಗಿದ್ದ ಹೊರತು ಮಂತ್ರಿಯನ್ನಾಗಿ ನೇಮಿಸಬಾರದು ಎಂಬುದಾಗಿದೆ. ಅವರು, ಪರಂತುಕದಲ್ಲಿ ಒಳಗೊಂಡಿರುವ ಸಂದರ್ಭಗಳ ಸಾಧ್ಯತೆ ಅಂದರೆ, ಯಾವನೇ ವ್ಯಕ್ತಿಯು, ಅವನ ನೇಮಕಾತಿಯ ಸಮಯದಲ್ಲಿ ಸದನದ ಸದಸ್ಯನಾಗಿರದಿದ್ದರೂ, ಆರು ತಿಂಗಳೊಳಗಾಗಿ ಅವನು ಸದನಕ್ಕೆ ಚುನಾಯಿತನಾಗಿ ಬರಬೇಕೆಂಬ ಷರತ್ತಿಗೊಳಪಟ್ಟು ಅವನನ್ನು ಸಚಿವ ಸಂಪುಟದ ಒಬ್ಬ ಮಂತ್ರಿಯನ್ನಾಗಿ ನೇಮಕ ಮಾಡಬಹುದೆಂಬುದನ್ನು ಒಪ್ಪುವುದಿಲ್ಲ. ಶ್ರೀ ಕೆ.ಟಿ. ಶಾಹ ರವರು ಎರಡನೇ ಅರ್ಹತೆಯ ಬಗ್ಗೆ ಹೇಳುತ್ತಾರೆ. ಅವರ ಪ್ರಕಾರ, ಮಂತ್ರಿಯು ಒಂದು ಬಹುಮತ ಹೊಂದಿರುವ ಪಕ್ಷಕ್ಕೆ ಸೇರಿದವನಾಗಿರಬೇಕು ಮತ್ತು ಅವರಿಗೆ ಕೆಲವು ಶೈಕ್ಷಣಿಕ ಸ್ಥಾನಮಾನಗಳು ಇರಬೇಕು. ಮೊದಲನೇ ಅಂಶಕ್ಕೆ ಸಂಬಂಧಿಸಿದಂತೆ, ಅಂದರೆ .ಯಾವನೇ ವ್ಯಕ್ತಿಯನ್ನು ಮಂತ್ರಿಯನ್ನಾಗಿ ನೇಮಕ ಮಾಡುವ ಸಮಯದಲ್ಲಿ ಅವನು ಸದನದ ಚುನಾಯಿತ

ಸದಸ್ಯನಾಗಿರಬೇಕೆಂಬುದು ಉಪೇಕ್ಷಿಸಲಾಗದಂಥಹ ಕೆಲವು ಮಹತ್ವದ ವಿಷಯಗಳನ್ನು ಅವರು ಪರಿಗಣನೆಗೆ ತೆಗೆದುಕೊಳ್ಳಲು ಮರೆತಂತೆ ಕಾಣುತ್ತದೆ. ಮೊದಲನೆಯದಾಗಿ, ಮಂತ್ರಿಯ ಪದವಿಯನ್ನು ಧಾರಣ ಮಾಡಲು ಸಕ್ಷಮನಾಗಿರುವ ಒಬ್ಬ ವ್ಯಕ್ತಿಯು, ಕೆಲವು ಕಾರಣಗಳಿಗಾಗಿ, ಆ ಕಾರಣಗಳು ಒಳ್ಳೆಯವೇ ಆಗಿರಬಹುದು, ಚುನಾವಣಾ ಕ್ಷೇತ್ರದ ಜನರ ಮನಸ್ಸಿಗೆ ನೋವುಂಟು ಮಾಡಿದ್ದು ಆ ನಿರ್ದಿಷ್ಟ ಚುನಾವಣಾ ಕ್ಷೇತ್ರದ ಜನರ ಅಸಂತುಷ್ಟಿಗೆ ಗುರಿಯಾದ ಕಾರಣದಿಂದಾಗಿ ಅವನು ಸೋಲನ್ನು ಅನುಭವಿಸಿರಬಹುದೆಂಬುದನ್ನು ಊಹಿಸಿಕೊಳ್ಳುವುದು ಖಂಡಿತ ಸಾಧ್ಯ. ಅಂಥ ದಕ್ಷನಾದ ವ್ಯಕ್ತಿಯನ್ನು, ಅವನು ಅದೇ ಚುನಾವಣಾ ಕ್ಷೇತ್ರದಿಂದಾಗಲಿ ಅಥವಾ ಬೇರೊಂದು ಚುನಾವಣಾ ಕ್ಷೇತ್ರದಿಂದಾಗಲಿ ಚುನಾಯಿಸಿ ಬರಲು ಶಕ್ತನಾಗಬಹುದೆಂದು ಭಾವಿಸಿ ಏಕೆ ಸದನದ ಸದಸ್ಯನನ್ನಾಗಿ ನೇಮಕ ಮಾಡಬಾರದು? ಹಾಗೆ ನೋಡಿದರೆ ಅನುಮತಿಸಲಾದ ಈ ವಿಶಿಷ್ಟಾಧಿಕಾರವು ಆರು ತಿಂಗಳ ಮಟ್ಟಿಗೆ ಮಾತ್ರ. ಅದು, ಅವನು ಚುನಾಯಿತನಾಗದೇ ಆ ಸದನದಲ್ಲಿ ಕೂಡಲು ಯಾವುದೇ ಹಕ್ಕನ್ನು ಪ್ರಧಾನ ಮಾಡುವುದಿಲ್ಲ. ನನ್ನ ಎರಡನೇ ನಿವೇದನೆಯೆಂದರೆ, ನಾಮನಿರ್ದೇಶಿತನಾದ ಒಬ್ಬ ಮಂತ್ರಿಯು ಸಚಿವಸಂಪುಟದ ಸದಸ್ಯನೆಂಬುದು, ಸಮೂಹ ಹೊಣೆಗಾರಿಕೆಯ ತತ್ವವನ್ನು ಭಂಗಗೊಳಿಸುವುದಿಲ್ಲ ಅಥವಾ ವಿಶ್ವಾಸದ ತತ್ವಕ್ಕೆ ಅದು ಭಂಗ ತರುವುದಿಲ್ಲ. ಏಕೆಂದರೆ ಅವನು ಸಚಿವ ಸಂಪುಟದ ಕಾರ್ಯನೀತಿಯನ್ನು ಒಪ್ಪಲು ತಯಾರಾದರೆ, ಸಚಿವ ಸಂಪುಟದ ಒಂದು ಭಾಗವಾಗುತ್ತಾನೆ ಮತ್ತು ಸದನದ ವಿಶ್ವಾಸವನ್ನು ಕಳೆದುಕೊಂಡರೆ, ಅವರು ಸಚಿವ ಸಂಪುಟಕ್ಕೆ ರಾಜೀನಾಮೆ ನೀಡುತ್ತಾನೆ. ಸಂಸತ್ ಸರ್ಕಾರದ ಮೂಲಭೂತ ತತ್ವಗಳಿಗೆ ಸಚಿವ ಸಂಪುಟದಲ್ಲಿನ ಅವನ ಸದಸ್ಯತ್ವವು ಯಾವುದೇ ರೀತಿಯಲ್ಲಿ ಅನಾನುಕೂಲವನ್ನು ಉಂಟು ಮಾಡುವುದಿಲ್ಲ ಅಥವಾ ಅವುಗಳಿಗೆ ಭಂಗ ತರುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಅರ್ಹತೆಯು (ಷರತ್ತು) ತೀರಾ ಅನಾವಶ್ಯಕ.

ಎರಡನೇ ಅರ್ಹತೆಗೆ, ಅಂದರೆ, ಒಬ್ಬ ವ್ಯಕ್ತಿಯು ಬಹುಮತವುಳ್ಳ ಪಕ್ಷದ ಸದಸ್ಯನಾಗಿರಬೇಕೆಂಬುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನಾನು ಭಾವಿಸುವಂತೆ, ಪ್ರೊಫೆಸರ್ ಕೆ.ಟಿ. ಶಾಹರವರ ಚಿಂತನೆಯ ಪ್ರಕಾರ ಅಥವಾ ಅವರು ನಂಬುವ ಮತ್ತು ಹಾರೈಸುವ ಮಟ್ಟಿಗೆ ಮತದಾರರು ಯಾವಾಗಲೂ ಬಹುಮತವುಳ್ಳ ಪಕ್ಷವನ್ನು ಆರಿಸುತ್ತಾರೆ ಮತ್ತು ಇನ್ನೊಂದು ಪಕ್ಷವು ಅಲ್ಪಸಂಖ್ಯೆ ಸದಸ್ಯರನ್ನೊಳಗೊಂಡಿದ್ದು, ಅದು ವಿರೋಧ ಪಕ್ಷವಾಗುತ್ತದೆ ಎಂದಾಗುತ್ತದೆ.

ಅಂಥ ಯಾವುದೇ ಊಹಾಪೋಹಕ್ಕೆ ಇಲ್ಲಿ ಅವಕಾಶವಿರುವುದಿಲ್ಲ. ಒಂದು ಚುನಾವಣೆಯಲ್ಲಿ ಸಂಸತ್ ವಿವಿಧ ಪಕ್ಷವನ್ನು ಒಳಗೊಂಡಿದ್ದು, ಯಾವುದೇ ಒಂದು ಪಕ್ಷವು ಬಹುಮತವನ್ನು ಹೊಂದದೆ ಇರಬಹುದು ಎಂಬುದು ಖಂಡಿತ ಸಾಧ್ಯ ಹಾಗೂ ಸ್ವಾಭಾವಿಕ. ಮೂರು ಪಕ್ಷಗಳಿದ್ದು ಯಾವುದೇ ಒಂದು ಪಕ್ಷಕ್ಕೆ ಬಹುಮತವಿಲ್ಲದಿದ್ದರೆ, ಈ ತತ್ವವನ್ನು ಹೇಗೆ ಕಾರ್ಯಗತಗೊಳಿಸಬಹುದು? ಆದ್ದರಿಂದ, ಅಂಥ ಸಮಯದಲ್ಲಿ ಪ್ರೊ.ಕೆ.ಟಿ. ಶಾಹರವರು ಹೇಳಿರುವ ಅರ್ಹತೆಯನ್ನು ಹೊಂದಿರುವ ಯಾವ ಸರ್ಕಾರವು ಇರಲು ಸಾಧ್ಯವಿಲ್ಲ.

ಎರಡನೆಯದಾಗಿ, ಸದನದಲ್ಲಿ ಒಂದು ಬಹುಮತವುಳ್ಳ ಪಕ್ಷವಿದೆಯೆಂದು ಭಾವಿಸೋಣ. ಆದರೆ ತುರ್ತು ಪರಿಸ್ಥಿತಿ ಒದಗಿ, ಸದನವು ಬಹುಮತವುಳ್ಳ ಪಕ್ಷ ಹಾಗೂ ಅಲ್ಪಸಂಖ್ಯೆಯುಳ್ಳ ಪಕ್ಷ ಇವೆರಡೂ ತಮ್ಮ ಪಕ್ಷ ಕಲಹಗಳನ್ನು ತುರ್ತು ಪರಿಸ್ಥಿತಿಯಲ್ಲಿ ನಿಲ್ಲಿಸಬೇಕೆಂದು, ಯಾವುದೇ ಒಂದು ಪಕ್ಷದ ಸರ್ಕಾರವಿರಬಾರದೆಂದು, ಹೀಗಾದರೆ ಮಾತ್ರ ಸರ್ಕಾರವು ತುರ್ತು ಪರಿಸ್ಥಿತಿಯನ್ನು ಎದುರಿಸಬಹುದೆಂದು ಅಪೇಕ್ಷಿಸದೆ, ಅಂಥ ಪ್ರಸಂಗದಲ್ಲಿ, ಅಂಥ ಪರಿಸ್ಥಿತಿಯನ್ನು ಸಮ್ಮಿಶ್ರ ಸರ್ಕಾರದ ಹೊರತಾಗಿ ಬೇರೆ ಯಾವುದೇ ರೀತಿಯಿಂದ ಎದುರಿಸಲಾಗುವುದಿಲ್ಲ ಹಾಗೂ ಸಮ್ಮಿಶ್ರ ಸರ್ಕಾರ ರಚಿತಗೊಂಡರೆ ಮತ್ತು ಆ ಸಂದರ್ಭದಲ್ಲಿ, ಅಲ್ಪಸಂಖ್ಯೆಯುಳ್ಳ ಪಕ್ಷದ ಸದಸ್ಯರು ಸಹ ಸಚಿವ ಸಂಪುಟದ ಸದಸ್ಯರಾಗಲು ಹಕ್ಕುಳ್ಳವರಾಗುತ್ತಾರೆ. ಆದ್ದರಿಂದ ಈ ಎರಡೂ ಕಾರಣಗಳಿಂದಾಗಿ ಈ ತಿದ್ದುಪಡಿಯು ಕಾರ್ಯಸಾಧ್ಯವಾದ ತಿದ್ದುಪಡಿಗಳಲ್ಲವೆಂಬುದೇ ನನ್ನ ನಿವೇದನೆ.

ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ವಿದ್ಯಾರ್ಹತೆಯ ಬಗ್ಗೆ ನನ್ನ ಮಿತ್ರರಾದ ಶ್ರೀ ಮಹಾವೀರ ತ್ಯಾಗಿಯವರು ಏನೇ ಹೇಳಿದ್ದರೂ, ವಿದ್ಯಾರ್ಹತೆಯ ವಿರುದ್ಧವಾಗಿ ಆವೇಶಪೂರಿತವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ, ಅವರಿಗೆ ಸಾಹಿತ್ಯಿಕ ಶಿಕ್ಷಣದ ಬಗ್ಗೆ ಯಾವುದೇ ನ್ಯಾಯನಿಷ್ಠ ಆಕ್ಷೇಪಣೆ ಇರುವುದೇ ಎಂದು ನಾನು ಕೇಳಿದಾಗ, ಅಂಥ ಯಾವುದೇ ಆಕ್ಷೇಪಣೆಯಿಲ್ಲವೆಂದು ಅವರು ನನಗೆ ಭರವಸೆ ನೀಡಿದರು. ಆದಾಗ್ಯೂ, ಇಂಗ್ಲಿಷ್, ಕಾರ್ಯಾಂಗದ ವ್ಯವಹಾರದಲ್ಲಾಗಲಿ ಅಥವಾ ಸಂಸತ್ತಿನಲ್ಲಾಗಲಿ ರಾಜಭಾಷೆಯಾಗಿ ಉಳಿಯುತ್ತದೆಯೆಂದು ಭಾವಿಸಿದಾಗ, ಯಾವುದೇ ಪ್ರಧಾನ ಮಂತ್ರಿಯಾಗಲಿ ಅಥವಾ ರಾಷ್ಟ್ರಪತಿಯವರಾಗಲಿ ಇಂಗ್ಲಿಷ್‌ಬಾರದ ಒಬ್ಬ ವ್ಯಕ್ತಿಯನ್ನು ಮಂತ್ರಿಯನ್ನಾಗಿ ನೇಮಿಸುವುದು ಅಪೇಕ್ಷಣೀಯವೆಂದು ಭಾವಿಸುವರೇ ಎಂದು ನಾನು ಕೇಳುತ್ತೇನೆ. ಅಂಥ ಒಂದು ವಿಷಯವನ್ನು ಯೋಚಿಸಲೂ ನನ್ನಿಂದಾಗುವುದಿಲ್ಲ.

ಪುನಃ ಹಿಂದಿ, ಉರ್ದು ಅಥವಾ ಹಿಂದೂಸ್ಥಾನಿ ರಾಜಭಾಷೆಯಾಗಿದ್ದು ದೇಶದ ಅಥವಾ ಆಡಳಿತ ರಾಜಭಾಷೆಯನ್ನು ಅರ್ಥಮಾಡಿಕೊಳ್ಳಲು ಬರದ

ಒಬ್ಬ ವ್ಯಕ್ತಿಯನ್ನು ಮಂತ್ರಿಯನ್ನಾಗಿ ನೇ[illegible]ಕ ಮಾಡು[illegible] ಪ್ರಧಾನ ಮಂತ್ರಿಯವರು ಮೂರ್ಖರಾಗಿರುತ್ತಾರೆಂದು ಯೋಚಿಸುವುದು ನನ್ನಿಂದ [illegible]ಸಾಧ್ಯ. ಆದ್ದರಿಂದ ಸರ್ಕಾರದಲ್ಲಿ ಒಂದು ಖಾತೆಯನ್ನು ಹೊಂದಿರುವವನಿಗೆ ಸ[illegible]ದ ಶೈಕ್ಷಣಿಕ ಅರ್ಹತೆಯಿರಬೇಕೆಂಬುದು ಎಲ್ಲರಿಗೂ ತಿಳಿದಿರಲೇಬೇಕು. [illegible]ದ್ದರಿಂದ ಸಂವಿಧಾನದಲ್ಲೇ ಈ ಒಂದು ತಿದ್ದುಪಡಿಯನ್ನು ಸೇರಿಸುವುದು ಅನಾವಶ್ಯಕ.

ಮೂರನೇ ಷರತ್ತು, ಅಂದರೆ ಸಚಿವ ಸಂಪುಟದ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ನಾನು ಹೇಳಬಯಸುತ್ತೇನೆ. ಆ ಷರತ್ತೆಂದರೆ ಮಂತ್ರಿಯು, ಅವನು ವಾಸ್ತವವಾಗಿ ತನ್ನ ಪದವಿಯನ್ನು ವಹಿಸಿಕೊಳ್ಳುವ ಮೊದಲು ತನ್ನ ಹಿತಾಸಕ್ತಿಗಳು, ಹಕ್ಕುಗಳು ಹಾಗೂ ಸ್ವತ್ತುಗಳ ಬಗ್ಗೆ ಒಂದು ಘೋಷಣೆ ನೀಡಬೇಕೆಂಬುದಾಗಿದೆ. ಪ್ರೊ. ಕೆ.ಟಿ. ಶಾಹ ರವರು ಮಂಡಿಸಿದ ಈ ತಿದ್ದುಪಡಿಯನ್ನು ಶ್ರೀ. ಕಾಮತ್‌ರವರು ಸ್ವಲ್ಪಮಟ್ಟಿಗೆ ತಿದ್ದುಪಡಿ ಮಾಡಿದ್ದಾರೆ. ಸದನದಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಿರುವುದು ಇದೇನು ಮೊದಲ ಸಲವಲ್ಲ, ಇದೇ ರೀತಿಯ ತಿದ್ದುಪಡಿಗಳನ್ನು ರಾಷ್ಟ್ರಪತಿಯವರನ್ನು ನೇಮಿಸುವ ಹಾಗೂ ಅವರು ಶಪಥ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಅನುಚ್ಛೇದದ ಸಂಬಂಧದಲ್ಲಿ ಮಂಡಿಸಲಾಗಿತ್ತು ಮತ್ತು ಅನಿರ್ದಿಷ್ಟ ಸಮಯದಲ್ಲಿ ನಾನು ಅದರ ಬಗ್ಗೆ ಬಹಳಷ್ಟು ಹೇಳಬೇಕಾಯಿತು ಮತ್ತು ಈ ಸಂದರ್ಭದಲ್ಲಿ ಆಗ ನಾನು ಹೇಳಿದ್ದನ್ನು ಪುನರುಚ್ಚರಿಸಲು ಇಷ್ಟಪಡುವುದಿಲ್ಲ. ನನ್ನ ಮಿತ್ರರಾದ ಶ್ರೀ ಕಾಮತ್‌ರವರು ರಾಷ್ಟ್ರಪತಿಯವರಿಗೆ ಸಂಬಂಧಿಸಿದ ಅನುಚ್ಛೇದದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ನಾನು ಏನು ಹೇಳಿದ್ದೇನೆಂಬುದರ ಬಗ್ಗೆ ನನಗೆ ಜ್ಞಾಪಿಸಿದರು. ಅಂಥ ಒಂದು ಉಪಬಂಧವು ಅವಶ್ಯವಾಗಬಹುದೆಂದು ನಾನು ಹೇಳಿರುವುದು ನನಗೆ ಜ್ಞಾಪಕವಿದೆ.

### "ಚರ್ಚೆಗೆ ತಡೆ"*

ನಾನು ಹೇಳುತ್ತಿರುವುದೂ ಅದನ್ನೇ; ಸಚಿವರುಗಳ ಸಂಬಂಧದಲ್ಲೂ ಇಂತಹ ಒಂದು ಅವಕಾಶವಿರಬೇಕೆಂದು ನಾನು ಹೇಳಿದ್ದೆನು. ನನ್ನ ಸ್ನೇಹಿತರಾದ ಶ್ರೀ ಕಾಮತ್ [illegible] ಕಾರ್ಖಾನೆ ಅಧಿನಿಯಮದಿಂದ ಕೆಲವು ಭಾಗಗಳನ್ನು ಓದಿ, ಕಾರ್ಖಾನೆ ಇನ್ಸ್‌ಪೆಕ್ಟರಿಗೆ ಅಗತ್ಯವಾದಂತಹ ಅರ್ಹತೆಗಳ ಬಗ್ಗೆ [illegible] ಹೇಳಿದಿದ್ದಾರೆ. ಈಗ ನಾವು ಪರಿಗಣಿಸಬೇಕಾದುದು ಇಷ್ಟೇ; ಸಂಬಂಧಪಟ್ಟ ಸಚಿವರು ಆಡಳಿತದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಬೇಕೆಂಬ ಸಂಗತಿ ನಿಜಕ್ಕೂ ಒಂದು ಶ್ಲಾಘನೀಯ ವಿಷಯ. ಈ ಬಗ್ಗೆ ಸದನದಲ್ಲಿ ಯಾರ ಆಕ್ಷೇಪವೂ ಇಲ್ಲವೆಂದು ತಿಳಿದಿದ್ದೇನೆ. ಆಡಳಿತವು ಉನ್ನತಮಟ್ಟದ್ದಾಗಿರಬೇಕು. ಅದು ಪರಿಣಾಮಕಾರಿಯಾಗಿರುವುದರ

ಜೊತೆಗೆ ಪರಿಶುದ್ಧವೂ ಆಗಿರಬೇಕೆಂಬುದು ನಮ್ಮೆಲ್ಲರ ಆಸಕ್ತಿ. ಈ ಪರಿಶುದ್ಧತೆಯನ್ನು ಕಾಪಾಡಿಕೊಂಡುಬರುವಲ್ಲಿ ಎರಡು ವಿಷಯಗಳ ಕಡೆಗೆ ಗಮನ ಹರಿಸಬೇಕು. ಮೊದಲನೆಯದು - ನಾವು ಕಾನೂನು ಮತ್ತು ಸಂವಿಧಾನಕ್ಕೆ ಬದ್ಧರಾಗಿರಬೇಕು. ಇದು ಪರಿಣಾಮಕಾರಿಯಾಗಬೇಕಾದರೆ, ಮಂತ್ರಿಗಳು ತಾವು ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ, ತಮ್ಮ ಆಸ್ತಿ ಮತ್ತು ಋಣಭಾರಗಳನ್ನು ಘೋಷಿಸಬೇಕು. ಅಷ್ಟೇ ಅಲ್ಲ; ಎಲ್ಲ ಮಂತ್ರಿಗಳೂ ತಾವು ಅಧಿಕಾರ ಬಿಟ್ಟು ಹೋಗುವ ಸಂದರ್ಭದಲ್ಲಿಯೂ ತಮ್ಮ ಆಸ್ತಿ ಮತ್ತು ಋಣಭಾರವನ್ನು ಪ್ರಕಟಿಸಬೇಕು. ಇದರಿಂದ, ಸಂಬಂಧಪಟ್ಟ ಮಂತ್ರಿಯು ತನ್ನ ಅಧಿಕಾರಾವಧಿಯಲ್ಲಿ ಪರಿಶುದ್ಧ ಆಡಳಿತ ನಡೆಸಿದ್ದರೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತದೆ ಮತ್ತು ಮಂತ್ರಿಯ ಆಸ್ತಿಯಲ್ಲಿ ಹೆಚ್ಚಳವಾಗಿದ್ದರೆ, ಆ ಹೆಚ್ಚಳಕ್ಕೆ ತಮ್ಮ ಸಂಬಳದಲ್ಲಿ ಮಾಡಿದ್ದ ಉಳಿತಾಯದ ಲೆಕ್ಕವಿದೆಯೇ ಎಂಬುದನ್ನು ನೋಡಬಹುದು. ಸಂಬಂಧಪಟ್ಟ ಮಂತ್ರಿಯು ಹುದ್ದೆಗೆ ರಾಜೀನಾಮೆ ಕೊಟ್ಟ ಸಂದರ್ಭದಲ್ಲಿ ಇದ್ದ ಆಸ್ತಿಯ ಹೆಚ್ಚಳಕ್ಕೆ ಅವರ ಸಂಬಳದ ಉಳಿತಾಯದಲ್ಲಿ ಸೂಕ್ತವಾದ ಸಮಜಾಯಿಸಿ ದೊರೆಯದಿದ್ದರೆ, ಅಂತಹ ಆಸ್ತಿಯ ಗಳಿಕೆಯ ಬಗ್ಗೆ ಮಂತ್ರಿಯನ್ನು ವಿವರಣೆ ಕೇಳುವ ಮತ್ತೊಂದು ಮೂರನೆಯ ಅವಕಾಶವಿರಬೇಕು. ಈ ಷರತ್ತನ್ನು ಪರಿಣಾಮಕಾರಿಗೊಳಿಸಬೇಕಾದರೆ ನಾನು ಹೇಳಿದಂತೆ ಅಧಿಕಾರ ವಹಿಸಿಕೊಂಡ ಸಂದರ್ಭದ ಆಸ್ತಿಯ ಘೋಷಣೆ, ಅಧಿಕಾರಕ್ಕೆ ರಾಜೀನಾಮೆ ಕೊಡುವ ಸಂದರ್ಭದ ಆಸ್ತಿಯ ಘೋಷಣೆ ಮತ್ತು ಅಧಿಕ ಆಸ್ತಿ ಘೋಷಿಸಿದ್ದರೆ, ಅಂತಹ ಆಸ್ತಿಯ ಅರ್ಜನೆಗೆ ಸೂಕ್ತ ವಿವರಣೆ ಕೇಳುವ ಅವಕಾಶವಿರಬೇಕೆಂಬುದು ನನ್ನ ತೀರ್ಮಾನ. ಇದು ಒಂದು ಅಪರಾಧವಾಗಿದ್ದು, ದಂಡನೀಯವಾಗಿರಬೇಕು.

## ಚರ್ಚೆಗೆ ತಡೆ*

ಪ್ರಾರಂಭದ ಹಂತದಲ್ಲಿ ಮಾಡಿದ ಘೋಷಣೆಯನ್ನಷ್ಟೇ ಹೇಳುವುದಾದರೆ, ಇವೆಲ್ಲವೂ ಏನೂ ಪ್ರಯೋಜನವಿಲ್ಲದ್ದು, ಏಕೆಂದರೆ, ಈ ತಿದ್ದುಪಡಿಯಲ್ಲಿ ಏನೇ ಒಳಗೊಂಡಿದ್ದರೂ, ಮಂತ್ರಿಯು ತನ್ನ ಅಧಿಕಾರಾವಧಿಯಲ್ಲಿ ಅರ್ಜಿಸಿದ ಆಸ್ತಿಯನ್ನು

---

* ಶ್ರೀ ಹೆಚ್.ವಿ. ಕಾಮತ್ : ಡಾ. ಅಂಬೇಡ್ಕರ್ ಅವರು ವಾಸ್ತವವಾಗಿ ಹೇಳಿದುದೇನು ಎಂಬುದನ್ನು ನೆನಪಿಸಿ ಕೊಡಲೆ. ವಿಧಾನ ಸಭೆಯ ಸಚಿವಾಲಯದ ಬೆರಳಚ್ಚು ಪ್ರತಿಯಿಂದ ಆ ಮಾತುಗಳನ್ನು ಓದಿ ಹೇಳುತ್ತಿದ್ದೇನೆ ಇವು ಅವರವೇ ಮಾತುಗಳು.
"ಭಾರತ ಸರ್ಕಾರದ ಯಾರೇ ವ್ಯಕ್ತಿಯು ಪ್ರಧಾನ ಮಂತ್ರಿ ಆಗಲಿ, ಅಥವಾ ರಾಜ್ಯ ಮಂತ್ರಿಯಾಗಿರಲಿ ಅವರು ಮಾತ್ರ ತಮ್ಮ ಅಧಿಕಾರಗಳನ್ನು ಅತಿಯಾಗಿ ಬಳಸಿಕೊಳ್ಳಬಹುದು. ಆದ್ದರಿಂದ, ಅವರಿಗೆ ನಿರ್ಬಂಧಗಳನ್ನು ವಿಧಿಸಬಹುದೇ ಹೊರತು, ರಾಷ್ಟ್ರಪತಿಯ ಮೇಲೆ ಅಲ್ಲ".

ವರ್ಗಾಯಿಸಲು ಸಾಧ್ಯವಿರುವುದರಿಂದ ಅವರು ಏನು ಮಾಡಿದರೆಂಬುದು ಯಾರಿಗೂ ಅರ್ಥವಾಗುವುದಿಲ್ಲ. ಆದ್ದರಿಂದ, ಈ ಉದ್ದೇಶವು ಶ್ಲಾಘನೀಯವಾದುದಾಗಿದ್ದರೂ ಪರಿಣಾಮವು ಶೂನ್ಯವೆಂಬುದು ನನ್ನ ನಿಲುವು.

ಚರ್ಚೆಗೆ ತಡೆ*

ನಾನು ನನ್ನ ನಿಲುವನ್ನು ಹಿಂತೆಗೆದುಕೊಳ್ಳುವುದಿಲ್ಲ. ಈ ತಿದ್ದುಪಡಿಯಲ್ಲಿ ಮಾಡಿರುವ ಅವಕಾಶಗಳಿಗೆ ಇರುವ ಪರಿಹಾರವು ಏನೇನೂ ಸಾಲದು. ಇದರಿಂದ ಪರಿಣಾಮಕಾರಿಯಾಗಲಾರದು. ಈ ಕಾರಣದಿಂದಲೇ ಇದು ನನಗೆ ಸಮ್ಮತವಿಲ್ಲ.

ಚರ್ಚೆಗೆ ತಡೆ**

ಈಗ ನಾನು ಏನೂ ಹೇಳಲಾರೆ. ಈ ತಿದ್ದುಪಡಿಯನ್ನು ದೋಷರಹಿತವಾಗಿ ಮಾಡಬೇಕಾಗಿದುದ್ದು ಅದನ್ನು ತಂದವರ ಹೊಣೆಯಾಗಿದೆ. ಇದರಲ್ಲಿ ಯಾವ ವಿಷಯವನ್ನು ಮರೆಯಬೇಕು ಎನ್ನುವುದು ಇಲ್ಲಿನ ಪ್ರಶ್ನೆ. ನಾನು ಹೇಳಿದಂತೆ ಕಾನೂನು ಅವಕಾಶವು ಸಾಕಷ್ಟಿಲ್ಲ. ನಮಗೆ ಬೇರೆ ಅವಕಾಶಗಳಿಲ್ಲವೇ? ಆಡಳಿತದಲ್ಲಿ ಪರಿಶುದ್ಧತೆಯನ್ನು ಒತ್ತಾಯಿಸಲು ನಮಗೆ ಇನ್ನೂ ಉತ್ತಮವಾದ ಬೇರೆ ಮಾರ್ಗವಿದೆ. ಅದು ವಿಧಾನಸಭೆಯಲ್ಲಿ ಪ್ರಸ್ತಾಪಿತವಾಗಿ ತೀವ್ರ ಗಮನ ಸೆಳೆದ ಸಾರ್ವಜನಿಕ ಅಭಿಪ್ರಾಯ ಕುರಿತ ವಿಚಾರ. ನನ್ನ ಸ್ನೇಹಿತರಾದ ಹೆಚ್.ವಿ. ಕಾಮತ್ ಅವರು ಕಾರ್ಖಾನೆ ಕಾಯಿದೆಯ ನಿದರ್ಶನವನ್ನು ಉದಾಹರಿಸಿದ್ದಾರೆ. ಸಾರ್ವಜನಿಕ ಅಭಿಪ್ರಾಯವು ಅವರನ್ನು ಅಲುಗಿಸಲಾರದೆಂಬ ಕಾರಣದಿಂದ ಕಾರ್ಖಾನೆ ಇನ್ಸ್‌ಪೆಕ್ಟರ್ ಸಂಬಂಧದಲ್ಲಿ ಈ ಅನರ್ಹತೆಗಳನ್ನು ಸೂಚಿಸಿದೆ. ಆದರೆ, ಸಾರ್ವಜನಿಕ ಅಭಿಪ್ರಾಯವು ದಿನೇದಿನೇ ಹೆಚ್ಚು ದಟ್ಟವಾಗುತ್ತಿದೆ. ಸದನವು ಒಬ್ಬ ಮಂತ್ರಿಯ ಆಡಳಿತ ಪಾವಿತ್ರ್ಯತೆಯ ಬಗ್ಗೆ ಯಾವುದೇ ಸಂದರ್ಭದಲ್ಲಿ ಅಸಮಾಧಾನ ಹೊಂದಿದ್ದರೆ ಅಂತಹ ಮಂತ್ರಿಯನ್ನು ಪದಚ್ಯುತಗೊಳಿಸಲು ಸಾರ್ವಜನಿಕ ಅಭಿಪ್ರಾಯ ಆಧಾರವಾಗಬೇಕು. ಅದಕ್ಕೆ ಯಾವುದೇ ಕಾನೂನಿನ ಅವಕಾಶ ರಕ್ಷಣೆಯಾಗಬಾರದೆಂಬುದು ನನ್ನ ನಿಲುವು.

* ಶ್ರೀ ನಾಸಿರುದ್ದೀನ್ ಅಹ್ಮದ್: ಬಚ್ಚಿಟ್ಟ ಮತ್ತು ಅಗೋಚರ ಆಸ್ತಿ-ಪಾಸ್ತಿಗಳನ್ನು ನೀವು ಹೇಗೆ ಪತ್ತೆ ಹಚ್ಚುವಿರಿ.

** ಶ್ರೀ ಹೆಚ್.ವಿ. ಕಾಮತ್ : ಡಾ. ಅಂಬೇಡ್ಕರ್ ಅವರು ಈ ತಿದ್ದುಪಡಿಯನ್ನು ತಾತ್ವಿಕವಾಗಿ ಅಂಗೀಕರಿಸುವರೆಂದು ಮತ್ತು ಆ ದಿನ ಪ್ರತಿ ಸಾರ್ಥ ನಿಲುವನ್ನು ಬದಲಾಯಿಸಿಲ್ಲವೆಂದು ಮತ್ತು ಅವರ ಹೇಳಿಕೆಯನ್ನು ನಿರಾಕರಿಸಿಲ್ಲವೆಂದು ಭಾವಿಸುತ್ತೇನೆ”

ಈಗ ನನ್ನ ಸ್ನೇಹಿತರಾದ ಮಾನ್ಯ ನಾಜಿರುದ್ದೀನ್ ಅಹ್ಮದ್ ಅವರ ತಿದ್ದುಪಡಿಯ ವಿಚಾರವನ್ನು ಪ್ರಸ್ತಾಪಿಸುತ್ತೇನೆ. ಮಸೂದೆಗೆ ನಾನು ಸೂಚಿಸಿದ ನಂತರದ ಭಾಗವನ್ನು ಕೈಬಿಡಬೇಕೆಂದು ಅವರು ಅಪೇಕ್ಷಿಸಿದ್ದಾರೆ. ತಿದ್ದುಪಡಿಯ ನಂತರದ ಭಾಗವನ್ನು ಉಳಿಸಿಕೊಂಡರೆ, ಅನುದೇಶ ಲಿಖಿತದಲ್ಲಿ ನೀಡಿದ ನಿರ್ದೇಶನವನ್ನು ಮಂತ್ರಿಯು ಪಾಲಿಸಬೇಕಾದುದರಿಂದ ಅದು ತಿದ್ದುಪಡಿಯ ಮುಂಚಿನ ಭಾಗವನ್ನು ಅಕೃತಗೊಳಿಸುತ್ತದೆ ಎಂಬುದು ಅವರ ಆಕ್ಷೇಪಣೆಯಾಗಿದೆ. ಹೌದು; ತಾತ್ವಿಕವಾಗಿ ಅದು ಸರಿ. ಅಲ್ಲಿಯೂ ಸಹ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಅನುದೇಶ ಲಿಖಿತದ ನಿರ್ಬಂಧಕಾಜ್ಞೆಯನ್ನು ನಾವು ಜಾರಿಗೊಳಿಸುವುದು ಹೇಗೆ ಸಾಧ್ಯ? ಈ ಬಗ್ಗೆ ಎರಡು ಮಾರ್ಗಗಳಿವೆ. ವಿಷಯದ ಸಿಂಧುತ್ವವನ್ನು ಕುರಿತು ವಿಚಾರಣೆ ನಡೆಸಿ ನ್ಯಾಯನಿರ್ಣಯ ನೀಡಲು ನ್ಯಾಯಾಲಯಕ್ಕೆ ಅನುಮತಿ ನೀಡುವುದು ಒಂದು ಮಾರ್ಗ. ಅದನ್ನು ಬಿಟ್ಟರೆ, ವಿಷಯವನ್ನು ವಿಧಾನಮಂಡಲಕ್ಕೆ ಒಪ್ಪಿಸಿ, ನಿಂದನಾನಿರ್ಣಯ ಅಥವಾ ಅವಿಶ್ವಾಸ ನಿರ್ಣಯದ ಮೂಲಕ ರಾಷ್ಟ್ರಪತಿಯು ಮಂತ್ರಿಮಂಡಲವು ನೀಡಿದ ಸಲಹೆಯನ್ನು ಅನುಸರಿಸುವಂತೆ ಮಾಡುವುದು ಇನ್ನೊಂದು ದಾರಿ. ನನ್ನ ತೀರ್ಮಾನದಂತೆ ಎರಡನೆಯದು ಉತ್ತಮವಾದ ಮಾರ್ಗ. ಇದರಿಂದ ನಮ್ಮ ಉದ್ದೇಶ ಸಫಲವಾಗುತ್ತದೆ. ಸದನದ ಕಲಾಪಗಳನ್ನು ನ್ಯಾಯಾಲಯದ ವ್ಯಾಪ್ತಿಗೆ ತರುವುದು ಅನುಚಿತ ಮತ್ತು ವೃಥಾ ತೊಂದರೆ ಸಹ. ಏಕೆಂದರೆ, ಒಬ್ಬ ಉದ್ಧಟ ಸದಸ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಸಲ್ಲಿಸಿ ಸದನದ ಸಭಾಪತಿಯವರ ವಿರುದ್ಧ ನಿರ್ಬಂಧಕಾಜ್ಞೆಯನ್ನು ತಂದರೆ, ಆ ಸಂಬಂಧಪಟ್ಟ ವಿಷಯವು ಉಚ್ಚನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದಿಂದ ಇತ್ಯರ್ಥವಾಗುವವರೆಗೆ ಸದನದ ಕಲಾಪಗಳನ್ನು ನಡೆಸಲು ಅಡ್ಡಿಯುಂಟುಮಾಡುತ್ತದೆ. ಇದು ಶಾಸನ ಸಭೆಯ ಕಲಾಪಗಳಲ್ಲಿ ಅಸಹನೀಯವಾದ ಮಧ್ಯಪ್ರವೇಶವೆಂದು ನನ್ನ ನಿಲುವು. ಇಂಗ್ಲೆಂಡಿನಲ್ಲಿಯೂ ಸಹ ಸದನದ ಕಾರ್ಯಕಲಾಪಗಳಲ್ಲಿ ನ್ಯಾಯಾಲಯವು ಪ್ರವೇಶಿಸುವಂತಿಲ್ಲ, ಬಹುಶಃ ನಾವು ಸಹ ಈ ಪದ್ಧತಿಯನ್ನು ಅನುಸರಿಸುವುದು ಸೂಕ್ತ. ಅದರಲ್ಲೂ ರಾಷ್ಟ್ರಪತಿಯವರು ಮತ್ತು ಮಂತ್ರಿಮಂಡಲವು ಉದ್ದೇಶಿತ ರೀತಿಯಲ್ಲಿ ನೀಡಿದ ಅನುದೇಶ ಲಿಖಿತವನ್ನು ಅನುಸರಿಸುವ ವಿಚಾರಕ್ಕೆ ಇದು ಹೆಚ್ಚು ಅನ್ವಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

9627-12

# ನಾಗರೀಕತ್ವದ ಉಪಬಂಧಗಳನ್ನು ಕುರಿತು

ಮಾನ್ಯ ಅಧ್ಯಕ್ಷರೆ, ಸಂವಿಧಾನದ ಕರಡು ಪ್ರತಿಯಲ್ಲಿ ಯಾವುದೋ ಒಂದು ಅನುಚ್ಛೇದವನ್ನು ಬಿಟ್ಟರೆ, ಕರಡು ರಚನಾ ಸಮಿತಿಗೆ ಈ ಒಂದು ಅನುಚ್ಛೇದ ಉಂಟು ಮಾಡಿದಷ್ಟು ತಲೆಬೇನೆ ಬೇರೆ ಯಾವುದೇ ಅನುಚ್ಛೇದ ಉಂಟು ಮಾಡಿಲ್ಲವೆಂದು ನನಗನಿಸುತ್ತದೆ. ಎಷ್ಟು ಕರಡು ಪ್ರತಿಗಳನ್ನು ಸಿದ್ಧಪಡಿಸಲಾಯಿತು, ಹಾಗೂ ಯಾವ ವಿಷಯಗಳು ಒಳಗೊಂಡಿರಬೇಕು ಮತ್ತು ಯಾವೆಲ್ಲಾ ಪ್ರಕರಣಗಳ ಅಗತ್ಯತೆಯನ್ನು ಬಯಸಲಾಗಿತ್ತೋ ಆ ಎಲ್ಲಾ ಪ್ರಕರಣಗಳು ಒಳಗೊಂಡಿಲ್ಲ ಎಂಬ ಕಾರಣದಿಂದ ಎಷ್ಟು ಕರಡು ಪ್ರತಿಗಳನ್ನು ನಾಶಗೊಳಿಸಲಾಯಿತು ಎಂಬುವುದನ್ನೂ ಸಹಾ ನಾನು ಹೇಳಲಾರೆ. ನಾನು ಮಂಡಿಸಿದ ಸಂವಿಧಾನ ಕರಡು ಪ್ರತಿಯನ್ನು ಅಂತಿಮವಾಗಿ ಒಪ್ಪಿಕೊಂಡಿದ್ದು ಕರಡು ರಚನಾ ಸಮಿತಿಯ ಸುಯೋಗವೆಂದು ಭಾವಿಸುತ್ತೇನೆ. ಯಾಕೆಂದರೆ, ಈ ಕರಡು ಸಂವಿಧಾನವು ಎಲ್ಲರನ್ನೂ ಅಲ್ಲದಿದ್ದರೂ, ಬಹುತೇಕ ಜನರನ್ನು ತೃಪ್ತಿಪಡಿಸುತ್ತದೆ ಎಂದೂ ಭಾವಿಸಿರುತ್ತೇನೆ.

ಮಾನ್ಯರೇ, ಈ ಅನುಚ್ಛೇದವು ಸಾಮಾನ್ಯ ಅರ್ಥದಲ್ಲಿ ನಾಗರೀಕತ್ವಕ್ಕೆ ಸಂಬಂಧಿಸಿದ್ದಾಗಿರದೆ, ಸಂವಿಧಾನ ಜಾರಿಗೆ ಬಂದ ದಿನಾಂಕದಿಂದಲೇ ಜಾರಿಗೆ ಬರುವ ನಾಗರೀಕತ್ವಕ್ಕೆ ಅನ್ವಯವಾಗುವ ಅನುಚ್ಛೇದವಾಗಿರುತ್ತದೆ. ಈ ರಾಷ್ಟ್ರದ ನಾಗರೀಕತ್ವಕ್ಕೆ ಸಂಬಂಧಿಸಿದಂತೆ ಶಾಶ್ವತವಾದ ಕಾನೂನನ್ನು ಕುರಿತು ಹೇಳುವುದು ಈ ಅನುಚ್ಛೇದದ ಉದ್ದೇಶವಾಗಿರುವುದಿಲ್ಲ, ನಾಗರಿಕತ್ವಕ್ಕೆ ಸಂಬಂಧಿಸಿದಂತೆ ಶಾಶ್ವತವಾದ ಕಾನೂನನ್ನು ಸಿದ್ಧಪಡಿಸುವುದು ಸಂಸತ್ತಿನ ಕೆಲಸವಾಗಿರುತ್ತದೆ. ಮತ್ತು ನಾನು ಮಂಡಿಸಿದ 6ನೇ ಅನುಚ್ಛೇದದ ರಚನೆಯನ್ನು ಮಾನ್ಯ ಸದಸ್ಯರು ನೋಡಿದರೆ ನಾಗರೀಕತ್ವಕ್ಕೆ ಸಂಬಂಧಿಸಿದ ಸಂಪೂರ್ಣ ವಿಷಯವನ್ನು ತನಗೆ ಯುಕ್ತವೆನಿಸುವ ರೀತಿಯಲ್ಲಿ ಯಾವುದೇ ಕಾನೂನಿನ ಮೂಲಕ ತೀರ್ಮಾನ ಕೈಗೊಳ್ಳುವ ಹಕ್ಕನ್ನು ಸಂಸತ್ತಿಗೆ ಕೊಡಲಾಗಿದೆ. ಈ ಅನುಚ್ಛೇದವು ಈ ರೀತಿ ಇದೆ.

"ಈ ಭಾಗದಲ್ಲಿ ಹಿಂದೆ ಹೇಳಿರುವ ಉಪಬಂಧಗಳಲ್ಲಿರುವುದು ಯಾವುದೂ, ನಾಗರಿಕತ್ವದ ಅರ್ಜನೆ, ಮತ್ತು ಸಮಾಪ್ತಿಗೆ ಸಂಬಂಧಿಸಿದಂತೆ ಮತ್ತು ನಾಗರಿಕತ್ವಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ಯಾವುದೇ ಉಪಬಂಧವನ್ನು ಮಾಡಲು ಸಂಸತ್ತಿಗಿರುವ ಅಧಿಕಾರವನ್ನು ಅಲ್ಪೀಕರಿಸತಕ್ಕದ್ದಲ್ಲ."

6ನೇ ಅನುಚ್ಛೇದದ ಪರಿಣಾಮವೆಂದರೆ, ಸಂವಿಧಾನ ಜಾರಿಗೆ ಬಂದ ದಿನಾಂಕದಿಂದ 5ನೇ ಅನುಚ್ಛೇದದ ಅನ್ವಯ ಮತ್ತು ಅದರಿಂದ ದೊರೆಯ ಬಹುದಾದ ಎಲ್ಲಾ ಪ್ರಜೆಗಳ ನಾಗರಿಕತ್ವವನ್ನು ಹಿಂತೆಗೆದುಕೊಂಡಿರುವುದಷ್ಟೇ ಆಗಿರದೇ ಸಂಸತ್ತು ನಾಗರಿಕತ್ವವನ್ನು ಪಡೆಯಲು ಹೊಸ ತತ್ವಗಳನ್ನೇ ಒಳಗೊಂಡ ಹೊಸ ಕಾಯ್ದೆಯನ್ನೇ ರಚಿಸಲೂಬಹುದು. ಈ ಅನುಚ್ಛೇದಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವವರು ಗಮನದಲ್ಲಿರಿಸಿಕೊಳ್ಳಬೇಕಾದ ಪ್ರಥಮ ಸೂತ್ರವೇ ಇದಾಗಿರುತ್ತದೆ. ಸಂವಿಧಾನ ಜಾರಿಗೆ ಬರುವ ದಿನಾಂಕದಿಂದಲೇ ಪ್ರಜೆಗಳ ನಾಗರಿಕತ್ವವನ್ನು ಕುರಿತು ನಾವು ಸಿದ್ಧ ಪಡಿಸುತ್ತಿರುವ ಉಪಬಂಧಗಳು ಶಾಶ್ವತವಾದುವುಗಳೇ ಅಥವಾ ಬದಲಾಯಿಸಲಾರದವುಗಳೇ ಎಂಬುವುದನ್ನು ಅವರುಗಳು ಅರ್ಥ ಮಾಡಿಕೊಳ್ಳಬೇಕಿಲ್ಲ. ನಾವು ಈಗ ಸದ್ಯದ ಸ್ಥಿತಿಯಲ್ಲಿ ಒಂದು ತತ್ಪೂರ್ತ ವ್ಯವಸ್ಥೆಯನ್ನಷ್ಟೇ ರೂಪಿಸುತ್ತಿದ್ದೇವೆ.

ಇಷ್ಟನ್ನು ಹೇಳಿದ ಮೇಲೆ, ಸಂವಿಧಾನ ಜಾರಿಗೆ ಬಂದ ದಿನಾಂಕದಿಂದ ಕೂಡ ಮಾಡಿದ ನಾಗರಿಕತ್ವವನ್ನು ಕುರಿತು ಸದನದ ಸದಸ್ಯರ ಗಮನವನ್ನು ಸೆಳೆಯ ಬಯಸುತ್ತೇನೆ. ಅದೆಂದರೆ, ಕರಡು ರಚನಾ ಸಮಿತಿಯು, ಈ ಅನುಚ್ಛೇದದಲ್ಲಿ ಹೇಳಲಾದ ಷರತ್ತುಗಳನ್ನು ಪೂರೈಸುವ ಐದು ಬಗೆಯಲ್ಲಿ ವರ್ಗೀಕರಿಸಲಾದ ವಿವಿಧ ಜನರು, ಸಂವಿಧಾನ ಜಾರಿಗೆ ಬಂದ ದಿನಾಂಕದಿಂದಲೇ ಪ್ರಜೆಗಳಾಗಲು ಅವಕಾಶವನ್ನು ಕಲ್ಪಿಸಿಕೊಡುತ್ತದೆ.

*ಈ ಐದು ವರ್ಗಗಳು ಯಾವುವು ಎಂದರೆ:*

1) ಸಂವಿಧಾನ ವಿವರಿಸಿದ ಜನ ಸಮೂಹದಿಂದ ಅಂದರೆ, ಭಾರತದ ನಿವಾಸಿಯಾಗಿರುವ ವ್ಯಕ್ತಿಗಳು ಮತ್ತು ಭಾರತದಲ್ಲಿ ಜನಿಸಿದವರು.

2) ಭಾರತದ ಅಧಿವಾಸಿಗಳಾಗಿದ್ದು, ಭಾರತದಲ್ಲಿ ಹುಟ್ಟಿದ, ಆದರೆ ಭಾರತದಲ್ಲಿ ನೆಲೆಸಿರುವಂಥ ವ್ಯಕ್ತಿಗಳು. ಉದಾಹರಣೆಗೆ - ಭಾರತದಲ್ಲಿ ಪೋರ್ಚುಗೀಸರ ವಸಾಹತುಗಳ ಪ್ರಜೆಗಳು ಅಥವಾ ಭಾರತದಲ್ಲಿ ಫ್ರೆಂಚರ ಆಡಳಿತಕ್ಕೆ ಒಳಪಟ್ಟ ಚಂದರ್‌ನಾಗೋರ್, ಪಾಂಡಿಚೇರಿ ಪ್ರದೇಶದ ವ್ಯಕ್ತಿಗಳು, ಅಥವಾ ಪರ್ಶಿಯಾದಿಂದ ಬಂದು ಇಲ್ಲಿ ಹುಟ್ಟದವರಾಗಿರದಿದ್ದರೂ, ಸುದೀರ್ಘ ಕಾಲದಿಂದ ನೆಲೆಸಿರುವ ಮತ್ತು ಯಾವುದೇ ಅನುಮಾನಕ್ಕೆ ಅವಕಾಶವಿಲ್ಲದೆ ಭಾರತದ ಪ್ರಜೆಗಳಾಗಲು ಬಯಸಿರುವ ಇರಾನಿನ ವ್ಯಕ್ತಿಗಳು.

ಕರಡು ರಚನಾ ಸಮಿತಿಯು, ಈ ಅನುಚ್ಛೇದದ ವ್ಯಾಪ್ತಿಗೆ ತರಬೇಕೆಂದು ಉದ್ದೇಶಿಸಿರುವ ಇತರೆ ಮೂರು ವರ್ಗದ ಜನತೆ ಎಂದರೆ:

3) ಭಾರತದ ನಿವಾಸಿಗಳಾಗಿರುವ, ಆದರೆ ಪಾಕಿಸ್ತಾನಕ್ಕೆ ವಲಸೆ ಹೋದ ವ್ಯಕ್ತಿಗಳು.

4) ಪಾಕಿಸ್ತಾನದ ನಿವಾಸಿಗಳಾಗಿರುವ, ಮತ್ತು ಭಾರತಕ್ಕೆ ವಲಸೆ ಬಂದ ವ್ಯಕ್ತಿಗಳು ಮತ್ತು

5) ಯಾರು ಅಥವಾ ಯಾರ ತಂದೆ ತಾಯಿಗಳು ಭಾರತದಲ್ಲಿ ಹುಟ್ಟಿದ್ದು, ಆದರೆ ಭಾರತದ ಹೊರಗಡೆ ನೆಲೆಸಿದ್ದಾರೋ ಅವರು.

ಈ ಅನುಚ್ಛೇದದಲ್ಲಿನ ಉಪಬಂಧಗಳು ಮೇಲ್ಕಂಡ ಐದು ವರ್ಗದ ಜನರನ್ನು ಒಳಗೊಂಡಿರುತ್ತದೆ. ಈಗ ಮೊದಲನೆ ವರ್ಗದ ಜನರು ಎಂದರೆ, ಭಾರತದ ಭೂ ಪ್ರದೇಶದೊಳಗೆ ಅಧಿವಾಸಿಗಳಾದ ವ್ಯಕ್ತಿಗಳು ಮತ್ತು ಭಾರತದ ಭೂ ಪ್ರದೇಶದೊಳಗೆ ಜನಿಸಿದ ವ್ಯಕ್ತಿಗಳ ಅಥವಾ ಅಂತಹ ವ್ಯಕ್ತಿಗಳ ತಂದೆ ತಾಯಿಗಳು ಭಾರತದ ಗಡಿಯೊಳಗೆ ಹುಟ್ಟಿದ್ದರೆ, ಅಂತಹ ಎಲ್ಲಾ ವ್ಯಕ್ತಿಗಳು, 5ನೇ ಅನುಚ್ಛೇದದ (ಎ) ಮತ್ತು (ಬಿ) ಖಂಡಗಳಲ್ಲಿ ಬರುತ್ತಾರೆ. ಅವರು ಆ ಉಪಬಂಧಗಳಲ್ಲಿ ಹೇಳಿರುವ ಷರತ್ತುಗಳನ್ನು ಪೂರೈಸುವುದಾದರೆ ಆ ಮೇರೆಗೆ ಪ್ರಜೆಗಳಾಗುತ್ತಾರೆ.

ಎರಡನೇ ವರ್ಗದಲ್ಲಿ ನಾನು ತರಬೇಕೆಂದು ಉದ್ದೇಶಿಸಿರುವ ಜನರು ಎಂದರೆ, ಭಾರತದಲ್ಲಿ ಜನಿಸಿದ ಆದರೆ ಭಾರತದಲ್ಲಿ ನೆಲೆಸಿದ ವ್ಯಕ್ತಿಗಳು 5ನೇ ಅನುಚ್ಛೇದದ (ಸಿ) ಖಂಡದಲ್ಲಿ ಬರುವವರಾಗಿದ್ದು, ಇವರು ಸಂವಿಧಾನ ಜಾರಿಗೆ ಬರುವ ನಿಕಟ ಪೂರ್ವದಲ್ಲಿ ಐದು ವರ್ಷಗಳಿಗೆ ಕಡಿಮೆ ಇಲ್ಲದೇ ಭಾರತದ ಭೂ ಪ್ರದೇಶದೊಳಗೆ ಸಾಮಾನ್ಯ ನಿವಾಸಿಗಳಂತೆ ನೆಲೆಸಿದವರಾಗಿರಬೇಕು. ಈ ಅನುಚ್ಛೇದದಲ್ಲಿ ವಿಧಿಸಿರುವ ಷರತ್ತು ಎಂದರೆ, ಅಂತಹ ವ್ಯಕ್ತಿ ಭಾರತದಲ್ಲಿ ಐದು ವರ್ಷಗಳಿಂದ ನೆಲೆಸಿದವನಾಗಿರಬೇಕು. ಈ ಎಲ್ಲಾ ವರ್ಗಗಳ ಜನರು ಸಾಮಾನ್ಯ ಷರತ್ತಿನ ಮಿತಿಗೆ ಒಳಪಡುವವರಾಗಿದ್ದು, ಅಂತಹ ಸಾಮಾನ್ಯ ಷರತ್ತಿನ ಮಿತಿ ಯಾವುದೆಂದರೆ, ಅವರೆಲ್ಲರೂ ಯಾವುದೇ ವಿದೇಶ ರಾಷ್ಟ್ರದ ನಾಗರಿಕತ್ವವನ್ನು ಸ್ವಇಚ್ಛೆಯಿಂದ ಪಡೆದವರಾಗಿರಬಾರದು.

ಕಡೆಯ ವರ್ಗದ ಜನರಿಗೆ ಸಂಬಂಧಿಸಿದಂತೆ ಅಂದರೆ ಯಾರು ವಿದೇಶಗಳಲ್ಲಿ ನೆಲೆಸಿರುತ್ತಾರೋ ಅಂತಹವರು ಅಥವಾ ಅಂತಹವರ ತಂದೆ ತಾಯಿಗಳು ಭಾರತದಲ್ಲಿ ಹುಟ್ಟಿದವರಾಗಿದ್ದರೆ, ಅಂತಹವರು 5-ಬಿ ಅನುಚ್ಛೇದದಲ್ಲಿ ಬರುವವರಾಗಿದ್ದು ಈ ವಿಧಿಯು ಅಂತಹ ವ್ಯಕ್ತಿಗಳು ಅಥವಾ ಅಂತಹ ವ್ಯಕ್ತಿಗಳ ತಂದೆ ತಾಯಿಗಳು ಅಥವಾ ಅವರ ಅಜ್ಜಂದಿರು, ಭಾರತ ಸರ್ಕಾರದ ಅಧಿನಿಯಮ 1935ರ ಅಧಿನಿಯಮದಲ್ಲಿ ವಿವರಿಸಿರುವಂತೆ ಇವರು ಭಾರತದ ಭೂ ಪ್ರದೇಶದ ಹೊರಗಡೆ ಯಾವುದೇ ಭಾಗದಲ್ಲಿ ನೆಲೆಸಿದವರಾಗಿದ್ದರೆ, ಅಂತಹ ವ್ಯಕ್ತಿಗಳನ್ನೂ ಸಹ ವಿದೇಶದಲ್ಲಿರುವ ಭಾರತೀಯರು ಎನಿಸಿಕೊಳ್ಳುತ್ತಾರೆ. ಇವರುಗಳ ಮೇಲೆ ವಿಧಿಸಿರುವ ಒಂದು ಪರಿಮಿತಿ ಎಂದರೆ, ಸಂವಿಧಾನ ಜಾರಿಗೆ ಬರುವ ನಿಕಟ ಪೂರ್ವದಿಂದಲೇ ಭಾರತದ ಪ್ರಜೆಗಳಾಗಿ ಮುಂದುವರೆಯುವ ಇಚ್ಛೆಯನ್ನೂ ಹೊಂದಿದ್ದರೆ, ತಾನು ತತ್ಕಾಲದಲ್ಲಿ ವಾಸಿಸುತ್ತಿರುವ ದೇಶದಲ್ಲಿನ ಕನ್ಸೂಲರ್ ಪ್ರತಿನಿಧಿಗೆ ಅಥವಾ ಭಾರತ ಸರ್ಕಾರದಿಂದ ನಿಯುಕ್ತಗೊಂಡ ರಾಜತಾಂತ್ರಿಕ ಪ್ರತಿನಿಧಿಗೆ, ಭಾರತ ಸರ್ಕಾರ ಈ ಉದ್ದೇಶಕ್ಕಾಗಿ ನಿರ್ದಿಷ್ಟ ಪಡಿಸಿದ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿ, ಆ ಅಧಿಕಾರಿಯಿಂದ ನಾಗರಿಕನೆಂದು ನೊಂದಾಯಿಸಿಕೊಂಡಿರಬೇಕು ಎನ್ನುತ್ತದೆ. ಅವರಿಗೆ ಎರಡು ಷರತ್ತುಗಳನ್ನು ವಿಧಿಸಿದೆ. ಅವುಗಳೆಂದರೆ, ಒಂದು ಅರ್ಜಿಯನ್ನು ಸಲ್ಲಿಸುವುದು ಮತ್ತು ಎರಡು ಅಂಥ ಅರ್ಜಿದಾರನು ತಾನು ಇರುವ ದೇಶದಲ್ಲಿನ ಕನ್ಸೂಲರ್ ಪ್ರತಿನಿಧಿಗೆ ಅಥವಾ ಭಾರತ ಸರ್ಕಾರದಿಂದ ನಿಯುಕ್ತನಾದ ರಾಜತಾಂತ್ರಿಕ ಪ್ರತಿನಿಧಿಗೆ ಅರ್ಜಿಯನ್ನು ಸಲ್ಲಿಸಿ ನಾಗರಿಕನೆಂದು ನೊಂದಾಯಿಸಿಕೊಂಡಿರಬೇಕು. ಇವು, ನಾನು ಈ ಮೊದಲೇ ಹೇಳಿದಂತೆ, ಬಹಳ ಸರಳವಾದ ವಿಧಾನಗಳಾಗಿರುತ್ತವೆ.

ಈಗ ನಾವು ಎರಡು ವರ್ಗದ ಜನರನ್ನು ನೋಡುತ್ತೇವೆ. ಅವರುಗಳೆಂದರೆ, ಭಾರತದ ನಿವಾಸಿಗಳಾಗಿದ್ದು, ಪಾಕಿಸ್ತಾನಕ್ಕೆ ವಲಸೆ ಹೋದವರು, ಮತ್ತು ಪಾಕಿಸ್ತಾನದ ನಿವಾಸಿಗಳಾಗಿದ್ದು ಭಾರತಕ್ಕೆ ವಲಸೆ ಬಂದವರು. ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದವರನ್ನು ಕುರಿತು ನನ್ನ 5-ಎ ಅನುಚ್ಛೇದದಲ್ಲಿ ತಿಳಿಸಲಾಗಿದೆ. 5-ಎ ಅನುಚ್ಛೇದದ ಉಪಬಂಧಗಳು ಈ ಕೆಳಕಂಡಂತೆ ಇವೆ.

ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದ ಜನರನ್ನು ಎರಡು ರೀತಿಯಲ್ಲಿ ವರ್ಗೀಕರಿಸಲಾಗಿದೆ.

ಎ) 19 ಜುಲೈ 1948ಕ್ಕೆ ಮೊದಲು ಬಂದವರು, ಮತ್ತು

ಬಿ) 19 ಜುಲೈ 1948ರ ನಂತರ ಪಾಕಿಸ್ತಾನದಿಂದ ಭಾರತಕ್ಕೆ ಬಂದವರು.

19 ಜುಲೈ 1948 ಕ್ಕೆ ಮೊದಲು ಬಂದವರು ಸಹಜವಾಗಿ ಭಾರತದ ನಾಗರಿಕರಾಗುತ್ತಾರೆ.

19 ಜುಲೈ 1948ರ ನಂತರ ಬಂದವರು, ಒಂದು ನಿರ್ದಿಷ್ಟ ಪ್ರಕ್ರಿಯೆಯನ್ನು ಅನುಸರಿಸಿದರೆ, ಸಂವಿಧಾನ ಜಾರಿಗೆ ಬಂದ ದಿನಾಂಕದಿಂದಲೇ ನಾಗರಿಕತ್ವವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಅಂದರೆ, ಅಂತಹ ವ್ಯಕ್ತಿಯು ಭಾರತದ ಡೊಮಿನಿಯನ್ ಸರಕಾರ ನೇಮಕ ಮಾಡಿದ ಅಧಿಕಾರಿಗೆ ಅರ್ಜಿ ಸಲ್ಲಿಸಬೇಕು ಹಾಗೂ ಅಂಥ ಅರ್ಜಿಯ ಆಧಾರದ ಮೇಲೆ ಅಂಥ ವ್ಯಕ್ತಿಯನ್ನು ಸಂಬಂಧಿಸಿದ ಅಧಿಕಾರಿ ನೊಂದಾಯಿಸಿರಬೇಕು.

ಸಂವಿಧಾನ ಜಾರಿಗೆ ಬಂದ ದಿನಾಂಕದಂದು, ನಾಗರಿಕತ್ವವನ್ನು ಪಡೆಯುವ ಸಲುವಾಗಿ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದ ವ್ಯಕ್ತಿಗಳನ್ನು ಎರಡು ಗುಂಪುಗಳಾಗಿ ವರ್ಗೀಕರಿಸಲಾಗಿದೆ - ಅಂದರೆ, 19 ಜುಲೈ 1948ಕ್ಕೆ ಮೊದಲು ಬಂದವರು, ಮತ್ತು ಅನಂತರ ಬಂದವರು. 19 ಜುಲೈ 1948ಕ್ಕೆ ಮೊದಲು ಬಂದವರನ್ನು ಕುರಿತು ಹೇಳುವುದಾದರೆ, ಅವರಿಗೆ ನಾಗರಿಕತ್ವವು ತಾನಾಗಿಯೇ ದೊರೆಯುತ್ತದೆ. ಇವರುಗಳ ಮಟ್ಟಿಗೆ ಹೇಳುವುದಾದರೆ, ಯಾವುದೇ ಬಗೆಯ ಷರತ್ತುಗಳನ್ನು ಅಥವಾ ಯಾವುದೇ ಪ್ರಕ್ರಿಯೆಯನ್ನು ವಿಧಿಸಿರುವುದಿಲ್ಲ. ಆದರೆ 19 ಜುಲೈ 1948ರ ನಂತರ ಬಂದವರನ್ನು ಕುರಿತು ಹೇಳುವುದಾದರೆ, ಅವರು ಅನುಸರಿಸಬೇಕಾದ ಕೆಲವು ವಿಧಿ ವಿಧಾನಗಳನ್ನು ಹಾಗೂ ಪಾಲಿಸಬೇಕಾದ ಕೆಲ ಷರತ್ತುಗಳನ್ನು ವಿಧಿಸಲಾಗಿದೆ. ಅವರುಗಳು ಈ ಷರತ್ತುಗಳನ್ನು ಪಾಲಿಸಿದರೆ, ನಾವು ತರಬೇಕೆಂದು ಉದ್ದೇಶಿಸಿರುವ ಈ ಅನುಚ್ಛೇದದ ಅಡಿಯಲ್ಲಿ ಅವರೂ ಸಹ ನಾಗರಿಕತ್ವವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ನಾನೀಗ, ಪಾಕಿಸ್ತಾನಕ್ಕೆ ವಲಸೆ ಹೋದ, ಆದರೆ ಪಾಕಿಸ್ತಾನಕ್ಕೆ ಹೋದ ಮೇಲೆ ಭಾರತಕ್ಕೆ ಮರಳಿ ಬಂದವರ ಬಗ್ಗೆ ಹೇಳಬಯಸುತ್ತೇನೆ. ಆ ಸಂಬಂಧದ ವ್ಯವಸ್ಥೆ ಹೀಗಿದೆ - ಆ ವಿಷಯವನ್ನು ಕುರಿತಂತೆ ವ್ಯವಹರಿಸುವ ಮಂತ್ರಿಗಳಿಗೆ ಗೊತ್ತಿರುವಷ್ಟು ವಿವರಗಳು ನನಗೆ ಗೊತ್ತಿರುವುದಿಲ್ಲ, ಆದರೆ ನಾವು ಮಂಡಿಸಬೇಕೆಂದಿರುವ ಪ್ರಸ್ತಾವ ಹೀಗಿದೆ. ಯಾವ ವ್ಯಕ್ತಿ ಪಾಕಿಸ್ತಾನಕ್ಕೆ ವಲಸೆ ಹೋಗಿರುತ್ತಾನೋ ಮತ್ತು ಅಲ್ಲಿಗೆ ಹೋದ ಮೇಲೆ ಭಾರತ ಸರ್ಕಾರ ನೀಡಿದ ಅನುಮತಿಯ ಮೇಲೆ, ಹಿಂದಿರುಗುತ್ತಾನೋ ಅಂತಹ ಅನುಮತಿ ಕೇವಲ ಪ್ರವೇಶಕ್ಕಷ್ಟೇ ಸೀಮಿತವಾಗಿರದೆ ಶಾಶ್ವತವಾಗಿ ಪುನರ್ ನೆಲೆಗೊಳ್ಳಲು ಅಥವಾ ಶಾಶ್ವತವಾಗಿ ಹಿಂದಿರುಗಲು ಅವಕಾಶ ಕಲ್ಪಿಸಿರುತ್ತದೋ ಅಂತಹ ವ್ಯಕ್ತಿ ಮಾತ್ರ

ಸಂವಿಧಾನ ಜಾರಿಗೆ ಬಂದ ದಿನಾಂಕದಿಂದ ನಾಗರಿಕತ್ವವನ್ನು ಪಡೆಯಲು ಹಕ್ಕುಳ್ಳವನಾಗುತ್ತಾನೆ. ಈ ಉಪಬಂಧವನ್ನು ಅಳವಡಿಸಲು ಕಾರಣವೆಂದರೆ, ಭಾರತ ಸರಕಾರವು ಪಾಕಿಸ್ತಾನಕ್ಕೆ ವಲಸೆ ಹೋದ ಹಾಗೂ ಯಾರು ಪಾಕಿಸ್ತಾನದಿಂದ ಭಾರತಕ್ಕೆ ಹಿಂದಿರುಗಿದರೋ ಅವರುಗಳಿಗೆ "ಪರ್ಮಿಟ್ ಸಿಸ್ಟಮ್" ಆಧಾರದ ಮೇಲೆ ಹಿಂದಕ್ಕೆ ಬರಲು ಮತ್ತು ಶಾಶ್ವತವಾಗಿ ನೆಲೆಸಲು ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತದೆ. ಈ "ಪರ್ಮಿಟ್ ಸಿಸ್ಟಮ್" 19 ಜುಲೈ 1948ರಿಂದ ಜಾರಿಗೆ ಬಂದಿತು. ಆದ್ದರಿಂದ 5-ಬಿ ಅನುಚ್ಛೇದದಲ್ಲಿನ ಉಪಬಂಧವು ಪಾಕಿಸ್ತಾನದಿಂದ ಬಂದು, ಅನಂತರ ಪಾಕಿಸ್ತಾನಕ್ಕೆ ಹಿಂದಿರುಗಿದ ಮತ್ತೆ ಭಾರತಕ್ಕೆ ಬಂದ ಅಂತಹ ವ್ಯಕ್ತಿಗಳ 'ನಾಗರಿಕತ್ವಕ್ಕೆ' ಸಂಬಂಧಿಸಿದುದಾಗಿರುತ್ತದೆ. ಈ ಉಪಬಂಧವು 'ಪರ್ಮಿಟ್ ಸಿಸ್ಟಮ್' ಆಧಾರದ ಮೇಲೆ ಪುನರ್ ನೆಲೆಗೊಳ್ಳಲು ಅಥವಾ ಖಾಯಂ ಆಗಿ ಹಿಂದಿರುಗಲು ಬಯಸಿದರೆ ಅಂತಹ ವ್ಯಕ್ತಿ ಮಾತ್ರ ಸಂವಿಧಾನ ಜಾರಿಗೆ ಬಂದ ದಿನಾಂಕದಿಂದ ನಾಗರಿಕನಾಗಲು ಅರ್ಹನಾಗುತ್ತಾನೆ.

ಮಾನ್ಯರೆ, ಸೀಮಿತ ಉದ್ದೇಶಕ್ಕಾಗಿ ಪ್ರತಿಯೊಂದು ಬಗೆಯ ಪ್ರಕರಣವನ್ನು ಅಂದರೆ ಸಂವಿಧಾನ ಜಾರಿಗೆ ಬಂದ ದಿನಾಂಕದಂದು ನಾಗರಿಕತ್ವವನ್ನು ಕೊಡುವ ಉದ್ದೇಶಕ್ಕಾಗಿ ಪ್ರತಿಯೊಂದು ಪ್ರಕರಣವನ್ನು ಸೇರಿಸಲು ಬರುವುದಿಲ್ಲ, ಈ ತಿದ್ದುಪಡಿಯೊಳಗೆ ಬಿಟ್ಟು ಹೋಗಿರುವ ಇನ್ನಾವುದೇ ವರ್ಗದ ಜನರು ಇದ್ದರೆ, ಅಂತಹವರುಗಳಿಗಾಗಿ ಉಪಬಂಧಗಳನ್ನು ರಚಿಸಲು ಸಂಸತ್ತಿಗೆ ಅಧಿಕಾರವನ್ನು ಕೊಡಲಾಗಿದೆ. ನಾನು ಈ ಸದನಕ್ಕೆ ತಿಳಿಸುವುದೇನೆಂದರೆ, ಯಾವ ಉದ್ದೇಶಗಳಿಗಾಗಿ ಈ ತಿದ್ದುಪಡಿಗಳನ್ನು ತರಲಾಗಿದೆಯೋ ಆ ಉದ್ದೇಶದ ಈಡೇರಿಕೆಗೆ ಮತ್ತು ಈ ಸಂದರ್ಭಕ್ಕೆ ಸೂಕ್ತವಾಗಿದೆ ಎಂದು ಭಾವಿಸುತ್ತೇನೆ ಮತ್ತು ಸದನವು ಈ ತಿದ್ದುಪಡಿಗಳನ್ನು ಅಂಗೀಕರಿಸುವುದೆಂದು ಭಾವಿಸುತ್ತೇನೆ.

● ○ ●

# ಸಂವಿಧಾನ ತಿದ್ದುಪಡಿಯ ಪ್ರಕ್ರಿಯೆಯನ್ನು ಕುರಿತು

ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೂ ಮಾಡಲಾದ ಬಹಳಷ್ಟು ತಿದ್ದುಪಡಿಗಳನ್ನು ಕುರಿತಾಗಲಿ, ಹಾಗೂ ಅವುಗಳ ಮೇಲಿನ ಚರ್ಚೆಗಳ ಬಗ್ಗೆಯಾಗಲಿ, ಅಂತಹ ಪ್ರತಿಯೊಂದು ತಿದ್ದುಪಡಿಯನ್ನು ಅಥವಾ ಪ್ರತಿಯೊಬ್ಬ ಭಾಷಣಕಾರನು ನಡೆಸಿದ ಚರ್ಚೆಯನ್ನು ಪರಿಶೀಲಿಸಲು ನನಗೆ ಸಾಧ್ಯವಾಗುತ್ತಿಲ್ಲ. ಆದರೆ ವಿವಿಧ ಭಾಷಣಕಾರರು ಸೂಚಿಸಿದಂತೆ ನಮ್ಮ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರಲು ಸರಳ ಬಹುಮತದಿಂದ ಅಥವಾ 304ನೇ ಅನುಚ್ಛೇದದಲ್ಲಿ ತಿಳಿಸಿರುವ ರೀತಿಗಿಂತ ಸರಳವಾದ ವಿಧಾನದಲ್ಲಿ ತಿದ್ದುಪಡಿ ತರುವ ಅವಕಾಶವನ್ನು ಮುಂದೆ ಬರಲಿರುವ ಸಂಸತ್ತಿಗೆ ಕೊಡುವಂತಿರಬೇಕು, ಎಂದು ವಿವಿಧ ಭಾಷಣಕಾರರು ಸೂಚಿಸಿದುದನ್ನೇ ಪರ್ಯಾಯವಾಗಿ ಚರ್ಚೆ ಮಾಡಲು ಬಯಸುತ್ತೇನೆ.

ಮಾನ್ಯರೇ, 304ನೇ ಅನುಚ್ಛೇದದ ಉಪಬಂಧಗಳನ್ನು ವಿವರಿಸುವುದಕ್ಕೆ ಮೊದಲು ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ ಇತರೆ ಸಂವಿಧಾನಗಳಲ್ಲಿನ ಉಪಬಂಧಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಕೆನಡಾ ದೇಶದ ಸಂವಿಧಾನದಲ್ಲಿ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ ಯಾವುದೇ ಉಪಬಂಧವಿರುವುದಿಲ್ಲ ಎಂದು ಹೇಳುವುದರೊಂದಿಗೆ ನಾನು ಸದನದಲ್ಲಿ ಈ ಚರ್ಚೆಯನ್ನು ಪ್ರಾರಂಭಿಸುತ್ತೇನೆ. ಕೆನಡಾ ಇಂದು ಡೊಮಿನಿಯನ್ ಎನಿಸಿಕೊಂಡಿದ್ದರೂ, ಸಾರ್ವಭೌಮತ್ವದ ಎಲ್ಲಾ ಲಕ್ಷಣಗಳನ್ನು ಒಳಗೊಂಡಿರುವ ಸಾರ್ವಭೌಮ ರಾಷ್ಟ್ರವಾಗಿದ್ದು, ಸಂವಿಧಾನವನ್ನು ಬದಲಾಯಿಸುವ ಅಧಿಕಾರಕ್ಕೆ ಸಂಬಂಧಿಸಿದಂತೆ, ಕೆನಡಾ ದೇಶದ ಜನರು ಇಂದಿಗೂ ಕೂಡ ತಮ್ಮ ಸಂವಿಧಾನಕ್ಕೆ ತಿದ್ದುಪಡಿ ತರುವ ಹಕ್ಕನ್ನು ಕೆನಡಾದ ಸಂಸತ್ತಿಗೆ ಕೊಟ್ಟಿರುವುದಿಲ್ಲ. ಕೆನಡಾ ಸಂವಿಧಾನವನ್ನು 1867 ರಷ್ಟು ಹಿಂದೆಯೇ ರಚಿಸಲಾಯಿತೆಂಬುದನ್ನು ನೆನಪಿನಲ್ಲಿಡಬೇಕು. ಮತ್ತು ಕೆನಡಾ ಸಂವಿಧಾನವನ್ನು ಕುರಿತು ವಿವಿಧ ಪುಸ್ತಕಗಳನ್ನು ಯಾರೇ ಅಧ್ಯಯನ ಮಾಡಿದರೂ ಅವರ ಮನಸ್ಸಿನಲ್ಲಿ ಕೆನಡಾ ಸಂವಿಧಾನದಲ್ಲಿನ ವಿವಿಧ ಖಂಡಗಳನ್ನು ಕುರಿತು ಹಾಗೂ ಪ್ರಿವಿ ಕೌನ್ಸಿಲ್ ಕೊಟ್ಟ ಅರ್ಥ ವಿವರಣೆ ಬಗ್ಗೆಯೂ ಅಸಮಧಾನವಿರುವುದರ ಬಗ್ಗೆ ಯಾವುದೇ ಸಂದೇಹವಿರುವುದಿಲ್ಲ, ಆದರೂ ಸಹಾ, ಕೆನಡಾ ದೇಶದ ಜನತೆ, ತಮಗೆ ಕೊಟ್ಟಿರುವ ಅಧಿಕಾರವನ್ನು ಚಲಾಯಿಸಿ, ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವ ಉಪಬಂಧವನ್ನು ತರುವುದು ಸೂಕ್ತವೆಂದು ಭಾವಿಸಿಲ್ಲ.

ಈಗ ನಾನು ಐರ್‌ಲ್ಯಾಂಡ್ ದೇಶದ ಸಂವಿಧಾನಕ್ಕೆ ಬರುತ್ತೇನೆ. ಐರಿಷ್ ಸಂವಿಧಾನದಲ್ಲಿ ಉಪಬಂಧವೊಂದು ಇದ್ದು ಆ ಉಪಬಂಧದ ಪ್ರಕಾರ ಎರಡೂ ಸದನಗಳು, ಸರಳ ಬಹುಮತದಿಂದ ಐರಿಷ್ ಸಂವಿಧಾನದ ಯಾವುದೇ ಭಾಗವನ್ನು ಮಾರ್ಪಡಿಸಬಹುದು, ಅಥವಾ ರದ್ದು ಪಡಿಸಬಹುದು. ಆದರೆ ಸಂವಿಧಾನಕ್ಕೆ ಹಾಗೆ ತರಲಾಗುವ ತಿದ್ದುಪಡಿ, ರದ್ದಿಯಾತಿ, ಅದರ ಮಾರ್ಪಾಟಿಗೆ ಸಂಬಂಧಿಸಿದಂತೆ, ಸದನದ ನಿರ್ಣಯವನ್ನು ಜನಮತಗಣನೆಗೆ ಹಾಕಬೇಕಿರುತ್ತದೆ ಮತ್ತು ಜನರ ಬಹುಮತದ ಅಂಗೀಕಾರ ಬೇಕಾಗುತ್ತದೆ.

ಈಗ ಸ್ವಿಸ್ ಸಂವಿಧಾನವನ್ನು ತೆಗೆದುಕೊಳ್ಳೋಣ. ಆ ಸಂವಿಧಾನದಲ್ಲೂ ಸಹ, ವಿಧಾನ ಮಂಡಲವು ತಿದ್ದುಪಡಿಯ ಮಸೂದೆಯನ್ನು ಅಂಗೀಕರಿಸಬಹುದು. ಆದರೆ ಅಂತಹ ತಿದ್ದುಪಡಿಗೆ ಎರಡು ಷರತ್ತುಗಳನ್ನು ಪೂರೈಸದ ಹೊರತು ಅದಕ್ಕೆ ಜಾರಿಯಾಗುವ ಬಲವಿರುವುದಿಲ್ಲ, ಅದೇನೆಂದರೆ ಒಂದು ಅಂತಹ ತಿದ್ದುಪಡಿಯನ್ನು ಕ್ಯಾಂಟನ್‌ಗಳ ಬಹುಮತದಿಂದ ಅಂಗೀಕೃತವಾಗಿರಬೇಕು. ಮತ್ತು ಎರಡನೆಯದು ಜನಮತಗಣನೆಯು ಇರಬೇಕಾಗುತ್ತದೆ. ಅಂತಹ ಜನಮತ ಗಣನೆಯಲ್ಲಿ ಜನತೆಯು ತಿದ್ದುಪಡಿಯನ್ನು ಬಹುಮತದಿಂದ ಸ್ವೀಕರಿಸಬೇಕಾಗುತ್ತದೆ. ಸ್ವಿಜರ್‌ಲ್ಯಾಂಡಿನಲ್ಲಿ ವಿಧಾನ ಮಂಡಲವು ಮಸೂದೆಯನ್ನು ಅಂಗೀಕರಿಸಿದ ಮಾತ್ರಕ್ಕೆ ಸಂವಿಧಾನದ ಬದಲಾವಣೆಯ ಮಟ್ಟಿಗೆ ಯಾವುದೇ ಪರಿಣಾಮ ಆಗುವುದಿಲ್ಲ.

ಈಗ ಆಸ್ಟ್ರೇಲಿಯಾ ಸಂವಿಧಾನವನ್ನು ತೆಗೆದುಕೊಂಡು ನೋಡೋಣ. ಆ ಸಂವಿಧಾನದಲ್ಲಿ ಉಪಬಂಧವು ಈ ರೀತಿ ಇದೆ. ತಿದ್ದುಪಡಿಯು ಆಸ್ಟ್ರೇಲಿಯಾ ಸಂಸತ್ತಿನಿಂದ ಸಂಪೂರ್ಣ ಬಹುಮತದಿಂದ ಅಂಗೀಕಾರವಾಗಬೇಕಿರುತ್ತದೆ. ಹಾಗೇ, ಅಂಗೀಕಾರವಾದ ನಂತರ ಆಸ್ಟ್ರೇಲಿಯಾ ಸಂಸತ್ತಿನ ಕೆಳ ಮನೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವ್ಯಕ್ತಿಗಳ ಅಂಗೀಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಆ ನಂತರವೂ ಅಂತಹ ತಿದ್ದುಪಡಿಯನ್ನು ಜನಮತಗಣನೆಗೆ ಅಥವಾ ಮತದಾರರ ಮುಂದೆ ಇಡಬೇಕಾಗುತ್ತದೆ. ಆನಂತರವೂ ಒಂದು ಷರತ್ತಿರುತ್ತದೆ. ಅದೇನೆಂದರೆ, ಎಲ್ಲಾ ರಾಜ್ಯಗಳು ಹಾಗೂ ಮತದಾರರು ಬಹುಮತದಿಂದಲೂ ಸ್ವೀಕರಿಸಬೇಕಿರುತ್ತದೆ.

ಸಂಯುಕ್ತ ಸಂಸ್ಥಾನಗಳ (ಅಮೇರಿಕಾ) ಸಂವಿಧಾನದಲ್ಲಿ ತಿದ್ದುಪಡಿಯನ್ನು ಸಂಸತ್ತಿನ ಎರಡೂ ಸದನಗಳು ಮೂರನೇ ಎರಡರಷ್ಟು ಬಹುಮತದಿಂದ ಅಂಗೀಕರಿಸಬೇಕು. ಹಾಗೂ ಉಭಯ ಸದನದ ಮೂರನೇ ಎರಡರಷ್ಟು ಬಹುಮತದಿಂದ ಸ್ವೀಕಾರವಾದ ನಿರ್ಣಯವನ್ನು ತಿದ್ದುಪಡಿಯ ಪರವಾಗಿ ರಾಜ್ಯಗಳ ಮೂರನೇ ಎರಡರಷ್ಟು ಬಹುಮತದ ನಿರ್ಣಯದಿಂದ ಅನುಮೋದಿಸಬೇಕಾಗುತ್ತದೆ.

ನಾನು ಮೇಲೆ ಹೇಳಿದ ಯಾವುದೇ ರಾಷ್ಟ್ರದಲ್ಲಿ ಸಂವಿಧಾನಕ್ಕೆ ಸರಳ ಬಹುಮತದಿಂದ ತಿದ್ದುಪಡಿಯನ್ನು ತರಲು ಸೂಚಿಸಿಲ್ಲ ಎಂಬುವುದನ್ನು ಸ್ಪಷ್ಟ ಪಡಿಸುವ ಸಲುವಾಗಿ ಇವುಗಳನ್ನು ಉಲ್ಲೇಖಿಸಿರುತ್ತೇನೆ.

ಈಗ ನಮ್ಮ ಸಂವಿಧಾನದ ಉಪಬಂಧವನ್ನು ನೋಡೋಣ. ನಮ್ಮ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ ನಾವು ಪ್ರಸ್ತಾವಿಸುವುದಾದರೂ ಏನು? ನಾವು ನಮ್ಮ ಸಂವಿಧಾನದ ವಿವಿಧ ಅನುಚ್ಛೇದಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸ ಬಯಸುತ್ತೇನೆ. ಮೊದಲನೆಯ ವರ್ಗೀಕರಣದಲ್ಲಿ ಬರುವ ಕೆಲ ನಿರ್ದಿಷ್ಟ ಅನುಚ್ಛೇದಗಳನ್ನು ಸಂವಿಧಾನವು ತನ್ನ ಸರಳ ಬಹುಮತದಿಂದ ತಿದ್ದುಪಡಿ ಮಾಡಲು ಅವಕಾಶವಿರುತ್ತದೆ. ದುರಾದೃಷ್ಟವಶಾತ್, ಈ ವಿಷಯವು ಸಂವಿಧಾನದ 304ನೇ ಅನುಚ್ಛೇದದಲ್ಲಿ ಉಲ್ಲೇಖಿಸದೇ ಇರುವುದರಿಂದ, ಆದರೆ ಸಂವಿಧಾನದ ವಿವಿಧ ಅನುಚ್ಛೇದಗಳಲ್ಲಿ ನಮೂದಿಸಿರುವುದರಿಂದ ಈ ವಿಷಯವು ಗಮನಕ್ಕೆ ಬಂದಿಲ್ಲವೆಂದು ತೋರುತ್ತದೆ. ಇವುಗಳಲ್ಲಿ ಕೆಲವನ್ನು ಕುರಿತು ತಿಳಿಸಬಯಸುತ್ತೇನೆ. ಉದಾಹರಣೆಗೆ, ರಾಜ್ಯಗಳಿಗೆ ಸಂಬಂಧಿಸಿದಂತೆ 2 ಮತ್ತು 3ನೇ ಅನುಚ್ಛೇದಗಳನ್ನು ನೋಡೋಣ. ಹೊಸ ರಾಜ್ಯಗಳ ರಚನೆಗೆ ಸಂಬಂಧಿಸಿದಂತೆ ಅಥವಾ ಇರುವ ರಾಜ್ಯಗಳ ಪುನರ್ ರಚನೆಗೆ ಸಂಬಂಧಿಸಿದಂತೆ, ಈ ವಿಷಯವನ್ನು ಸಂಸತ್ತು ತನ್ನ ಸರಳ ಬಹುಮತದಿಂದ ಮಾಡಬಹುದು. ಹಾಗೆಯೇ ಉದಾಹರಣೆಗೆ 148-ಎ ಅನುಚ್ಛೇದವು ಪ್ರಾಂತ್ಯಗಳಲ್ಲಿನ ಮೇಲ್ಮನೆಗಳನ್ನು ಕುರಿತದ್ದಾಗಿರುತ್ತದೆ. ಮೇಲ್ಮನೆಗಳನ್ನು ರದ್ದುಪಡಿಸುವ ಅಥವಾ ಯಾವ ಪ್ರಾಂತ್ಯಗಳಲ್ಲಿ ಅವುಗಳು ಇರುವುದಿಲ್ಲವೋ ಅಲ್ಲಿ ಹೊಸ ಎರಡನೆ ಮೇಲ್ಮನೆಯನ್ನು ರಚಿಸುವ ಸಂಪೂರ್ಣ ಸ್ವಾತಂತ್ರ್ಯವನ್ನು ಸಂಸತ್ತಿಗೆ ನೀಡಲಾಗಿದೆ. ಈಗ 213ನೇ ಅನುಚ್ಛೇದವನ್ನು ತೆಗೆದುಕೊಳ್ಳೋಣ. ಈ ಅನುಚ್ಛೇದವು ಭಾಗ 2ರಲ್ಲಿನ ರಾಜ್ಯಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ರಾಜ್ಯಗಳರಚನೆಗೆ ಸಂಬಂಧಿಸಿದಂತೆ ಕರಡು ಸಂವಿಧಾನವು ರಾಜ್ಯಗಳ ರಚನೆ ಮತ್ತು ಅವುಗಳ ಬದಲಾವಣೆಗೆ ಸಂಬಂಧಿಸಿದಂತೆ ಸಂಸತ್ತು ತನ್ನ ಸರಳ ಬಹುಮತದಿಂದ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅವಕಾಶವಿರುತ್ತದೆ.

ಹಾಗೆಯೇ 5 ಮತ್ತು 6ನೇ ಅನುಸೂಚಿಗಳನ್ನು ನೋಡೋಣ. ಇವುಗಳನ್ನು ಸಹಾ ಸಂಸತ್ತು ತನ್ನ ಸರಳ ಬಹುಮತದಿಂದ ತಿದ್ದುಪಡಿ ಮಾಡಬಹುದು. ನಾನು ಸಂವಿಧಾನದಲ್ಲಿನ ಅನೇಕ ಅನುಚ್ಛೇದಗಳನ್ನು ಉಲ್ಲೇಖಿಸಬಲ್ಲೆ. ಉದಾಹರಣೆಗೆ ಅನುಚ್ಛೇದ 255ರಲ್ಲಿ ಉಲ್ಲೇಖಿಸಿರುವ ಅನುದಾನಗಳನ್ನು ಮತ್ತು ಹಣಕಾಸಿಗೆ ಸಂಬಂಧಿಸಿದ ಉಪಬಂಧಗಳನ್ನು ಸಂಸತ್ತು ತರಬಹುದಾದ ಕಾಯಿದೆಗೆ ಅಧೀನವಾಗಿರಬೇಕೆನ್ನುತ್ತದೆ. ಆ ಉಪಬಂಧಗಳು "ಸಂಸತ್ತು ಅನ್ಯಥಾ

ಉಪಬಂಧಿಸುವವರೆಗೆ" ಎಂದು ಹೇಳುತ್ತದೆ. ಆದ್ದರಿಂದ ಅನೇಕ ವಿಷಯಗಳನ್ನು ಕುರಿತು ಹೇಳಬೇಕೆಂದರೆ, ನನಗೆ ಕರಡು ಸಂವಿಧಾನವನ್ನು ಸಂಪೂರ್ಣವಾಗಿ ಪರಿಶೀಲಿಸಲು ಸಮಯವಿರಲಿಲ್ಲ. ಆ ಕಾರಣಕ್ಕಾಗಿ ನಾನು ಕೆಲವೇ ಉದಾಹರಣೆ ಗಳನ್ನು ತೆಗೆದುಕೊಂಡಿದ್ದೇನೆ. ನಾವು ಸಂವಿಧಾನದಲ್ಲಿನ ಅನೇಕ ಅನುಚ್ಛೇದಗಳನ್ನು ಒಂದು ರೀತಿಯಲ್ಲಿ ಸಂಸತ್ತು ತನ್ನ ಸರಳ ಬಹುಮತದಿಂದ ತಿದ್ದುಪಡಿ ಮಾಡಲು ಅವಕಾಸ ಕಲ್ಪಿಸಿದ್ದೇವೆ. ನನ್ನ ಮಾನ್ಯ ಮಿತ್ರರು, ಸಂಸತ್ತು ತನ್ನ ಸರಳ ಬಹುಮತದಿಂದ ಸಂವಿಧಾನವನ್ನು ತಿದ್ದುಪಡಿ ಮಾಡಲು ಅಥವಾ ಮಾರ್ಪಡಿಸಲು ಹೆಚ್ಚು ವ್ಯಾಪಕವಾದ ಅಧಿಕಾರವಿರಬೇಕೆಂದು ಚರ್ಚಿಸುತ್ತಿರುವವರು ಅಂತಹ ನಿರ್ದಿಷ್ಟ ಯಾವುದಾದರೂ ಒಂದು ನಿರ್ದಿಷ್ಟ ಪ್ರಕರಣವನ್ನು ನನ್ನ ಗಮನಕ್ಕೆ ತಂದು, ಆ ವರ್ಗದಲ್ಲಿ ಸೇರಿಸಬೇಕಾದ ನಿರ್ದಿಷ್ಟ ಅನುಚ್ಛೇದವನ್ನು ಸಹಾ ತಿಳಿಸಬೇಕಾಗುತ್ತದೆ. ಅವರು ಸೂಚಿಸಬಯಸುವ ಯಾವುದೇ ಸಲಹೆಯನ್ನು ಸಂವಿಧಾನ ಕರಡು ರಚನಾ ಸಮಿತಿಯ ಪರಿಶೀಲನೆಗೆ ಬಿಟ್ಟಿದ್ದು. ಹಾಗೆ ಮಾಡದೆ ಸಂಪೂರ್ಣವಾಗಿ ಸಂವಿಧಾನವನ್ನು ಸಂಸತ್ತು ತನ್ನ ಬಹುಮತದಿಂದ ತಿದ್ದುಪಡಿ ಮಾಡಬೇಕೆಂದು ಹೇಳುವುದು, ನನ್ನ ಪ್ರಕಾರ ಮಿತಿಮೀರಿದ ಕೋರಿಕೆಯಾಯಿತೆಂದು ಮತ್ತು ಕರಡು ಸಂವಿಧಾನವನ್ನು ರಚಿಸಲು ಕಾರಣ ಕರ್ತರಾದ ಎಲ್ಲಾ ಸದಸ್ಯರೂ ಇದನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯ ಪಡುತ್ತೇನೆ.

ಆದ್ದರಿಂದ, ಇಲ್ಲಿ ನಾನು ಮುಖ್ಯವಾಗಿ ಹೇಳಬೇಕಾದುದು ಏನೆಂದರೆ, ಸಂವಿಧಾನದಲ್ಲಿ ಯಾವುದೇ ಅನುಚ್ಛೇದವನ್ನು ಸಂಸತ್ತು ತನ್ನ ಸರಳ ಬಹುಮತದಿಂದ ತಿದ್ದುಪಡಿ ಮಾಡಲು ಬರುವುದಿಲ್ಲ ಎಂದು ತಪ್ಪಾಗಿ ಭಾವಿಸಬೇಕಾದ ಅವಶ್ಯಕತೆ ಇರುವುದಿಲ್ಲ. ನಾನು ಈಗಾಗಲೇ ಹೇಳಿದಂತೆ ಸಂಸತ್ತು ತನ್ನ ಸಾಮಾನ್ಯ ಬಹುಮತದಿಂದ ನಮ್ಮ ಸಂವಿಧಾನದಲ್ಲಿನ ಎಷ್ಟೋ ಅನುಚ್ಛೇದಗಳನ್ನು ತಿದ್ದುಪಡಿ ಮಾಡಲು ಅವಕಾಶವಿರುತ್ತದೆ.

ಈಗ ನಾವು ಮಾಡುವುದಾದರೂ ಏನು? ನಾವು ಸಂವಿಧಾನದ ಅನುಚ್ಛೇದಗಳನ್ನು ಸಂಸತ್ತು ಸಾಮಾನ್ಯ ಬಹುಮತದಿಂದ ತಿದ್ದುಪಡಿ ಮಾಡಬಹುದು. ಎರಡನೇ ವರ್ಗದಲ್ಲಿನ ಅನುಚ್ಛೇದಗಳಿಗೆ ಮೂರನೇ ಎರಡರಷ್ಟು ಬಹುಮತ ಬೇಕಿರುತ್ತದೆ. ಭಾಗ-3 ರಲ್ಲಿ ಅಥವಾ ಅನುಚ್ಛೇದ 304ರಲ್ಲಿ ಉಲ್ಲೇಖಿಸಿರದ ಯಾವುದೇ ನಿರ್ದಿಷ್ಟ ಅನುಚ್ಛೇದವನ್ನು ತಿದ್ದುಪಡಿ ಮಾಡಬೇಕೆಂದು ಮುಂದಿನ ಸಂಸತ್ತು ಅಭಿಪ್ರಾಯಪಟ್ಟರೆ, ಅದು ಆ ಬಗ್ಗೆ ಅವಶ್ಯಕವಾದ 3ನೇ ಎರಡರಷ್ಟು ಬಹುಮತವನ್ನು ಹೊಂದಿರಬೇಕಾಗುತ್ತದೆ, ಅಷ್ಟೇ. ಆಗ ಅವರು ತಿದ್ದುಪಡಿಯನ್ನು ಮಾಡಬಹುದು.

ಮೂರನೇ ವರ್ಗದಲ್ಲಿ ನಾವು ಕೆಲವು ಅನುಚ್ಛೇದಗಳನ್ನು ಸೇರಿಸಿದ್ದೇವೆ. ಇವುಗಳ ಸಂಬಂಧದಲ್ಲಿ ತಿದ್ದುಪಡಿಯ ಉದ್ದೇಶವುಳ್ಳ ಪ್ರಕ್ರಿಯೆಯು ಒಂದು ರೀತಿಯಲ್ಲಿ ಭಿನ್ನವಾಗಿರುತ್ತದೆ ಅಥವಾ ಇಮ್ಮಡಿಯಾಗಿರುತ್ತದೆ. ಇವುಗಳನ್ನು ತಿದ್ದುಪಡಿ ಮಾಡಲು ಸಂಸತ್ತಿನ ಮೂರನೇ ಎರಡರಷ್ಟು ಬಹುಮತ ಬೇಕು ಹಾಗೂ ಅದಕ್ಕೆ ರಾಜ್ಯಗಳ ಅನುಮೋದನೆ ಬೇಕಿರುತ್ತದೆ. ಕೆಲವು ನಿರ್ದಿಷ್ಟ ಅನುಚ್ಛೇದಗಳ ಮಟ್ಟಿಗೆ ಈ ಪ್ರಕ್ರಿಯೆಯನ್ನು ಅಳವಡಿಸಲು ಕಾರಣವೇನೆಂಬುದನ್ನು ನಾನು ಈಗ ತಿಳಿಸಲು ಬಯಸುತ್ತೇನೆ. ಸದನದ ಯಾವ ಸದಸ್ಯರಿಗೆ ಈ ವಿಷಯವನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿ ಇದೆಯೋ ಅಂತಹವರು ಪರಂತುಕದ ಅಡಿಯಲ್ಲಿ ಸೇರಿಸಿದ ಅನುಚ್ಛೇದಗಳನ್ನು ಪರಿಶೀಲಿಸಿದರೆ ಅವರಿಗೆ ಅವು ಕೇವಲ ಕೇಂದ್ರ ಸರ್ಕಾರಕ್ಕಷ್ಟೇ ಸಂಬಂಧಿಸಿಲ್ಲ ಆದರೆ ಕೇಂದ್ರ ಅಥವಾ ಪ್ರಾಂತ ಸಂಬಂಧಗಳಿಗೆ ಸಂಬಂಧಿಸಿವೆ ಎಂಬುದನ್ನು ನೋಡಬಹುದು. ಪ್ರಾಂತೀಯ ಸ್ವಾಯತ್ತತೆ ಮೇಲೆ ಅತಿಕ್ರಮ ಮಾಡಿರುವ ಸಂಗತಿಯನ್ನು ನಾವು ಮರೆಯುವಂತಿಲ್ಲವಾದರೂ ಸಂವಿಧಾನದಲ್ಲಿನ ಸಂಯುಕ್ತ ಪದ್ಧತಿಯನ್ನು ಯಾವುದೇ ಬದಲಾವಣೆ ಇಲ್ಲದೆ ನಾವು ಹಾಗೆಯೇ ಉಳಿಸಿಕೊಂಡಿದ್ದೇವೆ ಎಂಬುದನ್ನು ಮರೆಯಲು ಸಾಧ್ಯವಿಲ್ಲ, ನಾವು ನಮ್ಮ ಕಾನೂನುಗಳ ಮೂಲಕ ಪ್ರಾಂತಗಳಿಗೆ ಕೆಲ ನಿರ್ದಿಷ್ಟ ಹಕ್ಕುಗಳನ್ನು ನೀಡಿದ್ದೇವೆ ಹಾಗೂ ಕೇಂದ್ರ ಸರ್ಕಾರದ ಮಟ್ಟಿಗೆ ಕೆಲ ನಿರ್ದಿಷ್ಟ ಹಕ್ಕುಗಳನ್ನು ಮೀಸಲಾಗಿಟ್ಟಿದ್ದೇವೆ. ನಾವು ಶಾಸಕಾಂಗದ ಅಧಿಕಾರವನ್ನು ಹಂಚಿಕೆ ಮಾಡಿದ್ದೇವೆ. ನಾವು ಕಾರ್ಯಾಂಗದ ಅಧಿಕಾರವನ್ನು ಸಹಾ ಹಂಚಿಕೆ ಮಾಡಿದ್ದೇವೆ. ಸ್ಪಷ್ಟವಾಗಿ ಹೇಳಬೇಕೆಂದರೆ ಸಂವಿಧಾನದಲ್ಲಿನ ಅನುಚ್ಛೇದಗಳ ಪೈಕಿ ಆಡಳಿತಕ್ಕೆ, ಶಾಸಕಾಂಗಕ್ಕೆ, ಹಣಕಾಸಿಗೆ, ಮತ್ತು ಇತರೆ ಅಧಿಕಾರಗಳಿಗೆ, ಉದಾಹರಣೆಗೆ ರಾಜ್ಯಗಳ ಕಾರ್ಯಾಂಗದ ಅಧಿಕಾರಗಳಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ತರಬೇಕಾದರೆ ಕೇಂದ್ರದಲ್ಲಿನ ಸಂಸತ್ತಿನ ಮೂರನೇ ಎರಡರಷ್ಟು ಬಹುಮತದಿಂದ, ಬಹುಮತವನ್ನು ಪಡೆಯಬೇಕಾಗುತ್ತದೆ. ಹೀಗೆ ಬಹುಮತವನ್ನು ಪಡೆಯುವಾಗ ಪ್ರಾಂತಗಳಿಗಾಗಲೀ ಅಥವಾ ರಾಜ್ಯಗಳಿಗಾಗಲೀ ಅವುಗಳಿಗೆ ಹೇಳಿಕೊಳ್ಳಲು ಅವಕಾಶ ಕೊಡಲಿಲ್ಲವೆಂದರೆ ಸಂವಿಧಾನದಲ್ಲಿನ ಮೂಲ ತತ್ವಗಳಿಗೆ ಧಕ್ಕೆಯಾಗುತ್ತದೆ, ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ನನ್ನ ಮಾನ್ಯ ಮಿತ್ರರು ಪರಂತುಕದಲ್ಲಿ ಸೇರಿಸಲಾದ ಅನುಚ್ಛೇದಗಳ ಬಗ್ಗೆ ಉಲ್ಲೇಖಿಸುವುದಾದರೆ ನಾವು ಆಯ್ಕೆ ಮಾಡಿಕೊಂಡಿರುವ ಕೆಲವೇ ಅನುಚ್ಛೇದಗಳನ್ನು ಅವರು ನೋಡಬಹುದು. 43ನೇ ಅನುಚ್ಛೇದವು ರಾಷ್ಟ್ರಪತಿಯ ಚುನಾವಣೆಗೆ ಸಂಬಂಧಿಸಿದ್ದಾಗಿರುತ್ತದೆ. ಮತ್ತು 44ನೇ ಅನುಚ್ಛೇದವು ರಾಷ್ಟ್ರಪತಿಯ ಚುನಾವಣೆಯ ರೀತಿಗೆ ಸಂಬಂಧಿಸಿದ್ದಾಗಿರುತ್ತದೆ. ರಾಷ್ಟ್ರಪತಿಗಳು ಕೇಂದ್ರ ಸರ್ಕಾರದ

ವ್ಯವಹಾರಗಳ ಹೊಣೆ ಹೊತ್ತವರಾಗಿದ್ದರೂ, ಅವರು ಒಕ್ಕೂಟದ ಮುಖ್ಯಸ್ಥರಾಗಿರುತ್ತಾರೆ. ಆದ ಕಾರಣ, ಕೇಂದ್ರದಂತೆಯೇ ಪ್ರಾಂತ್ಯಗಳು ಸಹಾ ರಾಷ್ಟ್ರಪತಿಗಳ ಚುನಾವಣೆಯಲ್ಲಿ ಹಾಗೂ ಚುನಾವಣೆಯ ರೀತಿಯಲ್ಲಿ ಆಸಕ್ತಿ ಹೊಂದಿರುತ್ತವೆ. ಇದು ಕರಡು ರಚನಾ ಸಮಿತಿಯ ಅಭಿಪ್ರಾಯವಾಗಿತ್ತು. ಆದ್ದರಿಂದ ಈ ವಿಷಯವು ಪ್ರಾಂತ್ಯಗಳ ಅನುಮೋದನೆಯ ಅಗತ್ಯವಾಗಿರತಕ್ಕ ಅನುಚ್ಛೇದಗಳ ವರ್ಗದಲ್ಲಿ ಸೇರಿಸಬೇಕಾದ ಸೂಕ್ತ ವಿಷಯವೆಂದು ನಾವು ಭಾವಿಸಿದೆವು.

60ನೇ ಅನುಚ್ಛೇದ ಮತ್ತು 142ನೇ ಅನುಚ್ಛೇದವನ್ನೇ ತೆಗೆದುಕೊಳ್ಳಿ 60ನೇ ಅನುಚ್ಛೇದವು ಕೇಂದ್ರದ ಕಾರ್ಯಾಂಗದ ವ್ಯಾಪ್ತಿಯನ್ನು ಕುರಿತದ್ದಾಗಿದ್ದರೆ, 142ನೇ ಅನುಚ್ಛೇದವು ರಾಜ್ಯದ ಕಾರ್ಯಾಂಗದ ವ್ಯಾಪ್ತಿಯನ್ನು ಕುರಿತದ್ದಾಗಿರುತ್ತದೆ. ನಾವು ನಮ್ಮ ಸಂವಿಧಾನದಲ್ಲಿ ಕಾರ್ಯಾಂಗದ ಅಧಿಕಾರವು ಶಾಸಕಾಂಗದ ಅಧಿಕಾರದೊಂದಿಗೆ ಸಹ ವ್ಯಾಪ್ತವಾಗಿರತಕ್ಕದೆಂಬ ಮೂಲಭೂತವಾದ ತತ್ವವನ್ನು ಸಂವಿಧಾನದಲ್ಲಿ ಸೇರಿಸಿದ್ದೇವೆ. ಉದಾಹರಣೆಗೆ 60ನೇ ಅನುಚ್ಛೇದದಲ್ಲಿನ ಕಾರ್ಯಾಂಗದ ಅಧಿಕಾರವನ್ನು 60ನೇ ಅನುಚ್ಛೇದದ ಉಪಬಂಧದ ವ್ಯಾಪ್ತಿಯ ಅಥವಾ ಕ್ಷೇತ್ರದ ಆಚೆಗೂ ಅನ್ವಯವಾಗುವಂತೆ 60ನೇ ಅನುಚ್ಛೇದದಲ್ಲಿ ಬದಲಾವಣೆಯನ್ನು ತರಲು ಸಂಸತ್ತಿಗೆ ಅವಕಾಶವಿದೆಯೆಂದು ನಾವು ಭಾವಿಸಿದರೆ ಆಗ ಸಂವಿಧಾನದ 142ನೇ ಅನುಚ್ಛೇದದ ಅನ್ವಯ ರಾಜ್ಯಗಳಿಗೆ ಇರುವ ಕಾರ್ಯಾಂಗದ ಅಧಿಕಾರವನ್ನು ಕುಗ್ಗಿಸಿದಂತಾಗುತ್ತದೆ, ಅಥವಾ ಸೀಮಿತ ಗೊಳಿಸಿದಂತಾಗುತ್ತದೆ. ಆ ಕಾರಣದಿಂದಲೇ ನಾವು ಅದನ್ನು ಮೂಲಭೂತವಾದ ವಿಷಯವೆಂದು ಹಾಗೂ ರಾಜ್ಯಗಳ ಅನುಮೋದನೆ ಅಗತ್ಯವಾಗುವ ವಿಷಯವೆಂದು ಭಾವಿಸಿದೆವು.

ಭಾಗ-5ರ ಅಧ್ಯಾಯ-4, ಸರ್ವೋಚ್ಚ ನ್ಯಾಯಾಲಯವನ್ನು ಕುರಿತದ್ದಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಂದ್ರ ಮತ್ತು ಪ್ರಾಂತಗಳು ಅಥವಾ ಘಟಕಗಳು ಹಾಗೂ ಈ ದೇಶದ ಪ್ರತಿಯೊಬ್ಬ ಪ್ರಜೆಯು ಆಸಕ್ತಿ ಹೊಂದಿದವರಾಗಿರುತ್ತಾರೆ ಎಂಬುದರಲ್ಲಿ ಯಾವುದೇ ಅನುಮಾನವಿರುವುದಿಲ್ಲ, ಮತ್ತು ಆ ಕಾರಣದಿಂದ ಅದನ್ನು ಕೇವಲ ಮೂರನೇ ಎರಡರಷ್ಟು ಬಹುಮತದಿಂದ ತೀರ್ಮಾನಕ್ಕೆ ಒಪ್ಪಿಸುವ ವಿಷಯವಾಗಿರುವುದಿಲ್ಲ. ಭಾಗ-6ರ ಅಧ್ಯಾಯ 7 ರಲ್ಲಿ ಉಲ್ಲೇಖವಾದ ಉಚ್ಚ ನ್ಯಾಯಾಲಯಗಳ ಬಗ್ಗೆಯೂ ಇದನ್ನೇ ಹೇಳಬೇಕಾಗುತ್ತದೆ.

ಭಾಗ-9ರ ಅಧ್ಯಾಯ-1, 3ನೆಯ ಗುಂಪಿನ ವರ್ಗದಲ್ಲಿ ಬರುವ ವಿದಾಯಿ ಅಧಿಕಾರದ ಹಂಚಿಕೆಯನ್ನು ಕುರಿತದ್ದಾಗಿರುತ್ತದೆ, ಮತ್ತು (ಎ) ಖಂಡವು 7ನೇ ಅನುಸೂಚಿಯಲ್ಲಿನ ಪಟ್ಟಿಗಳನ್ನು ಕುರಿತದ್ದಾಗಿರುತ್ತದೆ. ಪ್ರಾಂತ್ಯಗಳಿಗೆ ಈ ವಿಷಯದಲ್ಲಿ ಮೂಲಭೂತವಾದ ಆಸಕ್ತಿ ಇದೆ ಎಂಬುವುದನ್ನು ಮತ್ತು ಅವುಗಳನ್ನು ಪ್ರಾಂತ್ಯಗಳ ಒಪ್ಪಿಗೆ ಇಲ್ಲದೆ ಬದಲಾಯಿಸುವಂತೆಯೂ ಇಲ್ಲ ಎಂಬುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಹಾಗೆಯೇ ರಾಜ್ಯಗಳ ಪರಿಷತ್ತಿನಲ್ಲಿ ರಾಜ್ಯಗಳ ಪ್ರಾತಿನಿಧ್ಯವನ್ನು ಕುರಿತ 67ನೆಯ ಅನುಚ್ಛೇದಕ್ಕೂ ಇದು ಅನ್ವಯವಾಗುವುದು.

ಸಂವಿಧಾನ ರಚನಾ ಸಮಿತಿಯು ಸಂವಿಧಾನದಲ್ಲಿ ಅಳವಡಿಸಿರುವ ತತ್ವಗಳು ಪ್ರಶ್ನಾತೀತ ಎಂಬುದನ್ನು ಒಪ್ಪಿಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ. ಸಂವಿಧಾನದ ಅನೇಕ ಅನುಚ್ಛೇದಗಳು ಅಥವಾ ಪ್ರತಿಯೊಂದು ಅನುಚ್ಛೇದವು ಸಂಸತ್ತಿನ ಸರಳ ಬಹುಮತದಿಂದ ತಿದ್ದುಪಡಿ ಮಾಡಲೂಬಹುದು ಎಂಬುವುದನ್ನು ಕೆಲವರು ಒಪ್ಪದೇ ಇರಬಹುದು. ನಾನು ಈ ಮೊದಲೇ ಹೇಳಿದಂತೆ ಆ ನಿಲುವನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ, ಸಂವಿಧಾನವು ಮೂಲಭೂತವಾದ ದಾಖಲೆಯಾಗಿರುತ್ತದೆ. ಅದು ರಾಜ್ಯಗಳ ಮೂರು ಮುಖ್ಯ ಅಂಗಗಳಾದ ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗಗಳ ಅಧಿಕಾರವನ್ನು ಮತ್ತು ಅವುಗಳ ಸ್ಥಾನಮಾನವನ್ನು ಸ್ಪಷ್ಟವಾಗಿ ವಿವರಿಸುವ ಹಾಗೂ ವಿಶ್ಲೇಷಿಸುವ ದಾಖಲೆಯಾಗಿರುತ್ತದೆ. ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ಇರುವಂತೆಯೇ ನಾಗರಿಕರಿಗೆ ಸಂಬಂಧಪಟ್ಟ ಹಾಗೆ ಕಾರ್ಯಾಂಗ ಮತ್ತು ಶಾಸಕಾಂಗದ ಅಧಿಕಾರಗಳನ್ನು ವಿವರಿಸಿರುತ್ತದೆ. ವಾಸ್ತವವಾಗಿ ಸಂವಿಧಾನದ ಉದ್ದೇಶವು ಈ ರಾಜ್ಯಗಳ ಅಂಗಗಳನ್ನು ಸೃಷ್ಟಿಸುವುದಷ್ಟೇ ಆಗಿರದೆ ಅದಕ್ಕಿಂತ ಹೆಚ್ಚಾಗಿ ಈ ಅಂಗಗಳ ಅಧಿಕಾರ ಮತ್ತು ಅವುಗಳ ಮೇಲಿನ ಮಿತಿಗಳನ್ನು ಗೊತ್ತುಪಡಿಸುವುದೇ ಆಗಿರುತ್ತದೆ. ಯಾಕೆಂದರೆ ಇಂತಹ ಅಂಗಗಳ ಅಧಿಕಾರಗಳ ಮೇಲೆ ಮಿತಿಗಳನ್ನು ವಿಧಿಸಲಿಲ್ಲವೆಂದರೆ ರಾಜ್ಯದಲ್ಲಿ ಸಂಪೂರ್ಣ ನಿರಂಕುಶಾಧಿಕಾರಕ್ಕೂ, ದಬ್ಬಾಳಿಕೆಗೂ ಅವಕಾಶವಾಗುತ್ತದೆ. ಶಾಸಕಾಂಗವು ಯಾವುದೇ ಕಾನೂನನ್ನು ರಚಿಸಲು ತಾನು ಸ್ವತಂತ್ರ ಎನ್ನಬಹುದು. ಕಾರ್ಯಾಂಗವು ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ತಾನು ಸ್ವತಂತ್ರ ಎನ್ನಬಹುದು. ಮತ್ತು ಸರ್ವೋಚ್ಚ ನ್ಯಾಯಾಲಯವು ದೇಶದ ಯಾವುದೇ ಕಾನೂನು ಅನ್ನು ವ್ಯಾಖ್ಯಾನಿಸಲು ತಾನು ಸ್ವತಂತ್ರ ಎನ್ನಬಹುದು. ಆ ರೀತಿ ಆಗಿದ್ದೇ ಆದರೆ ಅದು ಸಂಪೂರ್ಣ ಅವ್ಯವಸ್ಥೆಗೆ ಕಾರಣವಾಗುತ್ತದೆ. ಮಾನ್ಯರೇ, ಸಂವಿಧಾನವು ಸಂಸತ್ತಿನ ಸರಳ ಬಹುಮತದಿಂದ ತಿದ್ದುಪಡಿಯಾಗಲು ಅವಕಾಶವಿರಬೇಕೆಂದು ಯಾಕೆ ಕೇಳುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ, ಈ ಅಭಿಪ್ರಾಯವನ್ನು ಕುರಿತು ನಾನು

ಬಹಳಷ್ಟು ಸಾರಿ ಆಲೋಚಿಸಿದ್ದೇನೆ. ಮತ್ತು ಆ ಅಭಿಪ್ರಾಯಕ್ಕೆ ಮೂರು ಕಾರಣಗಳಿರಬಹುದು. ಮೊದಲನೆಯದಾಗಿ ಕರಡು ರಚನಾ ಸಮಿತಿಯು ಸಂವಿಧಾನದ ಕರಡು ಪ್ರತಿಯನ್ನು ಸಿದ್ಧಪಡಿಸಿರುವ ದೃಷ್ಟಿಯಿಂದ ನೋಡಿದಾಗ ಈ ಕರಡು ಕೆಟ್ಟದಾಗಿ ಕಾಣಬಹುದು. ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ.

ಅದು ನಿಜವೇ ಆಗಿದ್ದಲ್ಲಿ ಕರಡು ರಚನಾ ಸಮಿತಿಯ ಅಧ್ಯಕ್ಷನಾಗಿ ಹಾಗೂ ರಚನಾ ಸಮಿತಿಯು ನನ್ನ ಸಹೋದ್ಯೋಗಿಗಳ ಪರವಾಗಿ ನಾನು ಈ ಸಂವಿಧಾನ ರಚನಾ ಸಮಿತಿಯು ಮತ್ತೊಂದು ರಚನಾ ಸಮಿತಿಯನ್ನು ನೇಮಕ ಮಾಡಿದರೆ ನಾವ್ಯಾರು ಆ ಕುರಿತು ವಿರೋಧಿಸುವುದಿಲ್ಲ ಅಥವಾ ಸಂಸದೀಯ ಕರಡು ರಚನಾಕಾರರೊಬ್ಬರನ್ನು ಕರೆದು ಈ ಕರಡನ್ನು ಅವರಿಗೆ ಕೊಟ್ಟು ಈ ಕರಡಿನಲ್ಲಿರಬಹುದಾದ ದೋಷಗಳ ಬಗ್ಗೆ ಸಲಹೆ ಅಥವಾ ಸೂಚನೆಗಳನ್ನು ಕೊಡುವಂತೆ ಹೇಳಿದರೂ ನಾವ್ಯಾರೂ ವಿರೋಧಿಸುವುದಿಲ್ಲ. ಆಗ ಅದೊಂದು ಪ್ರಾಮಾಣಿಕ ವಿಧಾನವಾಗುತ್ತದೆ, ಮತ್ತು ಅದಕ್ಕೆ ನನ್ನ ವಿರೋಧವಿರುವುದಿಲ್ಲ.

ಇದು ನಮ್ಮ ಚರ್ಚೆಯ ಆಧಾರವಾಗಿಲ್ಲದಿದ್ದರೆ, ಮತ್ತೊಂದು ಆಧಾರವೆಂದರೆ ಈ ಸಂವಿಧಾನವು ಕೆಲ ತಪ್ಪು ತತ್ವಗಳನ್ನು ಅವಲಂಬಿಸಿರುತ್ತದೆ ಎನ್ನುವುದು. ಮಾನ್ಯರೇ, ಈ ವಿಷಯವನ್ನು ಕುರಿತು ನನ್ನ ಮಟ್ಟಿಗೆ ಹೇಳಬೇಕೆಂದರೆ, ಆಧುನಿಕ ಸಂವಿಧಾನವು ಎರಡು ಆಧಾರಗಳಿಂದ ಮಾತ್ರ ಮುಂದುವರೆಯಲು ಸಾಧ್ಯವಾಗುತ್ತದೆ. ಮೊದಲನೇ ಆಧಾರ ಎಂದರೆ ಸಂಸದೀಯ ಸರ್ಕಾರದ ಪದ್ಧತಿಯನ್ನು ಅಳವಡಿಸಿಕೊಳ್ಳುವುದು. ಮತ್ತೊಂದು ಆಧಾರ ಎಂದರೆ ಏಕಾಧಿಕಾರ ಅಥವಾ ಸರ್ವಾಧಿಕಾರ ಪದ್ಧತಿಯನ್ನು ಅಳವಡಿಸಿಕೊಳ್ಳುವುದು. ನಮ್ಮ ಸಂವಿಧಾನವು ಸರ್ವಾಧಿಕಾರದ ಪದ್ಧತಿಯದಾಗಿರಬಾರದು, ಆದರೆ ಸಂಸದೀಯ ಸರ್ಕಾರದ ಪದ್ಧತಿಯನ್ನು ಅಳವಡಿಸಿಕೊಂಡಿದ್ದು ಅಂತಹ ಸಂಸದೀಯ ಸರ್ಕಾರದ ಪದ್ಧತಿಯಲ್ಲಿ ಸರ್ಕಾರವು ಎಲ್ಲಾ ಕಾಲಕ್ಕೂ ಪರಿಶೀಲನೆಗೆ ಅವಕಾಶವಿರಬೇಕು. ಅಂದರೆ ವಿಚಾರಣೆಗೆ ಗುರಿಯಾಗಿ, ಜನತೆಗೆ ಹೊಣೆಯಾಗಿ, ನ್ಯಾಯಾಂಗಕ್ಕೆ ಹೊಣೆಯಾಗಿ ಇರಬೇಕೆಂದು ನಾವು ಭಾವಿಸುವುದಾದರೆ, ನಾವು ಈ ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ತತ್ವಗಳು ಶ್ರೇಷ್ಠತಮವಾಗಿರದಿದ್ದರೂ, ಶ್ರೇಷ್ಠಮಟ್ಟದ್ದಾಗಿರುತ್ತದೆ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ.

ಇಲ್ಲಿಯವರೆಗೂ ಚರ್ಚೆ ನಡೆಸುತ್ತಿರುವಂತಹವರು ಚರ್ಚಿಸುತ್ತಿರುವ ಮುಖ್ಯಾಂಶವೆಂದರೆ ಈ ಸಂವಿಧಾನದ ರಚನಾ ಸಮಿತಿಯು ವಯಸ್ಕ ಮತದಾನ

ಪದ್ಧತಿ ಆಧಾರದ ಮೇಲೆ ಆಯ್ಕೆಯಾದ ಪ್ರಾತಿನಿಧಿಕ ಸಮಿತಿ ಅಲ್ಲವೆಂದು, ಮತ್ತು ಜನಸಂಖ್ಯಾ ಆಧಾರದ ಮೇಲೆ ಬಹುಸಂಖ್ಯಾತ ಜನರು ಈ ಸಂವಿಧಾನದಲ್ಲಿ ಪ್ರತಿನಿಧಿಸಿಲ್ಲವೆಂಬುದು ಸಂವಿಧಾನ ಸಭೆಯ ಮೇಲಿನ ಗುರುತರವಾದ ಆರೋಪವಾಗಿರುತ್ತದೆ. ಪರಿಣಾಮವಾಗಿ ಸಂವಿಧಾನವನ್ನು ರಚಿಸುವ ಈ ಸಂವಿಧಾನ ಸಭೆಯು 304ನೇ ಅನುಚ್ಛೇದದಲ್ಲಿ ಕೊಡಮಾಡಿರುವಂತೆ ಸಂವಿಧಾನವು ಅಂತಿಮವಾಗಿರತಕ್ಕದೆಂದು ಹೇಳುವ ಅಧಿಕಾರವನ್ನು ಹೊಂದಿರುವುದಿಲ್ಲ, ಮಾನ್ಯರೆ, ಈ ಸಂವಿಧಾನ ಸಭೆಯು ಪ್ರಾತಿನಿಧಿಕ ಸಭೆ ಆಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾರಣವೆಂದರೆ ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ಆಯ್ಕೆಗೊಂಡವರಲ್ಲ, ನಾನು ಅವರ ಚರ್ಚೆಯ ಈ ಭಾಗವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಈ ಸಮಿತಿಯ ಸದಸ್ಯರು, ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ಆಯ್ಕೆಗೊಂಡ ಸಮಿತಿ ರಚನೆಯಾಗಿದ್ದಿದ್ದರೆ ಅಂತಹ ಸಮಿತಿಯು ಈ ಸಮಿತಿಗಿಂತ ಹೆಚ್ಚಿನ ರಾಜಕೀಯ ಮುತ್ಸದ್ದಿತನವನ್ನು ಮತ್ತು ರಾಜಕೀಯ ವಿವೇಕವನ್ನು ಪ್ರದರ್ಶಿಸಬಹುದಾಗಿತ್ತು ಎಂಬುವುದನ್ನು ನಾನು ಸಂಪೂರ್ಣವಾಗಿ ಅಲ್ಲಗೆಳೆಯುತ್ತೇನೆ.

ಹಾಗಾಗಿದ್ದರೆ, ಇನ್ನಷ್ಟು ಕೆಟ್ಟದಾಗಬಹುದಿತ್ತು ಎನ್ನುತ್ತಾರೆ ನನ್ನ ಮಿತ್ರ ನಜೀರುದ್ದೀನ್ ಅಹಮದ್. ನಾನು ಅವರ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ಅಧಿಕಾರ ಮತ್ತು ಜ್ಞಾನ ಒಟ್ಟಿಗೆ ಹೋಗುವುದಿಲ್ಲ, ಅನೇಕ ಸಾರಿ ಅವು ಬೇರೆ ಬೇರೆಯಾಗಿ ಪ್ರತ್ಯೇಕಗೊಳ್ಳುತ್ತವೆ. ಈ ಸದನವು, ಇಲ್ಲಿಯವರೆಗೂ ಆಗಿ ಹೋದ ಸದನಗಳಂತೆ, ಮುಂದೆ ಬರಲಿರುವ ಸಂಸತ್ತಿಗಿಂತ ಹೆಚ್ಚಿನ ಅಧಿಕಾರವನ್ನು ಜ್ಞಾನವನ್ನು ಹಾಗೂ ಮಾಹಿತಿಯನ್ನು ಹೊಂದಿದ ಸದನವಾಗಿರುತ್ತದೆ ಎಂದು ಮುಕ್ತ ಮನಸ್ಸಿನಿಂದ ಹೇಳಬಯಸುತ್ತೇನೆ. ಆದ್ದರಿಂದ ಮಾನ್ಯರೆ, ಕರಡು ರಚನಾ ಸಮಿತಿ ತರಬೇಕೆಂದು ಉದ್ದೇಶಿಸಿರುವ ಪ್ರಸ್ತಾವಿತ ಅನುಚ್ಛೇದವು ಪ್ರಸಕ್ತ ಸನ್ನಿವೇಶದಲ್ಲಿ ಅತ್ಯಂತ ಶ್ರೇಷ್ಠವಾದದ್ದೆಂದು ನಾನು ನಿವೇದಿಸಬಯಸುತ್ತೇನೆ.

# ಸಂವಿಧಾನ ಸಭೆಯಲ್ಲಿ ಸಮಾರೋಪ ಭಾಷಣ

ಮಾನ್ಯರೇ, ಸಂವಿಧಾನ ಸಭೆಯ ಕಾರ್ಯವನ್ನು ಒಮ್ಮೆ ಅವಲೋಕಿಸಿ ನೋಡಿದರೆ ಅದು ಪ್ರಥಮ ಬಾರಿಗೆ 1946ರ ಡಿಸೆಂಬರ್ 9 ರಂದು ಸಮಾವೇಶಗೊಂಡ ದಿನದಿಂದ ಇಂದಿನವರೆಗೆ ಎರಡು ವರ್ಷ ಹನ್ನೊಂದು ತಿಂಗಳು, 17 ದಿನಗಳನ್ನು ತೆಗೆದುಕೊಂಡಿದೆ. ಈ ಕಾಲಾವಧಿಯಲ್ಲಿ ಸಂವಿಧಾನ ರಚನಾ ಸಭೆಯು ಒಟ್ಟು 11 ಸಭೆಗಳನ್ನು ನಡೆಸಿದೆ. ಈ ಹನ್ನೊಂದು ಸಭೆಗಳ ಪೈಕಿ ಮೊದಲ 6 ಸಭೆಗಳು ಉದ್ದೇಶಗಳ ನಿರ್ಣಯಗಳನ್ನು ಅಂಗೀಕರಿಸಲು ಹಾಗೂ ಮೂಲಭೂತ ಹಕ್ಕುಗಳು, ಒಕ್ಕೂಟ, ಸಂವಿಧಾನ, ಒಕ್ಕೂಟದ ಅಧಿಕಾರಗಳು, ಪ್ರಾಂತೀಯ ಸಂವಿಧಾನ, ಅಲ್ಪ ಸಂಖ್ಯಾತರು ಹಾಗೂ ಅನುಸೂಚಿತ ಪ್ರದೇಶಗಳು ಮತ್ತು ಅನುಸೂಚಿತ ಬುಡಕಟ್ಟುಗಳು - ಇವುಗಳಿಗೆ ಸಂಬಂಧಿಸಿದಂತೆ ವಿವಿಧ ಸಮಿತಿಗಳು ಸಲ್ಲಿಸಿದ್ದ ವರದಿಗಳನ್ನು ಪರಿಶೀಲಿಸಬೇಕಾಯಿತು. ಏಳು, ಎಂಟು, ಒಂಬತ್ತು, ಹತ್ತು ಮತ್ತು ಹನ್ನೊಂದನೆಯ ಸಭೆಗಳನ್ನು ಸಂಪೂರ್ಣವಾಗಿ ಕರಡು ಸಂವಿಧಾನವನ್ನು ಪರಿಶೀಲಿಸುವ ಸಲುವಾಗಿ ಮೀಸಲಾಗಿಡಬೇಕಾಯಿತು. ಸಂವಿಧಾನದ ಸಭೆಯ ಈ ಹನ್ನೊಂದು ಸಭೆಗಳು ಒಟ್ಟು 165 ದಿನಗಳನ್ನು ತೆಗೆದುಕೊಂಡಿತು. ಇವುಗಳಲ್ಲಿ ಕರಡು ಸಂವಿಧಾನವನ್ನು ಪರಿಶೀಲಿಸಲು 114 ದಿನಗಳನ್ನು ತೆಗೆದುಕೊಳ್ಳಬೇಕಾಯಿತು.

ಸಂವಿಧಾನ ಸಭೆಯು, ಕರಡು ರಚನಾ ಸಮಿತಿಯನ್ನು 29ನೇ ಆಗಸ್ಟ್ 1967ರಂದು ಚುನಾಯಿಸಿತು. ಈ ಸಮಿತಿ ತನ್ನ ಪ್ರಥಮ ಸಭೆಯನ್ನು ಆಗಸ್ಟ್ 30ರಂದು ನಡೆಸಿತು. ಆಗಸ್ಟ್ 30ರ ನಂತರ ಸಮಿತಿಯು ಕರಡು ಸಂವಿಧಾನವನ್ನು ಸಿದ್ಧಪಡಿಸಲು 141 ದಿನಗಳನ್ನು ತೆಗೆದುಕೊಂಡಿತು. ಕರಡು ರಚನಾ ಸಮಿತಿಗೆ ಸಂವಿಧಾನದ ಸಲಹೆಗಾರರು ಸಿದ್ಧಪಡಿಸಿಕೊಟ್ಟ ಕರಡು ಸಂವಿಧಾನದಲ್ಲಿ 243 ಅನುಚ್ಛೇದಗಳು ಮತ್ತು 13 ಅನುಸೂಚಿಗಳು ಇದ್ದವು. ಕರಡು ರಚನಾ ಸಮಿತಿ ಸಿದ್ಧಪಡಿಸಿ ಸಂವಿಧಾನ ಸಭೆಗೆ ಸಲ್ಲಿಸಿದ ಪ್ರಥಮ ಕರಡು ಸಂವಿಧಾನದಲ್ಲಿ 315 ಅನುಚ್ಛೇದಗಳು ಮತ್ತು 8 ಅನುಸೂಚಿಗಳು ಇದ್ದವು. ಅಂತಿಮವಾಗಿ ಪರಿಶೀಲಿಸಿದ ಮೇಲೆ ಕರಡು ಸಂವಿಧಾನದಲ್ಲಿನ 386 ಅನುಚ್ಛೇದಗಳಿಗೆ ಏರಿತು. ಅದು ಅಂತಿಮ ರೂಪಗೊಳ್ಳುವ ವೇಳೆಗೆ ಕರಡು ಸಂವಿಧಾನದಲ್ಲಿ 395 ಅನುಚ್ಛೇದಗಳು ಮತ್ತು 8 ಅನುಸೂಚಿಗಳು ಇದ್ದವು. ಕರಡು ಸಂವಿಧಾನಕ್ಕೆ ತಿದ್ದುಪಡಿಗೆಂದು ಸುಮಾರು 7635 ತಿದ್ದುಪಡಿಗಳನ್ನು ಪಟ್ಟಿ ಮಾಡಲಾಯಿತು.

9627-13

ಇವುಗಳಲ್ಲಿ 2473 ತಿದ್ದುಪಡಿಗಳನ್ನು ವಾಸ್ತವವಾಗಿ ಸದನದ ಮುಂದೆ ಚರ್ಚೆಗೆ ತರಲಾಯಿತು.

ನಾನು ಇವುಗಳನ್ನು ಏಕೆ ಉಲ್ಲೇಖಿಸುತ್ತಿದ್ದೇನೆ ಎಂದರೆ, ಒಂದು ಘಟ್ಟದಲ್ಲಿ ಸಂವಿಧಾನ ಸಭೆ ಸುದೀರ್ಘ ಸಮಯವನ್ನು ತೆಗೆದುಕೊಳ್ಳುತ್ತಿದೆ ಎಂದು, ಅದು ಸಮಯವನ್ನು ಮತ್ತು ಸಾರ್ವಜನಿಕರ ಹಣವನ್ನು ವ್ಯಯ ಮಾಡುತ್ತಿದೆ ಎಂದು ಆಪಾದಿಸಲಾಯಿತು ಮತ್ತು ಮುಂದುವರೆದು, ರೋಮ್ ಹತ್ತಿ ಉರಿಯುವಾಗ ನೀರೋ ಪಿಟೀಲು ಭಾರಿಸುತ್ತಿದ್ದಂತಾಗಿದೆ ಎಂದು ಆರೋಪಿಸಿದರು. ಈ ಆಪಾದನೆಗೆ ಏನಾದರೂ ಆಧಾರವಿದೆಯೇ? ಈಗ ನಾವು ವಿದೇಶಗಳಲ್ಲಿ ಸಂವಿಧಾನ ಸಭೆಗಳು ಅಲ್ಲಿನ ಸಂವಿಧಾನಗಳನ್ನು ರಚಿಸಲು ಅವು ತೆಗೆದುಕೊಂಡ ಸಮಯವೆಷ್ಟು ಎಂಬುವುದನ್ನು ನೋಡೋಣ. ಉದಾಹರಣೆಗೆ, ಅಮೇರಿಕಾ ಸಂವಿಧಾನ ಸಭೆಯು 25ನೇ ಮೇ 1787 ರಂದು ಪ್ರಥಮ ಬಾರಿಗೆ ಸಮಾವೇಶಗೊಂಡು, ಅದು ತನ್ನ ಕರ್ತವ್ಯವನ್ನು 17ನೇ ಸೆಪ್ಟೆಂಬರ್ 1787ರಂದು ಪೂರ್ಣಗೊಳಿಸಿತು. ಅಂದರೆ ನಾಲ್ಕು ತಿಂಗಳನ್ನು ತೆಗೆದುಕೊಂಡಿತು. ಕೆನಡಾ ಸಂವಿಧಾನ ಸಭೆಯು 10ನೇ ಅಕ್ಟೋಬರ್ 1864ರಂದು ಸಮಾವೇಶಗೊಂಡು, ಮಾರ್ಚ್ 1867ರಲ್ಲಿ ಸಂವಿಧಾನವನ್ನು ಕಾಯ್ದೆಯಾಗಿ ಅಂಗೀಕರಿಸುವ ವೇಳೆಗೆ ಸುಮಾರು 2 ವರ್ಷ 5 ತಿಂಗಳ ಕಾಲವನ್ನು ತೆಗೆದುಕೊಂಡಿತು. ಆಸ್ಟ್ರೇಲಿಯಾ ಸಂವಿಧಾನ ಸಭೆಯು ಮಾರ್ಚ್ 1891ರಂದು ಸಮಾವೇಶಗೊಂಡು ಸಂವಿಧಾನವನ್ನು ಕಾಯ್ದೆಯಾಗಿ 9 ಜುಲೈ 1900 ರಂದು ಅಂಗೀಕರಿಸುವ ವೇಳೆಗೆ ಅದು ಸುಮಾರು 9ವರ್ಷಗಳನ್ನೇ ತೆಗೆದುಕೊಂಡಿತು. ದಕ್ಷಿಣ ಆಫ್ರಿಕಾ ಸಂವಿಧಾನ ಸಭೆ ಅಕ್ಟೋಬರ್ 1908ರಲ್ಲಿ ಸಮಾವೇಶಗೊಂಡು, ಅದು ಸಂವಿಧಾನವನ್ನು ಕಾಯ್ದೆಯಾಗಿ 20ನೇ ಸೆಪ್ಟೆಂಬರ್ 1909 ರಂದು ಅಂಗೀಕರಿಸುವ ವೇಳೆಗೆ 1 ವರ್ಷ ಕಾಲದ ಶ್ರಮವನ್ನು ತೆಗೆದುಕೊಂಡಿತು. ಅಮೇರಿಕಾ ಅಥವಾ ದಕ್ಷಿಣ ಆಫ್ರಿಕಾ ಸಂವಿಧಾನ ಸಭೆ ತೆಗೆದುಕೊಂಡ ಕಾಲಾವಧಿಗಳಿಗಿಂತ ನಾವು ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುವುದು ನಿಜ. ಆದರೆ ಕೆನಡಾ ಸಂವಿಧಾನ ಸಭೆ ತೆಗೆದುಕೊಂಡ ಕಾಲಕ್ಕಿಂತ ಅಥವಾ ಆಸ್ಟ್ರೇಲಿಯಾ ಸಂವಿಧಾನ ಸಭೆ ತೆಗೆದುಕೊಂಡ ಕಾಲಕ್ಕಿಂತ ನಾವು ಹೆಚ್ಚು ಸಮಯವನ್ನು ತೆಗೆದುಕೊಂಡಿಲ್ಲ. ಹೀಗೆ ಸಮಯವನ್ನು ತೆಗೆದುಕೊಂಡ ಆಧಾರದ ಮೇಲೆ ತುಲನಾತ್ಮಕವಾಗಿ ನೋಡುವಾಗ ನಾವು ಎರಡು ಸಂಗತಿಗಳನ್ನು ನೆನಪಿನಲ್ಲಿಡಬೇಕು. ಅಂತಹ ನೆನಪಿನಲ್ಲಿಡಬೇಕಾದ ಎರಡು ಸಂಗತಿಗಳಲ್ಲಿ ಒಂದು ಎಂದರೆ, ಅಮೇರಿಕಾ, ಕೆನಡಾ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಸಂವಿಧಾನಗಳು ನಮ್ಮ

ಸಂವಿಧಾನಗಳಿಗಿಂತ ಚಿಕ್ಕ ಸಂವಿಧಾನಗಳಾಗಿರುತ್ತವೆ ಎಂಬುವುದು, ನಮ್ಮ ಸಂವಿಧಾನವು, ನಾನು ಈಗಾಗಲೇ ಹೇಳಿದಂತೆ, 395 ವಿಧಿಗಳನ್ನು ಒಳಗೊಂಡಿದ್ದರೆ, ಅಮೇರಿಕಾ ಸಂವಿಧಾನವು ಕೇವಲ 7 ಅನುಚ್ಛೇದಗಳನ್ನು ಒಳಗೊಂಡಿರುತ್ತದೆ. ಈ 7 ಅನುಚ್ಛೇದಗಳಲ್ಲಿ ಮೊದಲ 4 ಅನುಚ್ಛೇದಗಳು 21 ಪ್ರಕರಣಗಳನ್ನಾಗಿ ವಿಭಾಗಿಸಲಾಗಿದೆ. ಕೆನಡಾ ಸಂವಿಧಾನದಲ್ಲಿ 147, ಆಸ್ಟ್ರೇಲಿಯಾ ಸಂವಿಧಾನದಲ್ಲಿ 128 ಮತ್ತು ದಕ್ಷಿಣ ಆಫ್ರಿಕಾ ಸಂವಿಧಾನದಲ್ಲಿ 153 ಪ್ರಕರಣಗಳು ಇವೆ. ಎರಡನೆಯದಾಗಿ ನೆನಪಿನಲ್ಲಿಡಬೇಕಾದ ಸಂಗತಿ ಎಂದರೆ, ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಸಂವಿಧಾನಗಳ ರಚನಾಕಾರರು ತಿದ್ದುಪಡಿಗಳ ಸಮಸ್ಯೆಯನ್ನು ಎದುರಿಸಬೇಕಾಗಿರಲಿಲ್ಲ, ಅವುಗಳನ್ನು ಮಂಡಿಸುತ್ತಿದ್ದಂತೆಯೇ ಅವು ಅಂಗೀಕಾರವಾಗುತ್ತಿದ್ದವು. ಆದರೆ ನಮ್ಮ ಸಂವಿಧಾನ ಸಭೆಯು 2473 ತಿದ್ದುಪಡಿಗಳನ್ನು ಪರಿಶೀಲಿಸಬೇಕಾಯಿತು. ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ನೋಡಿದಾಗ, ಸಮಯ ವ್ಯಯ ಮಾಡಲಾಗಿದೆ ಎಂಬ ಆರೋಪವು ಆಧಾರ ರಹಿತವಾದುದೆಂದು ಭಾವಿಸುತ್ತೇನೆ ಮತ್ತು ಈ ಸಂವಿಧಾನ ಸಭೆಯು ತನಗೆ ವಹಿಸಿಕೊಟ್ಟ ಬಹು ಜವಾಬ್ದಾರಿಯುತ ಕೆಲಸವನ್ನು ಅತ್ಯಂತ ಕಡಿಮೆ ಸಮಯದಲ್ಲಿ, ಯಶಸ್ವಿಯಾಗಿ ನಿರ್ವಹಿಸಿಕೊಟ್ಟಿದ್ದಾವಕ್ಕಾಗಿ, ತನ್ನನ್ನು ತಾನೇ ಅಭಿನಂದಿಸಿಕೊಳ್ಳಬಹುದಾಗಿದೆ.

ಕರಡು ರಚನಾ ಸಮಿತಿ ನಿರ್ವಹಿಸಿದ ಕರ್ತವ್ಯದ ಗುಣಾವಗುಣಗಳ ಕಡೆಗೆ ನಾವು ನೋಡಿದರೆ, ಮಾನ್ಯ ನಜೀರುದ್ದೀನ್ ಅಹಮದ್ ಎಂಬುವವರು ಕರಡು ಸಂವಿಧಾನವನ್ನು ಕಟುವಾಗಿ ಟೀಕಿಸಬೇಕಾದದ್ದು ತಮ್ಮ ಕರ್ತವ್ಯ ಎಂದಿರುತ್ತಾರೆ. ಅವರ ಅಭಿಪ್ರಾಯದಲ್ಲಿ ಕರಡು ರಚನಾ ಸಮಿತಿಯು ಮಾಡಿದ ಕೆಲಸವು ಟೀಕೆಗಷ್ಟೇ ಅರ್ಹವಾಗಿರದೆ ಅದು ಹೋಲಿಕೆಗೂ ಅರ್ಹವಾಗಿಲ್ಲ ಎಂದಿರುತ್ತಾರೆ. ಕರಡು ರಚನಾ ಸಮಿತಿ ಮಾಡಿದ ಕೆಲಸದ ಬಗ್ಗೆ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಅಭಿಪ್ರಾಯವನ್ನು ಹೇಳುವ ಹಕ್ಕಿದೆ. ಹಾಗೆಯೇ ನಜೀರುದ್ದೀನ್ ಅಹಮದ್‌ರವರೂ ಸಹ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ನಜೀರುದ್ದೀನ್ ಅಹಮದ್‌ರವರು ಕರಡು ರಚನಾ ಸಮಿತಿಯ ಯಾವುದೇ ಸದಸ್ಯನಿಗಿಲ್ಲದಷ್ಟು ಅರ್ಹತೆಗಳು ತಮಗೆ ಇವೆ ಎಂದು ಭಾವಿಸುವ ವ್ಯಕ್ತಿ. ಕರಡು ರಚನಾ ಸಮಿತಿ ಅವರ ಈ ಸವಾಲನ್ನು ತೆಗೆದುಕೊಂಡು ಚರ್ಚಿಸಲು ಬಯಸುವುದಿಲ್ಲ, ಆದರೆ ಕರಡು ರಚನಾ ಸಮಿತಿಯು ಅವರನ್ನು ಸಮಿತಿಯಲ್ಲಿ ನೇಮಕ ಮಾಡಿಕೊಳ್ಳಬೇಕೆಂದು ಬಯಸಿದ್ದರೆ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುತ್ತಿತ್ತು. ಕರಡು ರಚನಾ ಸಮಿತಿಯಲ್ಲಿ ಅವರಿಗೆ ಸಂವಿಧಾನ ರಚನೆಯಲ್ಲಿ

ಅವಕಾಶ ದೊರೆಯದೆ ಹೋಗಿದ್ದರೆ ಅದಕ್ಕೆ ಖಂಡಿತವಾಗಿಯೂ ಕರಡು ರಚನಾ ಸಮಿತಿಯ ತಪ್ಪಲ್ಲ.

ನಜೀರುದ್ದೀನ್ ಅಹಮದ್‌ರವರು ಕರಡು ರಚನಾ ಸಮಿತಿಗೆ ಪುನರ್ ನಾಮಕರಣ ಮಾಡುವ ಮೂಲಕ ಸಮಿತಿಯ ಮೇಲಿರುವ ಅಗೌರವವನ್ನು ತೋರಿಸಿದ್ದಾರೆ. ಅವರು ಅದು ತೇಲುತ್ತಿರುವ ಸಮಿತಿ ಎಂದಿದ್ದಾರೆ. ನಜೀರುದ್ದೀನ್‌ರವರು ತಮ್ಮ ಹೇಳಿಕೆಯ ಬಗ್ಗೆ ತಾವೇ ಸಂತೋಷ ಪಟ್ಟಿರಲೂಬಹುದು. ಆದರೆ ಅವರಿಗೆ ನಿಯಂತ್ರಣವಿದ್ದು ತೇಲುತ್ತಿರುವುದಕ್ಕೂ, ಮತ್ತು ನಿಯಂತ್ರಣವಿಲ್ಲದೆ ತೇಲುತ್ತಿರುವುದಕ್ಕೂ, ಇರುವ ವ್ಯತ್ಯಾಸ ತಿಳಿಯದಾಗಿದೆ ಎಂದು ಕಾಣುತ್ತದೆ. ಕರಡು ರಚನಾ ಸಮಿತಿ ತೇಲುತ್ತಿದ್ದಲ್ಲಿ ನಿಯಂತ್ರಣವಿದ್ದು ತೇಲುತ್ತಿತ್ತು. ಇದ್ದು ಸಿಕ್ಕರೆ ಸಿಗಲಿ ಎಂದು ಮೀನಿಗೆ ಗಾಳ ಹಾಕುವ ಪ್ರಯತ್ನವಾಗಿರಲಿಲ್ಲ. ಗೊತ್ತಿದ್ದ ನೀರಿನಲ್ಲಿ ಹಿಡಿಯಬೇಕಾದ ಮೀನನ್ನು ಹಿಡಿಯುವ ಪ್ರಯತ್ನವಾಗಿತ್ತು. ಶ್ರೇಷ್ಠವಾದುದರ ಹುಡುಕಾಟ ಎಂದರೆ ಬರಿದೆ ತೇಲುವುದಕ್ಕಿಂತ ಉತ್ತಮವಾದದ್ದು. ಮಾನ್ಯ ನಜೀರುದ್ದೀನ್‌ರವರು ಕರಡು ರಚನಾ ಸಮಿತಿಗೆ ಅಭಿನಂದನೆಗಳನ್ನು ಹೇಳುವ ಉದ್ದೇಶ ಇದಾಗಿರದಿದ್ದರೂ ಅವರು ಹೇಳಿದುದನ್ನೇ ಕರಡು ರಚನಾ ಸಮಿತಿಗೆ ಹೇಳಿದ ಅಭಿನಂದನೆಗಳೆಂದೇ ಭಾವಿಸುತ್ತೇನೆ. ಕರಡು ರಚನಾ ಸಮಿತಿಯು ತನ್ನ ಕರ್ತವ್ಯದಲ್ಲಿ ಪ್ರಾಮಾಣಿಕತೆ ಮತ್ತು ಧೈರ್ಯವನ್ನು ತೋರಿಸದೆ ಹೋಗಿದ್ದರೆ, ತಾನೇ ತಂದ ತಿದ್ದುಪಡಿಗಳನ್ನು, ಅವು ಹಲವು ತಪ್ಪುಗಳಿಂದ ಕೂಡಿದೆ ಎಂದು ತಿಳಿದಾಗ, ಹಿಂತೆಗೆದುಕೊಂಡು ಅದಕ್ಕೆ ಬದಲಾಗಿ ಉತ್ತಮವಾದುದನ್ನು ಸೇರಿಸದೆ ಇರುತ್ತಿರಲಿಲ್ಲ. ಕರಡು ರಚನಾ ಸಮಿತಿಯು ತನಗೆ ತೋರಿಸಿಕೊಟ್ಟ ತಪ್ಪುಗಳನ್ನು ಒಪ್ಪಿಕೊಳ್ಳಲು ಮತ್ತು ಅವುಗಳನ್ನು ಸರಿಪಡಿಸಿಕೊಳ್ಳಲು ಮುಂದೆ ಬಂದಿತು ಎಂದು ಹೇಳಲು ನನಗೆ ನಾಚಿಕೆಯಾಗುವುದಕ್ಕಿಂತ ಹೆಚ್ಚಿನ ಸಂತೋಷವಾಗುತ್ತದೆ.

ಆಪಾದನೆ ಮಾಡಿದ ಸದಸ್ಯರೊಬ್ಬರನ್ನು ಹೊರತು ಪಡಿಸಿ ಹೇಳುವುದಾದರೆ, ಕರಡು ರಚನಾ ಸಮಿತಿ ಮಾಡಿದ ಕಾರ್ಯವನ್ನು ಸಂವಿಧಾನ ಸಭೆಯ ಪ್ರತಿಯೊಬ್ಬ ಸದಸ್ಯರೂ ಅಭಿನಂದಿಸಿದ್ದಾರೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಕರಡು ರಚನಾ ಸಮಿತಿಯ ಪರಿಶ್ರಮವನ್ನು ಕೆಲಸವನ್ನು ಎಲ್ಲರೂ ಪ್ರಶಂಸಿಸುತ್ತಿರುವುದರಿಂದ ಸಮಿತಿಗೆ ಇದರಿಂದ ಸಂತೋಷವಾಗಿದೆ ಎಂಬ ನಂಬಿಕೆ ನನಗಿದೆ. ಕರಡು ರಚನಾ ಸಮಿತಿಯ ಸದಸ್ಯರು ಹಾಗೂ ಸಂವಿಧಾನ ಸಭೆಯ ನನ್ನ ಸಹೋದ್ಯೋಗಿಗಳು ನನ್ನ ಮೇಲೆ ಮಾಡಿರುವ ಅಭಿನಂದನೆಗಳ ಸುರಿಮಳೆಗೆ ನಾನು ಮೂಕನಾಗಿದ್ದೇನೆ. ಅವರುಗಳಿಗೆ ಯಾವ ರೀತಿಯಲ್ಲಿ ಕೃತಜ್ಞತೆಗಳನ್ನು

ತಿಳಿಸಬೇಕೆಂದು ನನಗೆ ಹೊಳೆಯುತ್ತಿಲ್ಲ. ಕರಡು ರಚನಾ ಸಮಿತಿಗೆ ಪರಿಶಿಷ್ಟ ವರ್ಗಗಳ ಹಿತಾಸಕ್ತಿಗಳನ್ನು ರಕ್ಷಿಸಬೇಕೆಂಬ ಏಕೈಕ ಉದ್ದೇಶವಲ್ಲದೆ, ನಾನು ಯಾವುದೇ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು ಇಲ್ಲಿಗೆ ಬರಲಿಲ್ಲ. ಹಾಗೆಯೇ ಇಂತಹ ಗುರುತರವಾದ ಜವಾಬ್ದಾರಿಯನ್ನು ನನಗೆ ವಹಿಸಲು ಆಹ್ವಾನಿಸುತ್ತಾರೆಂದೂ ನನಗೆ ತಿಳಿದಿರಲಿಲ್ಲ. ಕರಡು ರಚನಾ ಸಮಿತಿಯು, ನನ್ನನ್ನು ಕರಡು ರಚನಾ ಸಮಿತಿಗೆ ಆಯ್ಕೆ ಮಾಡಿದಾಗ ನನಗೇ ಬಹುದೊಡ್ಡ ಆಶ್ಚರ್ಯವಾಗಿತ್ತು. ಆದರೆ ಅದಕ್ಕಿಂತ ಹೆಚ್ಚಾಗಿ, ನನ್ನನ್ನು ಕರಡು ರಚನಾ ಸಮಿತಿಯ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದಾಗಲಂತೂ ಬಹುದೊಡ್ಡ ಆಶ್ಚರ್ಯವೇ ಆಯಿತು. ಕರಡು ರಚನಾ ಸಮಿತಿಯಲ್ಲಿ ನನಗಿಂತ ಹೆಚ್ಚು ದೊಡ್ಡವರು, ಹೆಚ್ಚು ಶ್ರೇಷ್ಠರು ಮತ್ತು ಸಮರ್ಥರು ಆದಂತಹ ನನ್ನ ಮಾನ್ಯ ಮಿತ್ರರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರು ಅಂತಹವರು ಇದ್ದಾರೆ. ಸಂವಿಧಾನ ಸಭೆ ಮತ್ತು ಕರಡು ರಚನಾ ಸಮಿತಿ ನನ್ನಲ್ಲಿ ಇಷ್ಟೊಂದು ನಂಬಿಕೆ ಮತ್ತು ವಿಶ್ವಾಸವನ್ನು ಇಟ್ಟು ಇಂತಹ ಅವಕಾಶವನ್ನು ಕಲ್ಪಿಸಿಕೊಡುವ ಮೂಲಕ ರಾಷ್ಟ್ರ ಸೇವೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ನನಗೆ ಕೊಟ್ಟ ಈ ಗೌರವವು ನನ್ನೊಬ್ಬನಿಗೆ ಸೀಮಿತವಾದುದಲ್ಲ. ಈ ಗೌರವವು ಕರಡು ರಚನಾ ಸಮಿತಿಗೆ ಸಂವಿಧಾನದ ಸಲಹೆಗಾರರಾಗಿದ್ದ ಕರಡು ರಚನಾ ಸಮಿತಿಯ ಪರಿಶೀಲನೆಗೆಂದು ಕಚ್ಚಾ ಕರಡು ಸಂವಿಧಾನವನ್ನು ಸಿದ್ಧಪಡಿಸಿಕೊಟ್ಟ ಬಿ.ಎನ್. ರಾವ್‌ರವರಿಗೆ ಸಲ್ಲಬೇಕು. ಈ ಗೌರವದ ಒಂದು ಭಾಗವು ಕರಡು ರಚನಾ ಸಮಿತಿಯ ಸದಸ್ಯರು 141 ದಿನಗಳ ಕಾಲ ಕುಳಿತು ತಮ್ಮ ಪಾಂಡಿತ್ಯ ಮತ್ತು ಪ್ರತಿಭೆಗಳಿಂದ ಅನೇಕ ವಿಷಯಗಳನ್ನು ತಾಳ್ಮೆಯಿಂದ ಪರಿಶೀಲಿಸಿ ವಿವಿಧ ವಿಷಯಗಳನ್ನು ಒಳಗೊಂಡಂತೆ ಮಾಡಿ ಸಂವಿಧಾನವನ್ನು ಸಿದ್ಧಪಡಿಸಿಕೊಟ್ಟ ಸದಸ್ಯರುಗಳಿಗೆ ಸಲ್ಲಬೇಕು. ಅವರುಗಳ ಪ್ರಯತ್ನ ಪಾಂಡಿತ್ಯ, ವಿವಿಧ ವಿಷಯಗಳ ಮೇಲೆ ನಡೆಸಿಕೊಟ್ಟ ಚರ್ಚೆಗಳ ಸಹಾಯ ಇರದೆ ಹೋಗಿದ್ದರೆ, ಈ ಸಂವಿಧಾನದ ರಚನೆ ಯಶಸ್ವಿಯಾಗಿ ಪೂರ್ಣ ಗೊಳ್ಳುತ್ತಿರಲಿಲ್ಲ. ಹಾಗೆಯೇ ಈ ಗೌರವದ ಬಹುಭಾಗವು ಸಂವಿಧಾನದ ಮುಖ್ಯ ರಚನಾಕಾರರಾದ ಎಸ್.ಎಂ. ಮುಖರ್ಜಿಯವರಿಗೂ ಸಲ್ಲಬೇಕು. ಅವರು ಅತ್ಯಂತ ಸೂಕ್ಷ್ಮ ವಿಷಯಗಳನ್ನು ಸರಳವಾಗಿ ಹಾಗೂ ಸ್ಪಷ್ಟವಾಗಿ ಹಾಗೂ ಕಾನೂನು ವಿಷಯಗಳ ಸ್ವರೂಪವನ್ನು ತಿಳಿಸುತ್ತಿದ್ದ ಅವರ ಸಾಮರ್ಥ್ಯವನ್ನು ಯಾವ ಪ್ರತಿಭೆಯೊಂದಿಗೂ ಹೋಲಿಸಲಾಗದು. ಅಥವಾ ಅವರ ಪರಿಶ್ರಮವನ್ನು ಸಹಾ ಯಾವ ಪರಿಶ್ರಮದೊಂದಿಗೂ ಹೋಲಿಸಲಾಗದು. ಅವರು ಒಂದು ರೀತಿಯಲ್ಲಿ

ಸಂವಿಧಾನದ ಸಭೆಯ ಭಾಗವೇ ಆಗಿಬಿಟ್ಟಿದ್ದರು. ಅವರ ಸಹಾಯ ಇಲ್ಲದೆ ಹೋಗಿದ್ದರೆ ಈ ಸಭೆಯು ಸಂವಿಧಾನವನ್ನು ಪೂರ್ಣಗೊಳಿಸಲು ಇನ್ನೂ ಎಷ್ಟೋ ವರ್ಷಗಳನ್ನು ತೆಗೆದುಕೊಳ್ಳಬೇಕಾಗುತ್ತಿತ್ತು. ಹಾಗೆಯೇ ಮಾನ್ಯ ಮುಖರ್ಜಿಯವರ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಅವರ ಸಿಬ್ಬಂದಿ ವರ್ಗದವರನ್ನೂ ಸಹಾ ನಾನು ಮರೆಯುವಂತಿಲ್ಲ. ಅವರುಗಳು ಎಷ್ಟೊಂದು ಕಷ್ಟ ಪಟ್ಟು ದುಡಿಯುತ್ತಿದ್ದರೆಂಬುದನ್ನು, ಮತ್ತು ಮಧ್ಯರಾತ್ರಿಯ ನಂತರವೂ ತಮ್ಮ ಕೆಲಸದಲ್ಲಿ ತೊಡಗಿದ್ದರೆಂಬುದನ್ನೂ ನಾನು ಬಲ್ಲೆ. ಅವರು ಸಲ್ಲಿಸಿದ ಸೇವೆಗಾಗಿ ಮತ್ತು ನೀಡಿದ ಸಹಕಾರಕ್ಕಾಗಿ ಆ ಎಲ್ಲರಿಗೂ ಕೃತಜ್ಞತೆಗಳನ್ನು ಹೇಳ ಬಯಸುತ್ತೇನೆ.

ಸಂವಿಧಾನ ಸಭೆಯು ವಿಲಕ್ಷಣ - ಕ್ಷಿಪ್ತ ಗುಂಪುಗಳ ಸಂಗಮವಾಗಿದ್ದರೆ ಮತ್ತು ಪ್ರತಿಯೊಂದು ಗುಂಪು ತನ್ನ ಮನಸ್ಸಿಗೆ ಬಂದಂತೆ ವರ್ತಿಸುತ್ತಿದ್ದಿದ್ದರೆ ಕರಡು ರಚನಾ ಸಮಿತಿಗೆ ಸಂವಿಧಾನವನ್ನು ಸಿದ್ಧಪಡಿಸಲು ಬಹಳ ಕಷ್ಟವಾಗುತ್ತಿತ್ತು. ಹಾಗೆ ಆಗಿದ್ದಲ್ಲಿ ಅದು ಗೊಂದಲವನ್ನು ಬಿಟ್ಟು ಬೇರೇನೂ ಆಗುತ್ತಿರಲಿಲ್ಲ. ಈ ಗೊಂದಲದ ನಿವಾರಣೆಗೆ ಮುಖ್ಯ ಕಾರಣವೆಂದರೆ ಕರಡು ರಚನಾ ಸಮಿತಿಯ ವ್ಯವಹರಣೆಗಳಿಗೆ ಕಾಂಗ್ರೆಸ್ ಪಕ್ಷ ತಂದ ಶಿಸ್ತು ಮತ್ತು ವ್ಯವಸ್ಥೆಯೇ ಮುಖ್ಯ ಕಾರಣವೆನ್ನಬಹುದು. ಕಾಂಗ್ರೆಸ್ ಪಕ್ಷದ ಈ ಶಿಸ್ತಿನಿಂದಾಗಿ ಕರಡು ರಚನಾ ಸಮಿತಿಯು ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರತಿಯೊಂದು ಅನುಚ್ಛೇದವನ್ನು ಮತ್ತು ಪ್ರತಿಯೊಂದು ತಿದ್ದುಪಡಿಯನ್ನು ಚರ್ಚಿಸಲೂ ಸಾಧ್ಯವಾಯಿತು. ಸಂವಿಧಾನ ರಚನಾ ಸಮಿತಿ ತನಗೆ ವಹಿಸಿಕೊಟ್ಟ ಕರ್ತವ್ಯವನ್ನು ಸುಸೂತ್ರವಾಗಿ ನಿರ್ವಹಿಸಲು ಕಾರಣವಾದ ಕಾಂಗ್ರೆಸ್ ಪಕ್ಷವು ಅಭಿನಂದನೆಗೆ ಅರ್ಹವಾಗಿದೆ.

ಸಂವಿಧಾನ ಸಭೆಯ ಎಲ್ಲಾ ಸದಸ್ಯರು ಪಕ್ಷದ ಶಿಸ್ತಿಗೆ ಒಳಪಟ್ಟು ವ್ಯವಹರಣೆಯನ್ನು ನಡೆಸದೆ ಇದ್ದಿದ್ದರೆ ಆ ವ್ಯವಹರಣೆಗಳು ಅತ್ಯಂತ ನೀರಸವಾಗುತ್ತಿದ್ದವು. ಪಕ್ಷದ ಕಠೋರದ ಶಿಸ್ತು ಈ ಸಂವಿಧಾನ ಸಭೆಯನ್ನು ಹೌದಪ್ಪಗಳ ಸಭೆಯನ್ನಾಗಿ ಪರಿವರ್ತಿಸುತ್ತಿತ್ತು. ಅದೃಷ್ಟವಶಾತ್ ಕೆಲವರು ಪ್ರತಿಭಟಿಸುವವರೂ ಇದ್ದರು. ಮಾನ್ಯ ಶ್ರೀ ಕಾಮತ್, ಡಾ|| ಶ್ರೀ ಪಿ.ಎಸ್. ದೇಶಮುಖ್, ಮಾನ್ಯ ಸಿದ್ವಾರವರು, ಪ್ರೊಫೆಸರ್ ಸ್ಯಾಕ್ಸೇನಾ ಮತ್ತು ಪಂಡಿತ್ ಠಾಕೂರ್ ದಾಸ್ ಭಾರ್ಗವ ಅಂತಹ ಮಹನೀಯರೂ ಇದ್ದರು. ಅವರುಗಳೊಂದಿಗೆ ಪ್ರೊಫೆಸರ್ ಕೆ.ಟಿ.ಷಾ ಮತ್ತು ಪಂಡಿತ್ ಹೃದೇನಾಥ್ ಕುಂಜುರುರವರುಗಳು ಇದ್ದರು ಎಂಬುವುದನ್ನು ನಾನು ಉಲ್ಲೇಖಿಸಬೇಕು. ಅವರು ಮುಖ್ಯವಾಗಿ ಚರ್ಚಿಸುತ್ತಿದ್ದ ವಿಷಯಗಳು ಸೈದ್ಧಾಂತಿಕವಾಗಿರುತ್ತಿದ್ದವು. ನಾನು ಅವರ ಯಾವುದೇ ಸಲಹೆಗಳನ್ನು ಸ್ವೀಕರಿಸುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅವರು ನೀಡುತ್ತಿದ್ದ ಯಾವುದೇ

ಸಲಹೆಯನ್ನು ಅಗೌರವದಿಂದ ನೋಡಿದವನಲ್ಲ. ಅಥವಾ ಸಂವಿಧಾನ ರಚನಾ ಸಮಿತಿಯ ವ್ಯವಹರಣೆಗಳಿಗೆ ಅವರು ನೀಡುತ್ತಿದ್ದ ಸೇವೆಯನ್ನು ಸಾಮಾನ್ಯ ದೃಷ್ಟಿಯಿಂದ ಕಂಡವನೂ ಅಲ್ಲ. ಇದಕ್ಕಾಗಿ ಅವರೆಲ್ಲರಿಗೂ ನಾನು ಚಿರಋಣಿ. ಅವರ ಸಹಕಾರ ಇಲ್ಲದೆ ಇದ್ದಿದ್ದರೆ ಸಂವಿಧಾನದ ಆಧಾರವಾಗಿರತಕ್ಕ ತತ್ವಗಳನ್ನು ಪ್ರತಿಪಾದಿಸುವ ಕೆಲಸವು ಸುಲಭವಾಗುತ್ತಿರಲಿಲ್ಲ. ಅವರಿಂದ ದೊರೆತ ಸಹಕಾರವು ಸಂವಿಧಾನವನ್ನು ಅಂಗೀಕರಿಸುವ ಯಾಂತ್ರಿಕವಾದ ಕೆಲಸಕ್ಕಿಂತ ಹೆಚ್ಚು ಮಹತ್ವ ಪೂರ್ಣವಾಗಿತ್ತು.

ಅಂತಿಮವಾಗಿ, ಈ ಸಭೆಯ ವ್ಯವಹರಣೆಗಳನ್ನು ಸುಸೂತ್ರವಾಗಿ ನಡೆಯುವಂತೆ ಮಾಡಿಕೊಟ್ಟಿದ್ದಕ್ಕಾಗಿ ಸಭೆಯ ಅಧ್ಯಕ್ಷರಾದ ತಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಈ ಸಮಿತಿಯ ಮೇಲೆ ತಾವು ತೋರಿಸಿದ ವಿಶ್ವಾಸ ಗೌರವವನ್ನು ಈ ಸಭೆಯ ವ್ಯವಹರಣೆಗಳಲ್ಲಿ ಭಾಗವಹಿಸಿದ ಯಾವೊಬ್ಬ ಸದಸ್ಯನೂ ಮರೆಯುವಂತಿಲ್ಲ. ಕರಡು ರಚನಾ ಸಮಿತಿಯು ತಂದ ತಿದ್ದುಪಡಿಗಳನ್ನು ಅನೇಕ ಸಲ ಕೇವಲ ತಾಂತ್ರಿಕ ಆಧಾರದ ಮೇಲೆ ತಳ್ಳಿ ಹಾಕುವ ಪ್ರಯತ್ನ ನಡೆಯಿತು. ಅಂತಹ ಎಲ್ಲಾ ಸಂದರ್ಭಗಳೂ ನನ್ನನ್ನು ತಲ್ಲಣಗೊಳಿಸುತ್ತಿದ್ದವು. ತಾವು ಕಾನೂನು ಪಾಂಡಿತ್ಯಕ್ಕೆ ಅನಗತ್ಯವಾದ ಎಡೆಗೊಡದೆ ಸಂವಿಧಾನ ರಚನಾ ಕಾರ್ಯವನ್ನು ಸುಸೂತ್ರಗೊಳಿಸಿದ್ದಕ್ಕಾಗಿ ನಾನು ತಮಗೆ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ನನ್ನ ಮಿತ್ರರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಕೆ.ಟಿ. ಕೃಷ್ಣಮಾಚಾರಿ ಅವರುಗಳು ಸಂವಿಧಾನವನ್ನು ಸಮರ್ಥಿಸುತ್ತಾ ಎಷ್ಟನ್ನು ವಾದಿಸಬಹುದೋ ಅಷ್ಟನ್ನು ವಾದಿಸಿದ್ದಾರೆ. ಆದ್ದರಿಂದ ಸಂವಿಧಾನದ ವಿಶೇಷ ಗುಣಗಳನ್ನು ಕುರಿತು ನಾನು ಚರ್ಚೆ ಮಾಡಲು ಬಯಸುವುದಿಲ್ಲ. ಏಕೆಂದರೆ ಸಂವಿಧಾನ ಎಷ್ಟೇ ಶ್ರೇಷ್ಠ ಮಟ್ಟದ್ದಾಗಿದ್ದರೂ ಅದನ್ನು ತೆಗೆದುಕೊಂಡು ಕಾರ್ಯ ನಿರ್ವಹಿಸುವವರೂ ಕೆಟ್ಟವರಾಗಿದ್ದರೆ ಆಗ ಸಂವಿಧಾನವು ಕೆಟ್ಟದ್ದಾಗುತ್ತದೆ. ಹಾಗೆಯೇ ಸಂವಿಧಾನ ಎಷ್ಟೇ ಕೆಟ್ಟದಾಗಿದ್ದರೂ ಅದನ್ನು ಅನುಸರಿಸಿ ಕಾರ್ಯ ನಿರ್ವಹಿಸುವವರು ಒಳ್ಳೆಯವರಾಗಿದ್ದರೆ ಸಂವಿಧಾನವು ಶ್ರೇಷ್ಠ ಸಂವಿಧಾನವಾಗಿ ಕಾಣುತ್ತದೆ ಎಂದು ನಾನು ಭಾವಿಸುತ್ತೇನೆ. ಸಂವಿಧಾನದ ಕಾರ್ಯ ನಿರ್ವಹಣೆ ಸಂಪೂರ್ಣವಾಗಿ ಸಂವಿಧಾನದ ಸ್ವರೂಪವನ್ನು ಅವಲಂಬಿಸಿಲ್ಲ. ಸಂವಿಧಾನವು ರಾಜ್ಯದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ಮತ್ತು ನ್ಯಾಯಾಂಗಗಳನ್ನು ಮಾತ್ರ ಒದಗಿಸಲು ಬರುತ್ತದೆ. ರಾಜ್ಯದ ಯಾವ ಅಂಗಗಳು ಯಾವ ವ್ಯಕ್ತಿಗಳ ಮತ್ತು ರಾಜಕೀಯ ಪಕ್ಷಗಳ ಕೈಗೆ ಕಾರ್ಯ ನಿರ್ವಹಣೆಗೆಂದು ವಹಿಸಿಕೊಡಲಾಗುತ್ತದೋ ಅಂತಹ

ವ್ಯಕ್ತಿಗಳ ಮತ್ತು ರಾಜಕೀಯ ಪಕ್ಷಗಳ ಉದ್ದೇಶಗಳ ಈಡೇರಿಕೆಗಾಗಿ ಸಂವಿಧಾನವನ್ನು ಬಳಸಿಕೊಳ್ಳಬಹುದು. ಆದ್ದರಿಂದ ಸಂವಿಧಾನದ ಕಾರ್ಯ ನಿರ್ವಹಣೆಯು ಜನತೆಯನ್ನು ಮತ್ತು ಅವರ ರಾಜಕೀಯ ಪಕ್ಷಗಳನ್ನು ಅವಲಂಬಿಸಿರುತ್ತದೆ. ಭಾರತದ ಜನತೆ ಮತ್ತು ಅವರ ರಾಜಕೀಯ ಪಕ್ಷಗಳು ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ ಎಂದು ಯಾರು ಹೇಳಬಲ್ಲರು? ಅವರು ತಮ್ಮ ಉದ್ದೇಶಗಳ ಈಡೇರಿಕೆಗಾಗಿ ಸಂವಿಧಾನದ ವಿಧಿ ವಿಧಾನಗಳನ್ನು ಎತ್ತಿ ಹಿಡಿಯುವರೋ? ಅಥವಾ ಕ್ರಾಂತಿಕಾರಕ ವಿಧಿ ವಿಧಾನಗಳನ್ನು ಅನುಸರಿಸುವರೋ? ಒಂದು ವೇಳೆ ಅವರು ಕ್ರಾಂತಿಕಾರಕ ವಿಧಿ ವಿಧಾನಗಳನ್ನು ಅನುಸರಿಸಿದ್ದೇ ಆದರೆ ಸಂವಿಧಾನ ಎಷ್ಟೇ ಶ್ರೇಷ್ಠ ಮಟ್ಟದಾಗಿದ್ದರೂ ಅಂತಹ ಸಂವಿಧಾನ ವಿಫಲವಾಗುತ್ತದೆಂದು ಹೇಳಲು ಯಾವುದೇ ಪ್ರವಾದಿಯ ಅಗತ್ಯವಿರುವುದಿಲ್ಲ. ಆದ್ದರಿಂದ ಸಂವಿಧಾನಕ್ಕೆ ಸಂಬಂಧಿಸಿದಂತೆ ಜನತೆ ಮತ್ತು ಪಕ್ಷಗಳು ಹೇಗೆ ನಿರ್ವಹಿಸಲಿದ್ದಾರೆ ಎಂಬುವುದನ್ನು ತಿಳಿಯದೆ ತೀರ್ಮಾನ ಕೈಗೊಳ್ಳುವುದು ಅಪ್ರಸ್ತುತವಾಗುತ್ತದೆ.

ಸಂವಿಧಾನವನ್ನು ಹೆಚ್ಚಾಗಿ ಖಂಡಿಸಿ ಮಾತನಾಡಿದುದು ಎರಡೂ ಕಡೆಯಿಂದ ಕೇಳಿ ಬಂದಿರುತ್ತದೆ. ಮುಖ್ಯವಾಗಿ ಕಮ್ಯೂನಿಸ್ಟ್ ಪಕ್ಷ ಹಾಗೂ ಸಮಾಜವಾದಿ ಪಕ್ಷಗಳನ್ನು ಇಲ್ಲಿ ಹೆಸರಿಸಬಹುದು. ಇವರುಗಳು ಸಂವಿಧಾನವನ್ನು ಏಕೆ ಖಂಡಿಸುತ್ತಾರೆ? ಸಂವಿಧಾನ ನಿಜವಾಗಿಯೂ ಕೆಟ್ಟದ್ದಾಗಿದೆ ಎಂಬ ಕಾರಣಕ್ಕಾಗಿಯೇ? ಇದಕ್ಕೆ ಇಲ್ಲ ಎಂದು ಹೇಳುವುದೇ ನನ್ನ ದಿಟ್ಟ ಉತ್ತರ. ಕಮ್ಯೂನಿಸ್ಟ್ ಪಕ್ಷವು ಕಾರ್ಮಿಕ ವರ್ಗ, ಸರ್ವಾಧಿಕಾರದ ಸಿದ್ಧಾಂತದ ಆಧಾರದ ಮೇಲೆ ಅವಲಂಬಿತವಾಗಿರುವ ಸಂವಿಧಾನ ಬೇಕೆನ್ನುತ್ತದೆ. ಸಂವಿಧಾನವು ಸಂಸದೀಯ ಪ್ರಜಾಪ್ರಭುತ್ವ ಆಧಾರಿತವಾಗಿರುವ ಕಾರಣದಿಂದ ಸಂವಿಧಾನವನ್ನು ಖಂಡಿಸುತ್ತಾರೆ. ಸಮಾಜವಾದಿಗಳಿಗೆ ಎರಡು ಸಂಗತಿಗಳು ಬೇಕು. ಅವರುಗಳಿಗೆ ಬೇಕಾಗಿರುವ ಮೊದಲನೆಯ ಸಂಗತಿ ಎಂದರೆ ಅವರು ಅಧಿಕಾರಕ್ಕೆ ಬಂದ ಮೇಲೆ ಸಂವಿಧಾನವು ಖಾಸಗೀ ಸ್ವತ್ತನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿಕೊಳ್ಳಲು ಅಥವಾ ಸಾಮಾಜೀಕರಣಗೊಳಿಸಲು ಅವಕಾಶವಿರಬೇಕೆಂಬುವುದು, ಹಾಗೂ ರಾಷ್ಟ್ರೀಕರಣ ಮಾಡಿಕೊಂಡಿದ್ದಕ್ಕೆ ಯಾವುದೇ ಪರಿಹಾರ ಕೊಡಬಾರದು ಎಂಬುದು ಮುಖ್ಯವಾದದ್ದಾಗಿರುತ್ತದೆ. ಎರಡನೇ ಸಂಗತಿ ಎಂದರೆ, ಸಮಾಜವಾದಿಗಳಿಗೆ ಸಂವಿಧಾನದಲ್ಲಿ ಉಲ್ಲೇಖ ಮಾಡಿರುವ ಮೂಲಭೂತ ಹಕ್ಕುಗಳು ಅನಿರ್ಬಂಧಿತವು ಹಾಗೂ ಯಾವುದೇ ಪರಿಮಿತಿಗಳಿಗೆ ಒಳಪಟ್ಟಿರಬಾರದೆಂಬುವುದು ಅವರ ಎರಡನೆಯ ಬೇಡಿಕೆ. ಯಾಕೆಂದರೆ ಒಂದು

ವೇಳೆ ಅವರ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವಾಗದೇ ಇದ್ದರೆ ವಿರೋಧ ಪಕ್ಷಗಳನ್ನು ಟೀಕಿಸಲು ಹಾಗೂ ಆಡಳಿತಾರೂಢ ಸರ್ಕಾರವನ್ನು ಹೊರದೂಡಲು ಸ್ವಾತಂತ್ರವಿರಬೇಕೆಂಬುವುದೆ ಅವರ ಉದ್ದೇಶವಾಗಿರುತ್ತದೆ.

ಸಂವಿಧಾನವನ್ನು ಖಂಡಿಸಲು ಇವು ಮುಖ್ಯವಾಗಿ ಕೆಲವು ಕಾರಣಗಳಾಗಿರುತ್ತವೆ. ಸಂಸದೀಯ ಪ್ರಜಾಪ್ರಭುತ್ವದ ತತ್ವವು, ಆದರ್ಶವಾದ ರಾಜಕೀಯ ಪ್ರಜಾಪ್ರಭುತ್ವವೆಂದು ನಾನು ಹೇಳುತ್ತಿಲ್ಲ, ಹಾಗೆಯೇ ಪರಿಹಾರವನ್ನು ಕೊಡದೇ ಖಾಸಗಿ ಆಸ್ತಿಯನ್ನು ರಾಷ್ಟ್ರೀಕರಣ ಮಾಡುವುದು ಶ್ರೇಷ್ಠವೆಂದು, ಅದನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲವೆಂದು ನಾನು ಹೇಳುತ್ತಿಲ್ಲ, ಹಾಗೆಯೇ ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳು ಅನಿರ್ಬಂಧಿತ ಹಕ್ಕುಗಳು ಎಂದಾಗಲೀ, ಮತ್ತು ಆ ಹಕ್ಕುಗಳ ಮೇಲೆ ವಿಧಿಸಿರುವ ಷರತ್ತುಗಳನ್ನು ಹಿಂತೆಗೆದುಕೊಳ್ಳಲಾಗದ ಷರತ್ತುಗಳೆಂದಾಗಲೀ ನಾನು ಹೇಳುತ್ತಿಲ್ಲ. ನಾನು ಹೇಳುವುದೇನೆಂದರೆ ಸಂವಿಧಾನದಲ್ಲಿ ಯಾವ ಸಿದ್ಧಾಂತಗಳನ್ನು ರೂಪಿಸಿದ್ದೇವೆಯೋ, ಆ ಸಿದ್ಧಾಂತಗಳು ಮತ್ತು ಅಭಿಪ್ರಾಯಗಳು ಪ್ರಸ್ತುತ ತರೆಮಾರಿನವರ ಅಭಿಪ್ರಾಯಗಳೇ ಆಗಿರುತ್ತವೆ. ಅಥವಾ ನೀವು, ನನ್ನ ಈ ಹೇಳಿಕೆಯನ್ನು ಉತ್ಪ್ರೇಕ್ಷೆಯೆಂದು ಭಾವಿಸುವುದೇ ಆದರೆ ಸಂವಿಧಾನದಲ್ಲಿನ ತತ್ವಗಳು ಸಂವಿಧಾನ ಸಭೆಯ ಸದಸ್ಯರುಗಳ ಅಭಿಪ್ರಾಯಗಳೇ ಆಗಿರುತ್ತವೆ ಎಂದು ನಾನು ಹೇಳಬಯಸುತ್ತೇನೆ. ಆ ಅಭಿಪ್ರಾಯಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದರಿಂದ ಕರಡು ರಚನಾ ಸಮಿತಿಯನ್ನು ಏಕೆ ಆಪಾದಿಸಬೇಕು? ಹಾಗೆಯೇ ಸಂವಿಧಾನ ಸಭೆಯ ಸದಸ್ಯರುಗಳನ್ನು ಏಕೆ ಆಪಾದಿಸಬೇಕೆಂದು ಪ್ರಶ್ನಿಸುತ್ತೇನೆ. ಅಮೇರಿಕಾದ ಶ್ರೇಷ್ಠ ರಾಜಕೀಯ ಮುತ್ಸದ್ದಿಗಳಾಗಿದ್ದವರು, ಹಾಗೂ ಯಾರು ಅಮೇರಿಕಾದ ಸಂವಿಧಾನದ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರೋ ಅಂತಹ ಜಾಫರ್‌ಸನ್‌ರವರು ವ್ಯಕ್ತಪಡಿಸಿದ್ದ ಅಭಿಪ್ರಾಯವನ್ನು ಸಂವಿಧಾನದ ರಚನಕಾರರು ಮರೆಯುವಂತಿಲ್ಲ, ಅವರು ಹೇಳುತ್ತಾರೆ, -

"ಪ್ರತಿಯೊಂದು ತಲೆಮಾರು ಒಂದು ಪ್ರತ್ಯೇಕ ರಾಷ್ಟ್ರವೆಂದೇ ನಾವು ಭಾವಿಸಬಹುದು. ಅಂತಹ ತಲೆಮಾರಿಗೆ ಬಹುಸಂಖ್ಯಾತರ ಬೆಂಬಲದಿಂದ ತಮ್ಮನ್ನು ತಾವು ಬದ್ಧಗೊಳಿಸತಕ್ಕ ಹಕ್ಕಿರುತ್ತದೆ. ಆದರೆ ಮುಂದೆ ಹೆಚ್ಚಾಗಿ ಬೇರೊಂದು ರಾಷ್ಟ್ರದ ನಿವಾಸಿಗಳನ್ನು ಬದ್ಧಗೊಳಿಸುವ ಹಕ್ಕು ನಮಗೆ ಹೇಗೆ ಇಲ್ಲವೋ? ಅದಕ್ಕೂ ಮಿಗಿಲಾಗಿ ಬರಲಿರುವ ತಲೆಮಾರನ್ನು ಬದ್ಧಗೊಳಿಸುವ ಹಕ್ಕು ನಮಗಿಲ್ಲ."

9627-14

ಅವರು ಮತ್ತೊಂದು ಕಡೆ ಹೇಳುತ್ತಾರೆ -

"ರಾಷ್ಟ್ರದ ಸೇವೆಗಾಗಿ ಸಾರ್ವಜನಿಕವಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳನ್ನು ಮುಟ್ಟಲು ಬರುವುದಿಲ್ಲ, ಅಥವಾ ಮಾರ್ಪಡಿಸಲು ಬರುವುದಿಲ್ಲ, ಹಾಗೂ ಅಂತಿಮವಾಗಿ ತಮ್ಮ ಗುರಿಯ ಸಾಧನೆಗಳಿಗೆ ಸಂಬಂಧಿಸಿದಂತೆ ಉತ್ತರಿಸಬೇಕಾದ ಅವಶ್ಯಕತೆ ಇರುವುದಿಲ್ಲ, ಏಕೆಂದರೆ ಅಂತಹ ಸಮಸ್ಯೆಗಳ ನಿರ್ವಹಣೆಯನ್ನು ವಹಿಸಿಕೊಂಡವರ ಕೈಯಲ್ಲಿ ಅಧಿಕಾರವಿರುತ್ತದೆ ಎಂಬ ವಿಚಾರವು ಸಂಸ್ಥೆಯ ಮಟ್ಟಿಗೆ ಅನ್ವಯಿಸಿ ಹೇಳುವುದಾದರೆ ಆರೋಗ್ಯದಾಯಕ ಉಪಬಂಧಗಳೆಂದೇ ಒಪ್ಪಿಕೊಂಡರೂ, ರಾಷ್ಟ್ರದ ಮಟ್ಟಿಗೆ ಅನ್ವಯಿಸಿ ಹೇಳುವುದಾದರೆ ಅದೊಂದು ಅಸಂಗತ ವಿಚಾರವಾಗುತ್ತದೆ. ಆದರೂ ನಮ್ಮ ವಕೀಲರು ಮತ್ತು ಪುರೋಹಿತ ವರ್ಗದವರು ಇಂತಹ ಸಿದ್ಧಾಂತವನ್ನೇ ಅಳವಡಿಸಿಕೊಳ್ಳಲು ಬಯಸುತ್ತಾರೆ. ಹಾಗೂ ಒಂದು ವೇಳೆ ನಮ್ಮ ಹಿಂದಿನ ತಲೆ ಮಾರಿನವರು ಭೂಮಿಯನ್ನು ನಮಗಿಂತ ಹೆಚ್ಚು ಚೆನ್ನಾಗಿ ಉಪಯೋಗಿಸಿಕೊಂಡು, ನಮ್ಮ ಮೇಲೆ ಕಾನೂನುಗಳನ್ನು ರಚಿಸುವ ಹಕ್ಕನ್ನು ಹೊಂದಿದ್ದರೆ, ಅಂತಹ ಕಾನೂನುಗಳನ್ನು ನಮಗೆ ಮಾರ್ಪಡಿಸಲಾಗದಿದ್ದರೆ, ಹಾಗೂ ಅದೇ ರೀತಿಯಲ್ಲಿ ನಾವು ಮುಂದಿನ ತಲೆ ಮಾರಿನವರ ಮೇಲೆ ಕಾನೂನುಗಳನ್ನು ರಚಿಸಿ ಹೊರೆ ಹೇರಿದರೆ, ಹಾಗೂ ಅಂತಹ ಕಾನೂನುಗಳನ್ನು ಬದಲಾಯಿಸುವ ಹಕ್ಕು ಅವರುಗಳಿಗಿಲ್ಲವಿದ್ದರೆ ಆಗ ಭೂಮಿಯು ಸತ್ತವರಿಗೆ ಯೋಗ್ಯವಾಗಬಹುದೇ ಹೊರತು ಬದುಕಿರುವವರಿಗೆ ಯೋಗ್ಯವೆನಿಸುವುದಿಲ್ಲ."

ಜಾಫರ್‌ಸನ್‌ರವರು ಏನು ಹೇಳಿದ್ದರೋ ಅದು ಕೇವಲ ಸತ್ಯವಷ್ಟೇ ಆಗಿರದೆ ಸಂಪೂರ್ಣ ಸತ್ಯವೆಂದು ನಾನು ಭಾವಿಸುತ್ತೇನೆ. ಅದೊಂದು ಪ್ರಶ್ನಾತೀತವಾಗಿರುತ್ತದೆ. ಜಾಫರ್‌ಸನ್‌ರವರು ಹಾಕಿಕೊಟ್ಟ ಈ ಸಿದ್ಧಾಂತದಿಂದ ಸಂವಿಧಾನ ಸಭೆಯು ವಿಮುಖಗೊಂಡಿದ್ದರೆ, ಆಗ ಸಭೆಯು ಆರೋಪಕ್ಕೆ ಗುರಿಯಾಗುತ್ತಿತ್ತು. ಹಾಗೂ ಸಭೆಯನ್ನು ಖಂಡನೆಗೂ ಗುರಿಯಾಗಿಸಬಹುದಾಗಿತ್ತು. ಸಭೆಯು ಹಾಗೆ ವಿಮುಖಗೊಂಡಿದೆಯೋ? ಎಂದು ನಾನು ಪ್ರಶ್ನಿಸುತ್ತೇನೆ ಖಂಡಿತವಾಗಿಯೂ ಹಾಗೆ ವಿಮುಖಗೊಂಡಿಲ್ಲ. ಸಂವಿಧಾನಕ್ಕೆ ಸಂಬಂಧಿಸಿದ ತಿದ್ದುಪಡಿಯ ಉಪಬಂಧಗಳನ್ನು ಪರಿಶೀಲಿಸಿದರೆ ಇದು ವೇದ್ಯವಾಗುತ್ತದೆ. ಸಂವಿಧಾನ ಸಭೆಯು ಕೆನಡಾದಲ್ಲಿರುವಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಹಕ್ಕನ್ನು ಜನರಿಂದ ಕಸಿದುಕೊಳ್ಳಲು ಪ್ರಯತ್ನಿಸಿಲ್ಲ, ಅಥವಾ ಹಾಗೆ ಮಾಡದಿರುವಂತೆ ಜನರ ಮೇಲೆ ತನ್ನ ಅಂತಿಮ ಅಭಿಪ್ರಾಯವನ್ನು ಹೇರಿರುವುದಿಲ್ಲ, ಅಥವಾ ಅಮೇರಿಕಾ ಅಥವಾ ಆಸ್ಟ್ರೇಲಿಯಾದಲ್ಲಿರುವ ಹಾಗೆ ತಿದ್ದುಪಡಿ ಮಾಡಲು ವಿಶೇಷ ನಿಬಂಧನೆಗಳು ಮತ್ತು ಷರತ್ತುಗಳನ್ನು ಪಾಲಿಸಬೇಕೆಂದು ಹೇಳಿರುವುದಿಲ್ಲ, ಹೀಗೆ

ಮಾಡದೆ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಅತ್ಯಂತ ಸುಲಭವಾದ ವಿಧಾನಗಳನ್ನು ಹಾಕಿಕೊಟ್ಟಿರುತ್ತದೆ. ಪ್ರಪಂಚದ ಯಾವುದೇ ಭಾಗದ ಯಾವುದೇ ಸಂವಿಧಾನದ ಸಭೆ ನಮ್ಮ ದೇಶದಲ್ಲಿನ ಸುಲಭ ವಿಧಾನದಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಿದೆಯೇ ಎಂದು ಇಲ್ಲಿ ನಾನು ಟೀಕಾಕಾರರಿಗೆ ಸವಾಲೊಡ್ಡುತ್ತೇನೆ. ಸಂವಿಧಾನದ ಬಗ್ಗೆ ಅಸಮಾಧಾನ ಹೊಂದಿದ್ದರೆ ಮೂರನೆ ಎರಡರಷ್ಟು ಬಹುಮತವನ್ನು ಪಡೆದು ತಿದ್ದುಪಡಿ ಮಾಡಲು ಪ್ರಯತ್ನಿಸಬಹುದು. ಒಂದು ವೇಳೆ ಅವರಿಗೆ ಸಂಸತ್ತಿನಲ್ಲಿ ವಯಸ್ಕ ಮತದಾನದ ಪದ್ಧತಿಯ ಆಧಾರದ ಮೇಲೆ ಆಯ್ಕೆಗೊಂಡ ಪ್ರತಿನಿಧಿಗಳ ಪೈಕಿ ಮೂರನೇ ಎರಡು ಭಾಗದಷ್ಟು ಬಹುಮತ ಪಡೆಯಲು ಸಾಧ್ಯವಾಗಲಿಲ್ಲವೆಂದರೆ ಆಗ ಸಂವಿಧಾನದ ಮೇಲಿನ ಅವರ ಅಸಮಾಧಾನಕ್ಕೆ ಸಾರ್ವಜನಿಕರ ಪುರಸ್ಕಾರವಿಲ್ಲವೆಂದೇ ಭಾವಿಸಬೇಕಾಗುತ್ತದೆ.

ಸಂವಿಧಾನದ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಪ್ರಸ್ತಾವವನ್ನು ಮಾಡಬೇಕಿದೆ. ಸಂವಿಧಾನವು , ಮುಖ್ಯವಾಗಿ ಅತಿಯಾದ ಕೇಂದ್ರೀಕರಣವಾಗಿದೆಯೆಂದು ಮತ್ತು ರಾಜ್ಯಗಳನ್ನು ಕೇವಲ ಮುನಿಸಿಪಾಲಿಟಿಗಳ ಮಟ್ಟಕ್ಕೆ ಇಳಿಸಲಾಗಿದೆ ಎಂದು ಆಪಾದಿಸಲಾಗಿದೆ. ಈ ಅಭಿಪ್ರಾಯವು ಅತಿಶಯೋಕ್ತಿ ಅಷ್ಟೇ ಆಗಿರದೆ, ಸಂವಿಧಾನವು ಸಂವಿಧಾನದ ಕಾರ್ಯ ವಿಧಾನವನ್ನು ತಪ್ಪಾಗಿ ಭಾವಿಸಿರುವುದರಿಂದ ಮೂಡಿದ ಅಭಿಪ್ರಾಯವಾಗಿರುತ್ತದೆ ಎಂದು ಹೇಳಬಹುದು. ಕೇಂದ್ರ ಮತ್ತು ರಾಜ್ಯಗಳಿಗೆ ಸಂಬಂಧಿಸಿದ ಕೇಂದ್ರ, ರಾಜ್ಯ ಸಂಬಂಧಗಳನ್ನು ಯಾವ ತತ್ವದ ಆಧಾರದ ಮೇಲೆ ರೂಪಿಸಲಾಗಿದೆ ಎಂಬುವುದನ್ನು ನೆನಪಿನಲ್ಲಿಡಬೇಕು. ಸಂಯುಕ್ತ ಪದ್ಧತಿಯ ಮೂಲ ತತ್ವ ಎಂದರೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ, ಕಾರ್ಯಾಂಗದ ಅಧಿಕಾರಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿಯೇ ಸಂವಿಧಾನದಲ್ಲಿ ರೂಪಿಸಲಾಗಿದೆ. ಇದನ್ನು ಕೇಂದ್ರವು ಯಾವುದೇ ಕಾಯಿದೆಯಿಂದ ಕೂಡ ಮಾಡಿರುವುದಿಲ್ಲ, ಸಂವಿಧಾನ ಈ ಕಾರ್ಯವನ್ನೇ ನಿರ್ವಹಿಸುತ್ತದೆ. ಸಂವಿಧಾನದ ಅಡಿಯಲ್ಲಿ ನಮ್ಮ ರಾಜ್ಯಗಳು ತಮ್ಮ ತಮ್ಮ ಶಾಸಕಾಂಗದ ಅಧಿಕಾರ, ಕಾರ್ಯಾಂಗದ ಅಧಿಕಾರಗಳಿಗಾಗಿ ಕೇಂದ್ರದ ಮೇಲೆ ಅವಲಂಬಿಸಿರುವುದಿಲ್ಲ, ಈ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯಗಳು ಸಮಾನ ಸ್ಥಾನಮಾನದ ಮೇಲೆ ನೆಲಸಿವೆ. ಇಂತಹ ಸಂವಿಧಾನವನ್ನು ಕೇಂದ್ರೀಕೃತ ಸಂವಿಧಾನವೆಂದು ಹೇಗೆ ಕರೆಯುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ, ಯಾವುದೇ ಸಂಯುಕ್ತ ಪದ್ಧತಿ ಸಂವಿಧಾನದ ಅಡಿಯಲ್ಲಿ ಇರುವ ಶಾಸಕಾಂಗ, ಕಾರ್ಯಾಂಗದ ನಿರ್ವಹಣೆಗಿಂತ, ನಮ್ಮ ಸಂವಿಧಾನದಲ್ಲಿ ಕೇಂದ್ರದ ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರವನ್ನು ವ್ಯಾಪಕವಾದ ಕ್ಷೇತ್ರವನ್ನು ಕೇಂದ್ರಕ್ಕೆ ಕೊಡುತ್ತದೆ.

ಸಂವಿಧಾದಲ್ಲಿ ಉಳಿಕೆಯ ಅಧಿಕಾರಗಳನ್ನು ರಾಜ್ಯಗಳಿಗೆ ಕೊಡದೆ ಕೇಂದ್ರಕ್ಕೆ ಕೊಡಲಾಗಿದೆ. ನಮ್ಮ ಸಂವಿಧಾನದ ಈ ಲಕ್ಷಣಗಳು ಸಂಯುಕ್ತ ಪದ್ಧತಿಯ ಸಾರಭೂತವೂ ಅಲ್ಲ. ಈಗಾಗಲೇ ನಾನು ಮೇಲೆ ಹೇಳಿದಂತೆ ಸಂಯುಕ್ತ ಪದ್ಧತಿಯ ಮುಖ್ಯ ಲಕ್ಷಣಗಳೆಂದರೆ ಸಂವಿಧಾನದ ಮೂಲಕ ಅಥವಾ ಸಂವಿಧಾನದ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರಗಳ ವಿಭಜನೆಯೇ ಆಗಿರುತ್ತದೆ. ಈ ತತ್ವವೇ ನಮ್ಮ ಸಂವಿಧಾನದ ಮೂಲ ಲಕ್ಷಣ ಎನ್ನಬಹುದು. ಆ ಬಗ್ಗೆ ಯಾವುದೇ ತಪ್ಪಾದ ಅಭಿಪ್ರಾಯಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ರಾಜ್ಯಗಳನ್ನು ಕೇಂದ್ರದ ಕೃಪಾಕಟಾಕ್ಷದಲ್ಲಿ ಬರುವ ಹಾಗೆ ಮಾಡಲಾಗಿದೆ ಎಂಬುದು ಸರಿಯಲ್ಲ. ಕೇಂದ್ರವು ಸ್ವಇಚ್ಛೆಯಿಂದ ಇಂತಹ ಅಧಿಕಾರ ಪ್ರತ್ಯೇಕತೆಯ ಗಡಿಗಳನ್ನು ಬದಲಾಯಿಸಲು ಬರುವುದಿಲ್ಲ. ನ್ಯಾಯಾಂಗವೂ ಸಹಾ ಹಾಗೆ ಮಾಡಲಾರದು. ಈ ಕುರಿತು ಈ ಕೆಳಕಂಡಂತೆ ಹೇಳಿರುವುದು ಸರಿಯಾಗಿಯೇ ಇದೆ -

"ನ್ಯಾಯಾಲಯಗಳು ಮಾರ್ಪಡಿಸಬಹುದು. ಆದರೆ ಅದು ಒಂದರ ಬದಲು ಇನ್ನೊಂದನ್ನು ಸ್ಥಾಪಿಸುವಂತಿಲ್ಲ. ನ್ಯಾಯಾಲಯಗಳು ಈ ಹಿಂದಿನ ಯಾವುದೇ ವ್ಯಾಖ್ಯಾನವನ್ನು ಹೊಸದಾದ ವಾದದ ಅಂಶಗಳನ್ನಾಗಿ, ಹೊಸ ಅಭಿಪ್ರಾಯಗಳ ಅಂಶಗಳನ್ನಾಗಿ, ಪುನರೀಕ್ಷಣೆ ಮಾಡಬಹುದು. ಹಾಗೂ ಕೆಲ ಮೊಕದ್ದಮೆಗಳಲ್ಲಿ ಪ್ರತ್ಯೇಕಗೊಳಿಸುವ ರೇಖೆಯನ್ನು ಬದಲಾಯಿಸಲೂ ಬಹುದು. ಅಧಿಕಾರವನ್ನು ನಿರ್ದಿಷ್ಟವಾಗಿ ಹಂಚಲು, ಪುನರ್ ವಿಭಾಗಿಸಲು ನ್ಯಾಯಾಲಯಗಳ ಮೇಲೂ ನಿರ್ಬಂಧಗಳಿರುತ್ತವೆ. ಅವು ಪ್ರಸ್ತುತ ಅಧಿಕಾರ ಕ್ಷೇತ್ರದ ವ್ಯಾಪ್ತಿಗಳನ್ನು ವಿಸ್ತರಿಸಿ ವ್ಯಾಖ್ಯಾನಿಸಬಹುದು. ಆದರೆ ಈಗಾಗಲೇ ಒಂದು ಪ್ರಾಧಿಕಾರಕ್ಕೆ ಕೊಟ್ಟಿರುವ ಅಧಿಕಾರವನ್ನು ಕಿತ್ತು ಮತ್ತೊಂದು ಪ್ರಾಧಿಕಾರಕ್ಕೆ ಆ ಅಧಿಕಾರವನ್ನು ವಹಿಸಿಕೊಡಲು ಬರುವುದಿಲ್ಲ..."

ಆದ್ದರಿಂದ, ಕೇಂದ್ರೀಕೃತಗೊಂಡ ಸಂವಿಧಾನ ಸಂಯುಕ್ತ ಪದ್ಧತಿಯ ಸ್ವರೂಪವನ್ನು ವಿಫಲಗೊಳಿಸುತ್ತದೆ ಎಂಬ ಪ್ರಥಮ ಆರೋಪವು ಬಿದ್ದು ಹೋಗುತ್ತದೆ.

ಎರಡನೆಯ ಆರೋಪವೆಂದರೆ, ಕೇಂದ್ರಕ್ಕೆ ರಾಜ್ಯಗಳ ಮೇಲೆ ಆಧ್ಯಾರೋಹಿ ಮಾಡುವ ಅಧಿಕಾರ ಕೊಡಲಾಗಿದೆ ಎಂಬುವುದು. ಈ ಆರೋಪವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸಂವಿಧಾನದಲ್ಲಿ ರಾಜ್ಯಗಳ ಮೇಲೆ ಆಧ್ಯಾರೋಹಿ ಅಧಿಕಾರಗಳನ್ನು ಒಳಗೊಂಡಿದೆ ಎಂಬ ಕಾರಣದಿಂದ ಸಂವಿಧಾನವನ್ನು ಖಂಡಿಸುವ

ಮುನ್ನ ನಾವು ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಿರುತ್ತದೆ. ಮೊದಲನೆಯದಾಗಿ ಗಮನದಲ್ಲಿರಿಸಬೇಕಾದ ಅಂಶವೆಂದರೆ ಈ ಅಧ್ಯಾರೋಹಿ ಅಧಿಕಾರಗಳು ನಮ್ಮ ಸಂವಿಧಾನದ ಸಾಮಾನ್ಯ ಲಕ್ಷಣಗಳಾಗಿರುವುದಿಲ್ಲ, ಅವುಗಳ ಉಪಯೋಗ ಮತ್ತು ಜಾರಿಗೊಳಿಸುವ ಕ್ರಮ ಕೇವಲ ತುರ್ತು ಪರಿಸ್ಥಿತಿಯ ಕಾಲಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಎರಡನೆಯ ಮುಖ್ಯ ಸಂಗತಿ ಎಂದರೆ ತುರ್ತು ಪರಿಸ್ಥಿತಿ ಉದ್ಭವಿಸುವ ಕಾಲದಲ್ಲಿ ಕೇಂದ್ರಕ್ಕೆ ಅಂತಹ ಅಧ್ಯಾರೋಹಿ ಅಧಿಕಾರವನ್ನು ಕೊಡದೆ ಇರೋಣವೆ? ತುರ್ತು ಪರಿಸ್ಥಿತಿಯ ಕಾಲದಲ್ಲಿಯೂ ಸಹಾ ಕೇಂದ್ರಕ್ಕೆ ಈ ಅಧ್ಯಾರೋಹಿ ಅಧಿಕಾರಗಳು ಇರಬೇಕೆಂದು ಯಾರು ಒಪ್ಪಿಕೊಳ್ಳುವುದಿಲ್ಲವೋ ಅವರುಗಳಿಗೆ ಸಮಸ್ಯೆಯ ನೈಜ ಚಿತ್ರಣವು ಅರಿವಾಗಿಲ್ಲವೆಂದು ಹೇಳಬೇಕಾಗುತ್ತದೆ. ಇಂತಹ ನೈಜ ಚಿತ್ರಣ, ಸಮಸ್ಯೆಯ ಆಡಿಯಲ್ಲಿ ಕಂಡುಬರುತ್ತದೆ. ಈ ಸಮಸ್ಯೆಯನ್ನು ಒಬ್ಬ ಬರಹಗಾರ "ದಿ ರೌಂಡ್ ಟೇಬಲ್" ಎಂಬ ಪ್ರಸಿದ್ಧವಾದ ಪತ್ರಿಕೆಯ ಡಿಸೆಂಬರ್ 1935ರ ಸಂಚಿಕೆಯಲ್ಲಿ ಬರೆದಿರುವುದನ್ನು ನೋಡಬಹುದು. ನಾನು ಅದನ್ನು ಇಲ್ಲಿ ಉಲ್ಲೇಖಿಸುವುದಕ್ಕೆ ಯಾರ ಕ್ಷಮೆಯನ್ನು ಕೋರುವುದಿಲ್ಲ ಅವರು ಈ ರೀತಿ ಹೇಳುತ್ತಾರೆ.

"ರಾಜಕೀಯ ಪದ್ಧತಿಗಳು ಸಂಕೀರ್ಣವಾದವುಗಳು. ಅಂತಿಮವಾಗಿ ಪ್ರಜೆಯಾದವನು ಯಾರ ಅಥವಾ ಯಾವ ಅಧಿಕಾರಕ್ಕೆ ನಿಷ್ಠೆಯನ್ನು ತೋರಿಸಬೇಕೆಂಬ ಪ್ರಶ್ನೆಯ ಮೇಲೆ ಹಕ್ಕುಗಳು ಮತ್ತು ಕರ್ತವ್ಯಗಳು ಅವಲಂಬಿಸಿರುತ್ತವೆ. ಸಾಮಾನ್ಯ ಸ್ಥಿತಿ ಇರುವಾಗ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಏಕೆಂದರೆ ಕಾನೂನು ಸುಸೂತ್ರವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ವ್ಯಕ್ತಿಯೊಬ್ಬ ತನ್ನ ದೈನಂದಿನ ವ್ಯವಹಾರದಲ್ಲಿ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಅಧಿಕಾರಕ್ಕೆ ಅನುಗುಣವಾಗಿ ನಡೆಯುತ್ತಿರುತ್ತಾನೆ ಹಾಗೂ ಇತರೆ ಕೆಲವು ವಿಷಯಗಳಲ್ಲಿ ಮತ್ತೊಂದು ಅಧಿಕಾರಕ್ಕೆ ಅನುಗುಣವಾಗಿ ನಡೆಯುತ್ತಿರುತ್ತಾನೆ. ಆದರೆ ಸಂಕೀರ್ಣ ಸಮಯದಲ್ಲಿ ಹಕ್ಕುಗಳ ಸಂಘರ್ಷವಾಗುವುದುಂಟು ಮತ್ತು ಅಂತಹ ಸಂದರ್ಭಗಳಲ್ಲಿ ಅವರು ತೋರಿಸಬೇಕಾದ ಅಂತಿಮ ನಿಷ್ಠೆ ಯಾವುದೇ ಕಾರಣಕ್ಕೂ ವಿಭಜಿಸಲಾಗದು.

ಅಂತಿಮ ನಿಷ್ಠಗೆ ಸಂಬಂಧಿಸಿದಂತೆ, ಅಂತಿಮವಾಗಿ ಶಾಸನಗಳ ನ್ಯಾಯಿಕ ವ್ಯಾಖ್ಯಾನಗಳಿಂದ ತೀರ್ಮಾನ ಮಾಡಲಾಗದು. ಕಾನೂನು ತನ್ನ ಮುಂದಿರುವ ಸಂಗತಿಗಳಿಗೆ ಅನುಗುಣವಾಗಿ ಇರಬೇಕು. ಇಲ್ಲವೆಂದರೆ ಕಾನೂನಿನ ಪರಿಸ್ಥಿತಿಯು ಅಪ್ಪರಮಟ್ಟಿಗೆ ಕಠಿಣವಾಗುತ್ತದೆ. ಕಾನೂನು ಬದ್ಧವಾದ ಎಲ್ಲಾ ಕಟ್ಟುನಿಟ್ಟುಗಳನ್ನು

ಕಳಚಿ ನೋಡಿದಾಗ, ಪ್ರಜೆಯಾದವನಿಂದ ನಿಷ್ಠೆಯನ್ನು ನಿರೀಕ್ಷಿಸುವ ಅಧಿಕಾರ ಯಾವುದು ಎಂಬ ಪ್ರಶ್ನೆ ಉಳಿಯುತ್ತದೆ. ಅದು ಕೇಂದ್ರವೋ ಅಥವಾ ಒಕ್ಕೂಟದ ಭಾಗವಾಗಿರುವ ರಾಜ್ಯವೋ?

ಈ ಸಮಸ್ಯೆಗೆ ಪರಿಹಾರ ಎಂದರೆ, ಈ ಸಮಸ್ಯೆಗೆ ಉತ್ತರಿಸುವವರ ಉತ್ತರದಲ್ಲಿಯೇ ಪ್ರಶ್ನೆಯ ಮೂಲ ಸಮಸ್ಯೆ ಅಡಗಿರುತ್ತದೆ. ಬಹು ಸಂಖ್ಯಾತರ ಅಭಿಪ್ರಾಯದ ಪ್ರಕಾರ ತುರ್ತು ಪರಿಸ್ಥಿತಿಯ ಕಾಲದಲ್ಲಿ ಪ್ರಜೆಯ ಅಂತಿಮ ನಿಷ್ಠೆ ಇರಬೇಕಾದುದು ಕೇಂದ್ರಕ್ಕೇ ವಿನಃ ಒಕ್ಕೂಟದ ಭಾಗವಾಗಿರತಕ್ಕ ರಾಜ್ಯಗಳಿಗಲ್ಲ. ಯಾಕೆಂದರೆ, ಅಂತಹ ತುರ್ತು ಪರಿಸ್ಥಿತಿಯ ಸಮಯದಲ್ಲಿ, ಕೇಂದ್ರವು ಒಂದು ಸಮಾನ ಗುರಿಯ ಸಾಧನೆಯ ಉದ್ದೇಶಕ್ಕಾಗಿ ಹಾಗೂ ರಾಷ್ಟ್ರದ ಸಾರ್ವತ್ರಿಕ ಹಿತಕ್ಕಾಗಿ ತನ್ನ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಆ ಕಾರಣದಿಂದ, ತುರ್ತು ಪರಿಸ್ಥಿತಿ ಕಾಲದಲ್ಲಿ ರಾಜ್ಯಗಳ ಮೇಲೆ ಕೇಂದ್ರಕ್ಕೆ ಅಧ್ಯಾರೋಹಿ ಅಧಿಕಾರಗಳನ್ನು ಕೊಟ್ಟಿರುವುದು ಸಮರ್ಥನೀಯವಾಗಿಯೇ ಇದೆ. ಈ ತುರ್ತು ಪರಿಸ್ಥಿತಿಯ ಅಧಿಕಾರಗಳಿಂದ ಘಟಕ ರಾಜ್ಯಗಳ ಮೇಲೆ ವಿಧಿಸಿರುವ ಹೊಣೆಗಾರಿಕೆಗಳಾದರೂ ಏನು? ತುರ್ತು ಪರಿಸ್ಥಿತಿಯ ಕಾಲದಲ್ಲಿ, ಪ್ರಾದೇಶಿಕ ಹಿತಾಸಕ್ತಿಗಳ ಜೊತೆಗೆ, ರಾಷ್ಟ್ರದ ಅಭಿಪ್ರಾಯ ಹಾಗೂ ಹಿತಾಸಕ್ತಿಗಳನ್ನಷ್ಟೇ ಗಮನಕ್ಕೆ ತೆಗೆದುಕೊಂಡು ರಾಜ್ಯಗಳು ಕಾರ್ಯನಿರ್ವಹಿಸಬೇಕಿರುತ್ತದೆ - ಇದಕ್ಕಿಂತ ಹೆಚ್ಚೇನೂ ಇಲ್ಲ. ಯಾರು ಸಮಸ್ಯೆಯನ್ನು ಅರ್ಥ ಮಾಡಿಕೊಂಡಿರುವುದಿಲ್ಲವೋ, ಅಂತಹವರು ಮಾತ್ರ ಸಂವಿಧಾನದ ಬಗ್ಗೆ ಟೀಕಿಸಬಹುದು.

ಇಲ್ಲಿ, ನಾನು ಈ ಚರ್ಚೆಯನ್ನು ಮುಗಿಸಬಹುದಿತ್ತು. ಆದರೆ ರಾಷ್ಟ್ರದ ಭವಿಷ್ಯವು ನನ್ನ ಮನಸ್ಸನ್ನು ತುಂಬಿಕೊಂಡಿರುವುದರಿಂದ, ಈ ಸಂದರ್ಭದಲ್ಲಿ ಅದೇ ವಿಷಯವನ್ನು ಕುರಿತು ನನ್ನ ಕೆಲವು ಅಭಿಪ್ರಾಯಗಳನ್ನು ಹೇಳಬಯಸುತ್ತೇನೆ. 26ನೇ ಜನವರಿ 1950ರಂದು, ಭಾರತವು ಸ್ವತಂತ್ರ ರಾಷ್ಟ್ರವಾಗಲಿದೆ. ಆದರೆ ಅದರ ಸ್ವಾತಂತ್ರ್ಯಕ್ಕೆ ಏನಾಗಲಿದೆ? ಅದು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುತ್ತದೆಯೇ? ಅಥವಾ ಅದು ತನ್ನ ಸ್ವಾತಂತ್ರ್ಯವನ್ನು ಮತ್ತೊಮ್ಮೆ ಕಳೆದುಕೊಳ್ಳಲಿದೆಯೇ? ಈ ವಿಷಯ ನನ್ನ ಮನಸ್ಸಿನಲ್ಲಿ ಮೂಡಿದ ಮೊದಲ ವಿಷಯವಾಗಿರುತ್ತದೆ. ಭಾರತವು ಹಿಂದೆಂದೂ ಸ್ವತಂತ್ರವಾಗಿರಲಿಲ್ಲವೆಂದು ಇದರ ಅರ್ಥವಲ್ಲ, ಅದು ತನ್ನ ಸ್ವಾತಂತ್ರ್ಯವನ್ನು ಮಧ್ಯೆ ಕಳೆದುಕೊಂಡಿತು. ಅದು ಎರಡನೆಯ ಬಾರಿಗೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತದೆಯೇ? ಈ ಆಲೋಚನೆಯೇ ಭವಿಷ್ಯದ ಬಗ್ಗೆ ನನ್ನನ್ನು ಕಳವಳಗೊಳ್ಳುವಂತೆ ಮಾಡಿದೆ. ನನ್ನ ಮನಸ್ಸಿಗೆ ಬಹಳವಾಗಿ ಕ್ಷೋಭೆ ಉಂಟು ಮಾಡಿದ ಸಂಗತಿ ಎಂದರೆ, ಭಾರತವು

ತನ್ನ ಸ್ವಾತಂತ್ರ್ಯವನ್ನು ಹಿಂದೊಮ್ಮೆ ಕಳೆದುಕೊಂಡಿತ್ತೆಂಬ ಸಂಗತಿಯು ನನ್ನ ಮನಸ್ಸಿನ ಕ್ಷೋಭೆಗೆ ತನ್ನವರೇ ಆದ ವಿಶ್ವಾಸಘಾತುಕದಿಂದ ಹಾಗೂ ದೇಶದ್ರೋಹಿಗಳಿಂದ ಸ್ವಾತಂತ್ರ್ಯವನ್ನು ಕಳೆದುಕೊಂಡಿತು ಎಂಬುವುದು ನನ್ನ ಮನಸ್ಸಿನ ಕ್ಷೋಭೆಗೆ ಮುಖ್ಯ ಕಾರಣವಾಗಿದೆ. ಸಿಂಧ್ ಪ್ರಾಂತ್ಯದ ಮೇಲೆ ಮೊಹಮದ್ ಬಿನ್ ಖಾಸಿಂ ದಂಡೆತ್ತಿ ಬಂದಾಗ ಅವನ ವಿರುದ್ಧ ಯುದ್ಧ ಘೋಷಣೆ ಮಾಡಬೇಕಿದ್ದ ಧಾರ ರಾಜನ ಸೈನಿಕ ಕಮಾಂಡರುಗಳು ಮೊಹಮದ್ ಬಿನ್ ಖಾಸಿಂ ಕಡೆಯ ಏಜೆಂಟರುಗಳು ಕೊಟ್ಟ ಲಂಚವನ್ನು ಸ್ವೀಕರಿಸಿ ರಾಜನ ಪರವಾಗಿ ಯುದ್ಧ ಮಾಡದೆ ಹೋದ ಉದಾಹರಣೆ ನನ್ನ ಮುಂದೆ ಇದೆ. ಭಾರತದ ಮೇಲೆ ಯುದ್ಧ ಮಾಡಲು ಮೊಹಮದ್ ಗೋರಿಯನ್ನು ಭಾರತೀಯನೇ ಆಗಿದ್ದ ಜೈಚಂದರ್ ಎಂಬುವವನು ಸ್ವಾಗತಿಸಿದ್ದು, ಮತ್ತು ಪೃಥ್ವಿ ರಾಜನ ವಿರುದ್ಧ ಯುದ್ಧ ಮಾಡುವಂತೆ ಪ್ರೇರೇಪಿಸಿದ್ದು ಮತ್ತು ಆ ಯುದ್ಧದಲ್ಲಿ ತಾನು ಹಾಗೂ ಸೋಲಂಕಿಯ ರಾಜರುಗಳು ಸಹಾಯ ಮಾಡುವುದಾಗಿ ಹೇಳಿದ ಅಂತಹ ಉದಾಹರಣೆಗಳು ನನ್ನ ಮುಂದೆ ಇವೆ. ಶಿವಾಜಿ ಮಹಾರಾಜನು ಹಿಂದೂಗಳ ವಿಮೋಚನೆಗಾಗಿ ಯುದ್ಧ ಮಾಡುತ್ತಿದ್ದಾಗ, ಇತರೆ ಮರಾಠ ರಾಜರುಗಳು ಮತ್ತು ರಜಪೂತ್ ರಾಜರುಗಳು ಮೊಘಲ್ ಚಕ್ರವರ್ತಿಗಳ ಪರವಾಗಿ ಯುದ್ಧ ಮಾಡುತ್ತಿದ್ದರು. ಬ್ರಿಟಿಷರು, ಸಿಖ್ ರಾಜರುಗಳ ಆಡಳಿತವನ್ನು ಧ್ವಂಸ ಮಾಡಬೇಕೆಂದು ಪ್ರಯತ್ನಿಸುತ್ತಿದ್ದಾಗ, ಸಿಖ್ ರಾಜರುಗಳ ಸೇನೆಯ ಮುಖ್ಯ ಕಮಾಂಡರ್ ಆದ ಗುಲಾಬ್ ಸಿಂಗನು ಪ್ರೇಕ್ಷಕನಂತೆ ಮೌನವಹಿಸಿ ಕುಳಿತಿದ್ದನು. ಅವನು ಸಿಖ್ ಸಾಮ್ರಾಜ್ಯದ ರಕ್ಷಣೆಗಾಗಿ ಸಹಾಯ ಕಿಂಚಿತ್ತೂ ಮಾಡಲಿಲ್ಲ. 1857ರಲ್ಲಿ ಭಾರತದಾದ್ಯಂತ, ಬ್ರಿಟಿಷರ ವಿರುದ್ಧ, ಸ್ವಾತಂತ್ರ್ಯಕ್ಕಾಗಿ ಯುದ್ಧವನ್ನು ಘೋಷಿಸಿದಾಗ, ಸಿಖ್ ಸಮುದಾಯ ಆ ಘಟನೆಯನ್ನು ಕೇವಲ ಪ್ರೇಕ್ಷಕರಂತೆ ನಿಂತು ನೋಡಿದ ಉದಾಹರಣೆ ನನ್ನ ಮುಂದೆ ಇದೆ.

ಇತಿಹಾಸ ಮರುಕಳಿಸುತ್ತದೆಯೇ? ಈ ವಿಷಯವೇ ನನ್ನ ಕಳವಳಕ್ಕೆ ಮುಖ್ಯ ಕಾರಣವಾಗಿದೆ. ನಮ್ಮ ಹಿಂದಿನ ವೈರಿಗಳಾದ ಜಾತಿ - ಪಂಗಡಗಳು ಜೊತೆಗೆ ಇನ್ನು ಮುಂದೆ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಪಂಗಡಗಳು ಸೇರಿಕೊಳ್ಳಲಿವೆ. ಭಾರತೀಯರು ತಮ್ಮ ಜಾತಿ, ಪಂಗಡಗಳನ್ನು ಬದಿಗೊತ್ತಿ ರಾಷ್ಟ್ರ ಮುಖ್ಯ ಎನ್ನುವರೋ, ಅಥವಾ ರಾಷ್ಟ್ರವನ್ನು ಬದಿಗೊತ್ತಿ ಜಾತಿ ಪಂಗಡಗಳು ಮುಖ್ಯ ಎನ್ನುವರೋ, ನನಗೆ ಗೊತ್ತಿಲ್ಲ. ಆದರೆ ಇಷ್ಟಂತೂ ಸತ್ಯ. ದೇಶದಲ್ಲಿನ ರಾಜಕೀಯ ಪಕ್ಷಗಳು ಜಾತಿ ಪಂಗಡಗಳನ್ನೇ ಪ್ರಧಾನವಾಗಿ ಮಾಡಿಕೊಂಡರೆ ದೇಶದ ಸ್ವಾತಂತ್ರ್ಯಕ್ಕೆ ಗಂಡಾಂತರ ಒದಗುತ್ತದೆ ಮತ್ತು ನಮ್ಮ ಸ್ವಾತಂತ್ರ್ಯವನ್ನು

ಎರಡನೆಯ ಬಾರಿಗೆ ಮತ್ತು ಶಾಶ್ವತವಾಗಿ ಕಳೆದುಕೊಳ್ಳುವ ಪ್ರಸಂಗ ಒದಗಬಹುದು. ಇಂತಹ ಸಂಭಾವ ಘಟನೆಯ ವಿರುದ್ಧ ನಾವು ದೃಢಸಂಕಲ್ಪದಿಂದ ಎಚ್ಚರವಹಿಸಬೇಕು. ನಮ್ಮ ಕಟ್ಟ ಕಡೆಯ ರಕ್ತದ ತೊಟ್ಟನ್ನು ಹರಿಸಿಯಾದರೂ, ದೇಶದ ಸ್ವಾತಂತ್ರ್ಯವನ್ನು ರಕ್ಷಿಸುತ್ತೇವೆ, ಎಂದು ನಾವು ಪ್ರತಿಜ್ಞೆಯನ್ನು ಕೈಗೊಳ್ಳಬೇಕಿದೆ.

26ನೇ ಜನವರಿ 1950ರಂದು ಭಾರತವು ಸ್ವತಂತ್ರ ಗಣರಾಜ್ಯವಾಗಲಿದೆ. ಅಂದರೆ ಅದರ ಅರ್ಥ, ಆ ದಿನದಿಂದ ಭಾರತವು ತನ್ನ ಜನತೆಯಿಂದ, ತನ್ನ ಜನರಿಗಾಗಿ, ತನ್ನ ಜನರಿಗೋಸ್ಕರ ಸರ್ಕಾರವನ್ನು ರೂಪಿಸಿಕೊಳ್ಳಲಿದೆ. ಇದೇ ವಿಷಯ ಮತ್ತೊಮ್ಮೆ ನನ್ನ ಮನಸ್ಸಿಗೆ ಬರುತ್ತಿದೆ. ಸಂವಿಧಾನವು ತನ್ನ ಪ್ರಜಾಸತ್ತಾತ್ಮಕ ಲಕ್ಷಣಗಳನ್ನು ಉಳಿಸಿಕೊಳ್ಳುತ್ತದೆಯೇ? ಅದು ಉಳಿಸಿಕೊಳ್ಳುತ್ತದೆಯೇ ಅಥವಾ ಮತ್ತೊಮ್ಮೆ ಕಳೆದುಕೊಳ್ಳುತ್ತದೆಯೇ? ಈ ಎರಡನೇಯ ವಿಚಾರವು ನನ್ನ ಮೊದಲನೆಯ ಪ್ರಶ್ನೆಯಷ್ಟೇ ನನಗೆ ಕಳವಳಕಾರಿಯಾಗಿದೆ.

ಭಾರತಕ್ಕೆ 'ಪ್ರಜಾಪ್ರಭುತ್ವ' ಎಂದರೆ ಏನು ಎಂಬುದು ತಿಳಿದಿರಲಿಲ್ಲ ಎಂದು ಹೇಳಲು ಬರುವುದಿಲ್ಲ, ಭಾರತವು ಒಂದಾನೊಂದು ಕಾಲಕ್ಕೆ ಅನೇಕ ಗಣರಾಜ್ಯಗಳನ್ನು ಹಾಗೂ ಅನೇಕ ರಾಜ ಮಹಾರಾಜರುಗಳನ್ನು ಹೊಂದಿತ್ತು. ಇಂತಹ ಮಹಾರಾಜರುಗಳಲ್ಲಿ ಕೆಲವರು ಚುನಾಯಿತರಾಗುತ್ತಿದ್ದರು. ಅಥವಾ ಅವರು ಸೀಮಿತ ಅಧಿಕಾರ ಹೊಂದಿರುತ್ತಿದ್ದರು. ಆದರೆ ಅವರು ಎಂದೂ ನಿರಂಕುಶ ಪ್ರಭುಗಳಾಗಿರಲಿಲ್ಲ, ಭಾರತಕ್ಕೆ ಸಂಸತ್ತುಗಳು ಅಥವಾ ಸಂಸತ್ತುಗಳಲ್ಲಿ ನಡೆಯಬೇಕಾದ ವಿಧಿ ವಿಧಾನಗಳು ತಿಳಿದಿರಲಿಲ್ಲ ಎಂದಲ್ಲ, ಭೌದ್ಧ ಭಿಕ್ಷು ಸಂಘಗಳ ರಚನೆಯನ್ನು ಅಧ್ಯಾಯನ ಮಾಡಿದರೆ, ನಮ್ಮಲ್ಲಿ ಸಂಘಗಳಿಗೆ ಪರ್ಯಾಯವಾಗಿ ಸಂಸತ್ತುಗಳು ಇದ್ದವು ಮತ್ತು ಅಂತಹ ಸಂಘಗಳು ಎಂದರೆ ಸಂಸತ್ತುಗಳೇ ಅಲ್ಲದೆ ಬೇರೆ ಏನೂ ಅಲ್ಲ ಎಂಬುದು ವೇದ್ಯವಾಗುತ್ತದೆ. ಅಂತಹ ಸಂಘಗಳು ಆಧುನಿಕ ಯುಗದಲ್ಲಿನ ಸಂಸತ್ತುಗಳು ಯಾವ ವಿಧಿ ವಿಧಾನಗಳನ್ನು ಅನುಸರಿಸಿಕೊಂಡು ರಚನೆಯಾಗಿವೆಯೋ ಅಂತಹ ವಿಧಿ ವಿಧಾನಗಳ ಮೇಲೆ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದವು. ಅವುಗಳಲ್ಲಿ ಆಸನಗಳ ಏರ್ಪಾಡು, ನಿರ್ಣಯಗಳನ್ನು ಕೈಗೊಳ್ಳಲು ಇದ್ದ ನಿಯಮಗಳು, ನಿರ್ಣಯಗಳು, ಕೋರಮ್, ಸಚೇತಕರು, ಮತಗಳ ಏಣಿಕೆ, ಮತ ಚೀಟಿಗಳ ಮೂಲಕ ಮತದಾನ, ಛೀಮಾರಿ ನಿರ್ಣಯ, ನಿಯಂತ್ರಿಸುವ ವಿಧಾನ, ಪೂರ್ವ ನ್ಯಾಯ ಇತ್ಯಾದಿ ಇದ್ದುದನ್ನು ನೋಡಬಹುದು. ಬುದ್ಧನು ಸಂಘಗಳ ಸಭೆಗಳ ನಿರ್ವಹಣೆಗಾಗಿ ಅನುಸರಿಸುತ್ತಿದ್ದ ಈ ಸಂಸದೀಯ ವಿಧಿ ವಿಧಾನಗಳನ್ನು, ತನ್ನ ಕಾಲಕ್ಕೆ ತನ್ನ

ದೇಶದಲ್ಲಿದ್ದ ರಾಜಕೀಯ ಸಭೆಗಳಿಂದ ಅಥವಾ ರಾಜಕೀಯ ಪರಿಷತ್‌ಗಳಿಂದ, ತೆಗೆದುಕೊಂಡಿರಬೇಕೆಂದು ಕಂಡು ಬರುತ್ತದೆ.

ಈ ಪ್ರಜಾಪ್ರಭುತ್ವ ಪದ್ಧತಿಯನ್ನು ಭಾರತವು ಕಳೆದುಕೊಂಡಿತು. ಅದು ಎರಡನೇ ಬಾರಿಗೆ ಕಳೆದುಕೊಳ್ಳಲಿದೆಯೇ? ನನಗೆ ಗೊತ್ತಿಲ್ಲ. ಆದರೆ ಭಾರತದಂತಹ ದೇಶದಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ಬಹಳ ಕಾಲದಿಂದ ಬಳಕೆಯಲ್ಲಿ ಇಲ್ಲದಿದ್ದ ಕಾರಣ ಈ ಪ್ರಜಾಪ್ರಭುತ್ವ ವ್ಯವಸ್ಥೆ ಹೊಸದೆನಿಸಬಹುದು ಮತ್ತು ಪ್ರಜಾಪ್ರಭುತ್ವ ಮರೆಯಾಗಿ ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುವ ಅಪಾಯವುಂಟು. ಈಗ ಹೊಸದಾಗಿ ಜನ್ಮ ತಳೆದ ಪ್ರಜಾಪ್ರಭುತ್ವ ತನ್ನ ಸ್ವರೂಪವನ್ನು ಉಳಿಸಿಕೊಳ್ಳದೇ ಅದರ ಜಾಗದಲ್ಲಿ ಸರ್ವಾಧಿಕಾರಕ್ಕೆ ಅವಕಾಶ ಮಾಡಿಕೊಡುವ ಸಂಭವವುಂಟು. ರಾಜಕೀಯದಲ್ಲಿ ಇಂತಹ ಭೂಕಂಪವೇನಾದರೂ ನಡೆದಿದ್ದೆಯಾದರೆ ನನ್ನ ಎರಡನೇಯ ಅನುಮಾನವು ವಾಸ್ತವವಾಗುವ ಸಾಧ್ಯತೆಯುಂಟು.

ಪ್ರಜಾಪ್ರಭುತ್ವವನ್ನು ಅದರ ಸ್ವರೂಪವನ್ನಷ್ಟೇ ಅಲ್ಲದೆ, ಅದರ ತತ್ವವನ್ನು ಉಳಿಸಿಕೊಳ್ಳಬೇಕಾದರೆ ನಾನು ಏನು ಮಾಡಬೇಕು? ನನ್ನ ಅಭಿಪ್ರಾಯದ ಪ್ರಕಾರ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಂವಿಧಾನದ ವಿಧಾನಗಳನ್ನೇ ಅನುಸರಿಸಬೇಕಾಗುತ್ತದೆ. ಅಂದರೆ ನಾವು ಕ್ರಾಂತಿಯ ರಕ್ತಪಾತ ಮಾರ್ಗವನ್ನು ಕೈಬಿಡಬೇಕಾಗುತ್ತದೆ. ಅಂದರೆ ನಾವು ಶಿಸ್ತುಭಂಗ, ಅಸಹಕಾರ ಮತ್ತು ಸತ್ಯಾಗ್ರಹ ಈ ಮಾರ್ಗಗಳನ್ನು ಬಿಡಬೇಕಾಗುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳ ಈಡೇರಿಕೆಗೆ ಸಂವಿಧಾನದ ಸಮ್ಮತ ಮಾರ್ಗಗಳಿಗೆ ಅನುಸರಿಸಲು ಅವಕಾಶವಿಲ್ಲದಿದ್ದ ಸಂದರ್ಭದಲ್ಲಿ ಸಂವಿಧಾನ ಬಾಹಿರವಾದ ಮಾರ್ಗಗಳನ್ನು ಅನುಸರಿಸುವುದು ಬಹಳಷ್ಟು ಸಮರ್ಥನೀಯವಾಗಿತ್ತು. ಆದರೆ ಎಲ್ಲಿ ಸಂವಿಧಾನದ ಸಮ್ಮತ ಮಾರ್ಗಗಳಿಗೆ ಅವಕಾಶವಿರುತ್ತದೋ, ಅಲ್ಲಿ ಸಂವಿಧಾನ ಬಾಹಿರವಾದ ಮಾರ್ಗಗಳಿಗೆ ಸಮರ್ಥನೆ ಇರುವುದಿಲ್ಲ. ಈ ಮಾರ್ಗಗಳು ಅರಾಜಕತೆಯ ಧರ್ಮಗ್ರಂಥದ ನೀತಿ ಸೂತ್ರಗಳಾಗಿದ್ದು, ಇವುಗಳನ್ನು ಎಷ್ಟು ಬೇಗ ತೊರೆಯುತ್ತೇವೆಯೋ, ರಾಷ್ಟ್ರಕ್ಕೆ ಅಷ್ಟೂ ಕ್ಷೇಮ.

ಎರಡನೆಯದಾಗಿ ಜಾನ್‌ಸ್ಟೋರಟ್ ಮಿಲ್ ಪ್ರಜಾಪ್ರಭುತ್ವವನ್ನು ಕುರಿತು ಹೇಳಿದ್ದ ಎಚ್ಚರಿಕೆ ಮಾತನ್ನು ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಇರುವವರೆಲ್ಲರೂ ಗಮನಿಸಬೇಕಾಗುತ್ತದೆ. ಅಂದರೆ "ಎಂತಹ ಮಹಾನ್ ವ್ಯಕ್ತಿಯೇ ಆಗಿದ್ದರೂ ಅವನ ಪಾದದಡಿಯಲ್ಲಿ ತಮ್ಮ ಸ್ವಾತಂತ್ರ್ಯವನ್ನು ಎಸೆಯಬಾರದು. ಅಥವಾ

ತಮ್ಮ ಯಾವುದೇ ಸಂಸ್ಥೆಗಳನ್ನು ಬುಡಮೇಲು ಮಾಡಲು ಅನುಕೂಲವಾಗುವ ಹಾಗೆ, ಅವರಿಗೆ ಅಧಿಕಾರವನ್ನು ಕೊಡಲೂ ಬಾರದು" ದೇಶಕ್ಕೆ ಜೀವಮಾನವೆಲ್ಲಾ ಸೇವೆ ಸಲ್ಲಿಸಿದ ಯಾವುದೇ ಮಹಾನ್ ವ್ಯಕ್ತಿಗೆ ಋಣಿಯಾಗಿರುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಋಣಿಯಾಗಿರುವುದಕ್ಕೂ ಕೆಲವು ಮಿತಿಗಳಿರುತ್ತವೆ. ಐರಿಷ್ ರಾಷ್ಟ್ರ ಪ್ರೇಮಿಯಾದ 'ಡೇನೀಲ್ ಓ ಕನ್ನೋಲ್" ಎಂಬುವವನು ಹೇಳಿದಂತೆ, ಯಾವೊಬ್ಬ ವ್ಯಕ್ತಿಯು ತನ್ನ ಗೌರವವನ್ನು ಕಳೆದುಕೊಂಡು ಮತ್ತೊಬ್ಬನಿಗೆ ಋಣಿಯಾಗಿರಬಾರದು. ಯಾವೊಬ್ಬ ಮಹಿಳೆಯು ತನ್ನ ಪಾವಿತ್ರ್ಯತೆಯನ್ನು ಬಲಿಗೊಟ್ಟು ಕೃತಜ್ಞತೆಯನ್ನು ತೋರಿಸಬೇಕಿಲ್ಲ. ಅದೇ ರೀತಿಯಲ್ಲಿ ಯಾವ ರಾಷ್ಟ್ರವು ತನ್ನ ಸ್ವಾತಂತ್ರ್ಯವನ್ನು ಬಲಿಗೊಟ್ಟು ಕೃತಜ್ಞವಾಗಿರಬೇಕಿಲ್ಲ. ಈ ಎಚ್ಚರಿಕೆಯ ಮಾತು, ಇತರೆ ಯಾವುದೇ ದೇಶಕ್ಕಿಂತ ಭಾರತದ ಸಂದರ್ಭದಲ್ಲಿ ಹೆಚ್ಚು ಅಗತ್ಯವಾಗಿರುತ್ತದೆ. ಭಾರತದಲ್ಲಿ ಭಕ್ತಿಪಂಥ ಅಥವಾ ವ್ಯಕ್ತಿ ಪೂಜೆ ರಾಜಕೀಯದಲ್ಲಿ ಮಹತ್ವದ ಪಾತ್ರಗಳನ್ನು ವಹಿಸುತ್ತಿವೆ. ಈ ವಿಷಯದಲ್ಲಿ ಪ್ರಪಂಚದ ಯಾವುದೇ ರಾಷ್ಟ್ರವು ಇದಕ್ಕೆ ಸರಿಸಾಟಿಯಾಗಲಾರದು. ಧಾರ್ಮಿಕವಾಗಿ ಭಕ್ತಿಯು ಆತ್ಮದ ಮೋಕ್ಷಕ್ಕೆ ದಾರಿ ಮಾಡಿಕೊಡಬಹುದು. ಆದರೆ ರಾಜಕೀಯದಲ್ಲಿನ ಭಕ್ತಿ ಅಥವಾ ವ್ಯಕ್ತಿ ಪೂಜೆಯು, ಖಂಡಿತವಾಗಿಯೂ, ಅವನತಿಗೆ ಮತ್ತು ನಿರಂಕುಶ ಪ್ರಭುತ್ವದ ಉದಯಕ್ಕೆ, ದಾರಿ ಮಾಡಿ ಕೊಡುತ್ತದೆ.

ಮೂರನೆಯದಾಗಿ ನಾವು ಮಾಡಬೇಕಾದುದು ಎಂದರೆ, ಕೇವಲ ರಾಜಕೀಯ ಪ್ರಜಾಪ್ರಭುತ್ವದಿಂದ ತೃಪ್ತಿ ಹೊಂದಿ ಸುಮ್ಮನಾಗಬಾರದು. ನಾವು ನಮಗೆ ದೊರೆತ ಈ ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿಯೂ ಮಾಡಬೇಕು. ರಾಜಕೀಯ ಪ್ರಜಾಪ್ರಭುತ್ವಕ್ಕೆ ಸಾಮಾಜಿಕ ಪ್ರಜಾಪ್ರಭುತ್ವವು ಬುನಾದಿಯಾಗಿರದಿದ್ದರೆ ರಾಜಕೀಯ ಪ್ರಭುತ್ವಕ್ಕೆ ಉಳಿಗಾಲವಿಲ್ಲ. ಹಾಗಾದರೆ, ಸಾಮಾಜಿಕ ಪ್ರಜಾಪ್ರಭುತ್ವ ಎಂದರೆ ಏನು? ಸಾಮಾಜಿಕ ಪ್ರಜಾಪ್ರಭುತ್ವ ಎಂದರೆ ಅದೊಂದು ಜೀವನ ಪದ್ಧತಿ, ಸ್ವಾತಂತ್ರ್ಯತೆ, ಸಮಾನತೆ, ಭ್ರಾತೃತ್ವ, ತತ್ವಗಳು ಎಂದು ಹೇಳುವ ಪದ್ಧತಿ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಆದ ಈ ತ್ರಿವಳಿಗಳಲ್ಲಿ ಒಂದೊಂದನ್ನು ಪ್ರತ್ಯೇಕವೆಂದು ಪರಿಗಣಿಸುವಂತಿಲ್ಲ. ಅವು ಒಂದಕ್ಕೊಂದು ಪೂರಕವಾಗಿರುತ್ತವೆ. ಅವುಗಳನ್ನು ಪ್ರತ್ಯೇಕಿಸುವುದೆಂದರೆ ಪ್ರಜಾಪ್ರಭುತ್ವದ ಉದ್ದೇಶವು ವಿಫಲವಾಗುತ್ತದೆ. ಸ್ವಾತಂತ್ರ್ಯವನ್ನು, ಸಮಾನತೆಯಿಂದ ಪ್ರತ್ಯೇಕಿಸಲು ಬರುವುದಿಲ್ಲ. ಸಮಾನತೆಯನ್ನು ಸ್ವಾತಂತ್ರ್ಯದಿಂದ ಪ್ರತ್ಯೇಕಿಸಲು ಬರುವುದಿಲ್ಲ. ಹಾಗೆಯೇ ಸ್ವಾತಂತ್ರ್ಯ ಮತ್ತು

ಸಮಾನತೆಯನ್ನು, ಭ್ರಾತೃತ್ವದಿಂದ ಪ್ರತ್ಯೇಕಿಸಲೂ ಬರುವುದಿಲ್ಲ. ಯಾವ ಸಮಾಜದಲ್ಲಿ ಸಮಾನತೆ ಇರುವುದಿಲ್ಲವೋ, ಅಲ್ಲಿ ಸ್ವಾತಂತ್ರ್ಯ ಎಂಬುವುದು ಬಹು ಸಂಖ್ಯಾತರ ಮೇಲೆ ಅಲ್ಪ ಸಂಖ್ಯಾತರು ನಡೆಸಬಹುದಾದ ಅಧಿಕಾರವಾಗುತ್ತದೆ. ಸ್ವಾತಂತ್ರತೆ ಇಲ್ಲದ ಸಮಾನತೆಯು ವ್ಯಕ್ತಿಗತ ಸ್ವಾತಂತ್ರ್ಯವನ್ನು ನಾಶಗೊಳಿಸುತ್ತದೆ. ಭ್ರಾತೃತ್ವವಿಲ್ಲದೆ, ಸ್ವಾತಂತ್ರ್ಯ ಮತ್ತು ಸಮಾನತೆಗಳು ಸುಸೂತ್ರವಾಗಿ ನಡೆಯುವಂತಿಲ್ಲ. ಇವುಗಳನ್ನು ಜಾರಿಗೆ ತರಲು ಬಲ ಪ್ರಯೋಗ ಅಗತ್ಯವಾದೀತು. ಭಾರತೀಯ ಸಮಾಜದಲ್ಲಿ ಈ ಎರಡೂ ಸಂಗತಿಗಳು ಸಂಪೂರ್ಣ ಅಭಾವವಿದೆ ಎಂಬ ವಾಸ್ತವವನ್ನು ನಾವು ಒಪ್ಪಿಕೊಳ್ಳಬೇಕು. ಅಂತಹ ಎರಡು ಸಂಗತಿಗಳಲ್ಲಿ ಸಮಾನತೆ ಎಂಬುದು ಒಂದು. ಸಾಮಾಜಿಕ ಸ್ಥರದ ಮಟ್ಟಿಗೆ ಹೇಳಬೇಕಾದರೆ, ಭಾರತದಲ್ಲಿ ಸಾಮಾಜಿಕ ವ್ಯವಸ್ಥೆ ಅಸಮಾನತೆಯ ಶ್ರೇಣಿಗಳ ಮೇಲೆ ನಿಂತಿದೆ. ಅಂದರೆ ಕೆಲವರು ಮೇಲು ಮತ್ತು ಕೆಲವರು ಕೀಳು ಎಂಬ ಅರ್ಥದಲ್ಲಿ. ಆರ್ಥಿಕ ಸ್ಥರದಲ್ಲಿ ಹೇಳಬೇಕೆಂದರೆ, ನಮ್ಮ ಸಮಾಜದಲ್ಲಿ ಹೆಚ್ಚಿನ ಜನ ಕಡು ಬಡತನದಲ್ಲಿದ್ದರೆ, ಕೆಲವರಲ್ಲಿ ಮಾತ್ರ ಶ್ರೀಮಂತಿಕೆ ತುಂಬಿದೆ. 26ನೇ ಜನವರಿ 1950ರಂದು ನಾವು ಇಂತಹ ಪರಸ್ಪರ ವೈರುಧ್ಯಗಳಿರುವ ಒಂದು ಹೊಸ ವ್ಯವಸ್ಥೆಗೆ ಪ್ರವೇಶಿಸುತ್ತಿದ್ದೇವೆ. ರಾಜಕೀಯ ಜೀವನದಲ್ಲಿ ನಾವು ಸಮಾನತೆಯನ್ನು ಹೊಂದಿದ್ದೇವೆ. ಆದರೆ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ನಾವು ಅಸಮಾನತೆಯನ್ನು ಹೊಂದಲಿದ್ದೇವೆ. ರಾಜಕೀಯದಲ್ಲಿ ಒಬ್ಬ ವ್ಯಕ್ತಿಗೆ ಒಂದು ಮತ ಮತ್ತು ಒಂದು ಮತಕ್ಕೆ ಒಂದು ಮೌಲ್ಯ ಎಂಬ ತತ್ವವನ್ನು ಸ್ವೀಕರಿಸಿದ್ದೇವೆ. ಆದರೆ ಸಾಮಾಜಿಸ ಮತ್ತು ಆರ್ಥಿಕ ಜೀವನದಲ್ಲಿ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಿಂದಾಗಿ ಪ್ರತಿಯೊಬ್ಬ ವ್ಯಕ್ತಿಗೂ ಒಂದು ಮತ ಒಂದು ಮೌಲ್ಯ ಎಂಬ ತತ್ವವನ್ನು ನಿರಾಕರಿಸಿದ್ದೇವೆ. ಸಮಾಜದಲ್ಲಿ ಇಂತಹ ವೈರುಧ್ಯಗಳನ್ನು ಒಳಗೊಂಡ ಜೀವನವನ್ನು ನಾವು ಎಲ್ಲಿಯವರೆಗೂ ಮುಂದುವರೆಸಲು ಸಾಧ್ಯ? ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಎಲ್ಲಿಯವರೆಗೂ ನಾವು ಸಮಾನತೆಯನ್ನು ನಿರಾಕರಿಸಲು ಸಾಧ್ಯ? ನಾವು ಈ ನಿರಾಕರಣೆಯನ್ನು ಹೀಗೆಯೇ ಮುಂದುವರಿಸಿದ್ದಾದರೆ ನಾವು ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ಒಡ್ಡಿದಂತಾಗುತ್ತದೆ. ನಾವು ಈ ವೈರುಧ್ಯಗಳನ್ನು ಆದಷ್ಟು ಬೇಗ ನಿವಾರಿಸಬೇಕಿರುತ್ತದೆ. ಇಲ್ಲವಾದರೆ ಯಾರು ಅಸಮಾನತೆಯಿಂದ ನರಳುತ್ತಿರುವರೋ ಅವರು, ಯಾವ ರಾಜಕೀಯ ಪ್ರಜಾಪ್ರಭುತ್ವಕ್ಕಾಗಿ ಈ ಸಂವಿಧಾನ ಸಭೆ ಪ್ರಯತ್ನಿಸಿತೋ, ಆ ರಾಜಕೀಯ ಪ್ರಜಾಪ್ರಭುತ್ವದ ಕಟ್ಟಡವನ್ನೇ ಧ್ವಂಸಗೊಳಿಸುತ್ತಾರೆ.

ಭ್ರಾತೃತ್ವದ ತತ್ವಕ್ಕೆ ಮನ್ನಣೆ ಇಲ್ಲದಿರುವುದು ಎರಡನೆಯ ಸಂಗತಿ. ಭ್ರಾತೃತ್ವ ಎಂದರೇನು? ಭ್ರಾತೃತ್ವ ಎಂದರೆ ಭಾರತೀಯರೆಲ್ಲರೂ ಸೋದರರು ಎಂಬ ಭಾವನೆ, ಭಾರತೀಯರೆಲ್ಲರೂ ಒಂದು ಎಂಬ ಭಾವನೆ. ಈ ತತ್ವವೇ ಸಾಮಾಜಿಕ ಜೀವನಕ್ಕೆ ಒಂದು ಏಕತೆ ಮತ್ತು ಶಕ್ತಿಯನ್ನು ಕೊಡಬಲ್ಲದು. ಇದನ್ನು ಸಾಧಿಸುವುದು ಬಹಳ ಕಷ್ಟ. ಎಷ್ಟು ಕಷ್ಟವೆಂದರೆ, ಅಮೇರಿಕಾ ಸಂಯುಕ್ತ ಸಂಸ್ಥಾನವನ್ನು ಕುರಿತ ಅಮೇರಿಕನ್ ಕಾಮನ್‌ವೆಲ್ತ್, ಎಂಬ ಹೆಸರಿನ ತನ್ನ ಪುಸ್ತಕದಲ್ಲಿ ಜೇಮ್ಸ್ ಬ್ರೈಸ್ ಎಂಬುವವನು ಒಂದು ಕತೆಯನ್ನು ನಿರೂಪಿಸಿರುತ್ತಾನೆ. ಆ ಕತೆ - ನನಗೆ ನೆನಪಿರುವ ಹಾಗೆ ಬ್ರೈಸ್‌ನ ಪದಗಳಲ್ಲಿಯೇ ಹೇಳುವುದಾದರೆ ಅದು ಈ ಕೆಳಕಂಡಂತೆ ಇದೆ.

"ಕೆಲ ವರ್ಷಗಳ ಹಿಂದೆ ಅಮೇರಿಕಾ ಪ್ರಾಟೆಸ್ಟಂಟ್ ಎಪಿಸ್ಕಾಪಲ್ ಚರ್ಚ್‌ನವರು, ತಮ್ಮ ತ್ರೈವಾರ್ಷಿಕ ಸಮ್ಮೇಳನದಲ್ಲಿ, ತಮ್ಮ ಪ್ರಾರ್ಥನಾ ಪುಸ್ತಕವನ್ನು ಪರಿಷ್ಕರಿಸುವ ಕಾರ್ಯದಲ್ಲಿ ತೊಡಗಿದ್ದರು. ಇಡೀ ಜನತೆಯು ಅಪೇಕ್ಷಿಸುವಂತಹ, ಸಂಗ್ರಹ ರೂಪದ ಪ್ರಾರ್ಥನೆಯನ್ನು ತರುವುದು ಅವಶ್ಯವೆಂದು ಭಾವಿಸಿದರು. ಮತ್ತು ನ್ಯೂ ಇಂಗ್ಲೆಂಡ್‌ನ ಪ್ರಸಿದ್ಧ ಪಾದ್ರಿಯೊಬ್ಬರು "ಓ ಪ್ರಭುವೆ, ನಮ್ಮ ರಾಷ್ಟ್ರದ ಮೇಲೆ ಕರುಣೆ ತೋರು" ಎಂಬ ಪ್ರಾರ್ಥನೆಯನ್ನು ಸೂಚಿಸಿದರು. ಒಂದು ಮಧ್ಯಾಹ್ನ ಆ ಕೂಡಲೇ ಅದನ್ನು ಅಂಗೀಕರಿಸಲಾಯಿತು. ಆದರೆ ಮರುದಿನ ಅದನ್ನು ಪುನಃ ಪರಿಶೀಲಿಸುವ ಸಂದರ್ಭದಲ್ಲಿ ಭಕ್ತಾದಿಗಳ ಪೈಕಿ ಅನೇಕರು 'ರಾಷ್ಟ್ರ' ಎಂಬ ಪದವು 'ರಾಷ್ಟ್ರೀಯ ಐಕ್ಯತೆ'ಗೆ ನಿರ್ದಿಷ್ಟ ಮನ್ನಣೆ ಕೊಡತಕ್ಕ ಪದವೆಂದು ಅದಕ್ಕೆ ಆಕ್ಷೇಪವೆತ್ತಿದರು. ಪರಿಣಾಮವಾಗಿ ಅದನ್ನು ಕೈಬಿಡಲಾಯಿತು ಮತ್ತು ಆ ಪ್ರಾರ್ಥನೆಗೆ ಬದಲಾಗಿ "ಪ್ರಭುವೇ, ಈ ಸಂಯುಕ್ತ ಸಂಸ್ಥಾನಗಳ ಮೇಲೆ ಕರುಣೆದೋರು" ಎಂಬ ಪದ ಸಮುಚ್ಚಯವನ್ನು ಒಳಗೊಂಡ ಪ್ರಾರ್ಥನೆಯನ್ನು ಅಂಗೀಕರಿಸಲಾಯಿತು.

ಈ ಮೇಲ್ಕಂಡ ಘಟನೆ ನಡೆದಾಗ ಯು.ಎಸ್.ಎ. (ಅಮೇರಿಕಾ) ದ ಜನತೆಯಲ್ಲಿ ಒಗ್ಗಟ್ಟು ಎಂಬುವುದು ಇರಲಿಲ್ಲ. ಅವರು ತಾವು ಒಂದು ರಾಷ್ಟ್ರ ಎಂದು ಭಾವಿಸಿರಲಿಲ್ಲ. ಯು.ಎಸ್.ಎ. ನ ಜನತೆಯೇ ತಾವು ಒಂದು ರಾಷ್ಟ್ರ ಎಂದು ಭಾವಿಸಿರಲಿಲ್ಲವೆಂದರೆ, ಭಾರತೀಯರಿಗೆ ತಾವು ಒಂದು ರಾಷ್ಟ್ರದ ಜನತೆ ಎಂದು ಭಾವಿಸಲು ಎಷ್ಟೊಂದು ಕಷ್ಟವಾಗಿರುತ್ತದೆ? ಎಂಬುವುದನ್ನು ಅರ್ಥ ಮಾಡಿಕೊಳ್ಳಿ. ರಾಜಕೀಯ ಪ್ರಜ್ಞೆ ಇದ್ದಂತಹ ಭಾರತೀಯರು ಒಂದು ಕಾಲಕ್ಕೆ

"ಭಾರತೀಯರಾದ ನಾವು" ಎಂದು ಹೇಳಲು ತೀವ್ರವಾಗಿ ವಿರೋಧಿಸುತ್ತಿದ್ದ ದಿನಗಳನ್ನು ನಾನು ನೆನಪು ಮಾಡಿಕೊಳ್ಳುತ್ತಿದ್ದೇನೆ. ಅವರು ಆ ಪದಗಳ ಬದಲಾಗಿ 'ಭಾರತ ರಾಷ್ಟ್ರ' ಸೂಕ್ತ ಎಂದು ಹೇಳುತ್ತಿದ್ದರು. ನಾವು ಒಂದು ರಾಷ್ಟ್ರದ ಜನತೆ ಎಂದು ಹೇಳುವಾಗ, ನಾವು ಒಂದು ದೊಡ್ಡ ಭ್ರಮಾ ಲೋಕವನ್ನು ಸೃಷ್ಟಿಸಿಕೊಳ್ಳುತ್ತಿದ್ದೇವೆಂದು ನಾನು ಭಾವಿಸುತ್ತೇನೆ. ಸಾವಿರಾರು ಜಾತಿಗಳ ಹೆಸರಿನಲ್ಲಿ ಪ್ರತ್ಯೇಕವಾಗಿರುವ ಜನತೆ ಒಂದು ರಾಷ್ಟ್ರದವರಾಗಿರಲು ಹೇಗೆ ಸಾಧ್ಯ? ನಾವು ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಒಂದು ರಾಷ್ಟ್ರವಾಗಿಲ್ಲ ಎಂಬುದನ್ನು ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತೇವೆಯೋ ಅಷ್ಟೂ ಒಳ್ಳೆಯದು. ಆಗ ಮಾತ್ರ ನಾವು ರಾಷ್ಟ್ರವಾಗುವ ಅಗತ್ಯತೆಯನ್ನು ಕಂಡು ಕೊಳ್ಳುತ್ತೇವೆ ಹಾಗೂ ಅಂತಹ ಒಂದು ಉದ್ದೇಶದ ಈಡೇರಿಕೆಗಾಗಿ ನಾವು ಮಾರ್ಗೋಪಾಯಗಳನ್ನು ಕಂಡು ಕೊಳ್ಳಲು ಗಂಭೀರವಾಗಿ ಯೋಚಿಸುತ್ತೇವೆ. ಈ ಗುರಿಯ ಈಡೇರಿಕೆಯು ಅಷ್ಟು ಸುಲಭದ್ದಾಗಿರುವುದಿಲ್ಲ. ಅಮೇರಿಕಾ ಸಂಸ್ಥಾನಕ್ಕಿಂತ ಭಾರತದಲ್ಲಿ ಅಸಂಖ್ಯಾತ ಜಾತಿಗಳು ಇವೆ. ಜಾತಿಗಳು ರಾಷ್ಟ್ರದ ಕಲ್ಪನೆಗೆ ವಿರೋಧವಾದವುಗಳು. ಮೊದಲನೆಯದಾಗಿ ಸಾಮಾಜಿಕ ಜೀವನದಲ್ಲಿ ಇವು ಪ್ರತ್ಯೇಕತೆಯನ್ನು ತರುತ್ತವೆ. ಇವು ರಾಷ್ಟ್ರ ವಿರೋಧಿಗಳೂ ಕೂಡ. ಯಾಕೆಂದರೆ ಜಾತಿ ಮತ್ತು ಜಾತಿಗಳ ನಡುವೆ ಅಸೂಯೆ ಮತ್ತು ದ್ವೇಷ ಭಾವನೆಗಳನ್ನು ಉಂಟು ಮಾಡುತ್ತವೆ. ನಾವು ವಾಸ್ತವವಾಗಿ ಒಂದು ರಾಷ್ಟ್ರವಾಗಬೇಕೆಂದು ಬಯಸುವುದಾದರೆ ಈ ಎಲ್ಲಾ ತೊಂದರೆಗಳನ್ನು ನಿವಾರಿಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ, ಒಂದು ರಾಷ್ಟ್ರ ಎಂಬುವುದು ಅಸ್ತಿತ್ವದಲ್ಲಿದ್ದರೆ, ಭ್ರಾತೃತ್ವವು ವಾಸ್ತವವಾಗುತ್ತದೆ. ಭ್ರಾತೃತ್ವವಿಲ್ಲದೆ ಸಮಾನತೆ ಮತ್ತು ಸ್ವಾತಂತ್ರ್ಯ ಎಂಬುವುದು ಕೇವಲ ಬಣ್ಣ ಬಳಿದಂತೆ, ಬೇರೇನೂ ಅಲ್ಲ.

ನಮ್ಮ ಮುಂದಿರುವ ಕರ್ತವ್ಯಗಳ ಸಂಬಂಧದಲ್ಲಿ ಇವು ನನ್ನ ಚಿಂತನೆಗಳಾಗಿರುತ್ತವೆ ಅಷ್ಟೇ. ಕೆಲವರಿಗೆ, ಇವಾವು ಸಂತೋಷವನ್ನು ಉಂಟು ಮಾಡಿರಲಿಕ್ಕಿಲ್ಲ. ಆದರೆ ನಮ್ಮ ದೇಶದಲ್ಲಿ ರಾಜಕೀಯ ಅಧಿಕಾರ ಬಹಳ ಕಾಲದಿಂದ ಕೆಲವರ ಸ್ವತ್ತಾಗಿದ್ದು ಬಹು ಸಂಖ್ಯಾತರು ಪ್ರಾಣಿಗಳಂತೆ ಹಾಗೂ ಪಶುಗಳಂತೆ ಜೀವಿಸುತ್ತಿದ್ದಾರೆ ಎಂಬುವುದನ್ನು ಒತ್ತಿ ಹೇಳಬೇಕಿಲ್ಲ. ಅಧಿಕಾರವು ಕೆಲವೆ ಕೆಲವರ ಸ್ವತ್ತಾಗಿರುವ ಕಾರಣ ಬಹು ಸಂಖ್ಯಾತರಿಗೆ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವ ಅವಕಾಶವು ಇಲ್ಲದಂತಾಗಿದೆ. ಇಷ್ಟೇ ಅಲ್ಲದೆ ಜೀವನದ

ಮಹತ್ವದ ಬಗೆಗಿನ ಅವರ ಆಸಕ್ತಿಯು ಉಡುಗಿ ಹೋಗುವಂತಾಗಿದೆ. ತುಳಿತಕ್ಕೆ ಒಳಗಾದ ಈ ಜನರು ಇವರ ಆಡಳಿತಕ್ಕೆ ಬೇಸತ್ತಿದ್ದಾರೆ ಮತ್ತು ತಮ್ಮನ್ನು ತಾವೇ ಆಳಿಕೊಳ್ಳುವ ತವಕದಲ್ಲಿದ್ದಾರೆ. ದಲಿತ ವರ್ಗಗಳಲ್ಲಿ ಆತ್ಮಾವಲೋಕನದ ಸಲುವಾಗಿ ಉಮ್ಮಳಿಸುತ್ತಿರುವ ಉತ್ಕಟವಾದ ಆಕಾಂಕ್ಷೆಯು ವರ್ಗ ಸಂಘರ್ಷದಲ್ಲಿ ಪರಿಣಾಮಿಸದಂತೆ ನಾವು ಎಚ್ಚರ ವಹಿಸಬೇಕಾಗುತ್ತದೆ. ಹಾಗೇನಾದರೂ ಆಗಿದ್ದೆ ಆದರೆ, ರಾಷ್ಟ್ರ ಇಬ್ಭಾಗವಾದಂತೆಯೇ. ಅಂತಹದೊಂದು ದಿನ ಬಂದಿದ್ದೇ ಆದರೆ ಅದು ಘೋರ ದುರಂತ ದಿನವಾಗುತ್ತದೆ. ಯಾಕೆಂದರೆ ಅಬ್ರಹಾಂ ಲಿಂಕನ್ ಹೇಳಿರುವ ಹಾಗೆ, ಯಾವ ಮನೆ ಇಬ್ಭಾಗವಾಗುತ್ತದೋ ಆ ಮನೆಗೆ ಉಳಿಗಾಲವಿಲ್ಲ, ಅವರ ಆತ್ಮಾವಲೋಕನದ ಅಭಿಲಾಶೆಗೆ ಆದಷ್ಟು ಬೇಗನೆ ಅವಕಾಶ ಮಾಡಿಕೊಡಬೇಕು. ಅಂದರೆ ಅಲ್ಪಸಂಖ್ಯಾತರಿಗೂ, ದೇಶಕ್ಕೂ ಕ್ಷೇಮ, ದೇಶದ ಸ್ವತಂತ್ರ್ಯ ರಕ್ಷಣೆಗೂ ಕ್ಷೇಮ. ಹಾಗೆಯೇ ದೇಶದ ಪ್ರಜಾತಂತ್ರ ವ್ಯವಸ್ಥೆಯು ಮುಂದುವರಿಕೆಗೂ ಕ್ಷೇಮ. ಇದನ್ನು ಆಗು ಮಾಡಬೇಕಾದರೆ ಜೀವನದ ಎಲ್ಲಾ ರಂಗಗಳಲ್ಲಿ ಸಮಾನತೆಯನ್ನು, ಸ್ವತಂತ್ರ್ಯತೆಯನ್ನು, ಭ್ರಾತೃತ್ವವನ್ನು ಸ್ಥಾಪಿಸಲು ಪ್ರಯತ್ನಿಸಬೇಕು. ಆ ಕಾರಣಕ್ಕಾಗಿಯೇ ನಾನು ಅವುಗಳಿಗೆ ಹೆಚ್ಚು ಒತ್ತು ಕೊಟ್ಟು ಮಾತನಾಡಿದ್ದು.

ನಾನು ಈ ಸದನಕ್ಕೆ ಹೆಚ್ಚು ಬೇಸರವನ್ನುಂಟು ಮಾಡಲು ಬಯಸುವುದಿಲ್ಲ, ಸ್ವಾತಂತ್ರ್ಯವು ವಾಸ್ತವವಾಗಿ ಸಂತೋಷ ಉಂಟು ಮಾಡುವ ಸಂಗತಿ. ಆದರೆ ಈ ಸ್ವಾತಂತ್ರ್ಯವು ನಮ್ಮ ಮೇಲೆ ಹೆಚ್ಚು ಜವಾಬ್ದಾರಿಗಳನ್ನು ಹೊರೆಸಿದೆ ಎಂಬುವುದನ್ನು ಮರೆಯದಿರೋಣ. ಸ್ವಾತಂತ್ರ್ಯದ ಮೂಲಕ, ಪ್ರತಿಯೊಂದು ತಪ್ಪು ಎಸಗಿದಾಗ ಬ್ರಿಟಿಷರ ಕಡೆಗೆ ಬೆರಳು ಮಾಡಿ ತೋರಿಸುತ್ತಿದ್ದಂತಹ ಅವಕಾಶವನ್ನು ಕಳೆದುಕೊಂಡಿದ್ದೇವೆ. ಇನ್ನು ಮುಂದೆ ಏನಾದರೂ ತಪ್ಪಾದಾಗ, ನಾವು ನಮ್ಮನ್ನು ಬಿಟ್ಟು ಬೇರೆ ಯಾರನ್ನೂ ಅಪಾದಿಸಿ ಹೇಳುವಂತಿಲ್ಲ, ತಪ್ಪುಗಳು ಸಂಭವಿಸುವ ಬಹು ದೊಡ್ಡ ಅಪಾಯವಿದೆ. ಕಾಲ ಅತ್ಯಂತ ವೇಗವಾಗಿ ಬದಲಾಗುತ್ತಿದೆ. ಜನತೆ ಮುಖ್ಯವಾಗಿ, ನಮ್ಮವರೂ ಸಹಾ, ಅನೇಕ ಸಿದ್ಧಾಂತಗಳಿಗೆ ಮರುಳು ಹೋಗುತ್ತಿದ್ದಾರೆ, ಜನತೆಯಿಂದ ಸರ್ಕಾರ ಎಂಬ ಸಿದ್ಧಾಂತದ ಬಗ್ಗೆ ಅವರಿಗೆ ಈಗ ಬೇಸರವಾಗಿದೆ. ಜನರಿಗಾಗಿ ಸರಕಾರ ಎಂಬುವುದರ ಬಗ್ಗೆ ಆಲೋಚಿಸುತ್ತಿದ್ದಾರೆ ಹೊರತು, ಜನತೆಯ, ಜನತೆಯಿಂದ ಸರ್ಕಾರದ ಎಂಬ ಸಿದ್ಧಾಂತಗಳಿಂದಲೂ ಅಷ್ಟೇ ಬೇಸರಗೊಂಡಿದ್ದಾರೆ. ನಾವು ಯಾವ ಸಂವಿಧಾನದಲ್ಲಿ

ಜನತೆಯಿಂದ, ಜನರಿಗಾಗಿ, ಜನರಿಗೋಸ್ಕರ ಎಂಬ ಸಿದ್ಧಾಂತವನ್ನು ಒಳಪಡಿಸಿ ಈ ಸಂವಿಧಾನವನ್ನು ರೂಪಿಸಿದ್ದೇವೆಯೋ ಆ ಸಂವಿಧಾನವನ್ನು ಉಳಿಸಿಕೊಳ್ಳಬೇಕಾಗಿದ್ದರೆ ನಮ್ಮ ಮಾರ್ಗದಲ್ಲಿರುವ ಎಡರು ತೊಡರುಗಳನ್ನು ನಿವಾರಿಸಬೇಕು. ಮಾತ್ರವಲ್ಲದೆ ಜನರು, ಜನರಿಂದ ಸರಕಾರಕ್ಕೆ ಬದಲಾಗಿ ಜನರಿಗೋಸ್ಕರ ಸರಕಾರವನ್ನು ಬಯಸುವಂತೆ ಜನರನ್ನು ಪ್ರೇರೇಪಿಸುವಂತಹ ಅಡ್ಡಿ ಅಡಚಣೆಗಳನ್ನು ಹೋಗಲಾಡಿಸಬೇಕು. ಅಷ್ಟೇ ಅಲ್ಲದೆ ಆ ಅಡ್ಡಿ ಅಡಚಣೆಗಳನ್ನು ನಿವಾರಿಸುವಲ್ಲಿ ದುರ್ಬಲರಂತೆ ವರ್ತಿಸಬಾರದು. ಅದೊಂದೇ ದೇಶ ಸೇವೆಯ ಮಾರ್ಗ. ಅದಕ್ಕಿಂತ ಉತ್ತಮವಾದ ಮಾರ್ಗ ನನಗೆ ಗೊತ್ತಿಲ್ಲ.

A LEGISLATU
BANGALORE

923.295 4 Lok
KLS - EL
C-5779
KLS - EL

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - 560 001